FILE NO:

ARS 2 APP82

FILE No:

ARS 2 APP 82

FILE No:

ARS 2 APP82

'ಕಾನಡಾವೃತ್ತ'

ತ್ರಿಭಾಷಾ ಸಾಪ್ತಾಹಿಕ, ಕುಮಟಾ

1916 ರಿಂದ 1956

'ಕಾನಡಾವೃತ್ತ'

ತ್ರಿಭಾಷಾ ಸಾಪ್ತಾಹಿಕ, ಕುಮಟಾ

1916 ರಿಂದ 1956

'ಕಾನಡಾವೃತ್ತ'

ತ್ರಿಭಾಷಾ ಸಾಪ್ತಾಹಿಕ, ಕುಮಟಾ

1916 ರಿಂದ 1956

ಕಾನಡಾವೃತ್ತದ ಜೀವನ ವೃತ್ತ

ಇಪ್ಪತ್ತನೆಯ ಶತಮಾನದ ಪ್ರಥಮ ಚರಣದ ಪೂರ್ವಾರ್ಧದಲ್ಲಿ ಕರ್ನಾಟಕದೊಳಗೆ ಜನ ಜಾಗೃತಿಯನ್ನುಂಟು ಮಾಡುವ ಪತ್ರಿಕೆಗಳು ತೀರ ವಿರಳ. ರಾಷ್ಟ್ರದೊಳಗಿನ ಆಗು ಹೋಗುಗಳನ್ನು ತಿಳಕೊಳ್ಳಬಯಸುವ ಜನರು ಪುಣೆಯ "ಕೇಸರಿ" ಪತ್ರಿಕೆಯನ್ನು ತರಿಸಿ ಓದಿ ಸಮಾಧಾನ ಹೊಂದುತ್ತಿದ್ದರು. ಪತ್ರಿಕೆಗಳನ್ನು ಓದಬೇಕೆಂಬ ಹಂಬಲ ನಮ್ಮ ಉತ್ತರ ಕನ್ನಡ [ಆಗ ಕಾನಡಾ ಜಿಲ್ಲೆ] ಜಿಲ್ಲೆಯ ಜನಸಾಮಾನ್ಯರಲ್ಲಿ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ನಮ್ಮದೇ ಜಿಲ್ಲೆಯ ಸುದ್ದಿ ಸಮಾಚಾರಗಳನ್ನು ಸಂಗ್ರಹಿಸುವ ಅಥವಾ (ಬ್ರಿಟಿಶ ಸರಕಾರಿ ಅಧಿಕಾರಿಗಳ ಅತಿಕ್ರಮಗಳನ್ನು ಬಯಲಿಗೆಳೆಯುವ ಹಾಗೂ ಜನತೆಯಲ್ಲಿ ದೇಶದ ಸ್ವರಾಜ್ಯ ಸ್ವಾತಂತ್ರ್ಯಗಳ ಬಗ್ಗೆ ಹಂಬಲವನ್ನುಂಟುಮಾಡುವ, ಲಾಲಸೆಯನ್ನು ಕುದುರಿಸುವ, ಪತ್ರಿಕೆಯೊಂದೂ ನಮ್ಮ ಜಿಲ್ಲೆಯಲ್ಲಿ ಆಗ ಇದ್ದಿರಲಿಲ್ಲ. ಜಿಲ್ಲೆಯೊಳಗಿನ ಈ ಕೊರತೆಯನ್ನು ಹೋಗಲಾಡಿಸಲು ಕುಮಟೆಯಲ್ಲಿ "ಸ್ಟಾರ ಓಪ್ ಕೆನರಾ ಪ್ರೆಸ್ಸ" [ಸ್ಥಾಪನೆ 1902] ನ ಒಡೆಯರಾಗಿದ್ದ ಡಾ| ಕೃಷ್ಣರಾವ ಕೇಶವ ಶೇಣವಿಯವರು, ಕುಮಟೆಯ ಗಿಬ್ ಹಾಯಸ್ಕೂಲಿನ [ಸ್ಥಾಪನೆ 1908] ಕೆಲವು ಶಿಕ್ಷಕರ ಪ್ರೋತ್ಸಾಹ, ಆತ್ಮೀಯ ಸಹಕಾರದಿಂದ 1916 ನೇ ಇಸವಿಯ ವಿಜಯ ದಶಮಿಯ ಸುಮುಹೂರ್ತದಲ್ಲಿ "ಕಾನಡಾವೃತ್ತ" ಪತ್ರಿಕೆಯನ್ನು ಹೊರಡಿಸಿದರು. ಅದು ಪ್ರಾರಂಭದಲ್ಲಿ ಹದಿನೈದು ದಿನಗಳಿಗೊಮ್ಮೆ ಪ್ರಕಟವಾಗುವ ಪಾಕ್ಷಿಕ ಪತ್ರಿಕೆಯಾಗಿತ್ತು. ಇಂಗ್ಲಿಷ, ಮರಾಠಿ, ಕನ್ನಡ ಭಾಷಾ ಲೇಖನಗಳಿಂದೊಡಗೂಡಿದ "ಗಂಗಾ ಜಮುನೀ" ಪತ್ರಿಕೆಯಾಗಿತ್ತು.

"ವೃತ್ತ" ದ ನೈಜವಾದ ವೃತ್ತಾಂತವನ್ನು ಬಹಿರಂಗಪಡಿಸಲು ಪ್ರಕಟಿಸಲು ಇದು ಸಕಾಲ. ದಿವಂಗತ ವಿಶ್ವನಾಥ ಪಾಂಡುರಂಗ ಪ್ರಭು ಅಂಕೋಲಾ ಇವರೇ ಕಾನಡಾವೃತ್ತದ ನಿಜವಾದ ಜನಕರು. ಕುಮಟೆಯ ಗಿಬ್ ಹಾಯಸ್ಕೂಲಿನ ಮುಖ್ಯಾಧ್ಯಾಪಕ (1908 ರಿಂದ 1919) ಮತ್ತು ಅಂಕೋಲೆಯ ಎಡ್ವರ್ಡ ಹಾಯಸ್ಕೂಲಿನ (ಈಗ ಜೈಹಿಂದ ಹಾಯಸ್ಕೂಲ) ಸಂಸ್ಥಾಪಕ ಮುಖ್ಯಾಧ್ಯಾಪಕ (1919 ರಿಂದ 1927) ರಾಗಿದ್ದ ಅವರು "ಕಾನಡಾವೃತ್ತ" ದ ನಿಜವಾದ ಸಂಪಾದಕರಾಗಿದ್ದರೂ, ಸರಕಾರದ ಧನ ಸಹಾಯ ಪಡೆಯುವ ಶಾಲೆಯಲ್ಲಿ ನೌಕರರಾಗಿದ್ದರಿಂದ ಆಗ ಅವರ ಹೆಸರನ್ನು ಬಹಿರಂಗ ಪಡಿಸಲು ಅವಕಾಶ ವಿರಲಿಲ್ಲ. ಸುಮಾರು ಹತ್ತು ವರ್ಷಗಳ ಕಾಲ (1916 ರಿಂದ 1927) ಸಂಪಾದಕರಾಗಿದ್ದ ಅವರು ಮನೆತನದ ಒತ್ತಡದ ಮೂಲಕ, ನೌಕರಿಯನ್ನು ತ್ಯಜಿಸಿ, ಫೊರೆಸ್ಟ ಕಾಂ[illegible] ಧಂದೆಯ ಪೂರ್ಣ ಸೂತ್ರಗಳನ್ನು ತಾವೇ ನಿರ್ವಹಿಸಿಕೊಂಡು, ಕಾರ್ಯಬಾಹುಲ್ಯದಿಂದ "ವೃತ್ತ" ದ ಸಂಪ[illegible]ಕ್ವದ ಹೊಣೆಯನ್ನು ಗಿಬ್ ಹಾಯಸ್ಕೂಲಿನ ತಮ್ಮ ಪಟ್ಟ ಶಿಷ್ಯರಾಗಿದ್ದ ಶ್ರೀ ನರಸಿಂಹ ಗೋವಿಂದ ಶ್ಯಾ[illegible] ವಕೀಲರಿಗೆ ಮತ್ತು ದಿವಂಗತ ವಕೀಲ ಕೇಶವ ಉಪೇಂದ್ರ ಭಟ್ಟರಿಗೆ ನಿರ್ವಹಿಸಿಕೊಟ್ಟರೂ "ವೃತ್ತಕ್ಕೆ[illegible]ಕಾಲಕ್ಕೆ ಮಾರ್ಗದರ್ಶನ, ಸಹಾಯ, ಸಹಕಾರ ನೀಡುತ್ತಿದ್ದರು. ತಮ್ಮ ಈ ನಿತಾಂತ ಮಾರ್ಗದರ್ಶನದಲ್ಲಿ ಅ[illegible] "ವೃತ್ತ" ಕ್ಕೆ ಭದ್ರ ಬುನಾದಿಯನ್ನು ಒದಗಿಸಿದ್ದಲ್ಲದೆ, ದೂರದರ್ಶಕರಾಗಿದ್ದ ಅವರ ಸಂಪಾದಕತ್ವದಡಿಯಲ್ಲಿ "ವೃತ್ತ" ವು ಸುಂದರವಾದ ಬುಡಬೇರುಗಳನ್ನು ಹೊಂದಿತು. ತಾ. 31-3-1955 ರಂದು ವಿಶ್ವನಾಥ ಪಾಂಡುರಂಗ ಪ್ರಭುರವರು ಪರಂಧಾಮವನ್ನೈದಿದಾಗ ಅದನ್ನು ತನ್ನ ತಾ. 5-4-1955 ರ "ವೃತ್ತ" ದಲ್ಲಿ ಶೋಕ ಸಂದೇಶದೊಡನೆ ಪ್ರಕಟಿಸಿದಾಗ ಈ ಕೆಳಗಿನ ವರದಿ "ವೃತ್ತ"ದಲ್ಲಿ ಪ್ರಕಟವಾದದ್ದನ್ನು ನಾವು ನಮೂದಿಸುತ್ತೇವೆ.

"ವೃತ್ತ" ದ ಶೈಶವಾವಸ್ಥೆಯಲ್ಲಿ ಶ್ರೀ ಪ್ರಭುರವರು "ವೃತ್ತ" ದ ಪಾಲಕ-ಪೋಷಕರಾಗಿದ್ದರೆಂಬುದನ್ನು "ವೃತ್ತ" ವು ಬಹಿರಂಗಪಡಿಸ ಬಯಸುತ್ತದೆ. "ವೃತ್ತ" ವನ್ನು ಹೊರಡಿಸಲು "ವೃತ್ತ" ದ ಜನಕ ವೈ| ವಾ|

ಕೃಷ್ಣರಾಯರಿಗೆ ಪ್ರೋತ್ಸಾಹ ಕೊಟ್ಟವರೂ, ಅದರ ಲಾಲನೆ ಪಾಲನೆ ಮಾಡುವಲ್ಲಿ ಕೃಷ್ಣರಾಯರಿಗೆ ಆಸ್ಥೆಯಿಂದ ಎಲ್ಲ ಬಗೆಯ ನೆರವನ್ನಿತ್ತವರೂ ಶ್ರೀ॥ ಪ್ರಭುಗಳಾಗಿರುತ್ತಾರೆ. ಮುಂದಗಾಮಿಯಾಗಿ ಜನ್ಮವೆತ್ತ "ವೃತ್ತ" ವನ್ನು ಕ್ರಮೇಣ ಅವರು ರಾಷ್ಟ್ರೀಯ ಪತ್ರಿಕೆಯನ್ನಾಗಿ ಪರಿವರ್ತಿಸಿದ್ದರು. "ವೃತ್ತ" ದ ಸಂಪಾದಕ ವರ್ಗದಿಂದ ನಿವೃತ್ತ-ರಾದ ಮೇಲೂ ಅವರು ಅಪತ್ಯ ವಾತ್ಸಲ್ಯದಿಂದ ಹೊಸ ಸಂಪಾದಕರಿಗೆ ಕಾಲಕಾಲಕ್ಕೆ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಆದರಿಂದ ಶ್ರೀ॥ ಪ್ರಭುರವರ ನಿಧನದಿಂದ "ವೃತ್ತ" ಕ್ಕೆ ಇಂದು ಪಿತೃ ವಿಯೋಗದ ದುಃಖ-ವಾಗುತ್ತಿರುವದು ಸ್ವಾಭಾವಿಕ. ಅಂತೆಯೇ "ವೃತ್ತ" ವು ಮೃತಾತ್ಮರಿಗೆ ಪಿತೃಭಕ್ತಿಯಿಂದ ಶ್ರದ್ಧಾಂಜಲಿ-ಯನ್ನಿತ್ತು ಅವರಿಗೆ ಸದ್ಗತಿಯನ್ನೀಯಲು ಪರಮಾತ್ಮನ ಚರಣಾರವಿಂದಗಳಲ್ಲಿ ಭಕ್ತಿ ಪುರಃಸರ ಪ್ರಾರ್ಥನೆ ಮಾಡಿಕೊಳ್ಳುತ್ತಿದೆ.

ಪುಣೆಯ ಫರ್ಗ್ಯುಸನ್ ಕಾಲೇಜಿನ ವಿದ್ಯಾರ್ಥಿಗಳಾಗಿ ಲೋಕಮಾನ್ಯ ಬಾಳ ಗಂಗಾಧರ ಟಿಳಕ, ನಾಮದಾರ ಗೋಖಲೆಯವರಂಥ ಆ ಕಾಲದ ರಾಷ್ಟ್ರಧುರೀಣರಿಂದ ಪ್ರಭಾವಿತರಾದ ರಾಷ್ಟ್ರೀಯ ವಿಚಾರದ ಪುಣೆಯ ಕೇಸರಿ ವಗೈರೆ ಪತ್ರಿಕೆಗಳಿಂದ ಪ್ರಭಾವಿತರಾದ, ಪ್ರಭಾವಿತರಾದ ನರಸಿಂಹ ಶ್ಯಾನಭಾಗರು ಮತ್ತು ದಿ॥ ಕೇಶವ ಭಟ್ಟರು "ವೃತ್ತ" ಕ್ಕೆ 1918 ರಿಂದಲೇ ಅಂದರೆ ಕಾಲೇಜ ವಿದ್ಯಾರ್ಥಿಗಳಾಗಿದ್ದಾಗಲೇ ಲೇಖನಗಳನ್ನು ಒದಗಿಸುತ್ತಿದ್ದರು. ದಿ॥ ವಿಶ್ವನಾಥ ಪ್ರಭುರವರಿಂದ "ಕಾನಡಾವೃತ್ತ" ದ ಧುರೆಯನ್ನು ವಹಿಸಿಕೊಂಡು 45 ವರ್ಷಗಳ ಕಾಲ ಅಂದರೆ 1963 ರ ವರೆಗೆ ದಿ॥ ಕೇಶವ ಭಟ್ಟರು ವೃತ್ತಕ್ಕೆ ಅವಿರತ, ಅತ್ಯಮೂಲ್ಯ, ಅನುಪಮ ನಿರಪೇಕ್ಷ ಸೇವೆಯನ್ನು ಸಲ್ಲಿ-ಸಿದರು. ಭಾಷಾ ಸೌಂದರ್ಯದಿಂದೊಡಗೂಡಿದ ವಿಚಾರ ಪರಿಪ್ಲುತ ಲೇಖನಗಳು, ಅವರ ಲೇಖನಿಯಿಂದ ಹರಿದ ಕಾರಣವಾಗಿ ವೃತ್ತವು ಬೇಗನೆ ಜನಪ್ರಿಯವಾಯಿತು. ಅವರ ಲಾಲನೆ-ಪಾಲನೆಯಿಂದ ಉಚ್ಛ್ರಾಯಸ್ಥಿತಿಯನ್ನು ಹೊಂದಿತು. ಶ್ರೀ ನರಸಿಂಹ ಶ್ಯಾನಭಾಗರೂ ಸುಮಾರು ಮೂರು ದಶಕಗಳ ಕಾಲ "ಕಾನಡಾವೃತ್ತ" ಕ್ಕೆ ಸ್ಪೃಹಣೀಯ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ವೃತ್ತಿಯಿಂದ ವಕೀಲರಾದ ಈ ಇಬ್ಬರೂ ಮಹನಿಯರು "ವೃತ್ತ" ದ ಗಿಡಕ್ಕೆ ಧಾರಾಕಾರವಾಗಿ ನೀರೆರೆದು, ಅದನ್ನು ವೃಕ್ಷವನ್ನಾಗಿಸಿದರು. ಮತ್ತು ಅದರ ಪಾಲನ-ಪೋಷಣ ಮಾಡಿದರು.

"ಕಾನಡಾವೃತ್ತ" ದ ಜನನ ಸಮಯದಲ್ಲಿ ಮೊದಲನೇ ಜಾಗತಿಕ ಮಹಾಯುದ್ಧ ಭರದಿಂದ ನಡೆದಿತ್ತು. ಇದೇ ಸಮಯದಲ್ಲಿ ಭಾರತದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ರಾಷ್ಟ್ರೀಯ ಚಳುವಳಿ ನಡೆದಿತ್ತು. ರಾಷ್ಟ್ರೀಯ ಆಂದೋಲನವನ್ನು ಹತ್ತಿಕ್ಕಿ ನಿಯಂತ್ರಣದಲ್ಲಿಡಲು ಬ್ರಿಟಿಷ ಅಳರಸರು ಇಂಡಿಯನ್ ಪಿನಲ್ ಕೋಡಿನ 124 (A) (ರಾಜದ್ರೋಹಕ್ಕೆ ಶಿಕ್ಷೆ) ಕಲಮಿನ ಉಪಯೋಗವನ್ನು ಗುರುತರ ಪ್ರಮಾಣದಿಂದ ದಿಂದ ಮಾಡುತ್ತಿದ್ದರಲ್ಲದೇ (Press Act) ಮುದ್ರಣಾಲಯಗಳ ಕಾನೂನು " ರಾಜದ್ರೋಹಿ ಸಭೆಗಳ ಕಾನೂನು " Defence of India Act " ಭಾರತ ರಕ್ಷಣಾ ಕಾನೂನು " ಮೊದಲಾದ ಹಲವಾರು ಅಸ್ತ್ರಗಳನ್ನು ಸಿದ್ಧಮಾಡಿಟ್ಟುಕೊಂಡು ಜನತೆಯಲ್ಲಿ ಭೀತಿಯನ್ನುಂಟು ಮಾಡಿದ್ದರು. ಅಜ್ಞಾನದಿಂದ ಆವೃತವಾದ ನಮ್ಮ ಈ ಜಿಲ್ಲೆಯಲ್ಲಿ ಆಗ ರಾಷ್ಟ್ರೀಯ ವಿಚಾರಗಳ ಪ್ರಚಾರ ಮಾಡುವ ಕೊಂಗ್ರೆಸ್ ಸಂಸ್ಥೆಯ (Indian National Congress) ಶಾಖೋಪಶಾಖೆಗಳೂ ಇದ್ದಿಲ್ಲ; ಬೇರುಗಳು ಇದ್ದಿರಲಿಲ್ಲ. ಕೊಂಗ್ರೆಸಿನ ಹೆಸರು ಕೇಳಿದ ಜನರು ಸಹ ಹೆಚ್ಚಿಗೆ ಇದ್ದಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಇಂತಹ ವಾತಾವರಣದಲ್ಲಿ "ವೃತ್ತ" ವು ಬ್ರಿಟಿಷ ಸರಕಾರದ ಮೇಲೆ ತೀವ್ರ ಟೀಕೆ ಮಾಡುವದಾಗಲಿ, ಸ್ವರಾಜ್ಯ ಸಂಪಾದನೆಯ ಲಾಲಸೆಯನ್ನು ಬಹಿರಂಗವಾಗಿ ಎತ್ತಿ ಹಿಡಿಯುವದಾಗಲಿ ಸಾಧ್ಯವಿದ್ದಿಲ್ಲ. ಅದರಿಂದ "ವೃತ್ತ" ವು ಮೊದ ಮೊದಲು ರಾಜಕಾರಣದಲ್ಲಿ ಮಂದಗಾಮಿ-ಯಾಗಿ ಅಡಿಗಳನ್ನಿಡತೊಡಗಿತು. ಮೊದಲನೇ ಮಹಾಯುದ್ಧದಲ್ಲಿ ಬ್ರಿಟಿಷರ ಮಿತ್ರರಾಷ್ಟ್ರಗಳಿಗೆ ಜಯವಾಗಲೆಂದು War Fund, War Loan, Recruitment ಮಹಾಯುದ್ಧಕ್ಕೆ ಸಹಾಯ ನಿಧಿ ಮಹಾಯುದ್ಧಕ್ಕೆ

ಸಾಲ ಸೈನ್ಯಕ್ಕೆ ಭರತಿಯ ಸಲುವಾಗಿ ಪ್ರಚಾರ ಮಾಡುತ್ತಿತ್ತು. ಅವರ ಸ್ಥಳೀಕ ಅತಿಕ್ರಮಗಳನ್ನಷ್ಟೇ ಪ್ರಖರವಾಗಿ ಟೀಕಿಸುತ್ತಿತ್ತು. ಈ ಟೀಕೆಯಿಂದ "ವೃತ್ತ" ವು ಸ್ಥಳೀಕ ಅಧ್ಯಕರ ರೋಷಕ್ಕೆ ಗುರಿಯಾಯಿತು. "ವೃತ್ತ" ದ ಜನಕರೂ ವಿವಿಧ ತೊಂದರೆಗಳನ್ನು ಎದುರಿಸುವ ಪ್ರಸಂಗ ಬಂತು. ಆದರೂ ಧೈರ್ಯಗುಂದದೇ ''ವೃತ್ತ'' ಕಾರರು ''ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲಿ" ಎಂದೆನ್ನುತ್ತ ಮಹಾಯುದ್ಧಾನಂತರ ತಮ್ಮ ಅಂಗೀಕೃತ ಕಾರ್ಯವನ್ನು ಮುಂದುವರಿಸಿದರು. ಬ್ರಿಟಿಷ ಆಳರಸರ ವಿರುದ್ಧ ದೇಶದಲ್ಲಿ ಭರದಿಂದ ಬೀಸುತ್ತಿದ್ದ ರಾಷ್ಟ್ರೀಯ ಮನೋವೃತ್ತಿಯನ್ನು "ವೃತ್ತ" ದಲ್ಲಿ ಸಾವಕಾಶವಾಗಿ ತುಂಬಲಾರಂಭಿಸಿದರು. "ವೃತ್ತ"ದ ಈ ಹೊಸ ವೃತ್ತಿಯನ್ನು ಕಂಡು ಆಳರಸರು ಕ್ಷುಬ್ಧರಾದರು 1919 ರ ಮೇ ತಿಂಗಳಲ್ಲಿ [ತಾ. 21-5-1919] ಪಂಜಾಬದೊಳಗಿನ ಜಾಲಿಯನ್ ವಾಲಾಬಾಗ ಹತ್ಯಾಕಾಂಡ ರೌಲೆಟ ಎಕ್ಟ ಕಾಯದೆಯ ಸಂಬಂಧದಲ್ಲಿ "ಶ್ರೀ ಕೃಷ್ಣ" ಎಂಬ ಅಭಿದಾನದಿಂದ ಮುಂಬಯಿಯ ಕೈ। ವಾ। ವಾಮನ ಮಂಗೇಶ ದುಭಾಷೀಯವರು ಬರೆದ ಮರಾಠಿ ಲೇಖನದ ನೆವ ಮುಂದೆ ಮಾಡಿ, ಮುದ್ರಣಾಲಯಗಳ ಕಾನೂನಿನನ್ವಯ ಒಂದು ಸಾವಿರ (ಆಕಾಲದ) ರೂಪಾಯಿಗಳ ಇಡುಗಂಟನ್ನು ಇಡಬೇಕೆಂದು ಸರಕಾರವು (ಜಿಲ್ಲಾಧಿಕಾರಿ ಶ್ರೀ ಎಚ್. ಟಿಪ್ಪರವರು ತಾ. 31-7-1919 ರಂದು) ಹುಕುಮು ಮಾಡಿತು. "ವೃತ್ತ" ದ ಜನಕರ ಆರ್ಥಿಕ ಪರಿಸ್ಥಿತಿ ಆ ಇಡುಗಂಟನ್ನು ಇಡುವಷ್ಟು ಒಳಿತಿರಲಿಲ್ಲ. ಅದರಿಂದ "ಕಾನಡಾವೃತ್ತ" ವು ಎರಡು ತಿಂಗಳು ಕಾಲ ಅಂದರೆ ತಾ 13-8-1919 ರಿಂದ 4-10-1919 ರ ತನಕ ಅಜ್ಞಾತವಾಸವನ್ನು ಅನುಭವಿಸ ಬೇಕಾಯಿತು. ಇದು "ಕಾನಡಾವೃತ್ತ" ದ ಮೊದಲನೆಯ ಅಜ್ಞಾತವಾಸ.

"ವೃತ್ತ" ಕ್ಕೆ ಹೀಗೆ ಬಾಲ್ಯಾವಸ್ಥೆಯಲ್ಲಿ ತಣ್ಣೀರಿಯಾಗಗೊಡುವದು ಅನೇಕ ಗೆಳೆಯರಿಗೆ ಸರಿದೋರಲಿಲ್ಲ. ಜಿಲ್ಲೆಯ ಹಿತಚಿಂತಕ ಜನರಿಂದ ವಂತಿಗೆಗಳನ್ನು ಕೂಡಿಸಿಕೊಟ್ಟು ಇಡುಗಂಟಿನ ಹಣದ ವ್ಯವಸ್ಥೆಮಾಡಿ "ವೃತ್ತ" ವನ್ನು ಪುನರುಜ್ಜೀವಿಸಲು ಅವರು ಕೈ। ವಾ। ಕೃಷ್ಣರಾವ ಶೇಣವಿಯವರಿಗೆ ಹುರಿದುಂಬಿಸಿದರು. ಅದರಂತೆ 1919 ರ ವಿಜಯ ದಶಮಿಯ ಶುಭಮುಹೂರ್ತದಲ್ಲಿ, ಸರಕಾರದಲ್ಲಿ ಅವಶ್ಯವುಳ್ಳ ಇಡುಗಂಟನ್ನು ಇಟ್ಟು, "ವೃತ್ತ" ವು ಪುನಃ ಹೊರಡಹತ್ತಿತು. ಜನತೆಯು ಕೊಟ್ಟ ಈ ಪ್ರೋತ್ಸಾಹದಿಂದ ಕೃಷ್ಣರಾಯರು ಉತ್ಸಾಹಭರಿತರಾಗಿ "ವೃತ್ತ" ವನ್ನು ವಾರಪತ್ರಿಕೆಯಾಗಿ ಮಾರ್ಪಡಿಸಿದರು. ಅಂದಿನಿಂದ ಅದು ವಾರ ಪತ್ರಿಕೆಯಾಗಿಯೇ ನಡೆಯುತ್ತ ಬಂದಿದೆ.

"ನೀರಿನೊಳು ಮುಳುಗಿದವನಿಗೆ ಚಳಿಯ ಹಂಗೆ?" ಎಂಬುದೊಂದು ಗಾದೆಯುಂಟು. "ಮುದ್ರಣಾಲಯಗಳ ಕಾನೂನಿನನ್ವಯ ಮೊದಲನೇ ಪೆಟ್ಟುತಿಂದ ''ವೃತ್ತ'' ವು ಬ್ರಿಟಿಷ ಆಳರಸರ ಹಂಗುದೊರೆದು ಕ್ರಮೇಣ ಉಗ್ರವಾದಿ ರಾಷ್ಟ್ರೀಯ ಪತ್ರಿಕೆಯಾಗಹತ್ತಿತು. ಪೂಜ್ಯ ಮಹಾತ್ಮಾಜಿಯವರು ಹಿಂದೀ ರಾಷ್ಟ್ರೀಯ ಸಭೆಯ ಕರ್ಣಧಾರರಾಗಿ 1920 ರಲ್ಲಿ ಅಸಹಕಾರ ಚಳವಳಿಯ ಸಿಂಹನಾದ ಮಾಡುತ್ತಲೇ "ವೃತ್ತ" ವು ಮಹಾತ್ಮಾಜಿಯವರ ಅನುಯಾಯಿಯಾಗಿ ಅವರ ತತ್ವಗಳ ಪ್ರಚಾರ ಮಾಡಲಾರಂಭಿಸಿತು. ''ವೃತ್ತ"ದ ಈ ಉಪಧ್ವ್ಯಾಪವನ್ನು ಕಂಡರೂ, ಅದಕ್ಕೆ 1930 ರ ವರೆಗೆ ಬ್ರಿಟಿಷ ಆಳರಸರ ಉಪದ್ರವದ ಉಪಸರ್ಗವಾಗಲಿಲ್ಲ. ಜಿಲ್ಲೆಯ ಅಧ್ಯರು ಮಾತ್ರ ಕೆಲವು ತೊಂದರೆಗಳನ್ನು ಕೊಟ್ಟರು. "ವೃತ್ತ'' ದ ಸಂಪಾದಕರಾಗಿದ್ದ ಕೈ। ವಾ। ಕೃಷ್ಣರಾಯರ ಮೇಲೆ ಖಟ್ಲೆಯನ್ನು ಮಾಡಿಕೊಟ್ಟರು. ಆ ಪ್ರಕರಣದೊಳಗಿನಿಂದ ಕೃಷ್ಣರಾಯರು ಯಶಸ್ವಿಯಾಗಿ ಹೊರಬಿದ್ದರು. 1929 ರ ಜೂನ ತಿಂಗಳಲ್ಲಿ "ಸ್ಟಾರ ಓಫ್ ಕೆನರಾ ಪ್ರೆಸ್ಸಿ" ನ ಮಾಲಕ ಕೃಷ್ಣರಾವ ಶೇಣವಿಯವರು ನಿಧನರಾದರು. ಅವರ ನಿರ್ಯಾಣವಾಗುವ ಎರಡು ವಾರಗಳ ಮೊದಲೇ, ಶ್ರೀ ಪಾಂಡುರಂಗ ಕೃಷ್ಣ ಶ್ಯಾನಭಾಗರು ಮುದ್ರಣಾಲಯದ ಚಾಲಕತ್ವದ ಹೊಣೆಯನ್ನು "ವೃತ್ತ'' ದ ಹೊಣೆಯನ್ನೂ ಹೊತ್ತುಕೊಂಡಿದ್ದರು. ಅವರ ಅಗ್ರಜ ದಿ। ವಾಸುದೇವ ಕೃಷ್ಣ ಶ್ಯಾನಭಾಗರು ಅವರಿಗೆ ಪೂರ್ಣ ಸಹಕಾರ, ಸಹಾಯ ನೀಡಿದರು.

1930 ರಲ್ಲಿ ಪೂಜ್ಯ ಮಹಾತ್ಮಾ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ಆಂದೋಲನಕ್ಕೆ ಪ್ರಾರಂಭ ವಾಯಿತು. "ವೃತ್ತ"ವು ಕಾಯದೆಯ ಕಕ್ಷೆಯನ್ನು ಉಲ್ಲಂಘಿಸದೆ ಮಹಾತ್ಮಾ ಗಾಂಧೀಜಿಯವರ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲ ಕೊಟ್ಟಿತು. ದೇಶದೊಳಗಿನ ಸತ್ಯಾಗ್ರಹದ ರಸಭರಿತ ಸುದ್ದಿ ಸಂಗ್ರಹ ಪ್ರಕಟಿಸಿ ಕಾನಡಾ ಜಿಲ್ಲೆಯವರಿಗೂ ಸ್ಫೂರ್ತಿ ಕೊಟ್ಟಿತು. ಈ ಬಗ್ಗೆ ಸಿಟ್ಟಿಗೆದ್ದ ಸರಕಾರವು "ಮುದ್ರಣಾಲಯಗಳ ರಾಜಶಾಸನ" (Press ordinance) ದನ್ವಯ ಒಂದು ಆಜ್ಞೆ ಹೊರಡಿಸಿ ಮುದ್ರಣಾಲಯದಲ್ಲಿ ಮುದ್ರಣವನ್ನೇ ಮಾಡಕೂಡದೆಂದು ಪ್ರತಿಬಂಧಿಸಿತು. ಇದರಿಂದ 1930 ರ ಉತ್ತರಾರ್ಧದಲ್ಲಿ "ವೃತ್ತ"ವು ಎರಡನೇ ಸಲ ಐದು ತಿಂಗಳ ಅಜ್ಞಾತವಾಸವನ್ನು ಅನುಭವಿಸುವ ಪ್ರಸಂಗಪ್ರಾಪ್ತವಾಯಿತು. ಆದರೆ ಸುಗ್ರೀವಾಜ್ಞೆ-ರಾಜಶಾಸನದ (ordinance) ಆಯುಷ್ಯ ತೀರುತ್ತಲೇ ಸುಗ್ರೀವಾಜ್ಞೆಯ ಆಯುಷ್ಯ ಒಟ್ಟು ಆರು ತಿಂಗಳು ಎಂಬುದನ್ನು ಓದುಗರು ಅರಿತಿರಬಹುದು. "ವೃತ್ತ"ವು ಪುನಃ ಶೀಘ್ರವಾಗಿ ಹೊರಡತೊಡಗಿತು. ಮತ್ತು ಉಜ್ವಲ ರಾಷ್ಟ್ರೀಯ ಪತ್ರಿಕೆ ಎಂದು ಲೋಕದಲ್ಲಿ ಪ್ರಸಿದ್ಧಿ ಹೊಂದಿತು. 1932 ರ ಜನವರಿಯಲ್ಲಿ ದೇಶದಲ್ಲಿ ಪುನಃ ಸತ್ಯಾಗ್ರಹ ಸಂಗ್ರಾಮಕ್ಕೆ ಪ್ರಾರಂಭವಾಯಿತು. ಎಲ್ಲೆಲ್ಲೂ ಕಾಂಗ್ರೆಸ ಕಾರ್ಯಕರ್ತರನ್ನು ಸೆರೆಹಿಡಿದು ಬಂಧನದಲ್ಲಿಡುವ ಸತ್ರ ನಡೆಯುತ್ತಿತ್ತು. ಆದರೆ ಅಸಹಕಾರದ ಆಂದೋಲನದಿಂದಲೂ ಉಪ್ಪಿನ ಸತ್ಯಾಗ್ರಹದ ಅನುಭವದಿಂದಲೂ ನಿರ್ಭಯಗೊಂಡ ಜನತೆ ಬ್ರಿಟಿಷ ಸರಕಾರದ ಆಹ್ವಾನವನ್ನು ಧೈರ್ಯದಿಂದ ಎದುರಿಸಿತು. ಕಾಂಗ್ರೆಸ್ ಸಮಿತಿಗಳು ಕಾನೂನ ವಿರುದ್ಧ ಸಂಸ್ಥೆಗಳೆಂದು ಸಾರಲ್ಪಟ್ಟಿದ್ದರಿಂದ ಕಾಂಗ್ರೆಸ್ಸಿನ ಕಾರ್ಯವನ್ನು ಮುಂದುವರಿಸಲು ಒಬ್ಬರ ಹಿಂದೊಬ್ಬರಂತೆ ಜನರು "ಸರ್ವಾಧಿಕಾರಿ"ಗಳಾಗಿ ಬರತೊಡಗಿದರು. ಅಂಕೋಲೆಯ ಕಾಂಗ್ರೆಸ್ಸಿನ ಮುಂದಾಳುಗಳಾದ ದಿವಂಗತ ಶಾಮರಾವ ಶೇಣ್ವಿಯವರ ಸಹೋದರಿಯಾದ ಶ್ರೀಮತಿ ಭಾಗೀರಥಿಬಾಯಿ ಕಾಮತ ಇವರು ಒಮ್ಮೆ ಸರ್ವಾಧಿಕಾರಿಗಳಾಗಿದ್ದರು. ಈ ಸರ್ವಾಧಿಕಾರಿಗಳ ಹೆಸರುಗಳನ್ನೂ, ಸತ್ಯಾಗ್ರಹ ಮಾಡಿದ ಮತ್ತು ಶಿಕ್ಷೆಗೊಳಗಾದವರ ಹೆಸರುಗಳನ್ನೂ ಪ್ರಕಟಗೊಳಿಸಕೂಡದೆಂಬುದಾಗಿ "ವೃತ್ತ"ಕ್ಕೆ ಒಂದು ಆಜ್ಞೆಯಾಯಿತು. ಈ ನಿರ್ಬಂಧವನ್ನು ಉಲ್ಲಂಘಿಸಿ "ವೃತ್ತ"ವು ಶ್ರೀಮತಿ ಭಾಗೀರಥಿಬಾಯಿಯವರು ಸರ್ವಾಧಿಕಾರಿಗಳಾದ ವೃತ್ತವನ್ನು ಪ್ರಕಟಿಸಿದ್ದರಿಂದ "ವೃತ್ತ"ಕಾರರ ಮೇಲೆ ಕೂಡಲೇ ಖಟ್ಲೆಯಾಗಿ ಅವರಿಗೆ 200 ರೂ ದಂಡ ವಿಧಿಸಲ್ಪಟ್ಟಿತು. ಮುಂಬಯಿಯ ವರಿಷ್ಠ ನ್ಯಾಯಾಲಯದ ವರೆಗೂ ಈ ಪ್ರಕರಣ ಹೋಯಿತು. ಅಲ್ಲಿ "ವೃತ್ತ"ಕಾರರು ನಿರ್ದೋಷಿಗಳೆಂದು ನಿರ್ಣಯವಾಯಿತು. 1932 ರ ಆಂದೋಲನದಲ್ಲಿ ಸಿದ್ದಾಪುರ ತಾಲೂಕಿನೊಳಗೆ ಬ್ರಿಟಿಷ ಆಳರಸರ ದಬ್ಬಾಳಿಕೆ ಭರದಿಂದ ಸಾಗಿತ್ತು. ಪುರುಷ ಕಾರ್ಯಕರ್ತರೆಲ್ಲ ಸೆರೆಮನೆಗೆ ಅಟ್ಟಲ್ಪಟ್ಟಿದ್ದರು. ಹೀಗಾಗಿ ಸತ್ಯಾಗ್ರಹದ ಸಮರವನ್ನು ಮುಂದುವರಿಸುವ ಭಾರ, ವೀರ ಮಹಿಳಾ ಕಾರ್ಯಕರ್ತರ ಮೇಲೆ ಬಿದ್ದಿತ್ತು. ನೂರಾರು ವೀರ ಭಗಿನಿಗಳು ಈ ಕಾರ್ಯವನ್ನು ನಿರ್ವಹಿಸಲು ಮುಂದಾಗಿದ್ದರು. ಅವರಿಗೂ ಪೋಲೀಸರು ಚಿತ್ರಹಿಂಸೆ ಕೊಟ್ಟು ಪೀಡಿಸುತ್ತಿದ್ದರು. ಮೈಸೂರಿನ ದಿವಂಗತ ವೆಂಕಟರಾಮಯ್ಯನವರ (ಆರು ತಿಂಗಳ ಹಿಂದಷ್ಟೇ ಇವರು ನಿಧನರಾಗಿದ್ದಾರೆ.) ಧರ್ಮಪತ್ನಿಗಳಾಗಿದ್ದ ಶ್ರೀಮತಿ ಗೌರಮ್ಮನವರು ಈ ವೀರ ನಾರೀಮಣಿಗಳ ಅಗ್ರಣಿಗಳಾಗಿದ್ದರು. ಅವರಿಗೆ ಕೊಟ್ಟ ಪೀಡೆಯ ಕಥೆ "ವೃತ್ತ"ದಲ್ಲಿ ಪ್ರಕಟವಾಯಿತು. ಆ ಬಗ್ಗೆ "ವೃತ್ತ"ಕಾರರ ಮೇಲೆ ಮೊಕದ್ದಮೆ ಹೂಡಲ್ಪಟ್ಟಿತು. 1932 ರ ಬೇಸಿಗೆಯಲ್ಲಿ ಅಂಕೋಲಾ ತಾಲೂಕಿನ ವಂದಿಗೆ ಗ್ರಾಮದ ಒಂದು ದೇವಸ್ಥಾನದಲ್ಲಿ ಒಂದು ದಿನ ಮುಂಜಾನೆ ಪೋಲೀಸರ ಕಣ್ಣು ತಪ್ಪಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಪರಿಷತ್ತು ಸೇರಿತ್ತು. ಪರಿಷತ್ತು ಸೇರಿದ ವರ್ತಮಾನ ಕೇಳಿ ಪೋಲೀಸರು ಓಡಿ ಬರುವಷ್ಟರಲ್ಲಿ ಪರಿಷತ್ತಿನ ಅಂಗಗಳೆಲ್ಲ—ಅಧ್ಯಕ್ಷೀಯ ಭಾಷಣ, ಗೊತ್ತುವಳಿಗಳ ಸ್ವೀಕಾರ ಮೊದಲಾದ ವಿಧಾನಗಳೆಲ್ಲ ನಡೆದು ಹೋಗಿದ್ದವು. ಈ ಪರಿಷತ್ತಿನ ಪೂರ್ಣ ವೃತ್ತಾಂತವನ್ನು "ವೃತ್ತ"ದಲ್ಲಿ, ಪ್ರಕಟಿಸಿದ ಬಗ್ಗೆ "ವೃತ್ತ"ಕಾರರ ಮೇಲೆ ಫೌಜದಾರಿ ಖಟ್ಲೆಯಾಯಿತು. ಪರಿಷತ್ತು ಸೇರಿದ್ದೇ ಸುಳ್ಳೆಂದೂ, ಕಾನಡಾವೃತ್ತದ ಸಂಪಾದಕರು ಕಲ್ಪಿತ ಕಥೆಯನ್ನು ರಚಿಸಿ, ಅದನ್ನು ಪ್ರಕಟಿಸಿ ಜನರಲ್ಲಿ ಕಾನೂನು ಭಂಗದ ಬಗ್ಗೆ ಪ್ರೇರಣೆ ಪ್ರಚೋದನೆ ನೀಡಿ ಬ್ರಿಟಿಶ ಆಳರಸರ ವಿರುದ್ಧ ಸ್ಫೂರ್ತಿಯನ್ನು ಉತ್ತೇಜಿಸಿದ್ದಾರೆಂದೂ

ಪೋಲೀಸ್ ಅಧಿಕಾರಿಗಳ ಆಪಾದನೆಯಿತ್ತು. ಹೀಗೆಲ್ಲ ಖಟ್ಲೆಗಳ ಮೇಲೆ ಖಟ್ಲೆಗಳಾಗಹತ್ತಿದ್ದರಿಂದ "ವೃತ್ತ"ವು ತಾನಾಗಿಯೇ 1932 ರ ಜುಲಾಯಿ ತಿಂಗಳಲ್ಲಿ ಸ್ಥಗಿತವಾಯಿತು. ಇದು "ವೃತ್ತ"ದ ಮೂರನೇ ಅಜ್ಞಾತವಾಸ. ಈ ಸುದೀರ್ಘ ಅಜ್ಞಾತವಾಸವು ಎರಡು ವರ್ಷಗಳಷ್ಟು ದೀರ್ಘ ಕಾಲ ನಡೆಯಿತು. 1932 ರಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಸಂಗ್ರಾಮವು ತಣ್ಣಗಾಗಿ ರಾಜಕೀಯ ಪರಿಸ್ಥಿತಿ ತಿಳಿಯಾದ ಮೇಲೆ 1934 ರ ಜುಲೈಯಿಂದ "ವೃತ್ತ"ವು ಪುನಃ ಬೆಳಕನ್ನು ಕಂಡಿತು. ಶ್ರೀ ನರಸಿಂಹ ಗೋವಿಂದ ಶಾನಭಾಗ ಮತ್ತು ದಿ| ಕೇಶವ ಉಪೇಂದ್ರ ಭಟ್ಟರ ಉತ್ಸ್ಫೂರ್ತಿಯಿಂದಲೇ, ಪುನಃ ಹೊರಡಹತ್ತಿದ "ವೃತ್ತವು" ಮಾತ್ರ ಅಖಂಡವಾಗಿ ನಡೆದಿದೆಯೆಂದು ವರದಿಮಾಡಲು ಸಂತೋಷವೆನಿಸುತ್ತದೆ.

ಆ ಕಾಲದಲ್ಲಿ "ವೃತ್ತ"ದಲ್ಲಿ ಸಂಪಾದಕೀಯವಲ್ಲದೇ "ನಿರೀಕ್ಷಕನು ಬರೆಗುದು", "ಪತ್ರಕರ್ತರ ನುಡಿಗನ್ನಡಿ", "ಸ್ಥಾನಿಕ ವೃತ್ತಾಂತಗಳು", "ಸ್ಥಳಿಕ ವಿಷಯಗಳು", "ಜಿಲ್ಹಾ ಸಮಾಚಾರ", "ವಿವಿಧ ವಿಷಯಗಳು" ವಗೈರೆ ಬರಹದಡಿ ಲೇಖನಗಳೂ,-ವಾರ್ತೆಗಳೂ ಹನ್ನೆರಡು-ಹದಿನಾರು ಪುಟಗಳಲ್ಲಿ ಪ್ರಸಿದ್ಧವಾಗುತ್ತಿದ್ದವು. ದೇಶ-ವಿದೇಶಗಳ ವಾರ್ತೆಗಳನ್ನೂ, ಹಿಂದೀ ರಾಜಕಾರಣವನ್ನೂ ಈ ಲೇಖನಗಳು ಸ್ಥೂಲರೂಪದಲ್ಲಿ ಸಮಗ್ರವಾಗಿ ನೀಡುತ್ತಿದ್ದರಿಂದ "ವೃತ್ತ"ವು ಬಹಳ ಜನಪ್ರಿಯವಾಯಿತು. 1943 ರಷ್ಟೊತ್ತಿಗೆ "ಜಿಲ್ಹಾ ಸಂಚಾರಿಯು" "ಕೇಳಿದ್ದು! ಕಂಡದ್ದು" ಈ ಲೇಖನಗಳು ಪ್ರಕಟವಾಗತೊಡಗಿದವು. ಈ ಲೇಖನಗಳು ಪರಿಶೋಧಾತ್ಮಕ Investigative reporting ಪ್ರಖರ ಟೀಕೆಗಳಿಂದ ಯುಕ್ತವಾದ್ದರಿಂದ ಸರಕಾರಿ ಅಧಿಕಾರಿಗಳ ಮೇಲೆ, ಲಂಚಖೋರರ, ಕಳ್ಳ ಸಂಗ್ರಹಕಾರ, ಲಾಭಖೋರರ ಮೇಲೆ ಅಂಕುಶಪ್ರಾಯವಾಗಿದ್ದರಿಂದ ಜನಮನ್ನಣೆಗೆ ಪಾತ್ರವಾದವು. ಆದರೆ 1934 ರ ನಂತರ "ವೃತ್ತ"ದ ಮೇಲೆ ಆಪತ್ತುಗಳು ಬಂದಿಲ್ಲೆಂದು ಮಾತ್ರ ಯಾರೂ ಭಾವಿಸಬಾರದು. ಎರಡನೇ ಮಹಾಯುದ್ಧದ ಕಾಲಕ್ಕೆ ವೃತ್ತವು ಬಗೆ ಬಗೆಯ ಕಷ್ಟಗಳನ್ನು ಅನುಭವಿಸಬೇಕಾಯಿತು. ಮತ್ತು ವೃತ್ತ ಪತ್ರಿಕೆಗಳ ಕಾಗದ (News print paper ಸಿಗುವದು ಕಷ್ಟವಾದ್ದರಿಂದಲೂ, ಕಾಗದದ ಉಪಯೋಗದ ಮೇಲೆ ಸರಕಾರವು ನಿಯಂತ್ರಣ ಹಾಕಿದ್ದರಿಂದಲೂ "ವೃತ್ತ"ವು ಕೆಲಕಾಲ ಫೂಲಸ್ಕೇಪ ಕಾಗದದ ಮೇಲೆ ಅಚ್ಚಾಗುವ ಪ್ರಸಂಗಬಂತು. ಅದೇ ಕಾಲದಲ್ಲಿ ಕೋರ್ಟಿನಲ್ಲಿ ಕೆಲಸ ಕಡಿಮೆ ಇದ್ದರಿಂದ ಕುಮಟೆಯ ನ್ಯಾಯಾಲಯವನ್ನು ಕೆಲಕಾಲ ಶಿರ್ಸಿಯ ನ್ಯಾಯಾಲಯಕ್ಕೆ ಜೋಡಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಸಂಪಾದಕತ್ವದ ಹೊಣೆಯನ್ನು ನಿರ್ವಹಿಸುವಂತೆ ದಿವಂಗತ ಕೇಶವ ಉಪೇಂದ್ರ ಭಟ್ಟರಿಗೆ, ದಿ| ವಿಶ್ವನಾಥ ಪ್ರಭು. ದಿವಂಗತ ಮುಕುಂದ ನಾರಾಯಣ ಪ್ರಭು ತಿರೂರಕರ ಇವರ ಮುಖಾಂತರ ಆಹ್ವಾನ ಬಂದಿತ್ತು. ಆದರೆ ಸ್ವತಂತ್ರಮನೋವೃತ್ತಿಯ ದಿ| ಕೇಶವ ಭಟ್ಟರು ಈ ಹೊಣೆಯನ್ನು ಒಪ್ಪಿಕೊಳ್ಳಲಿಲ್ಲ. ಆದರಿಂದ ವೃತ್ತವು ಆಪತ್ತಿನಿಂದ ಪಾರಾಯಿತಾದರೂ ಮುಂದೆ 1944 ರಿಂದ ಕೆಲಕಾಲ, ಸರಕಾರದ ವೃತ್ತಪತ್ರದ ನಿಯಂತ್ರಣದ ಕಾಯದೆಯಿಂದಾಗಿ ಫೂಲಸ್ಕೇಪ ಎರಡೇ ಪುಟಗಳಿಂದ ಪ್ರಕಟವಾಗಬೇಕಾಯಿತು. ಆದರಿಂದ ಇಬ್ಬ ಲೇಖಕರಿಗೆ ಅವಕಾಶವಿಲ್ಲದ್ದರಿಂದ, ದಿವಂಗತ ಕೇಶವ ಭಟ್ಟರೊಬ್ಬರೇ "ವೃತ್ತ"ದ ಕಾರ್ಯಭಾರವನ್ನು ನಿರ್ವಹಿಸುತ್ತಿದರು. ಎರಡೇ ಪುಟಗಳಲ್ಲಿ ಜಿಲ್ಲೆಯ ಸುದ್ದಿಗಳನ್ನೂ ಮಹಾಯುದ್ಧದ ಸುದ್ದಿಗಳನ್ನೂ ಓದುಗರಿಗೆ ಒದಗಿಸಿ "ವೃತ್ತ"ವು ಜನರ ಪ್ರೀತ್ಯಾದರಗಳನ್ನು ಕಾಪಾಡಿಕೊಂಡಿತಲ್ಲದೇ ವಾಚಕವರ್ಗವನ್ನೂ ವರ್ಗಣಿದಾರರ ಸಂಖ್ಯೆಯನ್ನೂ ಹೆಚ್ಚಿಸಿಕೊಳ್ಳಲು ಸಮರ್ಥವಾಯಿತು. ಎರಡು ಪುಟಗಳ ಪತ್ರಿಕೆಯೆಂದು ಯಾರೂ ಅದನ್ನು ತಿರಸ್ಕರಿಸಲಿಲ್ಲ. ಅದನ್ನು ಎಲ್ಲರೂ ಪುರಸ್ಕರಿಸಿದರು.

"ವೃತ್ತ"ದ ಮೇಲೆ 1943 ರಲ್ಲಿ ಇನ್ನೊಂದು ಗಂಡಾಂತರವೂ ಬಂದಿತ್ತು. 1942 ರ " "Quit India" "ಭಾರತ ಛೋಡೋ" "ಚಲೇಜಾವ ಚಳುವಳಿ" ದೇಶದಲ್ಲಿ ಭರದಿಂದ ನಡೆಯುತ್ತಿದ್ದಾಗ ಅಧಿಕಾರಿ

ಗಳು ದಬ್ಬಾಳಿಕೆಯನ್ನು ನಡೆಸುತ್ತಿದ್ದರು. ಸಂಶಯದ ಮೇಲೆ ಜನರನ್ನು ಹಿಡಿದು ಪೋಲೀಸರು ಕಾರಾಗೃಹದಲ್ಲಿ ಅವರಿಗೆ ಹಿಂಸೆನೀಡಿ ಭೂಗತ ಕಾರ್ಯಕರ್ತರ ಚಳವಳಿಕಾರರ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ದೊರಕಿಸಲು ಅಹಮಹಮಿಕೆಯಿಂದ ಪ್ರಯತ್ನಿಸುತ್ತಿದ್ದರು. ಇಂಥದೊಂದು ವಿಪರೀತ ಪ್ರಕರಣ ಗೋಕರ್ಣದಲ್ಲಿ ನಡೆಯಿತು. ಗೋಕರ್ಣದಿಂದ ಭೂಗತ ಕಾರ್ಯಕರ್ತರು ಅಂಕೋಲಾ ತಾಲೂಕಿನ ಭೂಗತ ಕಾರ್ಯಕರ್ತರಿಗೆ ಬರೆದ ಕೆಲವು ಗುಪ್ತ ಕಾಗದಗಳು ಗೋಕರ್ಣದಿಂದ ಆಗರಗೋಣಕ್ಕೆ ಹೋಗುತ್ತಿದ್ದ ರಾ| ಎನ್. ಆರ್. ಶೆಟ್ಟಿಯವರ ಹತ್ತಿರ ದೊರೆತವು. ಪೋಲೀಸರು ಅವರನ್ನು ಬಂಧಿಸಿದರು. ರಾ| ಶೆಟ್ಟಿಯವರಿಗೆ ಭೂಗತ ಕಾರ್ಯಕರ್ತರ ಮಾಹಿತಿಯೇನೂ ಇರಲಿಲ್ಲ. ತಮಗೆ ಪತ್ರಗಳನ್ನು ಕೊಟ್ಟವರು ಯಾರೆಂಬುದೂ ಅವರಿಗೆಗೊತ್ತಿದ್ದಿಲ್ಲ, ಯಾರಿಗೆ ಅವನ್ನು ಮುಟ್ಟಿಸಬೇಕೆಂಬುದೂ ಅವರಿಗೆ ಗೊತ್ತಿರಲಿಲ್ಲ. ಆದರೂ ಅವರಿಗೆ ಆ ಮಾಹಿತಿ ಇರಬೇಕೆಂದೂ, ಅವರಿಂದ ಅದನ್ನು ದೊರಕಿಸಬೇಕೆಂದೂ ಪೋಲೀಸರ ನಿರ್ಧರಿಸಿದರು. ರಾ| ಶೆಟ್ಟಿಯವರಿಂದ ಈ ಮಾಹಿತಿ ಅವರಿಗೆ ಸಿಗಲಿಲ. ಆಗ ಶೆಟ್ಟಿಯವರು ಮಾಹಿತಿ ಅಡಗಿಸಿಟ್ಟಿದ್ದಾರೆಂದು ಭಾವಿಸಿ ಅದನ್ನು ಅವರಕಡೆಯಿಂದ ಹೊರಗೆಡಹುವದಕ್ಕಾಗಿ ಇಬ್ಬರು ಪೋಲೀಸ ಅಧಿಕಾರಿಗಳು ಶೆಟ್ಟಿಯವರಿಗೆ ಗೋಕರ್ಣದ ಬಂಗಲೆಯ ಮೇಲೆ ಹಿಂಸಿಸಹತ್ತಿದರು. ಅವರ ಗುದದ್ವಾರದಲ್ಲಿ ಕೋಲು ಚುಚ್ಚಿದರು. ಅದರ ಪರಿಣಾಮದಿಂದ ಶೆಟ್ಟಿಯವರ ಗುದದ್ವಾರದಿಂದ ರಕ್ತಬರಹತ್ತಿತಲ್ಲದೇ ಅವರು ಬಹಳ ಬಳಲಹತ್ತಿದರು. ಈ ಚಿತ್ರಹಿಂಸೆಯ ಕಥೆ "ವೃತ್ತ''ಕ್ಕೆ ಓರ್ವ ಭೂಗತಕಾರ್ಯಕರ್ತರಿಂದ ತಿಳಿದು ಬಂತು. 1943 ರ ಸೆಪ್ಟೆಂಬರ್‌ದಲ್ಲಿ ಆ ಕಥೆಯನ್ನು ಒಮ್ಮೆಲೇ ಪ್ರಕಟಿಸಲು ಸಾಧ್ಯವಿರಲಿಲ್ಲ. ಆದರಿಂದ "ವೃತ್ತ' ಕಾರರು ತಮಗೆ ಬಂದ ಮಾಹಿತಿಯನ್ನು ಆ ಕಾಲದ ಜಿಲ್ಹಾಧಿಪರಿಗೆ ತಿಳಿಸಿ, ರಾ| ಶೆಟ್ಟಿಯವರನ್ನು ಹಿಂಸಿಸಿದ ಅಧಿಕಾರಿಗಳ ವಿರುದ್ಧ ಕ್ರಮಕೈಕೊಳ್ಳಲು ಬಿನ್ನವಿಸಿದರು. ಜಿಲ್ಹಾಧಿಪರು "ವೃತ್ತ''ದ ಪತ್ರವನ್ನು ಜಿಲ್ಹಾ ಪೋಲೀಸ ಸಾಹೇಬರಿಗೆ ಕಳುಹಿಕೊಟ್ಟರು. ಈ ಸಾಹೇಬರು "ವೃತ್ತ"ಕ್ಕೆ ಮಾಹಿತಿಕೊಟ್ಟ ವ್ಯಕ್ತಿಯನ್ನು ತಮ್ಮ ಕಡೆಗೆ ಕಳುಹಿಸಿಕೊಡಬೇಕಾಗಿ ತಿಳಿಸಿದರು. ಆದರೆ ಸದರಿ ಮಾಹಿತಿ ಪೂರೈಸಿದ ವ್ಯಕ್ತಿ ಭೂಗತರಾಗಿದ್ದರು. ಅವರನ್ನು ಸಾಹೇಬರ ಕಡೆಗೆ ಕಳುಹಿಸಿಕೊಡುವದು ಸಾಧ್ಯವಿದ್ದಿಲ್ಲ. ಆದ್ದರಿಂದ ನಮಗೆ ಮಾಹಿತಿಕೊಟ್ಟವರಿಗೆ ಸ್ವಂತ ಮಾಹಿತಿ ಏನೂ ಇಲ್ಲ. ಅವರ ಕರ್ಣಪರಂಪರೆಯಿಂದ ಕೇಳಿದ್ದನ್ನು ನಮಗೆ ತಿಳಿಸಿದ್ದಾರೆ. ಆದರಿಂದ ಸಾಹೇಬರಿಗೆ ಹೆಚ್ಚಿನ ಮಾಹಿತಿ ಸಿಗುವಂತಿಲ್ಲ. ಸಾಹೇಬರಿಗೆ ಸತ್ಯಸ್ಥಿತಿ ತಿಳಕೊಳ್ಳುವ ಮನಸ್ಸಿದ್ದರೆ ಪೋಲೀಸರ ಬಂಧನದಲ್ಲಿರುವ ರಾ| ಶೆಟ್ಟಿಯವರಿಂದ ಇಲ್ಲವೇ ಅವರ ಪ್ರಕೃತಿಯನ್ನು ಪರೀಕ್ಷಿಸಿ ಉಪಚಾರಮಾಡಿದ ಗೋಕರ್ಣದೊಳಗಿನ ಡಾಕ್ಟರರಿಂದ ಬೇಕಾದ ಮಾಹಿತಿಯನ್ನು ಪಡೆಯಬಹುದು ಎಂದು ವೃತ್ತಕಾರರು ಉತ್ತರಕೊಟ್ಟರು. ಈ ಪತ್ರಕ್ಕೆ ಪ್ರತ್ಯುತ್ತರ ಬರಲಿಲ್ಲ. ರಾ| ಶೆಟ್ಟಿಯವರ ಮೇಲೆ ನಡೆದ ಅತ್ಯಾಚಾರದ ಕಥೆ ಅಸತ್ಯವಿರುತ್ತದೆಂದಾಗಲಿ, ಅದು ಸತ್ಯವಿರಲಿ, ಅಸತ್ಯವಿರಲಿ, ವಿದ್ಯಮಾನ ಪರಿಸ್ಥಿತಿಯಲ್ಲಿ ಅದನ್ನು ಪ್ರಕಟಿಸುವದು ಇಷ್ಟವಿರುವದಿಲ್ಲೆಂದಾಗಲಿ ಪೋಲೀಸ ಸಾಹೇಬರೂ ತಿಳಿಸಲಿಲ್ಲ, ಜಿಲ್ಹಾಧಿಪರೂ ತಿಳಿಸಲಿಲ್ಲ. ರಾ| ಶೆಟ್ಟಿಯವರಿಗೆ ಶಿಕ್ಷೆಯಾಗಿ ಅವರು ಕಾರವಾರದ ತುರಂಗದಲ್ಲಿದ್ದರು. ಅಲ್ಲಿಂದ ಪುನಃ ಶೆಟ್ಟಿಯವರ ಮೇಲಾದ ಅತ್ಯಾಚಾರದ ಇನ್ನೊಂದು ವರದಿಬಂತು. ಆಗ "ವೃತ್ತ"ವು 1943 ರ ಜೂನ ಪ್ರಾರಂಭಕ್ಕೆ ಆ ವರದಿಯನ್ನು ಸಾದ್ಯಂತ ಪ್ರಕಟಿಸಿ, ಈ ಅತ್ಯಾಚಾರದ ಚೌಕಶಿಯನ್ನು ಮಾಡಬೇಕಾಗಿ ಸರಕಾರಕ್ಕೆ ಬಿನ್ನವಿಸಿತು. ವರದಿಯು ಅಸತ್ಯವಿದ್ದರೆ ತನ್ನಮೇಲೆ ಕ್ರಮ ನಡಿಸಲು ಸಮ್ಮತಿಯನ್ನೀಯಬೇಕೆಂದೂ ಸರಕಾರದವರು ಪತ್ರಿಕಾಸಲಹಾ ಮಂಡಳದಲ್ಲಿ ಸೂಚನೆ ತಂದು "ವೃತ್ತ" ಕಾರರಿಗೆ ಮಂಡಳದೆದುರು ಹಾಜರಾಗಲು ತಿಳಿಸಿದರು.[1] ಶಾಂತಿಯಿಂದ ಈ ವ್ಯವಹಾರ ನಡೆದಿತ್ತು.[1] ಪೂರ್ಣ ವಿವರಗಳನ್ನು ಸಂಕಲಿಸಿ ತಮ್ಮ ಕೈಫಿಯತ್ತನ್ನು ಸಾದರಗೊಳಿಸಲಿಕ್ಕೆ "ವೃತ್ತ" ಕಾರರಿಗೆ ಅವಧಿಯೂ ಸಿಗಲಿಲ್ಲ.[1] ಆದರೂ "ವೃತ್ತ" ಕಾರರು ಧೈರ್ಯವನ್ನು ಕಳಕೊಳ್ಳದೆ, ಜಿಲ್ಹಾಧಿಕಾರಿಗಳಿಗೂ ತಮಗೂ ನಡೆದ ಪತ್ರವ್ಯವಹಾರದ ಹಾಗೂ ತುರಂಗದಿಂದ ಬಿಡುಗಡೆ ಹೊಂದಿದ ರಾ| ಎನ್. ಆರ್. ಶೆಟ್ಟಿಯವರು ಜಿಲ್ಹಾಧಿಪರಿಗೆ ಮಾಡಿಕೊಂಡ ಮನವಿಯ ಪ್ರತಿಗಳನ್ನು ಮಂಡಳಕ್ಕೆ ಸಾದರಗೊಳಿಸಿದರು, ಮತ್ತು "ವೃತ್ತ"ದಲ್ಲಿ ಪ್ರಕಟವಾದ

ವರದಿಯಲ್ಲಿ ರಾಜದ್ರೋಹದ ಇಲ್ಲವೇ ಯುದ್ಧಕಾರ್ಯಕ್ಕೆ ವಿರೋಧವಮಾಡುವ ಅಂಶವಿಲ್ಲದ್ದರಿಂದ ಸರಕಾರವು ಕ್ರಮ ಕೈಕೊಳ್ಳುವ ಪ್ರಸಂಗವಿಲ್ಲೆಂದೂ, ವರದಿಯು ಅಸತ್ಯವಿರುತ್ತಿದ್ದಲ್ಲಿ, ಆರೋಪಿತ ಪೋಲೀಸ ಅಧಿಕಾರಿಗಳು "ವೃತ್ತ" ದ ವಿರುದ್ಧ ತಮ್ಮ ಮಾನಭಂಗದ ಬಗ್ಗೆ ಕ್ರಮಕೈಗೊಳ್ಳಬಹುದಾಗಿಯೂ ವಾದಿಸಿದರು. "ವೃತ್ತ" ಕಾರರ ಪಕ್ಷವನ್ನು ಮಂಡಳದಲ್ಲಿ ಸಂಯುಕ್ತ ಕರ್ನಾಟಕದ ಸಂಪಾದಕ ಶ್ರೀ|| ಹನುಮಂತರಾವ ಮೋಹರೆಯವರು ಎತ್ತಿಹಿಡಿದರು. ಇತರ ಪತ್ರಿಕಾಕರ್ತರೂ "ವೃತ್ತ" ದ ಭೂಮಿಕೆ ನಿರ್ದೋಷವಿರುತ್ತದೆಂದೂ ವಾದಿಸಿದರು. ಆದರಿಂದ ಸರಕಾರದವರು "ವೃತ್ತ" ದ ಮೇಲೆ ಗದಾಪ್ರಹಾರ ಮಾಡಬೇಕೆಂದು ಮಾಡಿದ ಪ್ರಯತ್ನ ವಿಫಲವಾಯಿತು. "ವೃತ್ತ" ವೂ ದೊಡ್ಡದೊಂದು ಗಂಡಾಂತರದಿಂದ ಪಾರಾಯಿತು.

"ವೃತ್ತ" ವು ಜಿಲ್ಲೆಯ ಜನರಲ್ಲಿ ಅದೇ ರೀತಿ ಜಿಲ್ಲೆಯವರೇ ಆಗಿ ಹೊರನಾಡಿನಲ್ಲಿ ವಾಸಿಸುತ್ತಿರುವ ಜನರ ಪ್ರೀತ್ಯಾದರಗಳನ್ನು ಸಂಪಾದಿಸಿರುತ್ತಿದ್ದರೂ ಅದು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆಯಾ ಕಾಲದ ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ್, ತಾಲೂಕಬೋರ್ಡ್, ಸಂಘ-ಸಂಸ್ಥೆಗಳು ಅದೇ ರೀತಿ ಜಿಲ್ಲೆಯ ಪದಾಧಿಕಾರಿಗಳ ಕಲೆಕ್ಟರ್, ಅಸಿಸ್ಟಂಟ ಕಲೆಕ್ಟರ ಎಂಜನಿಯರ ವಗೈರೆ-ರವರ ಕಾರಭಾರದೊಳಗಿನ ಕೊಳಕನ್ನೆಲ್ಲ ನಿರ್ಭೀತಿಯಿಂದ ನಿರ್ಭಿಡೆಯಿಂದ ದಯೆ ದಾಕ್ಷಿಣ್ಯಗಳಿಗೊಳಗಾಗದೆ ಟೀಕಿಸುತ್ತಿತ್ತು. ನಿಃಸ್ವಾರ್ಥ ಟೀಕೆಯನ್ನು ಸೌಜನ್ಯದಿಂದ ಕೇಳಿಕೊಂಡು ತಮ್ಮ ತಪ್ಪು ತಡೆಗಳನ್ನು ಸರಿಪಡಿಸಿಕೊಳ್ಳಬೇಕೆಂಬ ಬುದ್ಧಿ, ಮನೋವೃತ್ತಿ ನಮ್ಮಲ್ಲಿಯ ಸಾರ್ವಜನಿಕ ಕಾರ್ಯಕರ್ತರಲ್ಲೂ, ಅಧಿಕಾರಿಗಳಲ್ಲೂ, ಅಧಿಕಾರಪದಗಳನ್ನು ಆಕ್ರಮಿಸುವವರಲ್ಲೂ ಇರುವದಿಲ್ಲ.! "ವೃತ್ತ" ದ ಟೀಕೆಯಿಂದ ನೊಂದುಕೊಂಡ ಎಷ್ಟೋ ಅಧಿಕಾರಿಗಳು "ವೃತ್ತ" ದ ವಿರುದ್ಧ ಹಗೆ ಹಿಡಿಯುತ್ತಿದರು. ಉದಾಹರಣಾರ್ಥವಾಗಿ ಇಬ್ಬರು ಪೋಲೀಸ ಫೌಜದಾರರು ಹಳಿಯಾಳ ಮತ್ತು ಅಂಕೋಲಾ ಮೆಜಿಸ್ಟ್ರೇಟರ ನ್ಯಾಯಾಲಯಗಳಲ್ಲಿ ತಮ್ಮ ಮಾನಭಂಗದ ಬಗ್ಗಾಗಿ ಕ್ರಿಮಿನಲ್ ಮೊಕದ್ದಮೆಗಳನ್ನು ನಡಿಸಿದ್ದನ್ನು ನಮೂದಿಸಬಹುದು. ಆದರೆ ಯಶಸ್ಸು ಸಿಗುವ ಆಶೆ ತೋರದ್ದರಿಂದ ಅವರು ಆ ಕ್ರಮ ಮುಂದುವರಿಸಲಿಲ್ಲ. ವಿಚಾರಣೆ ಪ್ರಾರಂಭವಾಗುವ ಮೊದಲೇ ಆ ಖಟ್ಲೆಗಳು ಬಿಟ್ಟುಕೊಡಲ್ಪಟ್ಟವು. ಅದೇ ರೀತಿ ಸಿರ್ಸಿಯ ಪಂಡಿತ ಜನರಲ್ ಲೈಬ್ರರಿಯವರು ಮಾಡಿದ ಮೊಕದ್ದಮೆಯ ವಿವರಗಳನ್ನು ನೀಡಬಹುದು 1940-50 ರ ದಶಕದಲ್ಲಿ ಸಿರ್ಸಿಯ ಲೈಬ್ರರಿಯಲ್ಲಿ ವ್ಯವಸ್ಥೆ ಸರಿ ಇಲ್ಲೆಂದೂ, ವಾಚನಾಲಯದಲ್ಲಿ ಇಸ್ಪೀಟ ಆಟ, ಜೂಗಾರಾಟ ವಗೈರೆ ನಡೆಯುತ್ತಿದೆಯೆಂದೂ, ವಾಚನಾಲಯದ ಫರ್ನಿಚರ ವಗೈರೆಗಳನ್ನು ಪದಾಧಿಕಾರಿಗಳು ತಮ್ಮ ಮನೆಯಲ್ಲಿ ಉಪಯೋಗಿಸುತ್ತಾರೆಂದೂ "ವೃತ್ತ" ಕ್ಕೆ ಮೇಲಿಂದಮೇಲೆ ಜನರಿಂದ ಪತ್ರಗಳು ಬಂದವು. ಅದರಂತೆ "ವೃತ್ತ" ದಲ್ಲಿ ಎರಡಾವರ್ತಿ ಟೀಕೆ ಪ್ರಕಟವಾಯಿತು ಸಮಾಜ ಸ್ವಾಸ್ಥ್ಯಕ್ಕೆ ವಿರುದ್ಧವಾದ ತಮ್ಮ ನಡತೆಯನ್ನು ಸುಧಾರಿಸಿಕೊಳ್ಳದೇ ವಾಚನಾಲಯದ ಪದಾಧಿಕಾರಿಗಳು "ವೃತ್ತ" ದ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಹೂಡಿದರು ! "ವೃತ್ತ" ದ ವಕಾಲತ್ತನ್ನು ಸಿರ್ಸಿಯ ನ್ಯಾಯಾಲಯದಲ್ಲಿ ವಹಿಸಿಕೊಳ್ಳ ನಂತೆ, ಸಿರ್ಸಿಯ ವಕೀಲರಿಗೆ ವಿನಂತಿಸಿದಾಗ, ಅವರಾರೂ ಒಪ್ಪದಿದ್ದಾಗ ನಿರಾಕರಿಸಿದಾಗ ಈ ಟೀಕೆಯಿಂದ ನೊಂದವರಾರೆಂಬುದರ ಹೂರಣ ಹೊರಬಿತ್ತು. "ವೃತ್ತ" ದ ವಿರುದ್ಧ ಕೋರ್ಟಿನಲ್ಲಿ ಖಟ್ಲೆಯಾಗಿದೆಯೆಂದೂ ತಮಗೆ ಪೂರ್ಣ ಮಾಹಿತಿ ನೀಡಬೇಕೆಂದೂ, ಮತ್ತು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಬೇಕೆಂದೂ "ವೃತ್ತ" ಕ್ಕೆ ಪತ್ರಬರೆವ ವರದಿಗಾರರಿಗೆ "ವೃತ್ತ" ವು ಬರೆದ ಪತ್ರಗಳು, ಅವರ ಪತ್ತೆಯಿಲ್ಲದೆ, ಅವರಿಗೆ ವಿತರಣೆಯಾಗದೆ ಟಪಾಲಿನಿಂದ ತಿರುಗಿಬಂದಾಗ ಸಂಪಾದಕರು ಕಂಗಾಲಾದರು. ಸ್ವತಃ ಸ್ವತಂತ್ರವಾಗಿ ಚೌಕಶಿಮಾಡಿಸಿದಾಗ "ವೃತ್ತ" ದಲ್ಲಿ ಪ್ರಕಟವಾದ ಟೀಕೆ ಅಕ್ಷರಶಃ ನಿಜವಿತ್ತೆಂದೂ, ಟೀಕೆ ಸೌಮ್ಯವಾಗಿತ್ತೆಂದೂ ತಿಳಿದ ಬಂತ ಆದರೂ ಧೃತಿಗೆಡದೆ ದಿ ಕೇಶವ ಉಪೇಂದ್ರ ಭಟ್ಟರು ಸಿರ್ಸಿಯ ನ್ಯಾಯಾಲಯದಲ್ಲಿ, "ವೃತ್ತ" ದ ವಕೀಲರಾಗಿ ಹಜರಾದರು, ಮತ್ತು ವಾದಿಯ ದಾವೆ ನ್ಯಾಯ್ಯವಾದದ್ದಲ್ಲ. ವೃತ್ತ ಆದು ಸ್ವಸ್ಥಿತಿಗೆ ವ್ಯತಿರಿಕ್ತವಾಗಿದೆಯೆಂಬ ಬರೀ ಐದು ಸಾಲುಗಳ ತಮ್ಮ ಕೈಫೀಯತ ಉದಾಹರಣೆ

ಯನ್ನು (written statement) ವಾದಿಯ ದಾವೆಗೆ ಪ್ರತಿವಾದಿಯು ಕೊಡತಕ್ಕ ಹೇಳಿಕೆ ಹಾಜರಪಡಿ . ದೇಶ-ವಿದೇಶಗಳೊಳಗಿನ ನ್ಯಾಯಾಲಯಗಳ ತೀರ್ಪುಗಳನ್ನು ಉದಾಹರಿಸುತ್ತ " ವೃತ್ತ " ದ ಭೂಮಿಕೆ ನಿರ್ದೋಷವೆಂಬ ತಮ್ಮ ವಾದವನ್ನು ನ್ಯಾಯಾಲಯದ ಮುಂದೆ ಅವರು ಸಮರ್ಥರೀತಿಯಲ್ಲಿ ಮಂಡಿಸಿದರು - 32 ಪುಟಗಳ ತಮ್ಮ ಸುದೀರ್ಘ ತೀರ್ಪಿನಲ್ಲಿ ಸಿರ್ಸಿಯ ನ್ಯಾಯಾಧೀಶ ಬಿ . ಟಿ . ಖರಾವರವರು ವಾದಿಯ ದಾವೆಯನ್ನು ಖರ್ಚು ಸಹಿತ ಕಿತ್ತುಹಾಕಿದರು . ಕಾರವಾರದ ಜಿಲ್ಹಾ ನ್ಯಾಯಾಲಯದಲ್ಲಿ ಲ್ಯಾಬ್ರರಿಯು ಮಾಡಿಕೊಂಡ ಅಪೀಲನ್ನೂ ನ್ಯಾಯಾಧೀಶರು ಕಿತ್ತೊಗೆದರು . ಹೀಗೆ ನಾಲ್ವತ್ತರ ದಶಕದಲ್ಲಿ ವೃತ್ತವು ಕೆಲಕಾಲ ತೊಂದರೆಗಳನ್ನು ಅನುಭವಿಸುವ ಪ್ರಸಂಗ ಬಂತು .

ಸ್ವಾತಂತ್ರ್ಯ ನಂತರದಲ್ಲಿ " ವೃತ್ತ " ವು ಕೊಂಗ್ರೆಸ್ಸಿಗರ ದುರ್ವರ್ತನೆಯಿಂದ ಹೇಸಿಗೊಂಡದ್ದನ್ನು "ವೃತ್ತ" ದ ಪುಟಗಳಿಂದ ಕಾಣಬಹುದು . ಎಷ್ಟು ಪ್ರಖರತೆಯಿಂದ ವೃತ್ತವು ಬ್ರಿಟಿಷ ಆಳರಸರನ್ನು ಅವರ ಅನುಯಾಯಿಗಳನ್ನು ಟೀಕಿಸುತ್ತಿತ್ತೋ, ಅಷ್ಟೇ ಪ್ರಖರತೆಯಿಂದ ಈ ಹೊಸ ಕೊಂಗ್ರೆಸ್ಸಿಗರನ್ನು ಟೀಕಿಸುತ್ತಿತ್ತು . ಅದರಿಂದ ಈ ಕೊಂಗ್ರೆಸ್ಸಿಗರು, ಪದಾಧಿಕಾರಿಗಳು ಅಧಿಕಾರಿಗಳು " ವೃತ್ತ " ದ ವಿರುದ್ಧ ಹಗೆತನ ಹಿಡಿದರು . ಅವರು "ವೃತ್ತ" ಕ್ಕೆ ಜಾಹಿರಾತುಗಳನ್ನು ನೀಡಲಿಲ್ಲ ! ವೃತ್ತದ ಮುದ್ರಣಾಲಯಕ್ಕೆ ತಮ್ಮ ಮುದ್ರಣವನ್ನು ಕೊಡಲಿಲ್ಲ. !! ಅವಕಾಶ ಸಿಕ್ಕಲ್ಲಿ ಕಾಯದೆಕ್ರಮ ನಡೆಸುವ ಧೋರಣೆ ಇಟ್ಟುಕೊಂಡರು . ಆದರೆ ದೇವರ ದಯೆಯಿಂದಲೂ, ಜನತೆಯ ಆಶೀರ್ವಾದದಿಂದಲೂ, " ವೃತ್ತ " ವು ಈ ಕಷ್ಟಗಳನ್ನೆಲ್ಲಾ ಯಶಸ್ವಿಯಾಗಿ ಎದುರಿಸಿ, ತನ್ನ ಲೋಕ ಸೇವಾ ವ್ರತವನ್ನು, ಅನ್ಯಾಯವನ್ನು, ಪ್ರತಿಭಟಿಸುವ ತನ್ನ ಧ್ಯೇಯವನ್ನು ನಿಷ್ಠೆಯಿಂದ ನಡೆಸಿತು

1916 ನೇ ಇಸವಿಯಲ್ಲಿ ಪಕ್ಷದಲ್ಲೊಮ್ಮೆ ಆರು ಪುಟಗಳಿಂದ ಪ್ರಕಟವಾಗುವ " ವೃತ್ತ " ವು ಮುಂದೆ ಕ್ರಮೇಣ ವಾರ ಪತ್ರಿಕೆಯಾಗಿ ಕ್ರಮೇಣ ಹನ್ನೆರಡು ಪುಟಗಳೊಡನೆ ಪ್ರಕಟವಾಗತೊಡಗಿತು . ಕೆಲವೊಮ್ಮೆ ಹದಿನಾರು ಹದಿನೆಂಟು ಪುಟಗಳೂ ಪ್ರಸಿದ್ಧವಾಗಿವೆ. ಕೆಲವೊಮ್ಮೆ ವಿಶೇಷ ಸಂಚಿಕೆಗಳೂ, ಪುರವಣಿಗಳೂ, ಪ್ರಕಟವಾಗಿವೆ . ಸ್ವಾತಂತ್ರ್ಯ ನಂತರದಲ್ಲಿ ಪುಟಗಳ ಸಂಖ್ಯೆ ಆರಕ್ಕೆ ಇಳಿಯಿತು . ಪ್ರಾರಂಭವಾದಂದಿನಿಂದ ಈ ತನಕ ಕಾನಡಾವೃತ್ತದ ಇಪ್ಪತ್ತೈದುಸಾವಿರ ಪುಟಗಳು ತುಂಬಿದ ಅರವತ್ತೊಂದು ಸಂಪುಟಗಳಲ್ಲಿ ಪ್ರಕಟವಾಗಿವೆ .

1963 ರ ಆಗಸ್ಟ ತಿಂಗಳಲ್ಲಿ ದಿವಂಗತ ಕೇಶವ ಭಟ್ಟರು ವಕೀಲಿ ವೃತ್ತಿಯಿಂದಲೂ, ಕಾನಡಾವೃತ್ತದ ಸಂಪಾದಕತ್ವದ ಹೊಣೆಯಿಂದಲೂ, ವೃದ್ಧಾಪ್ಯದ ಕಾರಣದಿಂದಾಗಿ ನಿವೃತ್ತರಾದರು. ಅಂದಿನಿಂದ ಶ್ರೀ ಪಾಂಡುರಂಗ ಕೃಷ್ಣ ಶಾನಭಾಗರು ತಮ್ಮ ಮಿತ್ರರೊಂದಿಗೆ ಈ ಹೊಣೆಯನ್ನು ಶ್ರದ್ಧೆಯಿಂದ ನಿರ್ವಹಿಸುತ್ತಾರೆ.

1963 ರ ನಂತರ ವೃತ್ತವು ಬಹಳ ಮಂದವಾಗಿ ಸಾಗಿದೆ ತನ್ನ ವಯಸ್ಸಿಗೆ ತಕ್ಕಂತೆ ಅದರ ಮನೋಧರ್ಮವಾಗಿದೆ . ಎಪ್ಪತ್ತಾರು ವರುಷಪ್ರಾಯದ ಯುವಕ, ತರುಣ ಸಂಪಾದಕ ಪಾಂಡುರಂಗ ಕೃಷ್ಣ ಶಾನಭಾಗರ ಕೋಲ್-ಕುದುರೆಯ ಮೇಲೆ ಕಾನಡಾವೃತ್ತವು, ಕುಂಟುತ್ತ, ಕುಂಟುತ್ತ, ಎಡವುತ್ತ, ತಡವುತ್ತ, ಬೀಳುತ್ತ, ಏಳುತ್ತ ಜೀವ ಹಿಡಿದುಕೊಂಡು ನಿಂತಿದೆ . ಜಗತ್ ವಿಖ್ಯಾತ ಲಂಡನ್ ಟೈಮ್ಸ (London Times) ಪತ್ರಿಕೆಯೂ, ಶತಸಂವತ್ಸರಗಳನ್ನು ದಾಟಿದ ಜ್ಞಾನಪ್ರಕಾಶದಂಥ ಮರಾಠಿ ಪತ್ರಿಕೆಯೂ ಕಣ್ಮರೆಯಾದದ್ದನ್ನು ವೃತ್ತವು ಕಂಡಿದೆ.

" ವೃತ್ತ " ವು ಸಾಯ ಬೇಕೇ ? ಕಾನಡಾವೃತ್ತವು ಸುದೀರ್ಘ ಕಾಲ ಬಾಳಬೇಕೇ ? ಅದನ್ನು ಜಿಲ್ಲೆಯ ಮಹಾಜನರೇ ನಿರ್ಧರಿಸಬೇಕು

— ಯು. ಕೇ ಭಟ್ಟ.

ಈ ಸ್ಮರಣ ಸಂಚಿಕೆಯು ಪತ್ರಾಗಾರದ ಗ್ರಂಥಾಲಯದಲ್ಲಿ ಇದೆ.

विचार-तरंग

(लेखक–"श्रीकृष्ण")

औद्योगिक शिक्षण — या देशाचा भाग्योदय होण्यास सर्वत्र उद्योगधंद्यांची वाढ झाली पाहिजे व या कामीं आवश्यक असलेली मदत देणें हें सरकारचें कर्तव्यकर्म आहे असें हिंदीप्रजा एक स्वानें सांगत आहे. युद्ध उपस्थित झाल्यापासून जी दिव्यदृष्टि आमच्या सार्वभौम सरकारास प्राप्त झाली आहे तिच्या योगानें त्यास दिसून आलें कीं अनेक बाबींत ब्रिटिश् राष्ट्रानें प्रगति करावयाची जरूरी असून स्वदेशांत व स्वसत्तेखालीं असणाऱ्या प्रदेशांत शक्य त्या उद्योगधंद्यांची वाढ केली पाहिजे. आणि म्हणूनच युद्ध चालू असून व्यथित चित्त असतांना देखील औद्योगिक कमिशन बसवून ब्रिटिश सरकारानें या देशांत कोणते उद्योगधंदे उभारण्याजोगे आहेत याची कसून चौकशी चालविली आहे.

हिंदुस्थान देशाचा आकार लक्षांत घेतां आमचा कानडा जिल्हा हा अगदींच लहान व मागसलेला प्रदेश होय. तथापि एका दृष्टीनें त्याचें महत्व कमी नाहीं. या जिल्ह्यास जें निसर्ग दत्त वैभव आहे त्याचा फायदा घेतल्यास प्रजा व सरकार या उभयतांचा फायदा झाल्याशिवाय राहणार नाहीं. आमच्या इलाख्यांतील कांहीं प्रसिद्ध ठिकाणीं या कमिशनची बैठक होणार हें खास. परंतु कानडा जिल्ह्यास कमिशनच्या बैठकीचा मान मिळणें शक्य दिसत नाहीं. आणि कदाचित् मिळाला तरी उपयुक्त माहिती अधिकारयुक्त वाणीनें देणारे नागरिक आमच्या जिल्ह्यांत नाहींत. या कामीं कारकुनी पेशाच्या रावसाहेब रावबहादुरांची सल्ला उपयोगी पडण्याजोगी नसून शेतांत व जंगलांत राबणारे कुणबट मानलेले लोकच उपयुक्त माहिती देऊं शकतील परंतु दुर्दैवेंकरून ते अशिक्षित व सरकार दरबारास घाबरणारे असल्यामुळें त्यांच्या अनुभवाचा व स्वसंपादित ज्ञानाचा उपयोग दुसऱ्यास करून घेतां येण्याजोगा नाहीं. आमच्या जिल्हाचें मुख्य वैभव म्हणजे जंगल. याचा उपयोग सरकार करून घेत आहे तो मार्ग औद्योगिक कमिशनच्या विचारा बाहेरचा आहे. परंतु जंगलांत ज्या असंख्य औषधी [illegible]ती आहेत त्यांच्या [illegible] द्रव्यें तयार करण्याची योजना [illegible]र करील तर किती उत्तम होईल वरें. [illegible] प्रकारचीं रानटी फळें व बिया यांपा[illegible]ण्याजोगें आहे कित्येक फुलांचा उपयोग सुगंधी तेलें व जलें तयार कर[ण्]याकडे होण्याचा संभव आहे. तसेंच [illegible] पासून रंग, [illegible]पासून कागद, [illegible]पासून कार्डबोर्ड (जाडजाड पुठ्ठे) तयार करण्यास लागणारी सामग्री कानडा जिल्ह्यांत भरपूर आहे. होनावर[illegible] रा० सा० [illegible] यांनीं एका जंगली झाडाच्या सालीपासून गुलाल तयार करण्याची योजना करीपर्यंत कोणाला ही कल्पनाही नव्हती कीं हें झाड इतकें उपयोगी आहे अशाच प्रकारचे इतर अनेक धंदे आहेत. परंतु राजाचें व प्रजेचें लक्ष्य त्याकडे वेधल्याशिवाय आपल्या जिल्ह्याचा उद्धार होणें शक्य नाहीं.

औद्योगिक विद्यालय.— हिंदुस्थानांत औद्योगिक शिक्षणाचें मध्यवर्ति मोठें विद्यालय एका प्रसिद्ध ठिकाणीं ठेवून त्याच्या शाखा सर्वत्र स्थापन कराव्या असें लोकमत बनूं लागल्यास आज बरींच वर्षें झालीं. तथापि अजून अशाप्रकारचें विद्यालय स्थापन झालेलें नाहीं. त्यांतल्यात्यांत समाधानाची गोष्ट ही कीं कांहीं वर्षांमागें मुंबई नगरीतील धनिकांनीं मरहूम महाराणी विक्टोरिया यांचें स्मारक म्हणून महाराणी **विक्टोरिया ज्युबिली टेक्निकल इन्स्टिट्यूट** नांवाची जी शाळा स्थापन केली होती तिची वाढ होऊन तिला महाविद्यालयाचें रूप प्राप्त होईल अशीं सुचिन्हें दिसूं लागलीं आहेत. या संस्थेच्या वाढीकरितां वरिष्ठ सरकारानें दोन लाख व मुंबई सरकारानें तीन लाख रुपयांची उदारपणानें मदत केली आहे. मुंबईच्या जवळच माटुंगा हें ठिकाण महाविद्यालयास व वसतिगृहास योग्य असें ठरविण्यांत आलें असून वरील विद्यालयाच्या इमारतीची कोनशिला गेल्या महिन्यांत ना. गव्हर्नर साहेब यांच्या हस्तें बसविण्यांत आली. त्या प्रसंगीं ना. मि. स्प्रोट व ना. गव्हर्नर साहेब यांनीं अत्यंत कळकळीचीं भाषणें करून लोकांच्या औद्योगिक प्रगती संबंधाच्या आ[illegible] दुजोरा दिला हें शुभ चिन्ह होय. सध्यां [illegible] विद्यालयांत मेणबत्या, साबण, व्हार्निश, [illegible]ळें गाळणें व शुद्ध[illegible] वगैरे धंद्यांचें शिक्षण दिलें जातें. या पुढें इंजिनियरिंगचाही वर्ग जोडण्यात येणार आहे. तरी कानडा जिल्ह्यातून पाच चार इंग्रजी इयत्तांचे ज्ञान बरोबर नेऊन नोकरीसाठी महिन्याचे महिने कित्येक आशीयाचे [illegible] झिजविणाऱ्या होतकरू तरुणांनीं आपलें लक्ष्य वरील प्रकारच्या धंदे शिक्षणाकडे दिलें असतां [illegible] पुढें स्वतंत्रपणें चालवून कित्येक निराश्रितांस आश्रय देण्यासही त्यांना सवड मिळण्याजोगी आहे.

ಕಾನಡಾವೃತ್ತ.

೧೮ನೇ ಫೇಬ್ರುವರಿ ೧೯೧೭

ಕಾನಡಾಜಿಲ್ಲೆಯ ಜಮಿಾನ ಮಹಸೂಲು.

ನಮ್ಮ ಕಾನಡಾ ಜಿಲ್ಲೆಯ ಮಹತ್ವದ ಉತ್ಪನ್ನದೊಳಗೆ ಜಂಗಲಗಳ ಉತ್ಪನ್ನ, ಆದಾಯದ ಮೇಲಿನ ಕರ, ಮತ್ತು ಸಾಗ ಭೂಮಿಯಮೇಲಿನ ಕಂದಾಯ ಇವೇ ಸರಕಾರದ ಜಮೆಯ ಕಲಮುಗಳು. ಇವುಗಳ ಪೈಕಿಂ ಜಮಿಾನ ಮಹಸೂಲಿನ ಬಗ್ಗೆ ಕೆಲವು ನಿರ್ದಿಷ್ಟ ಸಂಗತಿಗಳನ್ನು ಪ್ರಕಟಿಸಲಿಚ್ಛಿಸುವೆವು. ಕಾನಡಾಜಿಲ್ಲೆಯ ಹಳ್ಳಿಗಳು ೧೪೧೮ ಇದ್ದು ಇವುಗಳ ಕ್ಷೇತ್ರಫಲವು ೨೫೨೫೩೭೧೮ ಎಕರೆ ಇರುತ್ತದೆ. ಇದರೊಳಗಿನ ೨೦ ಲಕ್ಷ ಎಕರೆಗಳು ಜಂಗಲವೆಂತ ಕಾದಿಟ್ಟು ಒಂದು ಲಕ್ಷ ಎಕರೆ ಸಾರ್ವಜನಿಕ [illegible] ಉಪಯೋಗಕ್ಕೂ ಬೇಸಾಯದ ಕೆಲಸ[illegible] ಉಪಯೋಗವಿಲ್ಲದ ಭೂಮಿ ವಗೈರೆ ವಜಾ ತೆಗೆದು ಬರೇ ಬೇಸಾಯಕ್ಕೆ ಉಪಯೋಗಿಸುವ ಮಹಸೂಲಿನ ಭೂಮಿಯು ೪ ಲಕ್ಷ ಎಕರೆಗೆ ಮಿಾರುವದಿಲ್ಲ. ಈ ೪ ಲಕ್ಷ ಎಕರೆಯಲ್ಲಿ ಸರಾಸರಿ ಅರ್ಧಲಕ್ಷ ಎಕರೆಗಳು ಸಾಗವಾಗದೆ ಬಂಜರು ಬೀಳುವದರಿಂದ ಬರೆ ೩॥ ಲಕ್ಷ ಎಕರೆಗಳ ಮೇಲೆ ಸರಕಾರಕ್ಕೆ ಕಂದಾಯ ಸಿಗುತ್ತದೆ. ಈ ಕಂದಾಯದ [illegible]೦೦ ರೂಪಾಯಿಗಳು ಕಳೆದ ೧೯೧೪–೧೫ ಇಸ್ವಿಸಿನ ಬಾಬತು ಸರಕಾರಕ್ಕೆ ಉತ್ಪನ್ನವಾದಂತಾಗಿದೆ.

ನಮ್ಮ ದಕ್ಷಿಣ ಭಾಗದ ೬ ಜಿಲ್ಲೆಗಳಲ್ಲಿ ಸಾಗು ಭೂಮಿಯ ೫ ಪಟ್ಟು ಜಂಗಲವಿರುವ ಕಾನಡಾ ಜಿಲ್ಲೆಯ ಹೊರತು ಬೇರೆ ಯಾವ ಜಿಲ್ಲೆಯೂ ಇರುವದಿಲ್ಲವೆಂಬದು ಎಲ್ಲರಿಗೂ ಗೊತ್ತಿದೆ. ಆದದರಿಂದ ಬೆಳಗಾಂವ ಜಿಲ್ಲೆಗೆ ೨೮ ಲಕ್ಷ ಎಕರೆ, ಬಿಜಾಪುರ ಜಿಲ್ಲೆಗೆ ೩೬ ಲಕ್ಷ, ಧಾರವಾಡ ಜಿಲ್ಲೆಗೆ ೨೯ ಲಕ್ಷ, ಕುಲಾಬೆಗೆ ೧೩ ಲಕ್ಷ, ರತ್ನಾಗಿರಿಗೆ ೨೫ ಲಕ್ಷ, ಕ್ಷೇತ್ರಫಲವಿದ್ದು ಬೆಳಗಾಂವಿಗೆ ೨೨ ಲಕ್ಷ, ಬಿಜಾಪುರಕ್ಕೆ ೩೨ ಧಾರವಾಡಕ್ಕೆ ೨೪ ಕುಲಾಬೆಗೆ ೭॥ ಲಕ್ಷ ಮತ್ತು ರತ್ನಾಗಿರಿಗೆ ೧೮ ಲಕ್ಷ ಎಕರೆಗಳು ಸಾಗು ಭೂಮಿಯು ಮು[illegible] ಉತ್ಪನ್ನದ ಮಾನದಿಂದ ನೋಡಿದರೆ ಬೆಳಗಾಂವಿಗೆ ೧೬ ಲಕ್ಷ, ಬಿಜಾಪುರಕ್ಕೆ ೧೪ ಲಕ್ಷ[illegible]

representative body of the towns people We trust that all friends and admirers of the departed gentleman will come forward to honour the memory [illegible] deceased by helping the good object Now is the time to test the spirit of public appreciation & the true depth of the feeling

Indentured Labour,

It is admitted on all hands that the indentured emigration to Fijee is fraught with many an evil economic political & moral Even the Viceroy has come to recognise its iniquity In Bombay & other places the public feeling is so strong against the system that the leaders of those places have in public meetings assembled condemned the same in strong unmistakable terms But our Kanara is asleep & our leaders are doing nothing to educate the minds of the public or to join in the condemnation This is likely to be interpretted as a sign of lightheartedness on the part of our Kanarites But the fact is our people are usually blissfully ignorant of the outside public life and are as [illegible] indifferent towards what is going on elsewhere Weak submission & absence of [illegible]fulness are certainly the marked features of our Kanarites "Let the world move on but we shall stand still Taciturnity is our great virtue"

How the Great War is developing

Germany has grown desperate & is determined to push on with her usual pastime [illegible] wholesale submarinism with [illegible] nations whether foes or neutrals She has been doing further mischief in all quarters This has very naturally given rise to vehement irritation everywhere America is girding up her loins to rise equal to the occasion & is just thinking of throwing in her lot with the "tremendous whirlpool" The other neutrals are also on their alert Attempts are being made to cope with the [illegible] & give tit for tat In a word, the situation is most [illegible]tening [illegible] are confident that Germany's pride will be humbled at no distant date. We [illegible] here that her pot is full up to the brim and Germany must [illegible] down

The Coming War [illegible]

The war shows no signs of coming to an early termination [illegible] must help with [illegible] [illegible] men Hence [illegible] be shortly put in [illegible] is expected will [illegible] to the [illegible] [illegible]

Girls' School Prizes [illegible]

[illegible]

1 Kallu [illegible] Sitabai [illegible] Kanara D [illegible] 1st class Special prize [illegible] Ramchandra P [illegible] Kashekar N [illegible] – Second class – Satyabhama [illegible] Sanskrit Prize

Mr Sheshgirirao Keshavrao of Sirsi has been kindly giving two prizes one in English and another in Sanskrit in the name of his mother This year R S Ramchandra Pai of Kumta was good enough to offer a special prize

A REQUEST
to the Salt Owners Society

Complaints having reached that the malki price of salt has gone up 200 p c, we feel it our duty to request the authorities of the Society concerned [illegible] enlighten us on (1) the grounds in justification of the present rate (2) the non existence of monopoly of salt owners (3) the benefits of their co operation to the consumers of salt on the principle of the greatest good to the greatest number & (4) how the beneficent object of the benign Government in reducing the salt tax is not defeated All this will enable us to do full justice to the subject which we propose to take up next time in our leading columns

War Relief Fund
Taluka Honavar

1	Annappa Bab Gowda	10
2	H s Holiness the Swami of Ramchadrapur Math	100
3	[illegible] Govind Hegde	[illegible]
4	Chitta Subraya Bhagwat	10
5	Madappa Krishna Hegde	25
6	[illegible] Bape Saheb	25
7	[illegible] Raman Hegde	10
8	Rama [illegible] Hegde	12
9	[illegible] Pandurang Shanbhag	26
10	Venkatesh Janardan Thanbhag	10
11	[illegible] N Hebbar	13
12	[illegible] Bale Prabhu	15
13	Rama Ganpa Hegde	10
14	Sambhbhatta V Bhatta	17 14 0.
15	Govind Waman Mhalya	13
16	Laxuman R Mhalya	10
17	Agostin b n Ladru	10.
18	Durgappa Venkatesh Naik	10
19	Nagappa M[illegible] Pai	20
20	Krishna Kant Shanbhag	16
21	Narayan Laxuman Bhatta	10
22	Payappa Doddaya Shetti	15
23	Ramchandra M. Shanbhag	30.
24	Subraya P Kamat	15
25	Mukund Shivrao Udyawar	20
26	Babaya Ruk Naik	15
27	Mahableshwar P Shanbhag	11
28	Ganpa Ganpa Hegde	15
29	Timappa Hanmant Gowda	15
30	Mukund Narayan Kamat	10
31	Shimav Juji Fernandez	25
32	Subbaya Ramnath	10
33	Vithal Waman Naik	15
34	Pursaya Venkatesh Naik	15
35	Fakir wd Nane Saiba	15
36	Manager to the L N P Dramatic Co, Honavar	30
37	Mr Jacki Gonsalwis	25
38	Mangesh [illegible] G. Telang	12-8 0
39	Subraya Ma[illegible] Kamat	20-0-0
40	Sitaram D Hosangadi	

...೨೯ ಲಕ್ಷ ಕುಲಾಬೆಗೆ ೧೩ ಲಕ್ಷ ಮತ್ತು ರತ್ನಾಗಿರಿಗೆ ೮ ಲಕ್ಷ ರೂಪಾಯಿ ಉತ್ಪನ್ನವು ಬರುತ್ತದೆ. ಈ ಎಲ್ಲ ಅಂಕೆಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಇವುಗಳಿಂದ ನಮಗೆ ಏನು ತಿಳಿದು ಬರುವದು? ದಕ್ಷಿಣಭಾಗದೊಳಗಿನ ಬೇರೆ ಜಿಲ್ಲೆಗಳನ್ನು ಬಿಟ್ಟು ಬಿಟ್ಟರೂ ಕುಲಾಬಾ ರತ್ನಾಗಿರಿ ಜಿಲ್ಲೆಗಳಾದರೂ ಬಹುಪರಿಯಿಂದ ನಮ್ಮ ಜಿಲ್ಲೆಗೆ ಹೋಲುತ್ತಾವೆ. ರತ್ನಾಗಿರಿಗೆ ಎಕರೆಗೆ ೮ಥ೯ [?] ರೂಪಾಯಿ ತೆರಿಗೆಯಿದ್ದು ಕುಲಾಬೆಗೆ ೧ ೧೨ ಮತ್ತು ನಮ್ಮ ಕಾನಡಾಜಿಲ್ಲೆಗೆ ಎಕರೆಗೆ ೨-೬ ರೂಪಾಯಿ ಬೀಳುತ್ತದೆ. ಕಾನಡಾ ಜಿಲ್ಲೆಗಳ ಭೂಮಿಗಳಿಗೆ ಇಷ್ಟು ಸೊಟ್ಟ ಆಕಾರವಿರುವ ಕಾರಣವೇನು? ರತ್ನಾಗಿರಿಯ ಭೂಮಿಗಳಿಗಿಂತ ಸರಾಸರಿ ೫ ಪಟ್ಟು ಉತ್ಪನ್ನ ಕೊಡುವ ಭೂಮಿಗಳು ನಮ್ಮ ಕಾನಡಾ ಜಿಲ್ಲೆಯಲ್ಲಿ ಇದ್ದಾವೆಂದು ಸರಕಾರದವರ ತಿಳುವಳಿಕೆಯಾದಂತೆ ಕಾಣುತ್ತದೆ. ನಾವು ಮೇಲೆ ಕೊಟ್ಟ ಅಂದಾಜಿನಲ್ಲಿ ಕುಮಟೆ ತಾಲೂಕಿನ ಹೊಸ ಠರಾವಿನಲ್ಲಿ ವಿಧಿಸಿದ ತೀರ್ವೆಯು ಮಾತ್ರ ದಾಖಲಾಗಿ ಅದೆ. ಆದರೆ ಅಂಕೋಲಾ ಕಾರವಾರ ಹೊನ್ನಾವರ ಮುಂತಾದ ತಾಲೂಕಿನ ವಿವಿಧ ಉತ್ಪನ್ನವನ್ನು ಲೆಕ್ಕಕ್ಕೆ ಹಿಡಿಯಲಿಲ್ಲ. ಇದೆಲ್ಲ ಜಮೆಗೆ ಹಿಡಿದರೆ ದರ ಎಕರೆಗೆ ನಮ್ಮ ಭೂಮಿಗೆ ... ರೂಪಾಯಿ ತೆರಿಗೆ ಬೀಳುವದು. ಇಷ್ಟು ಹೆಚ್ಚಿನ ಕರವನ್ನು ಸಹಿಸುವಷ್ಟು ಶಕ್ತಿಯು ಕಾನಡಾಜಿಲ್ಲೆಯ ಭೂಮಿಯೊಳಗೆ ಅದೆಯೋ? ಎಂಬುವದೇ ಮಹತ್ವದ ಪ್ರಶ್ನೆಯು. ಜಂಗಲ ಖಾತೆಯ ಹೊಸ ಹೊಸ ಕಟ್ಟಳೆಗಳಿಂದ ಸೊಪ್ಪು ಮುಂತಾದ ಗೊಬ್ಬರದ ಸಾಧನಗಳಿಲ್ಲದೆ ನಿಃಸತ್ವವಾಗುತ್ತ ನಡೆದ ಭೂಮಿಯು. ಈ ನಿಃಸತ್ವವಾದ ಭೂಮಿಯಿಂದ ವರ್ಷಪ್ರತಿವರ್ಷಕ್ಕೂ ಕಡಿಮೆ ಪ್ರಮಾಣದಿಂದ ಉತ್ಪನ್ನ ತೆಗೆದುಕೊಂಡು ಹೊಟ್ಟೆಗೆ ಸಹ ಸಾಕಷ್ಟು ತಿನ್ನಲಿಕ್ಕೆ ಸಿಗದ ಬಡ ಒಕ್ಕಲಿಗರು, ಇಂಥ ಬಲ ಶಕ್ತಿಹೀನರಾದ ಒಕ್ಕಲಿಗರಿಂದ ಸಾಗು ಮಾಡಲ್ಪಡುವ ಭೂಮಿಗಳ ಮೇಲೆ ತರಮುಗಳಿಂದಾಯ ಪದ್ಧತಿಯಿಂದ ಏಳೆಯುತ್ತ ಹೋಗುವ ತೆರಿಗೆಯ ಭಾರವು, ಈ ಎಲ್ಲ ಸಂಗತಿಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಿದಲು ನಮ್ಮ ಕಾನಡಾಜಿಲ್ಲೆಯ ಬೇಸಾಯಗಾರನ ಭವಿಷ್ಯವು ದಿನೇ ದಿನೇ ಭೀಕರವಾಗುತ್ತ ನಡೆದದೆಂಬುದು ಖಚಿತವು. ಇಲ್ಲಿಯ ಕೂಲಿಕಾರರಿಗೆ ಅನ್ಯ ಜೀವನದ ಸಾಧನೆಗಳಿಲ್ಲ. ರತ್ನಾಗಿರಿ ಕುಲಾಬಾ ಜಿಲ್ಲೆಯ ಜನರಿಗೆ ಮುಂಬಯಿ ಅತ್ತಕಡೆಯ ಗಿರಣಿ ಮುಂತಾದ ಕೂಲಿಯ ಕೆಲಸಗಳು ಸಿಗುತ್ತವೆ. ಇಂಥ ಪರಿಸ್ಥಿತಿಯಲ್ಲಿ ಬೇಸಾಯದ ಹೊರತು ನಿರ್ವಾಹವಿಲ್ಲದ ಕಾನಡಾದ ನಿವಾಸಿಕರು ತಮ್ಮ ಭೂಮಿಯನ್ನು ಬೆಳೆಸಲಿಕ್ಕಾಗದಿದ್ದರೂ ಕಡಿಮೆ ...ಗೆ ತಮ್ಮ ನಿಜವಾದ ಅಡಚಣೆಗಳನ್ನು ತಾಂವಾಗಿಯೇ ತಿಳಿಕೊಂಡು ಅವುಗಳನ್ನು ಪರಿಹರಿಸುವದೆ ಯಾವ ಪ್ರಯತ್ನಗಳನ್ನು ಮಾಡಬೇಕೆಂಬುವದು ನಿಶ್ಚಯಿಸಿ ಸರಕಾರದ ಕೈಯೊಳಗಿಂದ ನಮಗೆ ಜೆ [illegible] ವನ್ನು ಮಾಡಿಕೊಡಲಿಕ್ಕೆ ನಮ್ಮ ಮುಖಂಡರನ್ನು ಪ್ರೇರಪಿಸಿ ನಮ್ಮ ಕಾರ್ಯವನ್ನು ಮಾಡುವ ದೃಢನಿಶ್ಚಯದಿಂದ ನಾವು ಮುಂದರಿಸದಿದ್ದರೆ ಕಾರ್ಯಸಿದ್ಧಿಯಾಗದಿರದು. ಹ್ಯಾಗೂ ಮಾಡಿ ಮತ್ತು ೧೦-೨೦ ವರ್ಷದೊಳಗೆ ಕಾನಡಾಜಿಲ್ಲೆಯ ಬೇಸಾಯಗಾರನು ಮೃತಪ್ರಾಯವಾಯಿತು ಎಂತ ಹೇಳಿಸಿಕೊಳ್ಳದಿದ್ದರೆ ನಾವು ದೊಡ್ಡ ವಿಜಯ ಹೊಂದಿದಂತಾಗುವದೆಂತ ನಿರಾಶೆಯಿಂದ ನಮಗೆ ಉದ್ಗರಿಸಬೇಕಾಗಿದೆ.

ಸ್ಫುಟ ಸೂಚನೆಗಳು

೧ ಕುಮಟೆ ಶಹರದ ನಾಗರಿಕರು ನಾವು ಕಳೆದ ಸಂಚಿಕೆಯಲ್ಲಿ ಮಾಡಿದಲ್ಲಿ ಸೂಚನೆಗನುಸರಿಸಿ ವೈ|| ಮಾ... ದ ರಂಗಪ್ಪಗಳವರ ಸ್ಮಾರಕಾರ್ಥವಾಗಿ ಒಂದು ಸಾರ್ವಜನಿಕ ಸಭೆಯನ್ನು ಕೂಡಿಸಿದರೆಂದು ಓದಿ ನಮ್ಮ ಸಂತೋಷವಾಗುತ್ತದೆ. ಮಾನ್ಯರನ್ನು ಮನ್ನಿಸದಿರುವದರಿಂದ ಕರ್ತವ್ಯನಿರಾಕರಣೆಯಾಗುವದಲ್ಲದೆ ಗ್ರಾಮವಾಗತವು ಮನ್ನಿಸಿದಂತಾಗುತ್ತದೆ. ಗಾ... ನಿಜವಾದ ಸ್ವಾಭಿಮಾನವು. ಈ ಸಭೆಯಲ್ಲಿ ವೈ|| ರಾಂ... ವರ ಗೌರವಕ್ಕೆ ಅನುಗುಣವಾದ ಟೌನ್ ಹಾಲ ಎಂಬ ಸ್ಮಾರಕವನ್ನು ಮಾಡಲಿಕ್ಕೆ ಒಂದು ಕಮಿಟಿಯನ್ನು ನೇಮಿಸಿದ್ದು ನಾಗರಿಕರೆಲ್ಲರಿಗೆ ಭೂಷಣವು. ಈ ಕಮಿಟಿಯ ಮೆಂಬರರು ಕರ್ತವ್ಯ ಎಚ್ಚರಿಕೆಯಿಂದ ದಕ್ಷತೆಯಿಂದ ಅಂಗೀಕೃತ ಕಾರ್ಯವನ್ನು ಕೊನೆಗಾಣಿಸುವರು ಮತ್ತು ಆ ಮಹಾತ್ಮರಿಗೆ ಪರಲೋಕದಲ್ಲಿ ತೃಪ್ತಿಯಾಗುವಂತೆ ಅವರ ಐಹಿಕ ಇಚ್ಛೆಗೆ ತಕ್ಕುವಂಥ ತಕ್ಕ ಸ್ಮಾರಕವನ್ನು ಬೇಗನೇ ರಚಿಸ ಬಹುದೆಂತ ನಾವು ತುಂಬಾ ನಂಬುತ್ತೇವೆ.

೨ ಶಿರ್ಸಿಯೊಳಗಿನ ಮಿಶನಿನಿಂದ ತರುಣರಿಂದ ಪೂರ್ಣ ಬುದ್ಧಿಯಿಂದ ಹುರುಪಾಗಿ ಹಗಲಿರುಳು ಸಮಾಜ ಸೇವೆಯನ್ನು ಮಾಡಬೇಕೆಂತ ಚಟಪಡಿಸುವ ಉತ್ಸಾಹಿ ಮಿತ್ರರಾದ ಶ್ರೀ ಗೋವಿಂದ ಬಾಲಕೃಷ್ಣ ಸೊಂದರವರ ಅಕಾಲಿಕ ನಿಧನವೃತ್ತವನ್ನು ಕೇಳಿ ವಜ್ರಾಘಾತವಾದಂತೆ ಎಲ್ಲರೂ ಶೋಕವಿಹ್ವಲರಾಗಿರುವರು. ಒಂದೆರಡು ವರ್ಷದ ಪ್ರಾಯದಲ್ಲಿ ತನ್ನ ವಿಸ್ತಾರವಾದ ಸಂಸಾರವನ್ನು ಲೋಕಪ್ರಿಯತೆಯಿಂದ ನಡಿಸಿ ಶಾಂತ ಚಿತ್ತದಿಂದ ತನ್ನ ಶೀಲವನ್ನು ಕಾಯಿಕೊಂಡು ಸಮಾಜದ ಪ್ರಗತಿಯ ದಾರಿಗಳನ್ನು ಹೃತ್ಪೂರ್ವಕವಾಗಿ ಅರಿಸುವದರಲ್ಲಿ ತೊಡಗಿದ್ದ ಇವರಂಥ ಭಾಗ್ಯಶಾಲಿ ಯುವಕರು ನಮ್ಮಲ್ಲಿ ವಿರಳರಿದ್ದರು. ಆದರೆ ನಿರ್ದಯ ಕಾಲವು ಸೊಕ್ಕೇರಿದಂತೆ ಇವರನ್ನು ಎಳೆದುಕೊಂಡು ಹೋಗಿ ಇವರ ಆಶ್ರಿತರಿಗೆಲ್ಲ ಘಾತವಾದಂತೆಯೇ ಆಗಿದೆ. ಅವರ ಭವಿಷ್ಯ ಚರಿತ್ರದ ರಮ್ಯ ರಮ್ಯ ಚಿತ್ರಗಳು ನಮಗೆ ಈಗ ಕೇವಲ ಸ್ವಪ್ನಮಯವಾಗಿ ನಿರಾಶೆಯ ವೈರಾಗ್ಯವು ಈಗ ನಮಗೆ ಹೊಳೆಯುತ್ತಿದೆ. 'ಈಶ್ವರೇಚ್ಛಾ ಬಲೀಯಸೀ' ಎಂತ ತಿಳಕೊಂಡು ಸಂಸಾರ ಚರಿತ್ರದ ಕತೆಗೆ ದೃಷ್ಟಿ ಕೊಟ್ಟು ಮಾನವೀ ಯತ್ನದಿಂದ ತಮ್ಮ ದುಃಖವನ್ನು ದೂರಪಡಿಸಲಿಕ್ಕಾದಷ್ಟು ಪ್ರಯತ್ನಿಸುವದೇ ಒಂದು ಉಪಾಯವು ಅವರ ಆಪ್ತಬಂಧುಮಿತ್ರರ ಕೈಯಲ್ಲಿರುವದು ಉಳಿದ ಗತಿಸಾರ್ಜಿಸ್ತಿ.

೩ ಮನುಷ್ಯ ಪ್ರಾಣಿಗಳನ್ನು ಕತ್ತೆ ಎತ್ತುಗಳಂತೆ ಕ್ರಯವಿಕ್ರಯಮಾಡಿ ಅವುಗಳನ್ನು ದಂಡಿಸಿ ದ್ರವ್ಯಪ್ರಾಪ್ತಿಯನ್ನು ಮಾಡುವ ನೀಚ ವ್ಯಾಪಾರಕ್ಕೆ ಗುಲಾಮಗಿರಿ ಎಂತ ಹಿಂದಿನಕಾಲಗಳಲ್ಲಿ ತಿರಸ್ಕರಿಸುತ್ತಿದ್ದರು. ಈ ಗುಲಾಮರ ವ್ಯಾಪಾರವನ್ನು ತಗ್ಗಿಸಿ ನಿರ್ಮೂಲ ಮಾಡಲಿಕ್ಕೆ ಬಹಳ ಮಹಾತ್ಮರು ದುಡಿದು ಪಾರ್ಲಿಮೆಂಟಿನಲ್ಲಿ ಕಾಯಿದೆಯನ್ನು ನಿರ್ಮಿಸಿ ಆಫ್ರಿಕೆಯೊಳಗಿನ ಈ ಗುಲಾಮಗಿರಿಯನ್ನು ಕಟ್ಟಕಡೆಗೆ ನಿಶ್ಶೇಷ ಮಾಡಿದ್ದರು. ಈಗ ೨೦ ನೇ ಶತಕದಲ್ಲಿ ಪುನಃ ಈ ಗುಲಾಮಗಿರಿಯ ಸುಧಾರಿಸಿದ ಆವೃತ್ತಿಯು ಪ್ರಕಟವಾಗಹತ್ತಿ ಬಹಳ ವರ್ಷಗಳಾಗುತ್ತ ಬಂತು. ಈ ಹೊಸ ಗುಲಾಮಗಿರಿಯು ಕಾಯಿದೆಗೆ ಸಮ್ಮತವಾಗಿ ನಡಸಿದ ಪರಿಂತ ತಿಳಿದು ಮನಸ್ಸಿಗೆ ಉದ್ವೇಗವಾಗುತ್ತದೆ. ಈ ಗುಲಾಮಗಿರಿಯಲ್ಲಿ ಶಿಕ್ಕಿದ ಬಡಪ್ರಾಣಿಗಳು ನಮ್ಮ ಹಿಂದವಾಸಿಯರು. ನಮಗಂತೂ ತಾಯಿತಂದೆಗಳು ಯಾರೂ ಇಲ್ಲ. ಇಂಥ ಅಸಹಾಯ ಸ್ಥಿತಿಯಲ್ಲಿ ಈ ನೀಚ ವ್ಯಾಪಾರವು ಅವ್ಯಾಹತ ನಡೆದರೆ ಈ ವ್ಯಾಪಾರಸ್ಥರ ಕೈ ಹಿಡಿಯುವವರು ಯಾರು ಇದ್ದಾರೆ? ಸರಕಾರಕ್ಕೆ ಅಷ್ಟಾಂಗ ಪ್ರಣಿಪಾತಮಾಡಿ ಹಲವು ಪರಿಯಿಂದ ಪ್ರಾರ್ಥಿಸಿದರೆ ಅತಿ ಕೃಪಣ ಸಾಲುಗಾರನಂತೆ “ಎರಡು ರೂಪಾಯಿಗಳನ್ನು ಕೊಡುತ್ತೇನೆ, ಮತ್ತೆರಡು ಕೊಡಿಸುತ್ತೇನೆ, ಮತ್ತೆರಡರ ಸುದ್ದಿ ಬೇಡ” ಎಂಬಂತೆ ಉದಾರ ಆಶ್ವಾಸನಗಳೇ ಸಿಗುತ್ತಿದ್ದವು. ಈಗ ಪ್ರಚಲಿತ ಫಿಜೀದ್ವೀಪದೊಳಗಿನ ಕರಾರಬದ್ಧ ಕೂಲಿಗಾರರ ಹೀನಸ್ಥಿತಿಯು ಇಡಿ ದೇಶದಲ್ಲೆಲ್ಲ ಬೊಬ್ಬೆ ಎಬ್ಬಿಸಿದರೂ ಹಿಂದುಸ್ಥಾನ ಸರಕಾರವು ಈ ಗುಲಾಮಗಿರಿಯನ್ನು ನಿರ್ಮೂಲಿಸಲಿಕ್ಕೆ ೫ ವರ್ಷದ ವಾಯಿದೆ ಹೇಳಹತ್ತಿದೆ. ಇದರ ಅರ್ಥವೇನಂದರೆ ‘ನೀವು ಸತ್ತರೆ ಸಾಯಿರಿ ನಮಗೊಂದು ಬಿಟ್ಟುಹೋಯಿತು” ಎಂಬ ಗಾದೆ ಮಾತನ್ನು ಹೇಳಿದಂತಾಗುತ್ತದೆ. ನಮ್ಮ ಈ ನೈತಿಕ ಮರಣದಿಂದ ಯಾರ್‍ಯಾರು ಫಾಯಿದೆ ಮಾಡಿ ದ್ರವ್ಯಪ್ರಾಪ್ತಿಯನ್ನು ಮಾಡಿಕೊಳ್ಳುವರೋ ಅವರೆಲ್ಲರೂ ನರಕದಲ್ಲೇ ಬೀಳುವರು.

ಯುದ್ಧ ಸಮಾಚಾರ

ಯುದ್ಧದ ಇತಿಹಾಸದಲ್ಲಿ ಹೊಸದೊಂದು ಪರಿಸ್ಥಿತಿಯು ಕಳೆದ ಪಕ್ಷದಲ್ಲಿ ಉಂಟಾಗಿದೆ. ಜರ್ಮನಿಯು ಹಡಗಗಳನ್ನು ಮುಳುಗಿಸುವ ನೌಕಾಸ್ತ್ರದ ಪ್ರಯೋಗವು ಎಲ್ಲ ರಾಷ್ಟ್ರಗಳ ಮೇಲೆ ನಡಿಸಿ ಇಂಗ್ಲಂಡಿಗೆ ಅನ್ನ ಸಾಮುಗ್ರಿಯನ್ನು ಸಿಗದ ಹಾಗೆ ಮಾಡಬೇಕೆಂತ ಹೊಸದಾದ ಕ್ರೂರ ಕಲ್ಪನೆಯನ್ನು ಜಾಹೀರ ಮಾಡಿದ ಪ್ರಯುಕ್ತ ಅಮೇರಿಕೆಗೂ ಜರ್ಮನಿಗೂ ಮಾತುಕತೆ ನಡದು ಜರ್ಮನಿಯು ತನ್ನ ಕ್ರೂರ ಸಾಧನವನ್ನು ಉಪಯೋಗಿಸದೆ ಇರಲಿಕ್ಕಾಗದು ಎಂತ ಹೇಳಿದ್ದರಿಂದ ಉಭಯ ರಾಷ್ಟ್ರಗಳ ಮಿತ್ರತ್ವ ಸಂಬಂಧವು ಮುರಿದು ಹೋದಂತಾಗಿದೆ. ಉಭಯತರ ವಕೀಲರು ಸ್ವದೇಶಕ್ಕೆ ತೆರಳಿರುವರು. ಆದರೂ ಅಮೇರಿಕೆಯು ಯುದ್ಧವನ್ನು ಜಾಹೀರ ಮಾಡುವದೋ ಏನೋ ಎಂಬ ಬಗ್ಗೆ ಸಂಶಯವೇ ಉಂಟು. ಯುದ್ಧದ ಪೂರ್ವತಯಾರಿಯಾದರೂ, ಜರ್ಮನ ಅಮೇರಿಕಾ ಯುದ್ಧವು ಆಗದಂತೆ ಜರ್ಮನಿಯು ಸಂಧಿಯ ಮಾತು ನಡಿಸಿಯದೆ. ಕಳೆದ ಸಪ್ತಾಹದ ಯುದ್ಧವಾರ್ತೆಯು ಮುಖ್ಯತಃ ಫ್ರಾನ್ಸದ ರಣರಂಗದಿಂದಲೇ ಬಂದಿದೆ

कानडावृत्त- बुधवार तारीख २१ माहे फेब्रुआरी, सन १९१७ इसवी.

ಗ್ರಾಂಡ ಕೋರ್ಟಿನ ಹತ್ತರ ಕೆಲವು ಶತ್ರುಗಳನ್ನು ಸೆರೆಹಿಡಿದು ಅರಾಸಿನ ಉತ್ತರ ಪೂರ್ವಕ್ಕೂ ಶತ್ರುಗಳು ೩ ನೇ ಸಾಲನ್ನು ಮುಟ್ಟಿ ೨೫೦ ಯಾರ್ಡ ಬ್ರಿಟಿಷರು ಸಂಪಾದಿಸಿದರು. ಯಪ್ರೆಸ್ಸದ ಉತ್ತರ ಪೂರ್ವಕ್ಕೆ ಮತ್ತು ಸೊಮ್ಮೆಯ ಉತ್ತರಕ್ಕೆ ಶಿಕ್ಕ [illegible] ಶತ್ರುಗಳನ್ನು ಅಪ್ಪಳಿಸಿದ್ದೆವೆಂತ ಜನರಲ್ ಹೇಗ ಸಾಹೇಬರು ಸಂದೇಶವನ್ನು ಕಳುಹಿಸಿರುವರು. ಪಶ್ಚಿಮರಣಾಂಗಣದಲ್ಲಿಯೇ ಈ ಮಹಾಯುದ್ಧದ ಸೋಕ್ಷನೋಕ್ಷವಾಗುವದೆಂತ ಜನರಲ್ ಹೇಗರ ಮತವಾಗಿದೆ ಮೆಸೋಪೋಟೆಮಿಯಾದಲ್ಲಿ ಟೈಗ್ರಿಜ ನ್ಯಾನದಿಯ ಪಶ್ಚಿಮ ದಿಕ್ಕಿನಲ್ಲಿ ಬ್ರಿಟೀಷ ಹಿಂದೀ ಸೈನ್ಯವು ಮುಂದರಿದದೆ ತುರುಕರ ೩ ನೇ ಸಾಲನ್ನು ಛೀಕರ ತೋಪುಗಳಿಂದ ಗೆದ್ದಿರುವದರಿಂದ ಶತ್ರುಗಳಿಗೆ ವಿಶೇಷ [illegible] ಸಂಭವಿಸಿರುವದು. ಬಹಳ ಶತ್ರುಗಳು ಸೆರೆಬಿದ್ದಿರುವರು. ಬ್ರಿಟಿಷ ಸೈನ್ಯವು ಕೂಟದಿಂದ [illegible] ಶರದ ಮೇಲೆ ಮುಟ್ಟಿರುವದು [illegible] ಭಾಗದಲ್ಲಿ ನ್ಯಾನದಿಯು [illegible] ಬ್ರಿಟಿಷರ ಸ್ವಾಧೀನವಾಗಿರುವದು

ಇಹ ವೃತ್ತ

ಕುಮಟಾ— ಪುನಃ ಬಳಿಜೀ [illegible]

ವೈ॥ ಪಾಂಡುರಂಗ ಅಣ್ಣಪ್ಪಗೋಳವರ ಸ್ಮರಣಾರ್ಥವಾಗಿ ಒಂದು [illegible] ಪ್ರದರ್ಶನ [illegible] ತಾ. ೧೧ ರಲ್ಲು ಶ್ರೀ ವೆಂಕಟ್ರಮಣ [illegible] ಶಾಳಿಗೆಯ ಮೇಲೆ ಕೂಡಿ ಸ್ಮಾರಕ [illegible] ಕೂಡಿಸುವ ಬಗ್ಗೆ ಕಮಿಟಿ ನೇಮಿಸಲ್ಪಟ್ಟಿದೆ

—ಸ್ಥಾನಿಕ ಮುನಿಸಿಪಾಲಿಟಿಯ ಮಹಾಸಭೆ [illegible] ತಾ ೧೬ ರಲ್ಲು ಕೂಡಿ ರಾವಸಾಹೇಬ [illegible] ಪ್ರಸೈ ವ್ಹಾಯಿಸ್‌ಪ್ರಸಿಡೆಂಟರವರ [illegible] ತಿಂಗಳ [illegible] ಪದಂಗವಲ್ಲಿ ಮಿ ಮಂಜುನಾಥ [illegible] ಕರ್ಣಿಯವರನ್ನು ಅಕ್ಟಿಂಗ ವ್ಹಾಯ್ಸಪ್ರಸಿ[illegible] ಆರಿಸಿರುವರು

—ಇದೇ ಸಭೆಯಲ್ಲಿ ಹೊಸ ಆಕ್ಟ್ರಾಯ [illegible] ತೆರಿಗೆಯು [illegible] ಇಂಡಿಯಾ [illegible] ಯವು ಆಕರಿಸಲ್ಪಟ್ಟಿತು

—ಡಿಸ್ಟ್ರಿಕ್ಟ ಜಡ್ಜ ಲಿಗೆಟ ಸಾಹೇಬರು [illegible] ಸೆಕ್ಟಿಂಗ ಸಬಜಡ್ಜ ಮಿ [illegible] ಇಲ್ಲಿಯ ಕೋರ್ಟ ತಪಾಸಣಿಗ [illegible] ಕೆಲಸ [illegible]

—ಇಲ್ಲಿಯ ಸಬಜಡ್ಜ ಮಿ [illegible] ತಿಂಗಳವರೆಗೆ [illegible] ಸಬಜಡ್ಜರಾಗಿ ನೇಮಣೂಕವಾದದರಿಂದ ಅವರು ನಿನ್ನೆ ದಿವಸ [illegible] ವಾಸಕ್ಕೆ ಹೊರಟುಹೋದರು ಸಬಜಡ್ಜ [illegible] ಸಲ್ಲಿ ಮುಕದ್ದಮೆಗಳ ವಿಚಾರಣೆಯು ೨ ತಿಂಗಳು ನಡೆಯಲಿಕ್ಕಿಲ್ಲ.

—ತಾ. ೧೯ ರಲ್ಲು ಕುಮಟಾ ನಂಬರ ೧ ನೇ ಶಾಲೆಯಲ್ಲಿ ಮೆ॥ ದೆ॥ ಎ॥ ಫರ್ನಾಂಡಿಸ ಸಾಹೇಬರ ಅಧ್ಯಕ್ಷತೆಕೈ ಕೆಳಗೆ ಶಿಕ್ಷಕ ಜನರ ಸಮ್ಮೇಲನವು ನೆರದು ಕಲಿಸುವ ಬೇರೆಬೇರೆ ವಿಷಯಗಳ ಸಂಬಂಧವ [illegible] ನಡೆಯಿತು. ಸರಾಸರಿ ೬೦ ಜನ ಮಾಸ್ತರರು ಅಜುಬಾಜು ಶಾಲೆಗಳಿಂದ ಬಂದಿದ್ದರು

ಅಂಕೋಲಾ [illegible] ರೋಗ ಬೇನೆಗಳು ಏನೂ ಇಲ್ಲ.

ಇಲ್ಲಿ ಪ್ರೊ[illegible] ಸಾಹೇಬರ "ದಿ ಗ್ರೇಟ ಸರ್ಕಸ" ಕಂಪನಿಯ ಪ್ರೇಕ್ಷಣೀಯ ಆಟಗಳು ನಡೆದವು [illegible] ಸರ್ಕಸಿನಲ್ಲಿ ೨ ದೊಡ್ಡ ಬಂಗಾಲಿ ಹುಲಿಗಳು ಕುದುರೆಗಳ [illegible] ತಿರುಗಾಡಿ ಮನುಷ್ಯರ ಸಂಗದ ಕುಸ್ತಿ [illegible] ನೋಡಿ ಜನರೆಲ್ಲರೂ ಆಶ್ಚರ್ಯ [illegible] ಯುದ್ಧ ಫಂಡಿನಬಗ್ಗೆ ಒಂದು ಆಟ [illegible] ಕಂಪನಿಯು ಗೋಕರ್ಣದಕಡೆಗೆ ಹೋಯಿತು.

— [illegible] ಎ ಜ ಡಾಯರೆಕ್ಟರ ಮಿ [illegible] ಇಲ್ಲಿ ಒಂದು [illegible] ಜನರಿಗೆ ಕಲಿಸುತ್ತಿರುವರು [illegible] ಇದರಿಂದ [illegible] ಹೊಸ [illegible] ಹೊಸ ಹೊಸ ಕಲ್ಪನೆಗಳು [illegible] ಮನೆಗಳ [illegible] ಜನರ [illegible] ಸರಕಾರಕ್ಕೆ ಕೊಟ್ಟರೆ [illegible] ಮುನಿಸಿಪಾಲಿಟಿಯು [illegible] ತಿಳಿದು ಬರುತ್ತದೆ [illegible] ಕಲ್ಯಾಣ [illegible] ಹೇಳ ದ್ದರಿಂ[illegible]

ಹಳಿಯಾಳ— [illegible] ನೋಡಿದಗೆ [illegible] ಮುಂದಾದ ಹಿಂಗಾರಿ [illegible] ದಿನಾಂಕ ೧೩ [illegible] ಮಹಾರೋಗಗಳ [illegible] ಸ್ಥಿತಿ [illegible] ಜನರಿಗೆ [illegible] ಆರೋಗ್ಯ ನಿವಾರಣೆ [illegible] ಪ್ರತಿಬಂಧ [illegible] ಪ್ರಸಿದ್ಧಹೊಂದಿದೆ [illegible] ಜನರ ಕಲ್ಯಾಣ [illegible] ನೋಡಿ [illegible] ಜನರಿಗೆ [illegible] ಬೇಸಿಗೆ [illegible] ಒಂದು [illegible] ಬಿಟ್ಟು [illegible] ಇಲ್ಲಿ ಒಂದು [illegible] ಹೋಯಿತು

— [illegible] ನಂಜಗೂಡಿ [illegible] ಗೆಯನ್ನು ಕೂಡಿಸಿ ಅದನ್ನು ಅಪಹರಿಸಿದ ಆರೋಪದ ಮೇರೆ (೧) ರಾಮಯ್ಯಾ ನಾಗಪ್ಪಾ (೨) ರಾಮಚಂದ್ರ ಗಣ್ಣಯಾ [illegible] ತನಕಿಂದಾಗಿ ಇಬ್ಬರಿಗೂ ಒಂದೊಂದು ವರ್ಷದ ಸಕ್ತ ಮಜೂರಿಯ ಶಿಕ್ಷೆಯು ವಿಧಿಸಲ್ಪಟ್ಟಿತು.

—ಶ್ರೀ ಗುರು ಸಂಗೀತ ನಾಟಕ ಮಂಡಳಿಯು [illegible] ರಾ ಕೃಷ್ಣರಾವ ಭಂಡಾರಕರ ಇವರು ತಮ್ಮ ಮತ್ತೊಂದು ಆಟದ ೧೦೦ ರೂಪಾಯಿ ಉತ್ಪನ್ನವನ್ನು ಯುದ್ಧ ಫಂಡಿಗೆ ದಾನಮಾಡಿ ಕಂಪನಿಯು [illegible] ಹೋಯಿತು

—[illegible]ವಿಯಲ್ಲಿ ಮಹಾಮಾರಿಯು ಉಪದ್ರವಪ್ಪ ತಲೆದೋರಿದ್ದರಿಂದ ಯಾತ್ರಸ್ಥರು ಲಗಬಗೆಯಿಂದ ಊರು ಬಿಟ್ಟು ಹೋಗಹತ್ತಿರುವರು. ಬೆಳಗಾಂವಿಯ ಕಂಟ್ರಾಕ್ಟರ ರಾ [illegible] ಹನುಮಂತಪ್ಪ ಪತ್ರಾವಳಿರವರು ಇಲ್ಲಿ ತಮ್ಮ ಕಂಟ್ರಾಕ್ಟ ಕಾಮಗಿರಿಯ ತಪಾಸಕ್ಕೆ ಬಂದಾಗ ಪ್ಲೇಗವು ಸೊಂಕಿ ಊರಿಗೆ ಹೋಗಿ ಅಲ್ಲಿ ಉಪಚಾರ ನಡಿಸಿದರೂ ವಾಸಿಯಾಗದೇ ಕೈಲಾಸವಾಸಿಗಳಾದ ಸಂಗತಿಯನ್ನು ತಿಳಿಸಲು ವಿಷಾದವಾಗುತ್ತದೆ ಇವರು ಸತ್ಯನಿಷ್ಠ ವರ್ತಕರಾಗಿದ್ದರು.

— ಶ್ರೀ ಕ್ಷೇತ್ರವಾಯಿಯಲ್ಲಿರುವ ಗೋಶಾಲೆ ತರ್ಫೆನಿಂದ ಹರಿಭಕ್ತ ಪರಾಯಣ [illegible] ಬುವಾರವರು ಇಲ್ಲಿ ಬಂದು ಕೀರ್ತನವನ್ನು ಮಾಡಿ ಕೂಡಿದ ರಕಮನ್ನು ಶ್ರೀ ದತ್ತೋಪಂತ ದೇಶಪಾಂಡೆಯವರ ಸ್ವಾಧೀನಮಾಡಿರುವರು ಮತ್ತು ವರ್ಗಣಿಯನ್ನು ಜಮಾಯಿಸುವ ಕೆಲಸವನ್ನು ನಡಿಸಿ ಈ ಯಾವತ್ತು ರಕಮನ್ನು ಗೋಶಾಲಾ ಇಮಾರತಿಗೆ ಕಟ್ಟಿಗೆ [illegible] ಸಲುವಾಗಿ ಖರ್ಚುಮಾಡಲಿಕ್ಕೆ ಹೇಳಿ ಹೊರಟು ಹೋಗಿರುವರು.

ಬಟ್ಕಳ— ಮೈಸೂರ ಭಟ್ಕಳ ರೇಲವೆಯ ವಿಷಯವಾಗಿ ಮೈಸೂರ ಸಂಸ್ಥಾನದ ಬಹುಮಾನಿತ ದಿವಾಣ ಸಾಹೇಬರಾದ ಸರ ವಿಶ್ವೇಶ್ವರಯ್ಯನವರು ಮುಂಬಯಿಗೆ ಹೋಗಿ ಮುಂಬಯಿ ಸರಕಾರದ ಹತ್ತರ ಪ್ರಶ್ನೆಯನ್ನು [illegible] ಮರಳಿಬಂದು ತಿರುಗಿ ಹಿಂದುಸ್ತಾನ ಸರಕಾರದ ಹತ್ತರ ಪ್ರಸ್ತಾಪ ನಡಿಸಲಿಕ್ಕೆ ದಿಲ್ಲಿಗೆ ಹೋಗಿರುವರು ಭಟ್ಕಳ ಬಂದರವು ಸಮೀಪವಿರುವದರಿಂದ ಅಲ್ಪ ವೆಚ್ಚದಿಂದ ರೇಲವೆಯ ಮಾರ್ಗವು ಮಾಡಲಿಕ್ಕೆ ಸಾಧ್ಯವದೆಂತ ದಿವಾಣ ಸಾಹೇಬರಿಗೆ ಕಂಡುಬಂದದ [illegible] ತಿಳಿದಿರುವದು. ಹ್ಯಾಗಾದರೂ ಮೈಸೂರದ ವ್ಯಾಪಾರವನ್ನು ಬೆಳಸಲಿಕ್ಕೆ ಸಂಸ್ಥಾನದೊಳಗಿನ ವ್ಯಾಪಾರದ ಸರಕನ್ನು ಅಲ್ಪಾವಧಿಯಲ್ಲಿ ದೂರ ದೂರ ದೇಶಕ್ಕೆ ಒಯ್ಯುವದಕ್ಕೆ ಅನುಕೂಲವಾದ ಒಂದರವನ್ನು ಸಂಪಾದಿಸುವದೇ ದಿವಾಣ ಸಾಹೇಬರ ಉದ್ದೇಶವಾಗಿದೆ. ಈ ಉದ್ದೇಶವನ್ನು ಕೊನೆಗಾಣಿಸಬೇಕೆಂತ ಅವರು ದೃಢನಿಶ್ಚಯ ಮಾಡಿರುವರು

ಕಾರವಾರ— ಜಿಲ್ಲಾ ರಾಜಧಾನಿಯನ್ನು ಶಿರಸಿಗೆ ಒಯ್ಯುವ ಕುರಿತು ಸಿ [illegible] ಅಭಿಪ್ರಾಯವೇನೆಂತ ಕಾರವಾರದ ಪ್ರಮುಖ [illegible]ಗೆ ಕಲೆಕ್ಟರ ಸಾಹೇಬರು ಕೇಳಿದ ಮೇರೆಗೆ ಅವರು [illegible] ಸಭೆಯಲ್ಲಿಯೇ ಉತ್ತರಕೊಡದೆ [illegible] ಉತ್ತರವನ್ನು ಸ್ಪಷ್ಟವಾಗಿ ಕೊಟ್ಟ ಜಿಲ್ಲಾ ರಾಜಧಾನಿಯನ್ನು ಕಾರವಾರದಿಂದ ಬೇರೆ ಎಲ್ಲಿಯೂ ಒಯ್ಯುವ ಕಲ್ಪನೆಯನ್ನು ಪೂರ್ಣವಾಗಿ ನಿಷೇಧಿಸಿರುವರು ಎಂತ ತಿಳಿದುಬಂದದೆ.

ವಿವಿಧ ವರ್ತಮಾನ

ನಮ್ಮ ಬೆಳಗಾಂವಿಯ ಡಿಪ್ರೆಸ್ಡ ಕ್ಲಾಸ ಮಿಶನ್ನ ಸಭಾಸದರು ದಕ್ಷಿಣ [illegible] ಕಮಿಶನರಿಗೆ ಅಂತ್ಯಜರನ್ನು ಸೈನ್ಯದಲ್ಲಿ ಸೇರಿಸುವದೆ ಪರವಾನಗಿಯನ್ನು ಬೇಡಲು ೨೨೪ ಮಂದಿ ಹೊಲೆಯರ ಒಂದೊಂದು ತುಕಡಿಯಂತೆ ೨ ಅಂತ್ಯಜರ ಪಲ್ಟಣಿಗಳನ್ನು ತಯಾರಿಸುವದು ನಿಶ್ಚಯಿಸಿರುತ್ತದಂತೆ ಸರಕಾರದ ಉತ್ತರದ ಮೇರೆದ ಸೈನ್ಯದ ಉಪಯೋಗದ ಮೋಟಾರಗಳನ್ನು ನಡಿಸಲಿಕ್ಕೆ ಹೊಲೆಯರನ್ನು ನೇಮಿಸುವದು ನಡೆದದೆ.

Printed & Published by Krishnarao [illegible]

THE

KANARA NEWS.

ಕಾನಡಾ ವೃತ್ತ.

ಪತ್ರದ ವರ್ಗಣಿ -
ಕುಮಟೆಯಲ್ಲಿ ಅಗಾವು
ರೂಪಾಯಿ 1-0-0.
ಅಂಚೆವೆಚ್ಚ ಸೇರಿ
ರೂಪಾಯಿ 1-6-6
ಒಂದು ಸಂಚಿಕೆಗೆ 0-0-9

सत्यं ब्रूयात्प्रियं ब्रूयान्न ब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಕನ್ನಡ, ಇಂಗ್ಲಿಷ, ಮೋಡಿ ಟೈಪಿನ (ಸ್ಮಾಲ ಪೈಕಾ) ೮ ಸಾಲುಗಳ ವರೆಗೆ ರೂ. 1-0-0.
ಅನಂತ ಪ್ರತಿ ಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

Registered No. B. 1270

ANGLO-VERNACULAR FORTNIGHTLY.

[वर्ष १ लें] कुमटा– कानडावृत्त बुधवार, तारीख ७ माहे मार्च सन १९१७ इसवी. [अंक ११ वा

ಇಕ್ಲಿಪ್ಸ್ ಡ್ರೋಪ್ಸ್

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಚ್ಛ, ಮೂತ್ರರೋಗ, ಅನ್ನರೋಗ, ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕರ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ ಶೀಸೆ 1 ಕ್ಕೆ 0-6-0. ವಿ ಪಿ ಬೇರೆ.
ಡಜನ್ ಶೀಸೆಗಳಿಗೆ ರೂ 4-0-0. ವಿ. ಪಿ ಸಹಿತ

ವಿಳಾಸ– ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ, ಮಂಗಳೂರು.

ತ್ವರೆಮಾಡಿರಿ!] **Notice.** [ತ್ವರೆಮಾಡಿರಿ!

ಬಗ್ಗೋಣ ರಾಮನಾಥಿಂಮಣ್ಣ ಪಂಡಿತರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಪಿಂಗಲ ಸಂವತ್ಸರದ ಪಂಚಾಂಗ.

ಮಾರಾಟಕ್ಕೆ ಸಿದ್ಧವಾಗಿರುವದು
ಕ್ರಯ ಪ್ರತಿ ಒಂದಕ್ಕೆ ಆಣೆ 0-2-6.
100 ಕ್ಕೆ ರೂಪಾಯಿ 10-0-0.
ಬೇಕಾದವರು ಬೇಗನೇ ತರಿಸಿಕೊಳ್ಳಬಹುದು.
ಪತ್ತೆ — ಕೃಷ್ಣರಾವ ಕೇಶವ ಶೇಣವಿ.
ಮಾಲೀಕ ಸ್ಟಾರ ಆಫ್ ಕೆನರಾ ಪ್ರೆಸ ಕುಮಟಾ

Notice.

The Annual Examination of the Gibb High School, Kumta, will commence from Saturday, the 10th instant at 7 a m.

5-3-1917 } **V. P. Prbahu,**
Head-Master,
Gibb High School, Kumta

SUBSCRIPTION TO WAR RELIEF FUND IN THE SIRSI DIVISION, KANARA, during the fortnight ending 15th February 1917

Taluka	Previous collections.			Sums collected during the fortnight			Total up to date			Remarks
Sirsi	6810	9	0	1408	2	0	8218	11	0	
Siddapur	5247	10	0	593	12	0	5841	6	0	
Kumta	3919	15	2	1087	7	3	5007	6	5	
Honavar	5569	13	3	531	0	7	6100	13	10	
Bhatkal	3700	2	3	799	13	9	4500	0	0	
Total...	25248	1	8	4420	3	7	29668	5	3	

Sd./ **J. T. Lawrence** I.C.S.,
Assistant Collector Sirsi Division, Kanara

WAR-RELIEF FUND of HONAVAR TALUKA.
(Till the 28th February 1917.)
Continued from the last issue

41	Shanbhag's staff in the Tal	62-8-0
42	Hanumant S Prabhu	25
43	Ramchandra S. Mankikar	30
44	Savda Hussn wd. Maidin Saib	25
45	Hammad wd. Hammad Saib	10
49	Parambhatta Shambhatta	10
47	Narayan Bada Hegde	15
48	Rev. father R. R. Gomis Vicar of Manki Church	10
49	Shivrao Venkatsubbabhat	10
50	Shivram Gopal Bhatta	10
51	Ganpa Shiv Bhagwat	10
52	Parku Venkat Hegde	10

VILLAGES.	Below Rs 10
Navilgone	62-13-9
Madgeri	1-8-0
Mugve	86-14-0
Kekar	47-2-9
Hosakuli	87-2-0
Padukuli	11-0-0
Gunavanta	33-9-0
Berolli	69-3-0
Hadinbal	150-0-0
Nilkod	130-0-0
Karva	138-7-0
Kudla	12-0-0
Balkura	6-0-0
Jalvalli	50-1-0
Karki	134-0-1
Kinnar	18-15-0
Birangod	4-13-0
Mavinkurve	24-8-0
Talgod	37-4-0
Kadle	22-3-0
Nagarbasti	123-8-0
Manki	422-4-0
Herangdi	25-0-0
Mudkani	22-14-6
Kadtoka	15-8-0
Hospattan	71-4-0
Kudrigi	19-4-0
Saikod	100-0-0
Chandavar	25-82-0
Hodkeshirur	3-6-0
Kadmr	2-0-0
Nagre	50 6 0
Mehmdgunji	11-0-0
Honavar Town	90-6 0

Grand Total, Rs **6340-3-10.**

THE KANARA NEWS
7th March 1917.

" Act— act in the living Present ! Heart within, and God o'er head ! "

The War Loan.

Appeal to the Public

It must be noted that every part of the Empire has assisted England and has thrown all its mighty resources into this tremendous struggle. Every Englishman is ready to give his life for the righteous cause and is willing and gladly submitting to the severest forms of taxation – such taxation as we in India can hardly imagine The Income tax in England is now 4 annas in the rupee and every anna which can be saved is being lent to Government for the prosecution of the War. These are cold facts, not the language of exaggeration. The efforts made are enormous The daily expenditure on the war now amounts to nearly 9 crores of rupees, the total expenditure in the war up-to-date being more than six thousand crores of rupees. The British army now consists of 50 lakhs of men The votes of credit presented to Parliament for the financial year have been 2925 crores of rupees and the amount promised to our Allies is to the extent of 1335 crores of rupees.

Such figures are no doubt staggering, yet the war, the results of which are of such supreme importance to us all, shows no signs of coming to an early termination, & all must help with the power they have. All India is now given a further opportunity to extend a helping hand in this war in a manner which will be well within her power. India has no doubt borne her part well Indian blood is flowing side by side with English blood on the Western fields But now money is wanted even more than ... This money will be solely devoted to the defeat of the Germans. The loan is not to be misunderstood for the collection of War Fund which is now in active operation. The other is charity, pure and simple, for a common cause But the loan will bring a return to the lender & *no doubts* simple methods of distributing the bonds will be evolved. Every part of the Empire has raised loans & India must not be behind

So, we strongly appeal to our public, especially to those who can very well afford to do so, to be ready to help forward the war by investing all spare money they have in this patriotic investment This sort of investment will not only bring ... not on the sum invested but also the most heartfelt satisfaction that the lenders have been instrumental to some extent to help forward the war with little or no loss to themselves Here is self help and charity combined in one No better opportunity could be available ... the public and the well to do ... rise up, avail themselves of the splendid opportunity, and help the cause by going in for the loan to the best of their power.

A suggestion regarding the auction-sale of Toddy shops

The auction-sale of Toddy shop licenses is, as usual, to take place at Karwar on 5th of this month We wish to make one suggestion to our Collector both in the interest of *Government revenue* & public convenience The Toddy shops are all over the District and the intending licensees– even small ones– have to run up to Karwar every year to bid for the same This is really a great hardship to the bidders who have to travel long distances at no small inconvenience, trouble, & expense to themselves. With all that the competition is not as keen as it *ought to be.* That is because all persons who can afford to bid do not go to Karwar for various reasons of their own Hence the fall in the number of bidders & that means less income from that source. We, therefore, suggest that the auction-sale of these licenses may be fixed in 2 or 3 convenient and central places, say at Karwar, Kumta & Honawar, either before the Asstt Collector during his official tour or before the Mamlatdars of the Talukas in the latter two cases, subject of course to the confirmation of the final bid by the Collector. If the Asstt. Collector is to be entrusted with the work, he may be allowed to hold the auction-sale at his convenience & stay in those places during his tour– even a long time before the commencement of the official year. By *this arrangement much* inconvenience & hardship to the intending bidders would be averted, a larger number of bidders would flock in round the hammer & hence the competition would be the brisker and the bid income would be undoubtedly greater. We strongly urge that our sympathetic Collector will be pleased to consider the suggestion, practical and useful as it is

When we are just going to the press we hear that the said auction-sale is *indefinitely postponed* for reasons not known to the public We further hear that a proposa[l] has gone up from some quarter asking for a monopoly of the toddy shop licenses of the sea coast Taluka on certain conditions If this b[e] true, we venture to say that thi[s] sort of monopoly would be a suicida[l] step and many a poorer man wh[o] lived by the business would hav[e] to go without business and, with a[ll] that, the system of allowing " one only monarch " to rule the whole domain " will not only be bad in principle but also financially defective in the long run.

RANDOM THOUGHTS

War Fund.

It is really most gratifying to note that our Kanara people in spite of their comparative p... have readily responded t...

India is splendidly responding to the War Loan cry The latest papers to hand announce an aggregate of nearly 7 crores of Rupees Kanara too is playing her humble part The Sirsi Division- a part of Kanara has so long (*i e within a week*) promised more than one third of the sum demanded of that Division This is no small work It speaks well for the workers and for the contributors and for that conscientious Officer who is guiding at the helm using the goad in right earnest, & is nothing if not alert active and zealously pursuing

No W/ 15 of 1917 —29 3-17

Response of Sirsi Sub-Division to the War Loan Appeal The First Lakh

Promises recorded by the Committee —

Kumta	Rupees	Percentage of anticipated total
Kumta Town	[illegible]000	
Gokarn	4,000	
Bankikodla	8 000	
Total	37 000	51%
Honawar		
Honawar Town	34 960	
Haldipur	2 915	
Allanki	3 010	
Idgunji	700	
Total	41 585	69%
Bhatkal		
Bhatkal Town	7 290	
Shirali	4 000	
Murdeshwar*	1 000	
Govt servants	2 650	
Total	14,940	48%

* One promise recorded at Bhatkal Committee's report not received

Sirsi		
Sirsi Town	15,284-8-0	
Total	15 284-8 0	19%
Siddapur		
Report not received		
Total for the Sub-Division	1,08,809-8-0	

The highest individual promise in the Sub-Division up-to-date is that of Mr. Sadashiv Venktramanaya Harite of Bankikodla —Rs 5,000

Honawar and Kumta Talukas and Bhatkal Petha have made an excellent start There is much patriotism in all parts of the Sub-Division The members of all Committees must perform the duty which they have taken upon themselves with energy wholeheartedness and promptitude, so that every one may be given an opportunity to respond to the call of their country We and our Allies are winning great victories on the battle field East and West Kanara must strike hard through the Victory Loan

From April 1st the work of collecting the money promised will begin in earnest All Sub Committees should submit the weekly report in the prescribed form to the Central Committees not later than Sunday and the Central Committees should submit the consolidated report to the Assistant Collector not later than Monday

Sd / **J. T. Lawrence,**
Assistant Collector,
Sirsi Division, Kanara.

Subscription to War Relief Fund in the Sirsi Division Kanara, during the fortnight ending 15th March 1917

Taluka	Previous collections			Sums collected during the fortnight			Total up to date			Remarks
Sirsi	8415	3	0	470	12	0	8885	15	0	
Siddapur	5986	14	0	1053	4	0	7010	0	0	
Kumta	6064	10	4	762	6	0	6827	0	4	
Honavar	6340	3	10	673	4	4	7013	8	2	
Bhatkal	4573	12	0	26	4	0	4600	0	0	
Total	31380	11	2	2985	12	4	34366	7	6	

Sd / **J T Lawrence** ICS,
Assistant Collector, Sirsi Division, Kanara.

ನಿರಾಕರಣೆ.

ನಮ್ಮ ಕಳೆದ ಫೆಬ್ರುವರಿ ತಿಂಗಳ ೨೧ನೇ ತಾರೀಕಿನ ೧೦ನೇ ಸಂಚಿಕೆಯಲ್ಲಿ ನಾವು ಪ್ರಕಟಿಸಿದ ಕೆಲವು ವಿಚಾರಗಳು ಆಕ್ಷೇಪಕರವಾದಾವೆಂತ ಸವಿಷಾದ ನಮಗೆ ತಿಳಿಯಬಂದಿವೆ ಕಾನಡಾ ಜಿಲ್ಲೆಯ ಜಮಿನಾನ ಮಹಸೂಲಿನ ವಿಷಯಕ ಅಗ್ರಲೇಖದೊಳಗಣ ಅಂತ್ಯದ ನುಡಿಗಳು, ಕರಾರಬದ್ಧಕೂಲಿ ಪದ್ಧತಿಯ ವಿಷಯಕ ಸ್ಫುಟವಿಚಾರಗಳು ಮತ್ತು ಅಂಕೋಲೆಯ ಮನೆತೆರಿಗೆಯ ಸಂಬಂಧವಾಗಿ ಮಾಮಲೇದಾರರ ಕರ್ತವ್ಯದ ಉಲ್ಲೇಖ, ಇವುಗಳನ್ನು ಕುರಿತು ನಿರ್ದೇಶಿಸುವಾಗ ಸರಕಾರಕ್ಕೆ ಅಪ್ರತ್ಯಕ್ಷವಾಗಿ ಸಹ ಅವಮನ್ನಿಸುವದು ಯಾವದೇ ತರದಿಂದ ನಮ್ಮ ಮನೋಗತವಿದ್ದಿಲ್ಲ ಹೀಗಿದ್ದರೂ ಉಪರಿ ನಿರ್ದಿಷ್ಟ ಲೇಖಾಂಶಗಳು ಅನ್ಯಥಾ೯ಕವಾಗಬಹುದೆಂತ ನಮಗೆ ಅರಿವಾದ ಪರಿಂದ ಅವುಗಳನ್ನು ಇದರ ಮೂಲಕ ಸ್ವಯಮೇವ ನಿರಾಕರಿಸುತ್ತೇವೆ.

ಅಂಕೋಲೆಯ ಬಾತಮೀಪತ್ರ.

ನಾಗಪ್ಪ ಶೆಟ್ಟರ ಅವ್ಯಾಪಾರೇಷು ವ್ಯಾಪಾರ

ತಾ. ೨೦-೩-೧೯೧೭

ಕೆಲವು ದಿವಸಗಳ ಹಿಂದೆ ಚಾಲು ಮಹಾಯುದ್ಧದಲ್ಲಿ ರಣಾಂಗಣದಮೇಲೆ ಕೂಲಿ ಜನರ ಅವಶ್ಯಕತೆ ಕಂಡುಬಂದದರಿಂದ ದಯಾಳು ಸರಕಾರದ ಸೂಚನೆಗನುಸರಿಸಿ ಇಲ್ಲಿಯ ಮಾಮಲೇದಾರ್ರ ಸಾಹೇಬರು ಆಗೇರ ಜನರಿಗೆ ಬರೇ ಕೂಲಿ ಕೆಲಸಕ್ಕೋಸ್ಕರ ಅವಶ್ಯ ಬಿದ್ದಾಗ ಕಳುಹಿಸುವರೆ ಒಂದು ಪಂಗಡವನ್ನು ಕೂಡಿಸುವ ಪ್ರಯತ್ನದಲ್ಲಿದ್ದರು ಆಗೇರ ಜನರ ಗುರು ಎನ್ನಿಸಿಕೊಳ್ಳುವಂಥವೆಪ್ಪ ಇಗಳವರೂ ಆಗೇರರ ಒಡೆಯರಾದ ಕೆಲ ಪ್ರಮುಖ ಜನರೂ ಸಾಮ್ರಾಜ್ಯದ ಸತ್ಕಾರ್ಯಕ್ಕೆಂತ ಆಗೇರ ಜನರ ಮನಸ್ಸನ್ನು ಒಲಿಸಿ ಈ ಕೆಲಸವನ್ನು ಮನಃಪೂರ್ವಕವಾಗಿ ಮಾಡುವರು ಇದರ ಏನೂ ಪರಿಣಾಮವು ಈ ಅಶಿಕ್ಷಿತ ಜನರಮೇಲೆ ಆಗದಿದ್ದವೂಬಕೆ ಇಲ್ಲಿಯ ಮೂಲ ನಿವಾಸಿಗಳಾದ ಕೋಕಪ್ರಿಯ ಹು॥ ಡಿ॥ ಕಲ್ಲೆಕ್ಟರ ರಾಮಕೃಷ್ಣರಾವ ನಾಡಕರ್ಣಿಯವರು ಕಾರವಾರದಿಂದ ಇಲ್ಲಿ ಬಂದು ಅವಷ್ಟು ಖಟಪಟಿ ಮಾಡಿದರೂ ಏನೂ ಫಲಪ್ರಾಪ್ತಿಯಾಗಲಿಲ್ಲ ಈ ಕೆಲಸದ ವೇಳೆಯಿಂದ ಕೂಡಿದ ಜನರೊಳಗ, ಅಲಗೇರಿ ನಿವಾಸಿಕರಾದ ನಾಗಪ್ಪ ಪಿ. ಶೆಟ್ಟಿ ಇವರೊಬ್ಬರೇ ಆಶಾವಾದಿಗಳಾಗಿ, "ಯಾರೂ ಮಾಡದ ಕೆಲಸ ತಾನು ಸಾಧಿಸುತ್ತೇನೆಂಬ ಸ್ವಯಂಮನ್ಯತೆಯಿಂದ ತನ್ನ ಆಳು ಇಷ್ಟೇ ಅಲ್ಲ ಬೇರೆ ಆಗೇರರನ್ನು ಸಹ ತರುವದೇನು ಅಸಾಧ್ಯವೋ ? ಎಂತ ಹೇಳಿ ಒನರಿಗೆಲ್ಲ ಧೈರ್ಯ ಕೊಟ್ಟದ್ದರು ಊರೊಳಗೆ ಇವರೇ ನಮ್ಮ ಮರ್ಯಾದೆಯನ್ನು ಕಾಯುವರು ಎಂತ ಲಲ್ಲಿಲ್ಲಿ ಜನರು ಇವರನ್ನು ಹೊಗಳುತ್ತಿದ್ದರು ಮಾಮಲೆದಾರ ಸಾಹೇಬರಿಗೆ ಸಹ ಇವರ ಆಶ್ವಾಸನಗಳೇ ಉತ್ತೇಜಕವಾಗಿ ಧೈರ್ಯಉಂಟಾಗಿರಲಿಕ್ಕೆ ಸಾಕು ಪರಂತು ಈ ವೃಥಾ ಪಲ್ಲನೆಯು ಒಂದು ದಿವಸ ಸಹ ತಾಳಲಿಲ್ಲವೆಂತ ನೋಡಿ ಜನರಿಗೆ ಮಹದಾಶ್ಚರ್ಯವಾಯಿತು ಯಾಕಂದರೆ ಡೆಪ್ಯುಟಿ ಕಲ್ಲೆಕ್ಟರ ಸಾಹೇಬರು "ನಿಮ್ಮ ಆಗೇರರನ್ನು ಯಾವಾಗ ಹೊರಡಿಸುತ್ತೀರಿ" ಎಂಬ ಅರ್ಥದ ಪ್ರಶ್ನೆ ಕೇಳಲು ನಮ್ಮ ಶೆಟ್ಟರು "ಈಗಲೇ ಹೊರಡಿಸುತ್ತೇನೆ ನನ್ನ ಸಂಗಡ ಒಬ್ಬ ಶಿಪಾಯಿಯನ್ನು ಕೊಟ್ಟರೆ ಅವರಿಗೆ ಹಿಡಕೊಂಡು ತರಲಿಕ್ಕೆ ಎಷ್ಟು ಹೊತ್ತು ? ಬಿಟ್ಟಿಗೆ ಗಾಡಿಗಳು ಹಿಡಿದರೆ ಸುಮ್ಮನೆ ಯಾರಾದರೂ ಬರುತ್ತಾರೋ? ಸಕ್ತಿಯಿಂದಲೇ ತರಬೇಕಾಗುತ್ತದೆ ಆಗೇರ ಜನರಿಗಾದರೂ ಸಕ್ತಿಯಿಂದಲೇ ಒಯ್ಯಬೇಕು ಹೊರತು ಎಷ್ಟು ಬೋಧನೆ ಹೇಳಿದರೂ ಅವರು ಬರಲಿಕ್ಕಿಲ್ಲ " ಎಂತ ತಮ್ಮ ವಾಗ್ಜಾಲವನ್ನು ಪಸರಿಸಹತ್ತಿದರು ಈ ಸಂಭಾಷಣೆಯಿಂದ ಸಾಹೇಬರಿಗೆ ಸಹ ಸ್ವಲ್ಪ ಸಿಟ್ಟು ಬಂದದ್ದು ತೋರಿತು. ಜನರಿಗೂ ಬಹಳ ಖೇದವಾಯಿತು ಸಕ್ತಿಯಿಂದ ಒಯ್ಯುವದಾದರೆ ಸರಕಾರಕ್ಕೆ ನಿಮ್ಮ ಸಲ್ಲೆ ಬೇಡ ಎಂತ ಸಾಹೇಬರು ಶೆಟ್ಟಿಗಳ ಸೂಚನೆಯನ್ನು ಅಲ್ಲೇ ನಿಷೇಧಿಸಿದರು ಆಗ ಸ್ವಯಂಮನ್ಯ ಶೆಟ್ಟರ ಮನಸ್ಸಿನಲ್ಲಿ ಏನಾಯಿತೆಂಬುದು ಅವರಿಗೇ ಗೊತ್ತು ಶೆಟ್ಟರು ಆಗೇರ ಜನರ ನಿಜವಾದ ಒಡೆಯರು ಹಿಂದೆ ಮುಂದೆ ಇಂಥ ಕೆಲಸಗಳು ಸಾಧ್ಯವಾದರೆ ಅವರಿಂದಲೇ ಆಗಬೇಕು ಬೇರೆ ಜನರು ಸಹ ಮನಃಪೂರ್ವಕವಾಗಿ ಶೆಟ್ಟರಿಗೆ ಸಹಾಯ ಮಾಡತಕ್ಕವರು ಸದ್ಯಕ್ಕೆ ನಾಗಪ್ಪ ಶೆಟ್ಟರು ತಮ್ಮ ಕಾಣಿಕೆಯೊಳಗಿಂದ ೧-೨ ಸಾವಿರ ರೂಪಾಯಿಗಳನ್ನು ಯುದ್ಧಸಾಲಕ್ಕೆ ಪೂರೈಸಿದರೆ ಅಂಕೋಲೆಯ ಮಾಸುಳಿ ಪರಿ ಶೆಟ್ಟಿಗಳ ಉಪಯುಕ್ತ ಔದಾರ್ಯ ಭಾವವು ಸಾಮ್ರಾಜ್ಯಕ್ಕೆ ತಿಳಿಯುತ್ತಿತ್ತು ಅವರ ಈ ಮಾತುಕತ್ತಾಳ್ಮೆ ನೋಡಬೇಕು ಸದ್ಯಕ್ಕೆ ಮಾತ್ರ ಅವರ ಸ್ವಲ್ಪ ಅವಿಚಾರದಿಂದ ಅಪ್ರಾಮಾಣಿಕ ವ್ಯವಹಾರ ಮಾಡಿದಂತಾಗಿದೆ ಯಾಕಂದರೆ ಒತ ಆಗೇರ ಜನರು ಬಿಟ್ಟ ಬೆಟ್ಟದಲ್ಲಿ ಅಡಗಿಕೊಂಡಿರುವರು ಇದರ ಅಪಕೀರ್ತಿ ಜನರ ವಚನಗಳ ಮೇಲೆ ಬಂದದೆ ಆಗೇರರ ಸ್ವಭಾವದ ಪರಿಚಯವಿದ್ದ ಜನರ ಸ್ವಲ್ಪವು ತಕ್ಕೊಂಡರೆ ಯಾವ ಅಧಿಕಾರರು ಸಹ ಈ ಕೆಲಸದಲ್ಲಿ ಕೈ ಹಾಕುತ್ತಿದ್ದಿಲ್ಲ ಇರಲಿ ಈ ಆಗೇರರ ಹಟದಿಂದ ಒಳ್ಳೆಯ ಜನರಿಗೂ ವ್ಯಸನವಾಗಿರುವದ ಈ ಜನರ ಸಾಕಷ್ಟು ಯತ್ನ ಮಾಡಲಿಲ್ಲವೆಂತ ನಿಷ್ಕಾರಣವಾಗಿ ಸರಕಾರದ ಸಮಜೂತ ಆಗಲಿಕ್ಕೆ ಅಸ್ಪದ ದೊರೆತಂತಾಗಿದೆ ಆದರೂ ರಾಜನಿಷ್ಠ ಜನರು ತಮ್ಮ ಯುದ್ಧ ವಿಷಯಕ ಕರ್ತವ್ಯಗಳನ್ನು ಜರಗಿಸಲಿಕ್ಕೆ ಯಾವಾಗಲೂ ಸಿದ್ಧರಿದ್ದಾರೆಂತ ವಿಚಾರಶೀಲ ಮಾಮಲೇದಾರರಿಗೆ ಸಹ ತಿಳಿದು ಬರುವದಾಗಿದೆ ಕೇವಲ ತಿಳಿಗೇಡಿಗಳಾದ, ತಾಲೂಕಿನಿಂದ ಹೊರಗೆ ಹೆಜ್ಜೆ ಎಂದೂ ಇಡದ, ಆಗೇರರ ಮನಸ್ಸು ಒಲಿಸಲಿಕ್ಕೆ ಆಗದಿದ್ದದ್ದು ಆಗೇರರ ಸಾಮಾಜಿಕ ಸ್ಥಿತಿಯನ್ನು ಅರಿತವರಿಗೆ ಮಾತ್ರ ಅಪೂರ್ವಕರ ಸಂಗತಿಯಲ್ಲ

ಇಹವೃತ್ತ.

ಕುಮಟೆ— ಶಕೆಯು ಬಹಳ ಆಗಹತ್ತಿದೆ ಮೋಡಗಳು ಕವಿಯಹತ್ತಿವೆ

ಸ್ಥಾನಿಕ ಮುನ್ಸಿಪಾಲಿಟಿ ಮುಖ್ಯ ಸಭೆಯಲ್ಲಿ ಸರಕಾರದಲ್ಲಿ ಇದ್ದ ೨೦೦೦ ಸಾವಿರ ರೂಪಾಯಿಗಳ ಪ್ರೋಮಿಸರಿ ನೋಟುಗಳನ್ನು ಮುರಿಸಿ ಯುದ್ಧ ಸಾಲಿಗೆ ಈ ಹಣ ಕೊಡಬೇಕೆಂತ ಸರ್ವಾನುಮತದಿಂದ ನಿಶ್ಚಯಿಸಲ್ಪಟ್ಟಿತು

ಇಲ್ಲಿಯ ಗಿಬ್ಬ ಹೈಸ್ಕೂಲಿನ ಇನಾಮು ಸಮಾರಂಭವು ಕಳೆದ ತಾರೀಕು ೨೧ ರಂದು ಮೆಹರ್ಬಾನ ಅಸಿಸ್ಟಂಟ ಕಲೆಕ್ಟರ ಮಿ॥ ಲೋರೆನ್ಸ ಸಾಹೇಬರ ಅಧ್ಯಕ್ಷತೆಯಲ್ಲಿ ನೆರವೇರಿತು ಬೆಥಾಂಕ್ ಖಾಂತ ಲೋರೆನ್ಸ ದೊರೆಸಾನಿಯವರು ಇನಾಮುಗಳನ್ನು ಹುಡುಗರಿಗೆ ಹಂಚಿದರು, ಊರೊಳಗಿನ ಪ್ರಮುಖ ಜನರೆಲ್ಲರು ಹುಡುಗರ ಅಭಿನಯಗಳನ್ನು ನೋಡಿ ಹರ್ಷಭರಿತರಾದರು.

ಅಸಿಸ್ಟಂಟ ಕಲೇಕ್ಟರ ಸಾಹೇಬರ ಸ್ವಾರಿಯು ಇಲ್ಲಿಂದ ಗೋಕರ್ಣಕ್ಕೆ ಮುಕ್ಕಾಂ ಮಾಡಿ ಕಾರವಾರ ಕಡೆಗೆ ತೆರಳಿತು.

ಇಲ್ಲಿಯ ಯುದ್ಧಸಾಲ ಸಂಬಂಧದ ಕಮಿಟಿಗಳು ಉತ್ಸುಕತೆಯಿಂದ ಕೆಲಸ ಮಾಡತೊಡಗಿರುವವು. ಕುಮಟೆಯ ಶಹರದ ೩೫,೦೦೦ ಮತ್ತು ಇಡೀ ತಾಲೂಕಿನ ಬಾಬತು ೧೨,೦೦೦ ರಕಮು ಕೂಡಿಯದೆ ಎಂದು ಕೇಳುತ್ತೇವೆ.

ಇಲ್ಲಿಯ ಗಿಬ್ಬ ಹೈಸ್ಕೂಲಿನ ಅಧ್ಯಾಪಕ ಶ್ರೀಯುತ ಮಾಧವ ಮಂಜುನಾಥ ಶ್ಯಾನಭಾಗರು ಎಮ್. ಎ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ಕೇಳಿ ಅವರನ್ನು ಅಭಿನಂದಿಸುತ್ತೇವೆ ಖುದ್ದ ಕುಮಟೆಯ ನಿವಾಸಿಕರಲ್ಲಿ ಇಷ್ಟು ಉಚ್ಚಶಿಕ್ಷಣ ಹೊಂದಿದವರು ಇವರೊಬ್ಬರೇ. ಮಹಾಶಯರು ಸ್ವಾರ್ಥತ್ಯಾಗಪೂರ್ವಕವಾಗಿ ಇಲ್ಲಿಯ ಕೆನರಾ ಶಿಕ್ಷಣ ಸಂಘದ ಚಿರಸ್ಥಾಯೀ ಮೆಂಬರರಾಗಿರುವರು

ಕಾರವಾರ— ಶಕೆಯ ಮಾನವು ಬಹಳೇರಿದೆ ಕಲೆಕ್ಟರ ಸಾಹೇಬರ ಮುಕ್ಕಾಮ ಸೂಪೆಯ ಕಡೆಗಿರುವದು ಡಿ॥ ಡಿ॥ ಕಲೆಕ್ಟರ ಸಾಹೇಬರ ಸ್ವಾರಿಯು ಸದ್ಯಕ್ಕೆ ಇಲ್ಲಿರುವದು ಸದಾಶಿವಗಡದ ಖೂನಿ ಮೊಕದ್ದಮೆಯು ಸೆಶನ್ ದಲ್ಲಿ ತನಿಖೆಯಾಗಿ ೮ ಜನ ಆರೋಪಿಗಳು ದೋಷಮುಕ್ತರಾದರು ಕಮಿಶನರ ಸಾಹೇಬರ ಸ್ವಾರಿಯು ಇಲ್ಲಿ ಬಂದಾಗ ಮಿತ್ರ ಸಮಾಜದಲ್ಲಿ ಸಭೆಗೂಡಿ ರಾವಸಾಹೇಬ ಉಪ್ಪೋಣಿಯವರಿಗೆ ಕಿತಾಬಿನ ಸನದು ಅರ್ಪಿಸಲ್ಪಟ್ಟಿತು ಕಮಿಶನರ ದೊರೆಗಳು ಕಾನಡಾ ಜಿಲ್ಲೆಗೆ ವಿಶೇಷತಃ ಕಾರವಾರ ತಾಲೂಕಿಗೆ ಯುದ್ಧ ಫಂಡು ಮತ್ತು ಯುದ್ಧದ ಸಾಲ ಕರ್ತವ್ಯಗಳಿಗೆ ಎಚ್ಚರಗೊಳಿಸುವಂಥ ಉತ್ತೇಜಕ ಭಾಷಣವನ್ನು ಮಾಡಿದಳಂತೆ

ಕವಳೆ ಮಠದ ಗುರುಗಳಾದ ಶ್ರೀಮತ್ಪೂರ್ಣಾನಂದ ಸ್ವಾಮಿಗಳ ಸ್ವಾರಿಯು ದಿಗ್ವಿಜಯಾರ್ಥ ಇಲ್ಲಿಗೆ ಬಂದಿದ್ದು ಎಲ್ಲ ಗೌಡ ಸಾರಸ್ವತ ಬ್ರಹ್ಮವೃಂದಾದಿ ಶಿಷ್ಯರಿಂದ ಸತ್ಕಾರವನ್ನು ಹೊಂದುತ್ತಿರುವರು ಇವರು ಕೂಟ್ಟದಾನ ಮತ್ತು ಪಂತಿಕೆಯಿಂದ ಗೋಕರ್ಣ ಕ್ಷೇತ್ರದಲ್ಲಿ ತಮ್ಮದೊಂದು ಮಠವನ್ನು ಸ್ಥಾಪಿಸುವ ವಿಚಾರದವರಾಗಿದೆಂತ ಕೇಳುತ್ತೇವೆ.

ಹಳಿಯಾಳ — ಕಾಲೆರಾ ನಡದೇಅದೆ. ತಾಲೂಕಿನಲ್ಲಿ ಪ್ಲೇಗ, ಕಾಲೆರಾ ಎರಡೂ ಇವೆ ಪ್ಲೇಗದ ಬಗ್ಗೆ ಔಷಧಯೋಜನೆ ಸಾಕಷ್ಟು ಆಗಿರುವದಿಲ್ಲ

ಅಲೂರ ಎಂಬ ಹಳ್ಳಿ ಒಮ್ಮಿಂದೊಮ್ಮೆ ಬೆಂಕಿಹತ್ತಿ ಪೂರ್ಣವಾಗಿ ಸುಟ್ಟು ದನ, ಕರ, ಧಾನ್ಯಗಳ ಹಾನಿ ಯಾದ್ದರಿಂದ ಜನರು ನಿರಾಶ್ರಿತರಾಗಿರುವರು ರೇವ್ಹಿನ್ಯೂ, ಲೋಕಲಬೋರ್ಡ, ಫೋರೆಸ್ಟ ಖಾತೆಯವರು ಇವರೂರ ಲಕ್ಷ್ಯಗೊಡುವ ಅವಶ್ಯವದೆ

ರಾಶ ಲೋನಸಬ್ಸ್ಯ ಮಿ ಮಾಮಲೇದಾರರ ನಿಮಂತ್ರಣದಮೇರೆಗೆ ಈ ಹೊತ್ತು ದೊಡ್ಡ ಸಭೆಯು ನೆರೆಯುವದದೆ ಹಾಗೂ ಹಳ್ಳಿಗಳಲ್ಲಿ ಸಹ ಸಭೆಗೂಡಿಸುವ ಆಲೋಚನೆ ಆದ್ದಂತೆ ತೋರುವದು

(ಅಂಕೋಲೆ, ಹೊನ್ನಾವರ, ಪಟ್ಕಳದ ವೃತ್ತವನ್ನು ೯ ನೆ ಪುರವಣಿಯಲ್ಲಿ ನೋಡಿರಿ.)

Indian War Loan.

ಹಿಂದುಸ್ಥಾನದ ಯುದ್ಧದ ಸಂಬಂಧದ ಸಾಲವು.

ನಗದು ಸಿಕ್ಕಿದ ಎಲ್ಲ ವರ್ಗಣಿಯು ಮಲಿಕ್ ಮುಅಜಮ್‌ರವರ ಸರಕಾರಕ್ಕೆ ಯುದ್ಧವನ್ನು ನಡಿಸಲಿಕ್ಕೆ ಕೊಡಲಾದೀತು

ಸನ್ ೧೯೨೯–೧೯೪೭ನೇ ಇಸವಿಗಳ ಶೇಕಡಾ ೫ ಬಡ್ಡಿಯುಳ್ಳ ಯುದ್ಧದ ಸಂಬಂಧದ ಸಾಲವು.

ಸನ್ ೧೯೨೦ನೇ ಇಸವಿಯ ಶೇಕಡಾ ೫॥ ಬಡ್ಡಿಯುಳ್ಳ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨ನೇ ಇಸವಿಯ ಶೇಕಡಾ ೫॥ ಬಡ್ಡಿಯುಳ್ಳ ಯುದ್ಧದ ಸಂಬಂಧದ ಬಾಂಡುಗಳು

ಪೋಸ್ಟ ಆಫೀಸಿನ ೫ ವರ್ಷದ ನಗದು ಸರ್ಟಿಫಿಕೇಟುಗಳು (ಸನ್ ೧೯೧೭–೧೮ನೇ ಇಸವಿಯ ಒಗ್ಗೆ ತೆಗೆದಂಥವು)

ಅಸಲು ಮತ್ತು ಬಡ್ಡಿಯು ಬಗ್ಗೆ ಹಿಂದುಸ್ಥಾನದ ಸರಕಾರದ ಉತ್ಪನ್ನ ಮತ್ತು ಮಹಸೂಲ ತಾರಣವಿರುವದು

---

೧ ಯುದ್ಧದ ಸಂಬಂಧದ ಸಾಲ, ಸನ್ ೧೯೨೯–೧೯೪೭

ಹೊರಡಿಸಿದ ವೇಳೆಯ ಕಿಮ್ಮತ್ತು ಈ ಕೆಳಗೆ ಬರೆದಂತೆ ಶೇಕಡಾ ೯೫ ರೂಪಾಯಿ ಕೊಡಬೇಕು

ಒಂದೇ ವೇಳೆಗೆ ಸಂಪೂರ್ಣ ಕೊಡಬೇಕಾದ ರಕಮುಗಳಿಗೆ ಅರ್ಜಿ ಮಾಡಿದಾಗ ಶೇಕಡಾ ೯೫ ರೂಪಾಯಿ

ಹಪ್ತೆಯಿಂದ ಕೊಡಬೇಕಾದ ರಕಮುಗಳಿಗೆ ಅರ್ಜಿ ಮಾಡಿದಾಗ ಶೇಕಡಾ ೧೫ ರೂಪಾಯಿ ಮತ್ತು ಉಳಿದ ಬಾಕಿ ರಕಮನ್ನು ೪ ತಿಂಗಳ ಗಟ್ಟಿಯ ಹಪ್ತೆಯಿಂದ ಶೇಕಡಾ ೨೦ ರೂಪಾಯಿಯಂತೆ ಪ್ರತಿಯೊಂದು ಹಪ್ತೆಯನ್ನು ಈ ಅರ್ಜಿ ಮಾಡಿದ ತಿಂಗಳ ನಂತರ ಬರುವ ಕ್ರಮೇಣ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ತಿಂಗಳುಗಳ ೧೫ನೇ ತಾರೀಖಿಗೆ ಅಥವಾ, ಆ ದಿವಸವು ರವಿವಾರವಿದ್ದರೆ, ೧೬ನೇ ತಾರೀಖಿಗೆ ಕೊಡಬೇಕು

ಬಡ್ಡಿ ಪ್ರತಿವರ್ಷ ಫೆಬ್ರುವರಿ ೧೫ನೇ ತಾರೀಖಿಗೆ ಮತ್ತು ಅಗಸ್ಟ ೧೫ನೇ ತಾರೀಖಿಗೆ ಶೇಕಡಾ ೨॥ ರೂಪಾಯಿ ಕೊಡಲ್ಪಡುವದು

ಸಾಲ ತೀರಿಸುವ ತಾರೀಖು—ಮುಂಚೆಯೇ ತೀರಿಸದಿದ್ದಲ್ಲಿ ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲವು ಸನ್ ೧೯೪೭ನೇ ಇಸವಿಯ ಅಗಸ್ಟ ತಿಂಗಳಿನ ೧೫ನೇ ತಾರೀಖಿನ ದಿವಸ ಹೆಚ್ಚು ಕಡಿಮೆ ಮಾಡದೇ ಅದೇ ಬೆಲೆಗೆ ತಿರುಗಿ ಕೊಡಲ್ಪಡುವದು ಆದರೆ ಹಿಂದುಸ್ಥಾನ ಸರಕಾರದವರು, ಸನ್ ೧೯೨೯ನೇ ಇಸವಿಯ ಅಗಸ್ಟ ತಿಂಗಳಿನ ೧೫ನೇ ತಾರೀಖಿನ ದಿವಸ ಅಥವಾ ತದನಂತರ ಇಂಡಿಯಾದ ಗ್ಯಾಝೀಟಿನಲ್ಲಿ ಮೂರು ಕ್ಯಾಲೆಂಡರ ತಿಂಗಳಿನ ನೋಟೀಸನ್ನು ಕೊಟ್ಟು ಏನೂ ಹೆಚ್ಚು ಕಡಿಮೆ ಮಾಡದೇ ಅದೇ ಬೆಲೆಗೆ ಆ ಸಾಲವನ್ನು ಅಥವಾ ಅದರ ಯಾವದಾದರೂ ಭಾಗವನ್ನು ತಿರುಗಿ ಕೊಡುವ ಹಕ್ಕನ್ನು ತಾವು ಇಟ್ಟುಕೊಂಡಿದ್ದಾರೆ.

ಸಿಂಕಿಂಗ್ ಫಂಡು—ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ಪೇಟೆ ಬೆಲೆಯು ಕಡಿಮೆಯಾಗದಂತೆ ತಜವೀಜು ಮಾಡುವ ಬಗ್ಗೆ, ಹಿಂದುಸ್ಥಾನ ಸರಕಾರದವರು, ಯಾವ ಯಾವ ವೇಳೆಗೆ ಪೇಟೆ ಬೆಲೆಯು ಸಾಲ ತೆಗೆದ ವೇಳೆಯ ಬೆಲೆಗಿಂತ ಕಡಿಮೆಯಾಗುವದೋ ಆಗ, ಆ ಸಾಲದ ಸೆಕ್ಯುರಿಟಿಗಳನ್ನು ಕೊಂಡುಕೊಂಡು ಅವನ್ನು ರದ್ದು ಮಾಡುವ ಬಗ್ಗೆ ಉಪಯೋಗಿಸಲ್ಪಡುವ ಒಂದು ಫಂಡನ್ನು ಸ್ಥಾಪಿಸುವಸೋಸ್ಕರ, ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ರಕಮಿನ ಶೇಕಡಾ ೧¼ ರಕಮಿನಷ್ಟು ದರವರ್ಷ ಪ್ರತ್ಯೇಕವಾಗಿಡಲಿಕ್ಕೆ ಒಪ್ಪಿಕೊಂಡಿದ್ದಾರೆ.

೨ ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು ಮತ್ತು ಸನ್ ೧೯೨೨ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು

(ಪ್ರಾಪ್ತಿಯ ಮೇಲಿನ ಕರವು ಲಾಗೂ ಇರುವದಿಲ್ಲ)

ಹೊರಡಿಸಿದ ವೇಳೆಯ ಕಿಮ್ಮತ್ತು ಈ ಕೆಳಗೆ ಬರೆದಂತೆ ಶೇಕಡಾ ೧೦೦ ರೂಪಾಯಿ ಕೊಡಬೇಕು

ಒಂದೇ ವೇಳೆಗೆ ಸಂಪೂರ್ಣ ಕೊಡಬೇಕಾದ ರಕಮುಗಳಿಗೆ ಅರ್ಜಿ ಮಾಡಿದಾಗ ಶೇಕಡಾ ೧೦೦ ರೂಪಾಯಿ

ಹಪ್ತೆಯಿಂದ ಕೊಡಬೇಕಾದ ರಕಮುಗಳಿಗೆ ಅರ್ಜಿ ಮಾಡಿದಾಗ ಶೇಕಡಾ ೨೦ ರೂಪಾಯಿ ಮತ್ತು ಉಳಿದ ಬಾಕಿ ರಕಮನ್ನು ೪ ತಿಂಗಳಗಟ್ಟಿಯ ಹಪ್ತೆಯಿಂದ ಶೇಕಡಾ ೨೦ ರೂಪಾಯಿಯಂತೆ ಪ್ರತಿಯೊಂದು ಹಪ್ತೆಯನ್ನು ಈ ಅರ್ಜಿ ಮಾಡಿದ ತಿಂಗಳ ನಂತರ ಬರುವ ಕ್ರಮೇಣ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ತಿಂಗಳುಗಳ ೧೫ನೇ ತಾರೀಖಿಗೆ ಅಥವಾ, ಆ ದಿವಸವು ರವಿವಾರವಿದ್ದರೆ ೧೬ನೇ ತಾರೀಖಿಗೆ ಕೊಡಬೇಕು

ಬಡ್ಡಿ ಪ್ರತಿವರ್ಷ ಫೆಬ್ರುವರಿ ೧೫ನೇ ತಾರೀಖಿಗೆ ಮತ್ತು ಅಗಸ್ಟ ೧೫ನೇ ತಾರೀಖಿಗೆ ೨¾ ರೂಪಾಯಿ ಕೊಡಲ್ಪಡುವದು.

ಸಾಲ ತೀರಿಸುವ ತಾರೀಖು, ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೨೦ನೇ ಇಸವಿಯ ಅಗಸ್ಟ ತಿಂಗಳ ೧೫ನೇ ತಾರೀಖಿಗೆ ತಿರುಗಿ ಕೊಡಲ್ಪಡುವವು, ಸನ್ ೧೯೨೨ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೨೨ನೇ ಇಸವಿಯ ಅಗಸ್ಟ ತಿಂಗಳ ೧೫ನೇ ತಾರೀಖಿಗೆ ತಿರುಗಿ ಕೊಡಲ್ಪಡುವವು.

೩ ಪೋಸ್ಟ-ಆಫೀಸಿನ ೫ ವರ್ಷದ ನಗದು ಸರ್ಟಿಫಿಕೇಟುಗಳು.

(ಪ್ರಾಪ್ತಿಯ ಮೇಲಿನ ಕರವು ಲಾಗೂ ಇರುವದಿಲ್ಲ.)

೧೦ ರೂ ೨೦ ರೂ ೫೦ ರೂ ಮತ್ತು ೧೦೦ ರೂಪಾಯಿಗಳ ಬಗ್ಗೆ ಹೊರಡಿಸಿದ ೫ ವರ್ಷಗಳ ನಂತರ ತಿರುಗಿ ಕೊಡಲ್ಪಡುವವು

ಹೊರಡಿಸಿದ ವೇಳೆಯ ಕಿಮ್ಮತ್ತು

೭-೧೨ ರೂ, ೧೫-೮ ರೂ, ೩೮-೧೨ ರೂ ಮತ್ತು ೭೭-೮ ರೂಪಾಯಿ

ಈ ಸರ್ಟಿಫಿಕೇಟಗಳನ್ನು, ಸಾಲದ ಸಂಬಂಧದ ಜಾಹೀರನಾಮೆಯಲ್ಲಿ ಠರಾಯಿಸಿದ ದರದಂತೆ ಈ ಐದು ವರ್ಷದ ಮುದ್ದತಿನೊಳಗೆ ಯಾವ ವೇಳೆಯಲ್ಲಿ ಆದರೂ ಹೊರಡಿಸಿದ ಪೋಸ್ಟ ಆಫೀಸಿನಲ್ಲಿ ವಟಾಯಿಸಬಹುದು.

೧ ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ಬಾಬತ್ತು ಸೆಕ್ಯುರಿಟಿಗಳನ್ನು, ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳನ್ನು ಮತ್ತು ಸನ್ ೧೯೨೨ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳನ್ನು

ಸೆಕ್ಯುರಿಟಿಗಳ ನಮೂನೆ

ಅರ್ಜಿದಾರನ ಖುಶಿಯಂತೆ (ಇದನ್ನು ಅವನ ಅರ್ಜಿಯಲ್ಲಿ ಬರೆಯಬೇಕು) ಈ ಕೆಳಗೆ ಕೊಟ್ಟ ನಮೂನೆಗಳಲ್ಲಿ ಕೊಡಲಾಗುವದು

(೧) ಇನ್‌ಸ್ಕ್ರೈಬ್ಡ್ ಸ್ಟಾಕ್ ಸರ್ಟಿಫಿಕೇಟು ದಸ್ತವಜು ಮಾಡಿ ಬೇರೆಯವರಿಗೆ ಕೊಡಬಹುದು.

(೨) ಪ್ರೊಮಿಸರಿ ನೋಟುಗಳು ಅವುಗಳ ಮೇಲೆ ಮಖಲಾಸ ಮಾಡಿ ಬೇರೆಯವರಿಗೆ ಕೊಡಬಹುದು

(೩) ಬೇರರ್ ಬಾಂಡುಗಳು ಸ್ವಾಧೀನಮಾಡಿ ಬೇರೆಯವರಿಗೆ ಕೊಡಬಹುದು

ತಮ್ಮ ಖುಶಿಯನ್ನು ಯಾವದೂ ತರದಲ್ಲಿ ನಿರ್ದಿಷ್ಟ ಮಾಡದೇ ಇದ್ದಲ್ಲಿ, ಸೊಟ್ಟು ಕೊಡಲು, ಸೆಕ್ಯುರಿಟಿಗಳನ್ನು ಇನ್‌ಸ್ಕ್ರೈಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ನಮೂನೆಯಲ್ಲಿ ಕೊಡಲಾದೀತು.

೨. ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳ ಮತ್ತು ಸನ್ ೧೯೨೨ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳ ಬಡ್ಡಿಗೆ ಪ್ರಾಪ್ತಿಯ ಮೇಲಿನ ಕರವು ಲಾಗೂ ಇರಲಿಕ್ಕಿಲ್ಲ. ಆದರೆ ಜಾದಾ ಕರವು ಲಾಗೂ ಇರುವದು

ಪ್ರಾಪ್ತಿಯ ಮೇಲಿನ ಕರ.

ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲಗಳ ಮೇಲಿನ ಬಡ್ಡಿಗೆ ಪ್ರಾಪ್ತಿಯ ಮೇಲಿನ ಕರವು ಅಥವಾ ಜಾದಾ ಕರವು ಲಾಗೂ ಇರುವದು. ಪ್ರಾಪ್ತಿಯ ಮೇಲಿನ ಕರವು ಪ್ರಾಪ್ತಿಯ ಮೇಲಿನ ಕರದ ವಿಷಯದ ಆಕ್ಟಿನ ಎರಡನೇ ಪರಿಶಿಷ್ಟದ ೩ನೇ ಭಾಗದೊಳಗಿನ ಶರ್ತುಗಳನ್ವಯ ಠರಾಯಿಸಲ್ಪಡುವದು

೩. ಕೊಂಡುಕೊಂಡ ಹಿಂದುಸ್ಥಾನ ಸರಕಾರದ ಪ್ರತಿಯೊಂದು ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಸಾಲವನ್ನು, ಶೇಕಡಾ ಮೂರರಂತೆ ಬಡ್ಡಿಯುಳ್ಳ ಶೇಕಡಾ ೩½ ರೂಪಾಯಿ ಬಡ್ಡಿಯುಳ್ಳ ರೂಪಾಯಿ ಸಾಲುಗಳ ಪೈಕಿ ಯಾವದಾದರೂ ಸಾಲಕ್ಕೆ, ಅಥವಾ ಸನ್ ೧೯೧೬–೧೭ನೇ ಇಸವಿಯ ಶೇಕಡಾ ೪ ಬಡ್ಡಿಯುಳ್ಳ ಬದಲಾಯಿಸಿಕೊಳ್ಳಬಹುದಾದ ೧೫೦ ರೂಪಾಯಿಗಳ (ಹೆಸರಿನ) ಸಾಲಕ್ಕೆ, ವರ್ಗಣಿದಾರನು ಬದಲಾಯಿಸಬಹುದು, ಮತ್ತು ಅವುಗಳ ಬದಲಾಗಿ ಸನ್ ೧೯೨೯–೧೯೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲವನ್ನು—

ಬದಲಾಯಿಸುವ ಹಕ್ಕುಗಳು

ಬದಲಾಯಿಸಿದ ಶೇಕಡಾ ಮೂರು ರೂಪಾಯಿ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೬೫ ರೂಪಾಯಿ

ಬದಲಾಯಿಸಿದ ಶೇಕಡಾ ಮೂರುವರೆ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೭೬ ರೂಪಾಯಿ

ಬದಲಾಯಿಸಬಹುದಾದ ಬದಲಾಯಿಸಿದ ಶೇಕಡಾ ೪ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೯೨ ರೂಪಾಯಿ

ಈ ದರದಂತೆ ಪಡೆಯಬಹುದು, ಮತ್ತು ನೂರು ರೂಪಾಯಿಯಿಂದ ಭಾಗಿಸಲಿಕ್ಕೆ ಬರುವಂಥ ಬರೋಬರಿ ರಕಮನ್ನು ಮಾಡಲಿಕ್ಕೆ ಅವಶ್ಯವಿರಬಹುದಾದ ಯುದ್ಧದ ಸಂಬಂಧದ ಸಾಲದ ಇನ್ನೂ ಹೆಚ್ಚಿಗೆ ರಕಮನ್ನು, ಈ ಹೆಚ್ಚಿಗೆ ರಕಮನ್ನು (ಇದರೊಳಗಿಂದ ಪ್ರತಿ ರೂಪಾಯಿಯಿಂದ ಒಂದು ಆಣೆಯನ್ನು ಕಳೆದು) ನಗದಾಗಿ ಕೊಡಬೇಕೆಂಬ ಶರ್ತಿಗೊಳಪಟ್ಟು, ಪಡೆಯಬಹುದು

೪. ಬದಲಾಯಿಸಿಕೊಳ್ಳುವ ಹಕ್ಕುಗಳನ್ನು, ಸನ್ ೧೯೧೭ನೇ ಇಸವಿಯ ನೊವ್ಹೆಂಬರ ೧ನೇ ತಾರೀಖಿನ ನಂತರ ಆದರೆ ೧೯೧೮ನೇ ಇಸವಿಯ ಜನವರಿ ತಿಂಗಳ ೧೫ನೇ ತಾರೀಖಿಗಿಂತ ಮೊದಲು ಯಾವದಾದರೂ ವೇಳೆಯಲ್ಲಿ ನಡಿಸಬಹುದು ಬದಲಾಯಿಸುವ ವಾರಂಟುಗಳು ಬೇರನೀ ಇರುವವು ಮತ್ತು ಅವು ಬೆರರ್ ಫಾರ್ಮಿನಲ್ಲಿ ಕೊಡಲ್ಪಡುವವು

೫. ಬದಲಾಯಿಸಿ ತೆಗೆದ ಸನ್ ೧೯೨೯-೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲಗಳ ಸೆಕ್ಯುರಿಟಿಗಳಿಗೆ ಸನ್ ೧೯೧೮ನೇ ಇಸವಿಯ ಅಗಸ್ಟ ತಿಂಗಳ ೧೫ನೇ ತಾರೀಖಿನಿಂದ ಬಡ್ಡೀ ಸುರು ಆಗುವದು. ಮೇಲಿನ ಮೂರನೇ ರಕಮಿನನ್ವಯ ಕೊಟ್ಟ ನಗದು ರಕಮುಗಳ ಬಾಬತಿನಲ್ಲಿ ಪ್ರತ್ಯೇಕವಾಗಿ ಬಡ್ಡಿ ಕೊಡಲ್ಪಡಲಿಕ್ಕಿಲ್ಲ

೬. ಸನ್ ೧೯೨೯-೪೭ನೇ ಇಸವಿಗಳ ಯುದ್ಧದ ಸಂಬಂಧದ ಸಾಲಗಳು, ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು, ಮತ್ತು ಸನ್ ೧೯೨೨ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು ಇವುಗಳನ್ನು ಧಾರಣ ಮಾಡುವವನಿಗ, ಮುಂದೆ ಹಿಂದುಸ್ಥಾನ ಸರಕಾರದವರು ತೆಗೆಯಬಹುದಾದ ಯಾವದಾದರೂ ಸಾಲದಲ್ಲಿ ತಾನು ಧಾರಣ ಮಾಡಿದ ಈ ಸಾಲಗಳನ್ನು ವರ್ಗಾಯಿಸಲಿಕ್ಕೆ ಅಧಿಕಾರ ದೊರೆಯಲಿಕ್ಕಿಲ್ಲ

ಅರ್ಜಿಗಳು

೭ ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨ (ಪೋಸ್ಟ ಆಫೀಸಿನ ಮುಖಾಂತರ ಮಾಡಲ್ಪಡುವ ಅರ್ಜಿಗಳನ್ನು ಹೊರತು ಪಡಿಸಿ) ಇವುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳನ್ನ ಸನ್ ೧೯೧೭ನೇ ಇಸವಿಯ ಮಾರ್ಚ ತಿಂಗಳ ೧೫ನೇ ತಾರೀಖು ಗುರುವಾರದಿಂದ ಸನ್ ೧೯೧೭ನೇ ಇಸವಿಯ [illegible] ತಿಂಗಳ ೧೫ನೇ ತಾರೀಖು ಶುಕ್ರವಾರದ ವರೆಗೆ ಯಾವದಾದರೂ ದಿವಸದಲ್ಲಿ ಈ ಕೆಳಗಿನ ಅಮಲದಾರರ ಅಥವಾ ಮನುಷ್ಯರ ಕಡೆಗೆ ಮಾಡ[illegible] —

(೧) ಕಂಟ್ರೋಲರ್ ಆಫ್ ಕರೆನ್ಸಿ, ಕಲಕತ್ತಾ, [illegible] ಅಥವಾ ಯಾವದಾದರೂ ಪ್ರಾಂತದ [illegible] ಅಥವಾ ಕಂಟ್ರೋಲರ್, ಇವರಕಡೆಗೆ

(೨) ಬಂಗಾಳ, ಮುಂಬಯಿ ಮತ್ತು ಮದ್ರಾಸ ಬ್ಯಾಂಕುಗಳ [illegible]ರ ಮತ್ತು ಟ್ರೆಝರರ ಕಡೆಗೆ, ಅವರ ಮುಖ್ಯ ಕಚೇರಿಗಳಲ್ಲಿ, ಅಥವಾ ಇಂಥ ಬ್ಯಾಂಕುಗಳ ಏಜಂಟರ ಕಡೆಗೆ ಹಿಂದುಸ್ಥಾನದೊಳಗಿನ ಯಾವದಾದರೂ ಬ್ರಾಂಚಿನಲ್ಲಿ, ಮತ್ತ

(೩) ಜಿಲ್ಹೆಯ ಹೆಡ್‌ಕ್ವಾರ್ಟರ್ಸಗಳಲ್ಲಿಯ ಸರಕಾರಿ [illegible] ತಾಬೆಯಲ್ಲಿರುವ ಅಮಲದಾರರಕಡೆಗೆ

೮ ನೂರು ರೂಪಾಯಿಯ ರಕಮಿನ ಬಗ್ಗೆ ಅಥವಾ ನೂರರಿಂದ ಭಾಗಿಸಲಿಕ್ಕೆ ಬರುವಂಥ ರಕಮುಗಳ ಬಗ್ಗೆ ಅರ್ಜಿಗಳನ್ನು ಮಾಡಬೇಕು

೯ ೧೦೦ ರೂಪಾಯಿಯ ರಕಮಿನಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗಡ ಮಾತ್ರ, ಎಲ್ಲ ಬಾಬತುಗಳಲ್ಲಿ, ಅವುಗಳ ಪೂರ್ಣ ರಕಮನ್ನು ಕೊಡಬೇಕು, ಅಂದರೆ ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭, ಇದರ ಬಾಬತಿನಲ್ಲಿ ರೂಪಾಯಿ ೯೫ನ್ನೂ, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦ ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨, ಇವುಗಳ ಬಾಬತಿನಲ್ಲಿ ೧೦೦ ರೂಪಾಯಿಯನ್ನೂ ಕೊಡಬೇಕು

೧೦ ಯುದ್ಧದ ಸಂಬಂಧದ ಸಾಲ, ಸನ್ ೧೯೨೯ ೧೯೪೭, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦ ಅಥವಾ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨ ಇವುಗಳಲ್ಲಿ ೨೦೦ ಅಥವಾ ಹೆಚ್ಚು ರೂಪಾಯಿಯ ರಕಮುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು —

(ಅ) ಪೂರ್ಣವಾಗಿ ಹಣ ಕೊಡಬೇಕಾದ ರಕಮುಗಳ ಬಗ್ಗೆ, ಅಥವಾ

(ಬ) ಹಪ್ತೆಯಿಂದ ಕೊಡಬೇಕಾದ ರಕಮುಗಳ ಬಗ್ಗೆ—ಇರಬಹುದು.

ದಲಾಲಿ

೧೧ ಮಾನ್ಯಮಾಡಲ್ಪಟ್ಟ [illegible]ರಿಗೆ ಮತ್ತು ದಲಾಲರಿಗೆ ಅವರ ಮುದ್ರೆ ಇರುವಂಥ ನಗದೀ ಅರ್ಜಿಗಳ ಸಂಬಂಧದಿಂದ ಮಾಡಿದ ರಕಮುಗಳ ಮೇಲೆ ಶೇಕಡಾ ತ್ರಿರಷ್ಟು ದಲಾಲಿಯು ಕೊಡಲ್ಪಡುವದು, ಆದರೆ ಪೋಸ್ಟ ಆಫೀಸಿನ ಮುಖಾಂತರ ಬಂದ ಅರ್ಜಿಗಳ ಬಾಬತಿನಲ್ಲಿ (ಇವುಗಳಲ್ಲಿ ಪೋಸ್ಟ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳು ಸಹ ಬರುತ್ತವೆ), ಅಥವಾ ಬದಲಾಯಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಬಾಬತಿನಲ್ಲಿ ಇಂಥ ದಲಾಲಿಯು ಕೊಡಲ್ಪಡಲಿಕ್ಕಿಲ್ಲ.

ಅರ್ಜಿಯ ನಮೂನೆಗಳನ್ನು ಅಕೌಂಟಂಟ್ ಜನರಲ್ಲನ ಅಥವಾ ಯಾವನಾದರೂ ಬ್ಯಾಂಕಿನ ಅಥವಾ ದಲಾಲನ ಅಥವಾ ಯಾವದಾದರೂ ಡಿಸ್ಟ್ರಿಕ್ಟ್ ಟ್ರೆಝರಿಯ ಕಡೆಯಿಂದ ಪಡೆಯಬಹುದು.

ಪೋಸ್ಟ್ ಆಫೀಸ ಸೆಕ್ಶನು.

(ಪೋಸ್ಟ್ ಆಫೀಸಿನ ಮುಖಾಂತರ ಮಾಡಲ್ಪಡುವ ಅರ್ಜಿಗಳ ಸಂಬಂಧದಿಂದ ವಿಶೇಷ ಠರಾವುಗಳು.)

೧೨ ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦, ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨, ಇವುಗಳ ಬಗ್ಗೆ ಮಾಡುವ ಅರ್ಜಿಗಳು ಸಹ, ಸೇವಿಂಗ್ಸ್ ಬ್ಯಾಂಕಿನ ಕೆಲಸ ಮಾಡಲಿಕ್ಕೆ ಅಧಿಕಾರವಿರುವ ಯಾವದಾದರೂ ಪೋಸ್ಟ್ ಆಫೀಸಿನಲ್ಲಿ, ಸನ್ ೧೯೧೭ನೇ ಇಸವಿಯ ಮಾರ್ಚ ತಿಂಗಳ ೧೫ ತಾರೀಖಿನ ಗುರುವಾರದಿಂದ ಸನ್ ೧೯೧೭ನೇ ಇಸವಿಯ ಅಕ್ಟೋಬರ್ ತಿಂಗಳ ೧೫ನೇ ತಾರೀಖಿನ ಸೋಮವಾರದ ವರೆಗೆ, ಯಾವನಾದರೂ ಮನುಷ್ಯನ ಕಡೆಯಿಂದ (ಬಳಿಕ ಅವನು ಈ ಮುಂಚೆ ಪೋಸ್ಟ್ ಆಫೀಸ್ ಸೇವಿಂಗ್ಸ ಬ್ಯಾಂಕಿನಲ್ಲಿ ಹಣ ಇಟ್ಟವನಿರಲಿ ಅಥವಾ ಇಲ್ಲದಿರಲಿ), ಈ ಕೆಳಗಿನ ರಕಮುಗಳಲ್ಲಿ ಹೇಳಿದ ಶರ್ತುಗಳಿಗೊಳಪಟ್ಟು, ತೆಗೆದುಕೊಳ್ಳಲ್ಪಡುವವು.

ಪರಮಾವಧಿಯ ಮತ್ತು ಕಡಿಮೆಯಲ್ಲಿ ಕಡಿಮೆ ರಕಮುಗಳು

೧೩ ಪೋಸ್ಟ್ ಆಫೀಸಿನ ಮುಖಾಂತರ ಮಾಡುವ ಅರ್ಜಿಗಳನ್ನು ೨೫ ರೂಪಾಯಿಯ ಅಥವಾ ಅದರಿಂದ ಭಾಗಿಸಲಿಕ್ಕೆ ಬರುವಂಥ ಯಾವದಾದರೂ ರಕಮುಗಳ ಬಗ್ಗೆ ಮಾಡಬೇಕು ಒಬ್ಬನೇ ಮನುಷ್ಯನು ಈ ಜಾಹೀರನಾಮೆಯನ್ವಯ ಒಟ್ಟಿಗೆ ೨೨,೫೦೦ ರೂಪಾಯಿಗಿಂತ ಹೆಚ್ಚಿನ ರಕಮಿನ ಬಗ್ಗೆ ಅರ್ಜಿ ಮಾಡಬಾರದು ಅಥವಾ ಅದಕ್ಕಿಂತ ಹೆಚ್ಚು ರಕಮನ್ನು ಪೋಸ್ಟ್ ಆಫೀಸಿನ ಮುಖಾಂತರ ಧಾರಣ ಮಾಡಬಾರದು, ಮತ್ತು ಇದರ ಪೈಕಿ ೭೫೦೦ ರೂಪಾಯಿಗಿಂತ ಹೆಚ್ಚಿನ ರಕಮು ಯುದ್ಧದ ಸಂಬಂಧದ ಸಾಲ, ಸನ್ ೧೯೨೯ ೧೯೪೭ನೇ ಇಸವಿ ಇದರಲ್ಲಿ ಇರಬಾರದು; ರೂಪಾಯಿ ೭೫೦೦ರಕ್ಕಿಂತ ಹೆಚ್ಚಿನ ರಕಮು, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦, ಇದರಲ್ಲಿ ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨, ಇದರಲ್ಲಿ, ಪ್ರತ್ಯಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಇರಬಾರದು, ಮತ್ತು ೭೫೦೦ ರೂಪಾಯಿಗಿಂತ ಹೆಚ್ಚಿನ ರಕಮು ಪೋಸ್ಟ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳಲ್ಲಿ ಇರಬಾರದು—೨೩ನೇ ರಕಮು ನೋಡಿರಿ

ಟೀಪ (೧) — ಈ ಜಾಹೀರನಾಮೆಯನ್ವಯ ಪೋಸ್ಟ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಲಿಕ್ಕೆ ಮುಂಚೆಯೇ ಪೋಸ್ಟ್ ಆಫೀಸಿನ ಮುಖಾಂತರವಾಗಿ ಪಡೆದ ಇತರ ಯಾವದಾದರೂ ಸಿಕ್ಯುರಿಟಿಗಳು ಇದ್ದರೆ ಇಲ್ಲದಿದ್ದರೂ ಕೂಡ, ಪರವಾನಗಿ ಸಿಗುವದು

(೨) ಬದಲಾಯಿಸಿ ಪಡೆದ, ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭, ಇದರ ರಕಮುಗಳು, ಈ ಮೇಲಿನ ಮರ್ಯಾದೆಗಳನ್ನು ಲಾಗೂ ಮಾಡುವಲ್ಲಿ ಲೆಖ್ಖದಲ್ಲಿ ತಗೆದುಕೊಳ್ಳಲ್ಪಡಲಿಕ್ಕಿಲ್ಲ.

ಕೊಡಬೇಕಾದ ರಕಮುಗಳು

೧೪ ಯಾವ ರಕಮುಗಳ ಬಗ್ಗೆ ಅರ್ಜಿ ಮಾಡಿರುವದೋ ಆ ರಕಮುಗಳನ್ನು ಅರ್ಜಿಯ ಸಂಗಡಲೇ ಪೂರ್ಣವಾಗಿ ಕೊಡಬೇಕು ಮತ್ತು ಅವನ್ನು ಹಪ್ತಗಳಿಂದ ಕೊಡಬಾರದು. ಆದರೆ ಒಬ್ಬನೇ ಮನುಷ್ಯನು, ತಾನು ಮಾಡಿದ ಒಟ್ಟು ಅರ್ಜಿಗಳ ಸಂಖ್ಯೆಯು ೧೩ನೇ ರಕಮಿನಲ್ಲಿ ಠರಾಯಿಸಿದ ಮರ್ಯಾದೆಗಳಿಗೆ ವಿರೋಧವಿದ್ದರೆ ಮಾತ್ರ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಮಾಡಬಹುದು

ಹಣ ಕೊಡುವ ರೀತಿಯು

೧೫ ಹಿಂದಿನ ರಕಮಿನಲ್ಲಿ ಹೇಳಿದಂತೆ ಕೊಡಬೇಕಾದ ರಕಮುಗಳನ್ನು ಈ ಕೆಳಗಿನ ರೀತಿಗಳ ಪೈಕಿ ಯಾವದೊಂದು ರೀತಿಯಲ್ಲಿ ಅಥವಾ ಅಂಶತಃ ಪ್ರತಿಯೊಂದು ರೀತಿಯಲ್ಲಿ ಕೊಡಬಹುದು —

(ಅ) ಸೇವಿಂಗ್ಸ್ ಬ್ಯಾಂಕಿನಲ್ಲಿ ಅರ್ಜಿದಾರನ ಖಾತೆಗೆ (ಇದ್ದರೆ) ಜಮಾ ಇದ್ದ ಯಾವದಾದರೂ ನಗದು ಶಿಲ್ಕು ರಕಮಿನಿಂದ ವರ್ಗಾಯಿಸಿ,

(ಬ) ನಾಣ್ಯದಿಂದ ಅಥವಾ ಕರನ್ಸಿ ನೋಟುಗಳಿಂದ ಹಣಕೊಟ್ಟು, ಅಥವಾ ಯಾವದೊಂದು ಮಾನ್ಯ ಮಾಡಲ್ಪಟ್ಟ ಬ್ಯಾಂಕು ಇರುವ ಸ್ಥಳದ ಮುಖ್ಯ ಪೋಸ್ಟ್ ಮಾಸ್ತರನ ಹೆಸರಲ್ಲಿ ಅಂಥ ಬ್ಯಾಂಕಿನ ಮೇಲೆ ತೆಗೆದ ಕ್ರಾಸ್ಡ್ ಚೆಕ್ಕಿನಿಂದ.

ಸಿಕ್ಯುರಿಟಿಗಳು

೧೬ ಪೋಸ್ಟ್ ಆಫೀಸಿನ ಮುಖಾಂತರ ಮಾಡಿದ ಅರ್ಜಿಗಳ ಸಂಬಂಧದ ಸಿಕ್ಯುರಿಟಿಗಳು ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಅಥವಾ ಸ್ಟಾಕು ಸರ್ಟಿಫಿಕೇಟುಗಳ ನಮೂನೆಯಲ್ಲಿ ತೆಗೆಯಲ್ಪಡುವವು. ಈ ರೀತಿಯಲ್ಲಿ ತೆಗೆದ ಸಿಕ್ಯುರಿಟಿಗಳನ್ನು, ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ್ ಇವರ ಕಾವಲಿನಲ್ಲಿಡಬಹುದು

೧೭ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦ ಮತ್ತು ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೨೨, ಇವುಗಳ ಮೇಲಿನ ಬಡ್ಡಿಯ ಮೇಲಿನ ಪ್ರಾಪ್ತಿಯ ಮೇಲಿನ ಕರವು ವಸೂಲು ಮಾಡ

(ಮುಂದೆ ಪುರವಣಿ ನೋಡಿರಿ)

Printed & Published by Krishnarao Keshav Shenvi at his Star of Kanara Press Kumta

ಚಂದಾದಾರರಿಗೆ ವಿಜ ಪಿ.

ಪುರವಣಿ.

कानडावृत्त– बुधवार तारीख ४ माहे एप्रिल सन १९१७ इसवी.

ಕರವು ಲ್ಪಡಲಿಕ್ಕಿಲ್ಲ. ಯುದ್ಧದ ಸಂಬಂಧದ ಸಾಲ, ೧೯೨೯-೧೯೪೭, ಇದರ ಸಿಕ್ಯುರಿಟಿಗಳ ಮೇಲೆ, ಅವನ್ನು ಅಕೌಂಟಂಟ್ ಜನರಲ್ ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ್, ಇವರ ಸಂಗಡ ಅಮಾನತು ಇಟ್ಟರೆ, ಮತ್ತು ಅವು ಆ ರೀತಿಯಲ್ಲಿ ಅಮಾನತಿಡಲ್ಪಟ್ಟಿರುವ ವರೆಗೆ, ಪ್ರಾಪ್ತಿಯ ಮೇಲಿನ ಕರವು ಮುದ್ದಾಮು ವಸೂಲು ಮಾಡಲ್ಪಡಲಿಕ್ಕಿಲ್ಲ.

೧೮. ಯುದ್ಧದ ಸಂಬಂಧದ ಸಾಲ, ಸನ್ ೧೯೨೯–೧೯೪೭, ಇದರ ಬಗ್ಗೆ ಪೋಸ್ಟ್ ಆಫೀಸಿನ ಮುಖಾಂತರ ಅರ್ಜಿ ಮಾಡುವ ಮನುಷ್ಯನಿಗೆ ಒಂದು ಬೇರನೇ ಬದಲಾಯಿಸಬಹುದಾದ ವಾರಂಟು (ಬದಲಾಯಿಸುವ ಬಗ್ಗೆ ಮಾಡಲ್ಪಡುವ ಅರ್ಜಿಯ ನಮೂನೆಗಳ ಸಹಿತ) ಕೊಡಲ್ಪಡುವದು, ಮತ್ತು ಇದರ ಮೂಲಕ ಅವನಿಗೆ ಮೇಲಿನ ೩ನೇ ಕಲಮಿನಲ್ಲಿ ನಿರ್ದಿಷ್ಟ ಮಾಡಿದ ಹಕ್ಕುಗಳನ್ನು ನಡೆಸಲಿಕ್ಕೆ ಅಧಿಕಾರ ಸಿಗುವದು.

ಬದಲಾಯಿಸೋಣ.

೧೯ ಶೇಕಡಾ ಮೂರು ಅಥವಾ ಮೂರುವರೆ ಬಡ್ಡಿಯುಳ್ಳ ರೂಪಾಯಿಯ ಸಾಲಗಳ, ಅಥವಾ ಶೇಕಡಾ ೪ರ ಬಡ್ಡಿಯ ಬದಲಾಯಿಸಿಕೊಳ್ಳಬಹುದಾದ ಸಾಲ, ಸನ್ ೧೯೧೬–೧೯೧೭ (?), ಇದರ ಸಿಕ್ಯುರಿಟಿಗಳು, ೩ನೇ ಕಲಮಿನಲ್ಲಿ ಉಲ್ಲೇಖ ಮಾಡಿದ ನಗದಾಗಿ ಕೊಟ್ಟ ಹಣಕ್ಕೆ (ಇದ್ದರೆ) ಒಳಪಟ್ಟು, ಯಾವ ಬಾಬತುಗಳಲ್ಲಿ ಬದಲಾಯಿಸುವ ಬಗ್ಗೆ ಸಾದರ ಮಾಡಿದ ಸಿಕ್ಯುರಿಟಿಗಳು, ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ್, ಇವರ ಮುಖಾಂತರವಾಗಿ, ಸನ್ ೧೯೧೭ನೇ ಇಸವಿಯ ನವಂಬರ್ ತಿಂಗಳ ೧ನೇ ತಾರೀಖಿನ ನಂತರ ಮತ್ತು ಸನ್ ೧೯೧೮ನೇ ಇಸವಿಯ ಜನವರಿ ತಿಂಗಳ ೧೫ನೇ ತಾರೀಖಿನ ಮುಂಚೆ, ಬದಲಾಯಿಸುವವನ ಸಂಗಡ ಮುಂಚೆಯೇ ಅಮಾನತಿರುವವೋ ಅಥವಾ ಅವನಿಂದ ಮುಂಚೆಯೇ ಮಾರತೆಗೆದುಕೊಳ್ಳಲ್ಪಟಿರುವವೋ ಅಂಥ ಎಲ್ಲ ಬಾಬತುಗಳಲ್ಲಿ ಯಾವದಾದರೂ ಪೋಸ್ಟ್ ಆಫೀಸ ಸೇವಿಂಗ್ಸ್ ಬ್ಯಾಂಕಿನ ಆಫೀಸಿನಲ್ಲಿ,

(ಅ) ಅಗತ್ಯವಾಗಿ ಬದಲಾಯಿಸಬೇಕಾದ ವಾರಂಟುಗಳನ್ನು (ಬಳಿಕ ಅವು ಪೋಸ್ಟ್ ಆಫೀಸಿನ ಮುಖಾಂತರ ಸಿಕ್ಕಿರಲಿ ಅಥವಾ ಇಲ್ಲದಿರಲಿ) ಮತ್ತು ಬದಲಾಯಿಸುವ ಬಗ್ಗೆ ಮಾಡುವ ಅರ್ಜಿಯ ನಮೂನೆಯನ್ನು ಯೋಗ್ಯವಾಗಿ ತುಂಬಿಸಿ ಸಾದರ ಮಾಡಿದ ಬಳಿಕ, ಮತ್ತು

(ಬ) ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ್, ಇವರ ಹೆಸರಲ್ಲಿ ಮುಖಲಾಸಿ ಮಾಡಿದ ಸಿಕ್ಯುರಿಟಿಗಳನ್ನು (ಇದ್ದರೆ) ಸಾದರ ಮಾಡಿದ ಬಳಿಕ, ಪೋಸ್ಟ್ ಆಫೀಸಿನಿಂದ ಬದಲಾಯಿಸಲ್ಪಡುವವು.

ಅರ್ಜಿಯ ನಮೂನೆಗಳನ್ನು ಯಾವದಾದರೂ ಪೋಸ್ಟ್ ಆಫೀಸಿನಿಂದ ಪಡೆಯಬಹುದು.

ಪೋಸ್ಟ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳು.

ಸಾಲ ತೆಗೆದ ೫ ವರ್ಷಗಳ ನಂತರ ಕೊಡಬೇಕಾದ ರೂ. ೧೦, ೨೦, ೫೦ ಮತ್ತು ೧೦೦ರ ಬಗ್ಗೆ ಸರ್ಟಿಫಿಕೇಟುಗಳು.

೨೦ ಸನ್ ೧೯೧೭ನೇ ಇಸವಿಯ ಎಪ್ರಿಲ ತಿಂಗಳ ೧ನೇ ತಾರೀಖಿನ ದಿನ ಮತ್ತು ಆನಂತರ ಯಾವದಾದರೂ ವೇಳೆಯಲ್ಲಿ ಸೇವಿಂಗ್ಸ್ ಬ್ಯಾಂಕಿನ ಕೆಲಸ ಮಾಡುವ ಎಲ್ಲ ಪೋಸ್ಟ್ ಆಫೀಸುಗಳಲ್ಲಿ ಪೋಸ್ಟ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳನ್ನು ಪಡೆಯಬಹುದು

೨೧. ಈ ಸರ್ಟಿಫಿಕೇಟುಗಳು ೪ ಹೆಸರಿನಿಂದ ಕರೆಯಲ್ಪಡುವವು:—

ರೂ.	೭–೧೨	ಕೊಟ್ಟ	ಬಳಿಕ	ಸಿಗುವ ರೂ.	೧೦
,,	೧೫–೮	,,	,,	,,	೨೦.
,,	೩೮–೧೨	,,	,,	,,	೫೦.
,,	೭೭–೮	,,	,,	,,	೧೦೦.

೨೨. ಸರ್ಟಿಫಿಕೇಟಿನಲ್ಲಿ ತೋರಿಸಿದ ಪೂರ್ಣ ರಕಮನ್ನು ಅದನ್ನು ತೆಗೆದ ೫ ವರ್ಷಗಳ ನಂತರ ಕೊಡಬೇಕಾಗುವದು. ಆದರೆ ಸದರಿ ೫ ವರ್ಷಗಳ ಮುದ್ದತ್ತಿನೊಳಗೆ ಯಾವದಾದರೂ ವೇಳೆಯಲ್ಲಿ ಸದರಿ ಧಾರಣ ಮಾಡುವವನು, ಸಾಲದ ಸಂಬಂಧದ ಜಾಹೀರನಾಮೆಯಲ್ಲಿ ಠರಾಯಿಸಿದ ದರಗಳಿಂದ ನಗದಾಗಿ ಹಣ ಕೊಡಲಿಕ್ಕೆ ಬಾಧ್ಯನಾಗುವನು.

ಸಹಾನುಭೂತಿಯಿಂದ ಮದ್ಯಪಾನ ನಿಷೇಧಕ ಸಂಸ್ಥೆಗ
ವ್ಯಸನವನ್ನು ತಗ್ಗಿಸುವರೆ ಮಾ
ಶಿಲ್ಲಿ ಕೊಂಡ ನಮಗೆ ಸಬಿ
ದೆ. ಇರಲಿ. ಈ ಬೆಳೆದ ಪ
ಂದ ಶಿಕ್ಷಣವನ್ನು ಬೇಸಿ ಶಿಕ್ಷಣ
ಯಿಂದಲೇ ಇದನ್ನು ತಗ್ಗಿಸ
ಸು ಪ್ರಯತ್ನಿಸುವರೆಂತ ನಾವು
ೆ.

ಬರ್ಜ ಖಾತೆಯ ರಕಮುಗಳಲ್ಲಿ
ೆ ಆದ ಸರಕಾರದ ಉದಾರ
ಗಳೂ ಅಭಿನಂದನೆಗೆ ಪಾತ್ರ
ಂತ ತೆಗೆದಿಟ್ಟ ಹೆಚ್ಚಿನ ವೆಚ್ಚದ
ಸು ಯಾವವೆಂದರೆ—(1) ಟ್ರೇಂ
ಬೆಳಿಸುವದು. ೨ ಲಕ್ಷ ೫೦ ಸಾ
ಪ್ರಾಥಮಿಕ ಶಾಲೆಗಳನ್ನು ತೆ
ಗಳಲ್ಲಿ ಹೆಚ್ಚಿನ ಶಿಕ್ಷಕರನ್ನು ನೇ
ರೂ. (3) ಮುಂಬಯಿ ಶಹರದ
ಗೆ ೧ ಲಕ್ಷ ೭ ಸಾವಿರ ರೂ. (4)
ಲಾ ಇಮಾರತುಗಳಿಗೆ ಗ್ರೇಂಟ
ಾಯಿ. (5) ಮುಸಲ್ಮಾನ ವಿ
ಜನ ೧ ಲಕ್ಷ ೧೮ ಸಾವಿರ ರೂ
ದ ಹೊಸ ಕಾಲೇಜಿಗೆ ೩೧ ಸಾ
ಪೂಣೆ ಟ್ರೇನಿಂಗ ಕಾಲೇಜಿನ
ರ ರೂಪಾಯಿ (8) ದಕ್ಷಿಣ
೬ ಸಾವಿರ. ಇದರ ಹೊರತು
ಶಿಕ್ಷಣದ ೮ ಲಕ್ಷ ರೂಪಾಯಿ ಶಿ
ಕ್ಕೆ ತೆಗೆದಿಟ್ಟಿರುವರು. ಟ್ರೇಂಡ
ರಿಸಿ ಘಟ್ಟದ ಮೇಲಿನ ಕಟ್ಟ
ತಾಳುವ ಸಹನಶೀಲ ಬಡ ಜ
ಂದು ನ್ಯಾಯವಾದ ಉಪ
ವದು ಒಂದಿನ ಬೇರೆ ರಕಮು
ಳಗಿನ ಬಡ ಶಾಲಾ ಮಾಸ್ತ
ಂತೆ ಹಳ್ಳಿ ಪಳ್ಳಿಗಳಲ್ಲಿ ಹಗಲಿ
ಶ್ಯಾಸಪ್ರಯೋಗರಿಗೂ ಕಳೆದವ
ವ್ಯವಸ್ಥೆಯು ಮಾಡಲ್ಪಟ್ಟದೆ
ಸ್ತರ ವ್ಯವಹಾರವು ಜನರಿಗೆ
ವದು ಕಾನಡಾ ಜಿಲ್ಲೆಯೊಳಗಿ
ಮಾಡತು ಕಟ್ಟೆಗೆ ಮತ್ತು ಇತ
ರ ಒಯ್ಯುವರೆ ರಹದಾರಿಯ
ಾಡುವರೆ ಸ್ಪೆಶಲ್ ಎಂಜೀನಿ
ಕ್ಕಾಗಿ ಜಂಗಲ ಖಾತೆಯ.ಶಿ
ಪಾಯಿಯನ್ನು ಮಂಜೂರ

ೂಚನೆಗಳು.

ಗಿನ ಅಲ್ಲಿಲ್ಲಿ ಮಾತುಕಥೆಯಾ
ವಿಷಯವು ಯುದ್ಧ ಸಾಲವು.
ಂದ ಉಗಮವಾದ ಈ ಚಳ
ವಳಿಯು ದೂರ ದೂರಿನ ಜಿಲ್ಲೆಗಳಲ್ಲಿಯೂ ಬಹು ವೇಗದಿಂದ ಪಸರಿಸಹತ್ತಿದೆಂಬುದು ನೋಡಿ ನಮಗೆ ಆನಂದವಾಗುತ್ತದೆ. ಲಕ್ಷ್ಮೀದೇವಿಯ ಅನುಗ್ರಹವಿದ್ದ ಬೇರೆ ಜಿಲ್ಲೆಗಳು ತಮ್ಮ ರಾಜನಿಷ್ಠೆಗೆ ಅನುಗುಣವಾದ ಔದಾರ್ಯದಿಂದ ದೇಶದ ಮಾನಕ್ಕೆ ಕುಂದು ತರಲಿ

ಹೆಚ್ಚಿಗೆಳನ್ನಿಡಲಿಕ್ಕೆ ಅನಾವಶ್ಯಕ ಹೊತ್ತುಗಳೆಯಬೇಕಾಗುವದು. ಇಂಥ ಅಸಹಾಯಕ ಸ್ಥಿತಿಯಿಂದ ಪಾರಾಗುವದು ಚಂದಾದಾರರ ಕೈಯೊಳಗಿನ ಕೆಲಸವು ಅದನ್ನು ಸೂಜ್ಞರು ಅತಿಶಕ್ತಿ ನೆರವೇರಿಸುವರೆಂದು ತುಂಬಾ ನಂಬಿರುವೆವು

ಹೋದ ವರ್ಷದ ಅನುಭವದಿಂದ ಈ ವರ್ಷಕ್ಕೆ ಉತ್ಪನ್ನವನ್ನು ಸಹ ೪ ಲಕ್ಷಗಳಿಂದ ಏರಿಸಿ ಹಿಡಿದಿರುವರು. ಹೋದ ವರ್ಷದ ಅಂದಾಜಿಗಿಂತ ಏರಿದ ೫೪ ಲಕ್ಷ ಉತ್ಪನ್ನದೊಳಗೆ ಬರೇ ಅಬಕಾರಿ ಖಾತೆಯಿಂದಲೇ ೩೪ ಲಕ್ಷ ಏರಿರುವದು. ಇದರ ಇತ್ಯರ್ಥವು ಸರಕಾರದ

೪. ಬದಲಾಯಿಸಿಕೊಳ್ಳುವ ಹಕ್ಕುಗಳನು ಸನ್ ೧೯೧೭ನೇ ಇಸವಿಯ ನೊ| ವ್ಹೆಂಬರ ೧ನೇ ತಾರೀಖಿನ ನಂತರ ಆವರೆ ೧೯ ತಾರೀಖಿಗಿಂತ ಮೊದಲು ಯಾವದಾದರೂ ... ಸುವ ವಾರಂಟುಗಳು ಬೆಚನೀ ಇರುವವು ಮ... ಲ್ಪಡುವವು.

೫. ಬದಲಾಯಿಸಿ ತೆಗೆದ ಸನ್ ೧೯೩೯- ದ ಸಾಲಗಳ ಸೆಕ್ಯುರಿಟಿಗಳಿಗೆ ಸನ್ ೧೯೧೭ನೆ ... ರೀಖಿನಿಂದ ಬಡ್ಡೀ ಸುರು ಆಗುವದು ಮೇಲಿ... ಗದು ರಕಮುಗಳ ಬಾಬತಿನಲ್ಲಿ ಪ್ರತ್ಯೇಕವಾ...

೬. ಸನ್ ೧೯೩೯-೪೭ನೇ ಇಸವಿಗಳ ... ೧೯೨೦ನೇ ಇಸವಿಯ ಯುದ್ಧದ ಸಂಬಂಧದ ... ಇಸವಿಯ ಯುದ್ಧದ ಸಂಬಂಧದ ಬಾಂಡು... ಗೆ, ಮುಂದೆ ಹಿಂದುಸ್ತಾನ ಸರಕಾರದವರು ... ಲವಲ್ಲಿ ತಾನು ಧಾರಣ ಮಾಡಿದ ಈ ಸಾ... ದೊರೆಯಲಿಕ್ಕಿಲ್ಲ

೭. ಯುದ್ಧದ ಸಂಬಂಧದ ಸಾಲ, ಸ... ಬಾಂಡುಗಳು, ಸನ್

ಅರ್ಜಿಗಳು. ಮಾಡಲ್ಪಡುವ ಅರ್ಜಿ... ಮಾಡಲ್ಪಡುವ ಅರ್ಜಿ... ರ್ಚ ತಿಂಗಳ ೧೫ನೇ ತಾರೀಖು ಗುರುವಾ... ತಿಗಂಳ ೧೫ನೇ ತಾರೀಖು ಶುಕ್ರವಾರದ ... ಕೆಳಗಿನ ಅಮಲದಾರರ ಅಥವಾ ಮನುಷ...

(೧) ಕಂಟ್ರೋಲರ್ ಆಫ್ ಕರ... ಯಾವನಾದರೂ ಪ್ರಾಂತಿಕ ಕಂಟ್ರೋಲರ್, ಇವರಕಡೆ

(೨) ಬಂಗಾಳ, ಮುಂಬಯಿ ಮ... ರ ಮತ್ತು ಬ್ರಹ್ಮದೇಶ ... ಇಂಥ ಬ್ಯಾಂಕುಗಳ ಪೈ... ದಾದರೂ ಬ್ರಾಂಚಿನಲ್ಲಿ,

(೩) ಜಿಲ್ಹೆಯ ಹೆಡ್‌ಕ್ವಾರ್ಟರ್ಸ... ಲ್ಲಿರುವ ಅಮಲದಾರರಕ...

೮. ನೂರು ರೂಪಾಯಿಯ ರಕ... ಕ್ಕೆ ಬರುವಂಥ ರಕಮುಗಳ ಬಗ್ಗೆ ಅರ್ಜಿ...

೯. ೧೦೦ ರೂಪಾಯಿಯ ರಕ... ಮಾತ್ರ, ಎಲ್ಲ ಬಾಬತುಗಳಲ್ಲಿ, ಇವುಗ... ಯುದ್ಧದ ಸಂಬಂಧದ ಸಾಲ, ಸನ್ ... ಯಿ ೧೫ನ್ನೂ, ಯುದ್ಧದ ಸಂಬಂಧದ ... ಸಂಬಂಧದ ಬಾಂಡುಗಳು, ಸನ್ ೧೯... ಯನ್ನೂ ಕೊಡಬೇಕು

೧೦. ಯುದ್ಧದ ಸಂಬಂಧದ ಸಾ... ಧದ ಬಾಂಡುಗಳು, ಸನ್ ೧೯೨೦ ... ಸನ್ ೧೯೨೨ ಇವುಗಳಲ್ಲಿ ೨೦೦ ಅರ್ಧ... ಮಾಡಲ್ಪಡುವ ಅರ್ಜಿಗಳು —

(ಅ) ಪೂರ್ಣವಾಗಿ ಹಣ ಕೊ...

(ಬ) ಹಪ್ತೆಯಿಂದ ಕೊಡಬೇ...

೧೧. ಮಾನ್ಯಮಾಡಲ್ಪಟ್ಟ ... ಇರುವಂಥ ಸ...

ದಲಾಲಿ ಮುಗಳ ಮೇಲೆ

ಮ್ಮ, ಆದರೆ ಪೋಸ್ಟ ಆಫೀಸಿನ ಮುಖಾಂತರ ಬಂದ ಅರ್ಜಿಗಳ ಬಾಬತಿನಲ್ಲಿ (ಇವುಗಳಲ್ಲಿ ಪೋಸ್ಟ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳು ಸಹ ಬರುತ್ತವೆ), ಅಥವಾ ಬದಲಾಯಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಬಾಬತಿನಲ್ಲಿ ಇಂಥ ದಲಾಲಿಯು ಕೊಡಲ್ಪಡಲಿಕ್ಕಿಲ್ಲ.

ಅರ್ಜಿಯ ನಮೂನೆಗಳನ್ನು ಅಕೌಂಟಂಟ್ ಜನರಲ್ಲಿನ ಅಥವಾ ಯಾವನಾದರೂ ಬ್ಯಾಂಕಿನ ಅಥವಾ ದಲಾಲನ ಅಥವಾ ಯಾವದಾದರೂ ಡಿಸ್ಟ್ರಿಕ್ಟ ಟ್ರೆಝರಿಯ ಕಡೆಯಿಂದ ಪಡೆಯಬಹುದು.

ಪೋಸ್ಟ್ ಆಫೀಸ ಸೆಕ್ಯುರಿಟಿ...

... ಆಫೀಸಿನ ಮುಖಾಂತರದಿಂದ

ಪುರವಣಿ

कानडावृत्त— बुधवार तारीख ४ माहे एप्रिल सन १९१७ इसवी.

... ಯಾವನಾದರೂ ಒಬ್ಬನೇ ಮನುಷ್ಯನು ಧಾರಣ ಮಾಡಬಹುದಾದ ಸರ್ಟಿಫಿಕೇಟುಗಳ ಪರಮಾವಧಿಯು ... ರ ... ಕ್ಕಿಂತ ಹೆಚ್ಚಿರಬಾರದು ... ಕಿಕ ಅವನು ಪೋಸ್ಟ್ ಆಫೀಸಿನ ಮುಖಾಂತರ ಪಡೆದ ಶೇಕಡಾ ೪ರ ... ಶೇಕಡಾ ೫ರ ಬಡ್ಡಿಯುಳ್ಳ, ಅಥವಾ ಶೇಕಡಾ ೪ರ ಬಡ್ಡಿಯುಳ್ಳ ರೂಪಾಯಿಯ ಸಾಲಗಳು ಅಥವಾ ... ದ ಸಂಬಂಧದ ಸಾಲ ಸನ್ ೧೯೨೯-೧೯೪೭, ಇದು ಅಥವಾ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦ ... ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೨ ಇವು ಅವನಿಂದ ಧಾರಣ ಮಾಡಲ್ಪಟ್ಟರೂ ಚಿಂತೆಯಿಲ್ಲ.

... ಈ ಸರ್ಟಿಫಿಕೇಟುಗಳನ್ನು, ಅವನ್ನು ತೆಗೆದ ಪೋಸ್ಟ್ ಆಫೀಸು ಇರುವ ಸರ್ಕಲಿನ ಪೋಸ್ಟ್ ಮಾಸ್ತರ ಜನರ... ಪರವಾನಿಗೆ ... ಬೇರೆಯವರ ಹೆಸರಲ್ಲಿ ಮಾಡಿ ಕೊಡಬಾರದು.

... ಈ ಸರ್ಟಿಫಿಕೇಟುಗಳ ಬಗ್ಗೆ ಮಾಡತಕ್ಕ ಅರ್ಜಿಗಳ ನಮೂನೆಗಳು ಯಾವದಾದರೂ ಪೋಸ್ಟ್ ಆಫೀಸಿ... ನಲ್ಲಿ ... ಸಿಗುವವು

(Ture translation.)

M. K. SHAIKH,

Oriental Translator to Government

ಊಹವೃತ್ತ.

ಅಂಕೋಲಾ— ಹವಾಮಾನ ಕೆಟ್ಟಿದ್ದರ ಹೊರತು ವಿಶೇಷ ಹೇಳತಕ್ಕಂಥಾದ್ದೇನೂ ಇಲ್ಲ. ತಾರೀಕು ೧೫-೩-೧೭ ನೇ ದಿವಸ ಮಹರಬ್ಬಾನ ಕಮಿಶನರ ಸಾಹೇಬ ಮ ಕಲೆಕ್ಟರ ಸಾಹೇಬ ಬಹಾದ್ದೂರರವರ ಸ್ವಾರಿಗಳು ಮೋಟಾರಮೇಲಿಂದ ಕಾರವಾರದಿಂದ ಇಲ್ಲಿಗೆ ಒಂದು ಮುನಿಸಿಪಾಲಿಟಿ ಮಾಡತಕ್ಕ ಊರುಗಳ ಹದ್ದುಗಳನ್ನು ನೋಡಿ ಶಾಲೆಗಳ ತಪಾಸಣಿ ಮಾಡಿ ಕೂಡಲೇ ತಿರುಗಿ ಕಾರವಾರಕ್ಕೆ ತೆರಳಿದವು.

ಯುರೋಪ ಮ ಏಶಿಯಾ ಖಂಡದಲ್ಲಿ ನಡೆಯುವ ಯುದ್ಧವು ಮುಂದರಿಸಲಿಕ್ಕೆ ಮ ಬೇಗನೇ ಜಯ ಹೊಂದಲಿಕ್ಕೆ ನಮ್ಮ ಸರಕಾರಕ್ಕೆ ಸಾಲವು ಬೇಕಾಗಿಯೂ ಅದರ ನಿಯಮಗಳನ್ನು ಎಲ್ಲಾ ಜನರಿಗೆ ಪ್ರಸಿದ್ಧಪಡಿಸಿ ಅವರಿಗೆ ಚಲೋ ಸಮ್ಮಜಾತ ಕೊಡುವ ಬಗ್ಗೆಯೂ ಸರಕಾರದಿಂದ ವಿನಂತಿ ಪತ್ರಗಳು ಇಲ್ಲಿಯ ಪ್ರಮುಖ ಜನರಿಗೆ ಬಂದಿರುವವು. ವಾರ್‌ಲೋನಗಳ ನಿಯಮಗಳು ಮ ಬಡ್ಡಿದರ ಸಹ ನೋಡಿದ್ದಲ್ಲಿ ಹಣವುಳ್ಳ ಸಾಲಕೊಡುವ ಸಾವುಕಾರರು ವಾರ್‌ಲೋನ ಕೊಂಡು ಫಾಯದೆ ಆಗುವದಲ್ಲದೆ ಸರಕಾರಕ್ಕೆ ಸಹಾಯಮಾಡಿದಂತೆಯಾದೀತು. ಈ ವಿಷಯ ಪ್ರಮುಖ ಜನರು ಎಚ್ಚರರಾಗಿರುವರು.

ಕುಮಟೆಯಿಂದ ಅಂಕೋಲೆ ವರೆಗೆ ಹಿಂದುಟ್ರಾನ್ಸಪೋರ್ಟ ಕಂಪನಿಯವರು ಟಾಂಗೆಗಳು ಇದೇ ಜೂನ ತಿಂಗಳ ೧ ನೇ ತಾರೀಕಿನಿಂದ ಚಾಲು ಮಾಡುವರಾಗಿ ಕೇಳುತ್ತೇವೆ ಚಾಲು ಆದರೆ ಜನರಿಗೆ ಸೋಯಿ ಆದೀತು.

ಹೊನ್ನಾವರ— ಇಲ್ಲಿ ಯುದ್ಧಸಾಲಿನ ಕುರಿತು ರಾ|| ಸಾ|| ಮಾಮಲೇದಾರ ಮತ್ತು ಸಬ್‌ಜಜ್ಜ ಸಾಹೇಬ ವಗೈರೆರು ಕಮಿಟಿ ಪೋಟಕಮಿಟಿಗಳನ್ನು ಆರಿಸಿ ದಕ್ಷತೆಯಿಂದ ಕೆಲಸ ನಡಿಸಿರುವದರಿಂದ ಇಷ್ಟರಲ್ಲಿಗೆನೇ ೪೧೫೦೦ ರೂಪಾಯಿಗಳ ಆಶ್ವಾಸನಗಳು ಸಿಕ್ಕಿರುವವು ಇದು ಅಧಿಕಾರಿಗಳಿಗೂ ಜನರಿಗೂ ಭೂಷಣಾಸ್ಪದವು. ಮುನ್ಸಿಪಲ್ ಶಾಲೆಯ ಹೆಡ್‌ಮಾಸ್ತರ ಮಿ|| ಗೋಳಿಯವರಿಗೆ ೫ ರೂಪಾಯಿ ಬಡ್ತಿ ಕೊಡಲಿಕ್ಕೆ ಜನರಲ್ ಕಮಿಟಿಯು ಸೂಚಿಸಿದಂತೆ ಸ್ಕೂಲ ಕಮಿಟಿಯು ಶಿಫಾರಸು ಆಗಿ ಎರಡೂ ಕಮಿಟಿಗಳ ಮತಭೇದವು ದೂರವಾಯಿತೆಂದು ಕೇಳಿ ಆನಂದಪಡುತ್ತೇವೆ

ಭಟ್ಕಳ— ಇಲ್ಲಿ ಯುದ್ಧ ಸಾಲಿನ ಕೆಲಸವು ಭರದಿಂದ ಸಾಗಿ ಇಷ್ಟರೊಳಗೆ ೪೧೯೪೦ ರೂಪಾಯಿ ಕೂಡಿರುವವು. ಇದರ ಶ್ರೇಯಸ್ಸು ವರ್ಗವಾಗಿ ಹೋದ ಮಾಮಲೇದಾರ ಮಿ|| ದೇಸಾಯಿರವರಿಗೆ ಕೊಡುವದುಚಿತ. ದೇಸಾಯಿ ಸಾಹೇಬರ ಅತ್ಯುತ್ತಮ ಕೆಲಸವನ್ನು ಅವಲೋಕಿಸಿ ಕಾರವಾರದ ಮಾಮಲೇದಾರರ ಹುದ್ದೆಗೆ ಅವರಿಗೆ ವರ್ಗವಾದ ಕೂಡಲೇ ಅಲ್ಲಿಂದ ಪುನಃ ಶಿರ್ಶಿಗೆ ವರ್ಗವಾಗಿರುವದು ಅವರ ಪಾತ್ರತೆಯೇ ಅವರ ಅಭ್ಯುದಯಕ್ಕೆ ಕಾರಣವಾಗಿದೆ.

ಸೆಕ್ಯುರಿಟಿ ...

ವವು. ಈ ರೀತಿಯಲ್ಲಿ ತೆಗೆದ ಸಿಕ್ಯುರಿಟಿಗಳನ್ನು, ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ್ ಇವರ ಕಾವಲಿನಲ್ಲಿಡಬಹುದು.

೧೭. ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೨೦ ಮತ್ತು ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೨೨, ಇವುಗಳ ಮೇಲಿನ ಬಡ್ಡಿಯ ಮೇಲಿನ ಬಡ್ಡಿಯ ಮೇಲೆ ಪ್ರಾಪ್ತಿಯ ಮೇಲಿನ ಕರವು ವಸೂಲು ಮಾಡ...

(ಮುಂದೆ ಪುರವಣಿ ನೋಡಿರಿ)

Printed & Published by Krishnarao Keshav Shanvi at his Star of Kanara Press Kumta

ಚಂದಾದಾರರಿಗೆ ವಿಜ್ಞಪ್ತಿ.

ನಾವು ನಮ್ಮ ಪತ್ರಿಕೆಯ ಸೇವಾವ್ರತವನ್ನು ಸ್ವೀಕರಿಸಿ ೬ ತಿಂಗಳು ಮುಗಿಯಿತು. ಕಾನಡಾ ಜಿಲ್ಲೆಯಲ್ಲಿ ಮೊದಲಿಗೇನೇ ನಾವು ಕೈಕೊಂಡ ಈ ಅಲ್ಪ ಸಾಹಸ ಕಾರ್ಯಕ್ಕೆ ಸೂಜ್ಞ ಚಂದಾದಾರರು ಉದಾರ ಆಶ್ರಯವನ್ನು ಗೈದು ಮನ್ನಿಸಿದಬಗ್ಗೆ ನಾವು ಆ ಮಹನೀಯರ ಉಪಕಾರವನ್ನು ಸದೈವ ಸ್ಮರಿಸುವೆವು. ಕಾನಡಾದ ನಿವಾಸಿಕರೂ ಹಿತಚಿಂತಕರೂ ಎಲ್ಲಿದ್ದರೂ ತಮ್ಮ ಔದಾರ್ಯವನ್ನು ತಮ್ಮ ದೇಶಪ್ರೀತ್ಯನುಗುಣವಾಗಿ ತಾಳಿ ಹಸ್ತೆ ಪರಹಸ್ತೆ ನಮ್ಮ ಈ ಸತ್ಕಾರ್ಯಕ್ಕೆ ಸಹಾಯವನ್ನು ಮಾಡುವರೆಂದು ನಾವು ತುಂಬಾ ನಂಬಿರುವೆವು. ಒಂದಿಲ್ಲ ಒಂದು ಕಾರಣದಿಂದ ಇನ್ನುವರೆಗೆ ಚಂದಾದಾರರಾಗದಂಥ ಸದ್ಗೃಹಸ್ಥರು ಬೇಗನೇ ಆಶ್ರಯವನ್ನು ಕೊಡುವರಾಗಿ ಕೋರುತ್ತೇವೆ

“ವೃತ್ತಪತ್ರಗಳೆಂದರೆ ಪ್ರಜೆಗಳ ಹಾಲ ಹವಾಲೆಗಳನ್ನು ಸರಕಾರದ ಕಣ್ಣಾರಿಕೆಗೆ ತರುವ ಮುಖ್ಯ ಸಾಧನಗಳು. ಆ ಕರ್ತವ್ಯದೊಡನೆ ಕಾಯಿದೆ ಕಾನೂನುಗಳಿಂದಲೂ ರಾಜ್ಯಧೋರಣ ಮತ್ತು ವ್ಯವಸ್ಥೆಗಳಿಂದ ಜನತೆಯ ಮೇಲೆ ಹಿತಾಹಿತ ಪರಿಣಾಮವು ಹ್ಯಾಗಾಗುತ್ತದೆಂಬದನ್ನು ಸರಕಾರದ ದೃಷ್ಟಿಗೆ ತಂದು ಕೊಡುವದು ಕೂಡ ಪತ್ರಗಳದ್ದೇ ಕೆಲಸವಾಗಿಯದೆ” ಈ ಎಲ್ಲ ಕೆಲಸಗಳನ್ನು ಇಷ್ಟರವರೆಗೆ ಮತ್ತು ಇನ್ನು ಮುಂದ ಹ್ಯಾಗೆ ನಡಿಸಿದೆವು, ಹ್ಯಾಗೆ ನಡಿಸುವೆವು ಎಂಬುದನ್ನು ವಾಚಕರೇ ನಿರ್ಣಯಿಸತಕ್ಕದ್ದು. ವೃತ್ತಪತ್ರದ ಉಪಯುಕ್ತತೆಯಾಗಲಿ ಅವಶ್ಯಕತೆಯಾಗಲಿ ದೇಶಬಂಧುಗಳ ಬೆಂಬಲ ಮತ್ತು ಜನರ ಸ್ವಹಿತದಕ್ಷತೆಯ ಮೇಲೆ ಅವಲಂಬಿಸಿರುವದರಿಂದ ನಮ್ಮ ವಿಜ್ಞಪ್ತಿಯನ್ನು ಎಲ್ಲರೂ ದಯೆದೃಷ್ಟಿಯಿಂದ ಮನ್ನಿಸುವರಾಗಿ ನಾವು ಆಶಿಸುತ್ತೇವೆ. ಒಬ್ಬೊಬ್ಬ ಚಂದಾದಾರನು ಮತ್ತೊಬ್ಬ ಚಂದಾದಾರನನ್ನು ಆರಿಸಿ ಕೊಟ್ಟರೆ ದೇಶ ಹಿತದ ಇಂಥ ಬಡ ಸಾಧನೆಗೆ ಜೀವನವೇ ಕೊಟ್ಟಂತಾಗುವದು

ನಮ್ಮ ಸ್ನೇಹಿತರೂ ಸಹಾಯಕರೂ ಹಿತಕರ್ತರೂ ಎಂತ ತಿಳಿಯುವ ಕೆಲವು ಮಾನ್ಯ ಗೃಹಸ್ಥರಿಗೆ ನಾವು ವ್ಹೀ. ಪಿ. ಗಳನ್ನು ಸ್ವೀಕರಿಸದಿದ್ದರೂ ಸಂಚಿಕೆಗಳನ್ನು ಕಳುಹಿಸುತ್ತಲಿದ್ದೇವೆ. ನಿಯಮಿತ ಸಂಚಿಕೆಗಳನ್ನು ೨-೩ ತಿಂಗಳು ಸ್ವೀಕರಿಸಿ ಕಟ್ಟಕಡೆಗೆ ನಮ್ಮ ವ್ಹಿ. ಪಿಯ ಅನಾದರವು ಕೆಲವರಿಂದ ಹ್ಯಾಗಾಯಿತೆಂಬುದು ಇನ್ನೂ ನಮಗೆ ತಿಳಿಯಲಿಲ್ಲ. ವ್ಹೀ. ಪೀಗಳ ನೋಟಿಸುಗಳನ್ನು ಸ್ವೀಕರಿಸಿ ೮-೧೦ ದಿವಸದಿಂದ ಕೆಲವು ಪತ್ರಗಳು ತಿರುಗಿ ಬಂದವು. ಇಂಥ ದಂಡನೆಯನ್ನು ವಿಧಿಸುವದು ತೀರ ಅನ್ಯಾಯವು. ಇದೆಲ್ಲ ವ್ಯವಹಾರದಲ್ಲಿ ವ್ಯಗ್ರರಾದ ಜನರ ಅನಪೇಕ್ಷಿತ ದುರ್ಲಕ್ಷತೆಯೋ ಎಂದು ನಾವು ತಿಳಿಯುವೆವು. ನಿಜವಾಗಿ ನಮಗೆ ಆಶ್ರಯವನ್ನು ಕೊಡಲಿಕ್ಕೆ ಯಾರು ಇಚ್ಛಿಸುವದಿಲ್ಲವೋ ಅವರು ದಯಮಾಡಿ ಒಂದು ಕಾರ್ಡ ಬರೆದು ಸೂಚಿಸಬಹುದಾಗಿ ನಮ್ಮ ವಿನಂತಿಯದೆ. ಒಟ್ಟಾರೆ ಸೂಜ್ಞ ಬಾಂಧವರ ಬೆಂಬಲವು ನಮಗೆ ತಕ್ಕ ಕಾಲದಲ್ಲಿ ದೊರೆಯದಿದ್ದರೆ ದೀರ್ಘಕಾಲ ಹೊಟ್ಟೆಯಮೇಲೇ ಸಂಬಾಡಿ ಕಾಲು ಹೆಜ್ಜೆಗಳನ್ನಿಡಲಿಕ್ಕೆ ಅನಾವಶ್ಯಕ ಹೊತ್ತುಗಳೆಯಬೇಕಾಗುವದು. ಇಂಥ ಅಸಹಾಯಕ ಸ್ಥಿತಿಯಿಂದ ಕಾಪಾಡುವದು ಚಂದಾದಾರರ ಕೈಯೊಳಗಿನ ಕೆಲಸವು ಅದನ್ನು ಸೂಜ್ಞರು ಅತಿಶಕ್ತಿ ನೆರವೇರಿಸುವರೆಂದು ತುಂಬಾ ನಂಬಿರುವೆವು

ಕಾನಡಾವೃತ್ತ

೪ನೇ ಎಪ್ರಿಲ ೧೯೧೭.

ಪ್ರಾಂತಿಕ ಕಂದಾಯ.

ಮುಂಬಯಿ ಇಲಾಖೆಯ ಜಮಾಖರ್ಚಿನ ಅಂದಾಜ ಪತ್ರಕವು ಕಳೆದ ಮಾರ್ಚ ೧೫ನೇ ದಿವಸ ಕೌನ್ಸಿಲ ಸಭೆಯ ಅಧಿವೇಶನದಲ್ಲಿ ವಾಡಿಕೆಯಂತೆ ಪ್ರಕಟ ಮಾಡಿರುವರು. ೧೯೧೫-೧೬ನೇ ಸಾಲಿನ ಬೆಳೆದ ಉತ್ಪನ್ನ ಮತ್ತು ಕಡಿಮೆಯಾದ ಖರ್ಚು ಇವೆರಡರಿಂದ ಅಂದಾಜಿನಗಿಂತ ೩೩ ಲಕ್ಷ ೩೬ ಸಾವಿರ ಶಿಲುಕು ಏರಿತ್ತು. ಈ ಏರಿದ ಶಿಲುಕಿಗೆ ೧೯೧೬-೧೭ನೇ ಸಾಲಿನ ಬೆಳೆದ ಉತ್ಪನ್ನವು ತಗ್ಗಿದ ವೆಚ್ಚ ಜಮಾಖರ್ಚುಮಾಡಿ ೧೯೧೭-೧೮ನೇ ಸಾಲಿನ ಎಪ್ರಿಲ ತಿಂಗಳ ಪ್ರಾರಂಭಕ್ಕೆ ಈ ಪ್ರಾಂತಿಕ ಸರಕಾರದ ಶಿಲುಕು ೨ ಕೋಟಿ ೪೨ ಲಕ್ಷ ರೂಪಾಯಿಯಾಗುವದೆಂತ ಅಂದಾಜೆಯನ್ನು ಮಾಡಿರುವರು. ಕಳೆದ ೨ ವರ್ಷಗಳು ಯುದ್ಧದ ಪರಿಸ್ಥಿತಿಯಿಂದ ಅಪೂರ್ವವಾಗಿರುವಕಾರಣ ಕಂದಾಯದ ಮಂತ್ರಿಗಳಿಗೆ ಉತ್ಪನ್ನದ ಕಲಮುಗಳನ್ನು ಮುಂಚಿನಂತೆ ತಮ್ಮ ಕುಶಲತೆಯನ್ನೆಲ್ಲ ವೆಚ್ಚ ಮಾಡಿ ನಿರ್ದಿಷ್ಟ ಮಾಡುವದು ಬಹಳೇ ಕಠಿಣವಾದದು ಇಲಕ ಜಮೆಯ ರಕಮುಗಳು ಅಂದಾಜಿಗಿಂತ ಬಹಳೇ ಏರುವ ಕಾರಣವಾಯಿತು. ಇವಲ್ಲದೆ ವಾರ್ಷಿಕ ಉತ್ಪನ್ನವನ್ನು ಬಜೆಟಿನಲ್ಲಿ ತಗ್ಗಿಸಿ ಹಿಡಿಯುವದು ಸರಕಾರಿ ಕಂದಾಯ ಕ್ರಮದಲ್ಲಿ ಒಂದು ಸಾಂಪ್ರದಾಯವೇ ಆಗಿರುವದು. ಈ ಪದ್ಧತಿಯು ದೋಷಾಸ್ಪದವದೆ ಎಂದು ಹೇಳುವದು ತಪ್ಪಾಗಿದ್ದರೂ ನಿಷ್ಕಾರಣ ಹೆಚ್ಚು ಜಮೆಯನ್ನು ತಗ್ಗಿಸುವದರಿಂದ ಮಹತ್ವದ ಕಾರ್ಯಗಳಿಗೆ ಸಾಕಷ್ಟು ವೆಚ್ಚ ಮಾಡಲಿಕ್ಕೆ ಪ್ರತಿಬಂಧಕವಾಗುವದರಿಂದ ಅರ್ಥಶಾಸ್ತ್ರದೃಷ್ಟಿಯಿಂದ ಇದೊಂದು ತಪ್ಪಾಗಿರುತ್ತದೆ. ಯುದ್ಧದ ಪರಿಸ್ಥಿತಿಯಲ್ಲಿ ಕಂದಾಯದ ಮಂತ್ರಿಗಳಮೇಲೆ ಇಂಥ ತಪ್ಪು ಹೊರಿಸುವದು ನ್ಯಾಯ್ಯವಾಗಲಿಕ್ಕಿಲ್ಲ. ಒಟ್ಟಾರೆ ಈ ಪದ್ಧತಿಯ ಪರಿಣಾಮವು ಶಿಲುಕು ಅಂದಾಜೆಗಿಂತ ಬಹಳೇ ಏರಿಸುವದರಲ್ಲಿ ಆದದ್ದು ಕಂಡು ಬರುವದು ಸಹಜವು. ಇದರ ಪ್ರತ್ಯಯವು ಪರಿಷ್ಕೃತ ಸರಕಾರದ ಈಗಿನ ವಾರ್ಷಿಕ ಕಂದಾಯದಲ್ಲಿ ಸಹ ಕಂಡು ಬರುವದು.

ಈಗ ನಮ್ಮ ಇಲಾಖೆಯ ೧೯೧೭-೧೮ನೇ ಸಾಲಿನ ಅಂದಾಜ ಟಿಪ್ಪಣಿಯ ಸ್ಥೂಲ ಸ್ವರೂಪವನ್ನು ನೋಡಲು ಪ್ರಾರಂಭದ ಶಿಲುಕು ೨ ಕೋಟಿ ೪೨ ಲಕ್ಷವಾಗಿದ್ದು ಬರುವ ವರ್ಷದ ಅಂದಾಜು ಉತ್ಪನ್ನ ೮ ಕೋಟಿ ೫ ಲಕ್ಷ ಹಿಡಿದಿರುವದರಿಂದ ಅಂತೂ ೧೦॥ ಕೋಟಿ ಅಜಮಾಸು ಜಮೆಯ ರಕಮು ಮತ್ತು ೭ ಕೋಟಿ ೮೮ ಲಕ್ಷ ಖರ್ಚಿನ ರಕಮು ಟಿಪ್ಪಣಿ ಮಾಡಿರುವರು ಅಂದಮೇಲೆ ಹೊಸ ವರ್ಷದ ಅಂತ್ಯದಲ್ಲಿ ನಮ್ಮ ನಿಕ್ಕಿ ಶಿಲುಕು ೨॥ ಕೋಟಿ ರೂಪಾಯಿಗೆ ಮೀರುವದು. ಹೋದ ವರ್ಷದ ಅನುಭವದಿಂದ ಈ ವರ್ಷಕ್ಕೆ ಉತ್ಪನ್ನವನ್ನು ಸಹ ೪ ಲಕ್ಷಗಳಿಂದ ಏರಿಸಿ ಹಿಡಿದಿರುವರು. ಹೋದ ವರ್ಷದ ಅಂದಾಜಿಗಿಂತ ಏರಿದ ೫೪ ಲಕ್ಷ ಉತ್ಪನ್ನದೊಳಗೆ ಬರೇ ಅಬಕಾರಿ ಖಾತೆಯಿಂದಲೇ ೩೪ ಲಕ್ಷ ಏರಿರುವದು. ಇದರ ಇತ್ಯರ್ಥವು ಸರಕಾರದ ಸಹಾನುಭೂತಿಯಿಂದ ಮದ್ಯಪಾನ ನಿಷೇಧಕ ಸಂಸ್ಥೆಗಳು ಮದ್ಯಪಾನದ ವ್ಯಸನವನ್ನು ತಗ್ಗಿಸುವರೆ ಮಾಡಿದ ಪ್ರಯತ್ನಗಳೆಲ್ಲ ಕೊಂಚ ನಮಗೆ ಸಂತಾಪ ಹೇಳಬೇಕಾಗಿದೆ. ಇರಲಿ. ಈ ಬೆಳೆದ ದುರ್ವ್ಯಸನದ ಉತ್ಪನ್ನದಿಂದ ಶಿಕ್ಷಣವನ್ನು ಬೆಳಿಸಿ ಶಿಕ್ಷಣ ವಿಸ್ತಾರದ ಸಾಧನೆಯಿಂದಲೇ ಅದನ್ನು ತಗ್ಗಿಸಲಿಕ್ಕೆ ಸರಕಾರದವರು ಪ್ರಯತ್ನಿಸುವರೆಂತ ನಾವು ತುಂಬಾ ಕೋರುತ್ತೇವೆ.

ಬರುವ ವರ್ಷದ ಖರ್ಚು ಖಾತೆಯ ರಕಮುಗಳಲ್ಲಿ ಶಾಲಾಖಾತೆಯಕಡೆಗೆ ಆದ ಸರಕಾರದ ಉದಾರ ದೃಷ್ಟಿಯು ಯಾವಾಗಲೂ ಅಭಿನಂದನೆಗೆ ಪಾತ್ರವದೆ. ಶಾಲಾಖಾತೆಗೆಂತ ತೆಗೆದಿಟ್ಟ ಹೆಚ್ಚಿನ ವೆಚ್ಚದ ಮಹತ್ವದ ರಕಮುಗಳು ಯಾವವೆಂದರೆ— (1) ಟ್ರೇಂಡ ಮಾಸ್ತರರ ಪಗಾರ ಬೆಳಿಸುವದು, ೨ ಲಕ್ಷ ೫೦ ಸಾವಿರ ರೂ. (2) ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವದೂ ಹಳೆ ಶಾಲೆಗಳಲ್ಲಿ ಹೆಚ್ಚಿನ ಶಿಕ್ಷಕರನ್ನು ನೇಮಿಸುವದೂ ೨ ಲಕ್ಷ ರೂ. (3) ಮುಂಬಯಿ ಶಹರದ ಪ್ರಾಥಮಿಕ ಶಾಲೆಗಳಿಗೆ ೧ ಲಕ್ಷ ೭ ಸಾವಿರ ರೂ. (4) ಇಲಾಖೆಯೊಳಗಿನ ಶಾಲಾ ಇಮಾರತುಗಳಿಗೆ ಗ್ರೇಂಟ ಮದ್ದತು ೧ ಲಕ್ಷ ರೂಪಾಯಿ. (5) ಮುಸಲ್ಮಾನ ವಿದ್ಯಾರ್ಥಿಯರಿಗೆ ಉತ್ತೇಜನ ೧ ಲಕ್ಷ ೧೮ ಸಾವಿರ ರೂಪಾಯಿ. (6) ಧಾರವಾಡ ಹೊಸ ಕಾಲೇಜಿಗೆ ೩೧ ಸಾವಿರ ರೂಪಾಯಿ. (7) ಪುಣೆ ಟ್ರೇನಿಂಗ ಕಾಲೇಜಿನ ಇಮಾರತಿಗೆ ೩೦ ಸಾವಿರ ರೂಪಾಯಿ. (8) ದಕ್ಷಿಣ ಭಾಗದ ಇನ್‌ಸ್ಪೆಕ್ಟರ, ೬ ಸಾವಿರ. ಇದರ ಹೊರತು ಪರಿಷ್ಕೃತ ಸರಕಾರದಿಂದ ಶಿಕ್ಷಿತ ೮ ಲಕ್ಷ ರೂಪಾಯಿ ಶಿಕ್ಷಣ ಖಾತೆಯ ವೆಚ್ಚಕ್ಕೆ ತೆಗೆದಿಟ್ಟಿರುವರು. ಟ್ರೇಂಡ ಶಿಕ್ಷಕರ ಪಗಾರನ್ನು ಏರಿಸಿ ಹೊಟ್ಟೆಯ ಮೇಲಿನ ಕಷ್ಟ ಹವೆಂಬ ವ್ಯಾಧಿಗಳನ್ನು ತಾಳುವ ಸಹನಶೀಲ ಬಡ ಶಾಲಾ ಮಾಸ್ತರರಿಗೆ ಇದೊಂದು ನ್ಯಾಯವಾದ ಉಪಕಾರ ಮಾಡಿದಂತಾಗುವದು. ಈಗಿನ ಬೇರೆ ರಕಮುಗಳಲ್ಲಿ ಕಾನಡಾ ಜಿಲ್ಲೆಯೊಳಗಿನ ಬಡ ಶಾಲಾ ಮಾಸ್ತರರ ಸುದೈವವು ಫಲಿಸಿದಂತೆ ಹಳ್ಳಿ ಹಳ್ಳಿಗಳಲ್ಲಿ ಹಗಲಿರುಳೂ ದುಡಿಯುವ ಜ್ಞಾನಭೋಗಿಗಳಿಗೂ ಕಳೆದ ವರ್ಷದಂತೆಯೇ ಬಡ್ತಿಯ ವ್ಯವಸ್ಥೆಯು ಮಾಡಲ್ಪಟ್ಟದೆ. ಇದರಿಂದ ಈಗ ಗ್ರಾಮಸ್ತರ ವ್ಯವಹಾರವು ಜನರಿಗೆ ಹೆಚ್ಚು ಸುಖಕರವಾಗುವದು. ಕಾನಡಾ ಜಿಲ್ಲೆಯೊಳಗಿನ ಬೆಟ್ಟದೊಳಗಿಂದ ಇಮಾರತು ಕಟ್ಟಿಗೆ ಮತ್ತು ಇತರೇ ಜಿನಸು ದೂರ ದೂರ ಒಯ್ಯುವರೆ ರಹದಾರಿಯ ಅನುಕೂಲತೆಯನ್ನು ಮಾಡುವರೆ ಸ್ಪೆಶಲ್ ಎಂಜೀನಿಯರರನ್ನು ನೇಮಿಸುವದಕ್ಕಾಗಿ ಜಂಗಲ ಖಾತೆಯ ಲೆಕ್ಕಕ್ಕೆ ೫೦ ಸಾವಿರ ರೂಪಾಯಿಯನ್ನು ಮಂಜೂರ ಮಾಡಿರುವರು.

ಸ್ಫುಟ ಸೂಚನೆಗಳು.

೧. ಕಾನಡಾ ಜಿಲ್ಲೆಯೊಳಗಿನ ಅಲ್ಲಲ್ಲಿ ಮಾತುಕಥೆಯಾಗಿದ್ದ ಸದ್ಯದ ಮಹತ್ವದ ವಿಷಯವು ಯುದ್ಧ ಸಾಲವು. ರಾಜಧಾನಿಯ ಶಹರಗಳಿಂದ ಉಗಮವಾದ ಈ ಚಳವಳಿಯು ದೂರ ದೂರಿನ ಜಿಲ್ಲೆಗಳಲ್ಲಿಯೂ ಬಹು ವೇಗದಿಂದ ಪಸರಿಸಹತ್ತಿದೆಂಬುದು ನೋಡಿ ನಮಗೆ ಆನಂದವಾಗುತ್ತದೆ. ಲಕ್ಷ್ಮೀದೇವಿಯ ಅನುಗ್ರಹವಿದ್ದ ಬೇರೆ ಜಿಲ್ಲೆಗಳು ತಮ್ಮ ರಾಜನಿಷ್ಠೆಗೆ ಅನುಗುಣವಾದ ಔದಾರ್ಯದಿಂದ ದೇಶದ ಮಾನಕ್ಕೆ ಕುಂದು ತರಲಿ

ಕ್ಕಿಲ್ಲೆಂಬುದು ಖಂಡಿತ ಕಾನಡಾ ಜಿಲ್ಲೆಯು ಮಾತ್ರ ಕರ್ತವ್ಯಕ್ಕೆ ಜಾಗ್ರತವಾಗುವದೆಂತ ಏನೂ ಸಂಶಯ ವಿದ್ದಿಲ್ಲಾದರೂ ನಮ್ಮ ರಾಜಭಕ್ತಿಗೆ ಶೋಭಿಸುವಂಥ ಉದಾರತೆಯನ್ನೂ ನಿಷ್ಠೆಯನ್ನೂ ಎಷ್ಟರಮಟ್ಟಿಗೆ ದ ರ್ಶಿಸುವದು ಎಂಬ ಪ್ರಶ್ನೆಯನ್ನು ಉತ್ತರಿಸಲಿಕ್ಕೆ ಕೆ ಲವರು ಹೆದರುತ್ತಿದ್ದರು. ಆದರೆ ಈ ಯುದ್ಧ ಸಾಲದ ಪ್ರಾರಂಭವನ್ನು ನೋಡಲು ಈ ಕರ್ತವ್ಯದ ಸ್ಪರ್ಧೆ ಯಲ್ಲಿ ನಾವು ಎಂದೂ ಹಿಂದುಳಿಯಲಿಕ್ಕಿಲ್ಲವೆಂತ ಅಭಿ ಮಾನ ಪುರಸ್ಸರವಾಗಿ ತಿಳಿಸುವೆವು. ಈ ಸಂಚಿಕೆಯಲ್ಲಿ ಪ್ರಸಿದ್ಧವಾಗಿರುವ ಅಂಕೆಗಳನ್ನು ಪರೀಕ್ಷಿಸಲು ಜಿಲ್ಲೆಯ ಪಲ್ಲಿ ೧೪೪೪೦ ರೂಪಾಯಿ ಸಾಲದ ರಕಮು ಕೂಡುವ ದಿದ್ದರೆ ಕುಮಟೆಯಲ್ಲಿ ೩೭,೦೦೦ ರಕಮು, ಹೊನ್ನಾವ ರದಲ್ಲಿ ೪೧,೫೫೫ ರಕಮು ಇಷ್ಟೊತ್ತಿಗೆ ಕೂಡಿಸಿ ಕೊಡುವದೆ ಧನಿಕರು ಆಶ್ವಾಸಿಸಿರುವರೆಂದು ತಿಳಿದು ಬರುತ್ತದೆ. ಈ ಪ್ರಕಾರ ಊರಊರೊಳಗೆ ನಡೆದ ಮೇಲಾಟವು ಪ್ರಕೃತ ಯುದ್ಧ ಸಾಲದ ಕಾರ್ಯ ವನ್ನು ಕೊನೆಗಾಣಿಸುವದಲ್ಲದೆ ಈ ಮಹಾಯುದ್ಧದಲ್ಲಿ ಬೇಗನೇ ಪ್ರಾಪ್ತವಾಗುವ ಅಪೂರ್ವ ವಿಜಯದ ಇ ದೊಂದು ಪೂರ್ವಚಿನ್ಹವೇ ಎಂತ ಎಲ್ಲರೂ ತಿಳಿಯಬ ಹುದು. ಮುಖ್ಯ ಪ್ರಧಾನರು ಹೇಳಿದಂತೆ ಈ ಸಾಲದ ರೂಪದಿಂದ ಜನರು ಈ ರೂಪಾಯಿಯ ಗುಂಡುಗಳ ನ್ನು ವೈರಿಗಳ ಮೇಲೆ ಹಾರಿಸಲಿ ಅಂದರೆ ಮದ್ದಿನ ಗುಂಡುಗಳಿಗಿಂತ ಪ್ರಖರವಾದ ಪ್ರಭಾವದ [illegible] ಳಿಂದಲೇ ನಿಮಿಷಮಾತ್ರದಲ್ಲಿ ಕೈಸರನ ಕ್ರೂರ ದಂ ಡಾಳುಗಳು ನಾಮಶೇಷವಾಗುವವು

೨. ಫೀಜೀ ಮುಂತಾದ ವಸಾಹತುಗಳಿಗೆ ಹಿಂದು ಸ್ಥಾನದೊಳಗಿಂದ ಕೂಲಿಗಳನ್ನು ಒಯ್ಯುವ ನಿಂದ್ಯ ಕರಾರಪದ್ಧತಿಯು ಹಿಂದುಸ್ಥಾನ ಸರಕಾರದವರ ಡಿಫೆನ್ಸ ಆಫ್ ಇಂಡಿಯಾ ಕಟ್ಟಳೆಯಿಂದ ತಪ್ಪಿಸಲ್ಪ ಟ್ಟಿತೆಂದು ತಿಳಿದು ಕೃತಜ್ಞತೆಯಿಂದ ಸರಕಾರದ ಅಭಿ ನಂದನೆಯನ್ನು ಮಾಡುವಷ್ಟರಲ್ಲಿ ಸಿಲೋನ ಮತ್ತು ಮಲ ಯಾ ನಡುಗಡ್ಡೆ ಇವೆರಡರ ಹೊರತು ಬೇರೆ ವಸಾಹ ತುಗಳಿಗೆ ಕೂಲಿಕಾರರನ್ನು ಕಳಿಸುವದಕ್ಕೆ ಒಯ್ಯುವದು ಈಗ ಪ್ರತಿಬಂಧಕವಾದಂತಾಯಿತು. ಸರಕಾರದ ಜಾ ಹೀರನಾಮೆಯಿಂದ ಹಿಂದುಸ್ಥಾನದ ಇಷ್ಟು ದಿವಸದ ನೈತಿಕ ಲಾಂಛನವು ತೊಳೆದು ಹೋಗಿ ಅಸಹಾ ಯ ಕೂಲಿಗಾರರ ನಿರ್ಭರ್ತ್ಸನೆಯ ಬೀರುಗಳನ್ನು ಬುಡದಲ್ಲೇ ಕಡಿದಂತಾಗಿದೆ ಯುದ್ಧಕಾಲದ ರಾಜ್ಯ ರಕ್ಷಣೆ ಕಾಯಿದೆಯಿಂದ ನಮಗಾದ ಈ ಲಾಭವ ನ್ನು ಜನರು ಎಂದೂ ಮರೆಯರು [illegible] ಪದ್ಧತಿ ಯು ಈಗಿನ ಕಟ್ಟಳೆಯಿಂದ ಮೃತಪ್ರಾಯವಾದರೂ ಯುದ್ಧ ಪರಿಸಮಾಪ್ತಿಯ ನಂತರ ಇದರ ಪುನರುಜ್ಜೀ ವನ ಆದೀತೆಂದು ಶಂಕಿಸುವವರಿಗೆ [illegible] ಸರ್ದರ್ ಥೋರೆಗಳು ಈ ಪದ್ಧತಿಯು ಒಂದಾವರ್ತಿ ನಾ ಶ ಹೊಂದಿದಮೇಲೆ ಪುನಃ ತಲೆಯೆತ್ತುವದು ಅಶಕ್ಯ ಕೋಟಿಯೊಳಗಿನ ಸಂಗತಿಯು ಎಂತ ಎಲ್ಲರೂ ತಿಳಿಯ ತಕ್ಕದ್ದೆಂದು ಅಧಿಕಾರಯುಕ್ತ ಶಬ್ದಗಳಿಂದ ಆಶ್ವಾಸಿ ಸಿರುವರು. ಸರ್ವಾಧಿಕಾರಿಗಳ ಈ ಔದಾರ್ಯದ ಕೃ ತ್ಯದಿಂದ ಅವರ ಕಾರಕೀರ್ದಿಯು ಚಿರಸ್ಮರಣೀಯ ವಾಗುವದು

೩ ಸಿದ್ದಾಪುರದೊಳಗೆ ವ್ಯಾಪನವಾಗಿಳಿದ ಮಾಪ ಣಿಗೆಯ ವಿಷಯವಾಗಿ ಪುನಃ ಚಳವಳಿ ಪ್ರಾರಂಭವಾಗುತ್ತ ದೋ ಏನೋ ಎಂತ ಸಮಾಜ ಸ್ವಪ್ನಗಳು ಬೀಳಹತ್ತಿ ವೆ. ಸ್ವಪ್ನಗಳ ಪ್ರಸ್ತಾಪವು ಜಾಗ್ರತಾವಸ್ಥೆಯಲ್ಲಿ ಏ ನೂ ಕಂಡುಬರುವದಿಲ್ಲ ಅದರಂತೆಯೇ ಈ ಸ್ವಪ್ನದ ಪರಿಣಾಮವಾಗಲೆಂತ ನಾವು ಇಚ್ಛಿಸುವೆವು ಲಿಂಗಾ ಯತರಾಗಲಿ ಬ್ರಾಹ್ಮಣರಾಗಲಿ ಪರಸ್ಪರ ಬಾಂಧವ ರೇ ಯಾವದೇ ರೀತಿಯಿಂದ ಒಬ್ಬರು ಮತ್ತೊಬ್ಬರ ಮನಸ್ಸನ್ನು ನೋಯಿಸುವದು ಎಂದೂ ಯುಕ್ತವಲ್ಲೆಂ ಬುದು ನಿಜವು. ಅದರೂ ಕೇವಲ ಧರ್ಮಾಂಧರಾಗಿ ಯಾರೊಬ್ಬರು ಇತರೇ ಜನರಿಗೆ ಅಸಹ್ಯವಾಗುವಂತೆ ವರ್ತನವನ್ನು ಮಾಡಿದರೆ ವಿಚಾರಶೀಲರು ತಮ್ಮ ತ ಮ್ಮ ಮತಭೇದಗಳನ್ನು ತಾವಾಗಿಯೇ ಚರ್ಚಿಸಿ ನಿ ರಾಕರಣೆ ಮಾಡಿಕೊಳ್ಳುವದು ಉಭಯತರಿಗೂ ಶ್ರೇ ಯಸ್ಕರವು ವೃಥಾ ಕಲಹವನ್ನು ಬೆಳೆಸಿದರಿಂದ ಯಾ ರದೂ ಕಲ್ಯಾಣವಾದದ್ದಿಲ್ಲ ಹಾನಿಯೇ ಆಗಿರುವದು ಇಂಥ ಅಪಾಯಕರ ದಾರಿಯನ್ನು ಸಿದ್ದಾಪುರದೊಳ ಗಿನ ನಮ್ಮ ಲಿಂಗಾಯತ-ಬ್ರಾಹ್ಮಣ ಬಾಂಧವರು ಹಿಡಿಯಲಿಕ್ಕಿಲ್ಲವೆಂತ ನಾವು ನಂಬುತ್ತೇವೆ. ಯುದ್ಧ ದಂಥ ಪರಿಸ್ಥಿತಿಯಲ್ಲಿ ಊರೊಳಗಿನ ಸಾಮಾಜಿಕ ಶಾಂತತೆಯನ್ನು ಭಂಗ ಮಾಡುವದು ರಾಜನಿಷ್ಠ ಪ್ರ ಜೆಗಳಿಗೆ [illegible] ಶಾಂತತೆಯನ್ನು ಸಹ [illegible]

ಯುದ್ಧ ವಾರ್ತೆಯು.

ಈ ಮಹಾಯುದ್ಧದಲ್ಲಿ ಬಹಳೇ ಅದ್ಭುತ ಸಂಗತಿ ಗಳು ಕಂಡುಬಂದವೆ ಇವುಗಳೊಳಗೆ ಯುದ್ಧಶಾಸ್ತ್ರ ಪದ್ಧತಿಯಂತೆ ಸುವ್ಯವಸ್ಥಿತವಾಗಿ ಹಿಮ್ಮೆಟ್ಟುವದೊಂ ದು ಅತರ್ಕ್ಯಕೃತಿಯೇ ಸರಿ ಉಭಯ ಪಕ್ಷದವರೂ ಈ ಸಾಧನೆಯಿಂದ ಸ್ವರಕ್ಷಣೆಯನ್ನು ಮಾಡಿಕೊಳ್ಳಲಿ ಕ್ಕೆ ಹಿಂದೆ ಮುಂದೆ ನೋಡಲಿಲ್ಲ ಈ ಅದ್ಭುತ ಪ್ರಕಾ ರವನ್ನು ಯುದ್ಧಾರಂಭದ ಕಾಲದಲ್ಲಿ ಮೋನ್ಸ ಕಾಳಗ ದಲ್ಲಿ ಮಿತ್ರ ಪಕ್ಷದವರು ಅವಲಂಬಿಸಿ ಮಾರ್ನ ನದಿಯ ವರೆಗೆ ಹಿಂಜರಿದು ಜನರಿಗೆಲ್ಲ ಆಶ್ಚರ್ಯಚಕಿತ ಮಾಡಿ ದ್ದರು. ಇದರ ಪುನರಾವೃತ್ತಿಯನ್ನು ಜರ್ಮನರು ಈಗ ಫ್ರಾನ್ಸದಲ್ಲಿ ಮಾಡಹತ್ತಿರುವರು. ಸೊಮ್ಮೆ ನದಿಯಿಂದ ಪ್ರಾರಂಭಿಸಿದ ಪಲಾಯನವು ೫೦ ಮೈಲು ದೂರವಿರುವ ಸೆ ಕ್ವೆಂಟಿನ ಲ್ಯಾವೋನ [illegible] ಮುಟ್ಟಿದರೂ ತೀರಲಿಲ್ಲ. ಶತ್ರುಗಳು ಸೆಂಟಕ್ವೆಂಟನವನ್ನು ಸಹ ಬಿಟ್ಟು ಹೋಗಿ ಮತ್ತೂ ಹಿಂದೆಸರಿಯುತ್ತಲಿದ್ದಾರೆ. ಕೆಲಕಾ ಲ ತಮ್ಮ ವಿಜಯಗಳಿಂದ ಶತ್ರುಗಳು ಜನರಿಗೆ ಮೋಹಿ ಸಿದಂತೆ ಅವರ ಹಿಮ್ಮೆಟ್ಟಿನಿಂದ ಸಹ ಜನರೊಳಗೆ ತರ್ಕ ದ ಗೊಂದಲವಾಗಿದೆ. ಇದರ ಗೂಢವೇನು ಎಂಬುದು ಇನ್ನೂ ಹೊರಬೀಳುವದದೆ. ಏನಿದ್ದರೂ ಸೊಮ್ಮೆ ನದಿಯ ರಣರಂಗದಲ್ಲಿ ಮಿತ್ರರ ಸಜ್ಜವಾದ ಶಸ್ತ್ರಾಸ್ತ್ರಗ ಳ ಮತ್ತು ತೋಫುಗಳ ಹೊಡತವನ್ನು ತಡೆಯುವದು ಸೈನಾಲಸು ಅಪಜಯದಲ್ಲೇ ಮುಣುಗುವದೆಂದು ನಿ ಶ್ಚಯಿಸಿ ಈ ಪಲಾಯನ ಮಾರ್ಗವನ್ನು ಅವಲಂಬಿಸಿ ದರೆಂಬುದು ನಿಃಸಂದೇಹವು. ಈಗ ಶತ್ರುಗಳ ಕ್ರೂರ ಕೈಯೊಳಗಿಂದ ಮುಕ್ತವಾದ ಫ್ರಾನ್ಸದ ಪ್ರದೇಶದಲ್ಲಿ ಅತ್ತಿತ್ತ ದೃಷ್ಟಿಯನ್ನು ಸಾರಿದರೆ ಕಳೆದ ೨ ವರ್ಷ ಇಡೀ ಊರಲ್ಲೆಲ್ಲ ಅಂತಕನ ಸಾಮ್ರಾಜ್ಯವೇ ನಡೆದಿತ್ತು ಎಂತ ಕಂಡುಬಂದದೆ. ಶತ್ರುಗಳ ಅಮಾನುಷ ಕ್ರೂರ ತೆಯಿಂದ ಫ್ರಾನ್ಸದ ಈ ಭಾಗವು ಉದ್ಧ್ವಸ್ತವಾಗಿರುವ ದು ಇದಲ್ಲದೆ ಈಶ ಇಚ್ಛೆಯಿಂದ ಮಿತ್ರಪಕ್ಷದವರ ಸಾ ದನ ಸಾಮಗ್ರಿಗಳು ಪರಿಪೂರ್ಣವಾಗಿ ಬೇಗನೇ ಶತ್ರು ಗಳಿಗೆ ಪ್ರಾಯಶ್ಚಿತ್ತವು ತಿಗುವದೆಂದು ಭಾವಿಸಲು ಪ್ರ ತ್ಯವಾಯವಿಲ್ಲ. ಒಟ್ಟಾರೆ ೨೦೦ ಚದರ ಮೈಲು ಫ್ರೆಂ ಚ ಪ್ರದೇಶವನ್ನೂ ೨೦೦ ಗ್ರಾಮಗಳನ್ನೂ ೧೦,೦೦೦ ನಿವಾಸಿಕರನ್ನೂ, ಮಿತ್ರರು ಬಿಡಿಸಿಕೊಂಡಿರುವರು ಇ ದೇನು ಅಲ್ಪ ಫಲಪ್ರಾಪ್ತಿಯಲ್ಲ

ಮೆಸೊಪೊಟೇಮಿಯಾದೊಳಗಿನ ಬ್ರಿಟಿಷರು ಬಗ ದಾದ ಪಟ್ಟಣವನ್ನು ಕೈವಶಮಾಡಿಕೊಂಡು ಮಹತ್ವಾ ದ ವಿಜಯವನ್ನು ಹೊಂದಿದರು. ತುರುಕರು ಎದೆಗುಂ ದಿ ನಿರಾಶ್ರಿತರಾದಂತೆ ಅತ್ತಿತ್ತ ಓಡಹತ್ತಿರುವರು. ಬ್ರಿಟಿ ಷರ ಪ್ರಗತಿಯು ತಡೆಯದೆ ಮುಂದರಿದು ರಷ್ಯನರ ಸಾ ನ್ಯಗಳ ೩೦ ಮೈಲು ಅಂತರದೊಳಗೆ ಮುಟ್ಟಿರುವದು ಒಂದುಕಡೆ ಬ್ರಿಟಿಷರು ಮತ್ತೊಂದುಕಡೆ ರಷ್ಯನರು ಅಪ್ಪಳಿಸಹತ್ತಿರುವದರಿಂದ ತುರುಕರಿಗೆ ಇರಾಣದ ಗು ಡ್ಡಗಾಡು ಪ್ರದೇಶಗಳಲ್ಲಿ ಯಥಾವಕಾಶ ಪಲಾಯ ನವನ್ನು ಒದಗಿಸಬೇಕಾಗಿದೆ

ताईताच्या सर्वोत्कृष्ट गुणा बद्दल गेल्या ४ महिन्यातच निरनिराळी सिक्कें रोख २५० रुपयांचीं बक्षिसें मिळालीं आहेत.

इच्छित फल देणारा जगप्रसिद्ध

॥ यथा नाम] **कामधेनू ताईत** [तथा गुणाः ॥

आतां काळजी करण्याची जरूरच उरली नाही. कारण तुमचे ह्मणणे हेच ना? शरीरास सौख्य व्हावे, संतती व्हावी, कर्जमुक्त व्हावे, परिक्षा पास व्हावी, नोकरी लागावी, पगार ज्यास्त वाढावा, व्यापारांत पुष्कळ फायदा व्हावा, जमीनीत पुष्कळ पीक व्हावे, घरांमध्यें तंटाहोऊनये, शत्रू उत्पन्न होऊनयेत, कज्जाचा निकाल आपल्या सारखा व्हावा, ग्रह पीडा होऊ नये, कोणतीही बाधा असूनये. सुरू केलेला उद्योग निर्विघ्नपणें पार पडावा, इत्यादी मनांतील सर्व गोष्टी आपल्या इच्छे प्रमाणें व्हाव्यात असे वाटत असल्यास आमचा जगप्रसिद्ध "कामधेनू ताईत" नेहमी जवळ ठेवा. ह्मणजे सर्व गोष्टी आपल्या मनाप्रमाणें होतील अनुभवांती खात्री होईलच ताईत १ किंमत फक्त २ रु ट. ख नि [illegible] २ ताईत ट ख माफ व एकदम ४ ताईत. घेणारास १ ज्यास्त मिळेल ट. ख. नि.

पत्ता — प्रसिद्ध मांत्रिक गणेश सखाराम शास्त्री,

(के. एन्) मु० पो० संकेश्वर. जि बेळगांव.

Printed & Published by Krishnarao Keshav Senvi at his Star of Kanara Press, Kumta

THE

KANARA NEWS.

ಕಾನಡಾ ವೃತ್ತ.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು

ರೂಪಾಯಿ 1-0-0.

ಅಂಚೆವೆಚ್ಚ ಶೇರಿ

ರೂಪಾಯಿ 1-6-6.

ಒಂದು ಸಂಚಿಕೆಗೆ 0-0-9.

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ್ ಪ್ಯಾಕಾ ಟ್ಯಾಪಿನ (೧೫ ಎಮ್‌ಉದ್ದ) ೮ ಸಾಲುಗಳ ವರೆಗೆ ರೂ. 1-0-0. ಅನಂತ ಪ್ರತಿ ಸಾಲಿಗೆ 0-2-0 ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

Registered No. B. 127(

सत्यं ब्रूयात्प्रियं ब्रूयान्नब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ANGLO-VERNACULAR FORTNIGHTLY.

वर्ष १ लें] कुमटा- कानडावृत्त बुधवार, तारीख १८ माहे एप्रिल सन १९१७ इसवी. [अंक १४ वा

[illegible]

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಕಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಚ್ಛ, ಮೂತ್ರಕೋಶ, ಅನ್ನಕೋಶ, ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ ಶೀಸೆ 1 ಕ್ಕೆ 0-6-0. ವಿ. ಪಿ. ಬೇರೆ.
ಡಜನ್ ಶೀಸೆಗಳಿಗೆ ರೂ 4-0-0. ವಿ. ಪಿ. ಸಹಿತ.
ವಿಳಾಸ.- ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ,
ಮಂಗಳೂರು.

मागणी करा.

हीच वेळ आहे.

आज सर्वत्र ठिकाणीं शाईपुड्या संबंधानें दुर्मीळता आणि विशेष महागाई असतां आम्ही काळीभोरशाईच्या पुड्या शेंकडा १। रुपया भावानें आणि उत्तम निळिकाळीशाईच्या पुड्या शेंकडा १ रुपया भावानें देत आहोंत. ट. खर्च शिवाय पडेल. तरी गरजुग्राहकांनीं ही वेळ लक्षांत आणुन आपला फायदा करून घ्यावा.

पत्ता- वीरकर आणि विद्यार्थी मंडळी शाईचा कारखाना, पोष्ट-सिन्नर, जिल्हा नाशीक.

War Loan Figures.

Sirsi Division

	Promised amount	Amount paid
Kumta Town	32,085	
Chitragi	650	
Dhareshwar	201-8	
Urkeri	1,728-4	
Murur	141-4	
Antravalli	500	
Mirjan	3,015-8	
Bargi	2,396	
Hiregutti	2,000	
Bankikodla	8,350	
Gokarn	5,000	
Gonehalli	1,100	
Baad	10,255	
Total	67,422-8	11.287 12
Honavar Town	43,830	
Abkari Contractors	2,710	
Haldipur	3,845	
Salkod	2,690.	
Idgunji	5,700	
Mavinkurve	740	
Allanki	4,770	
Chandavar	500	
Total	64,785	3,150-0
Sirsi Town	27,088-8	
Sirsi Range	8,931-12	
Banvasi	15-8	
Islur	177-8	
Hulekal	1,247-4	
Sampkhand	3,312-4	
Hegdekatta	400-12	
Total	41,203-8	911-12
Bhatkal	9,606-0	
Shirali	6,049-0	
Murdeshwar	7,633-8	
Marukeri	1,781-0	
Konar	2,311-4	
Govt. servants	2,575-12	
Excise Licensees	2,093-8	
Total	32,050-0	147-4
Siddapur	12,000	
Harshikatta	8,000	
Bilgi	.5,900	
Kodkani	5,200	
Total	31,100	4,247-0
Grand Total	2,36,561	19,748-12

The highest individual promises recorded up to date are as follows:-

Mr. Dharnappa P. Alur Sirsi 6,000
Rao Saheb P. Pandit, Sirsi 5,000
Mr. S. V. Harite
Bankikodla Kumta, 5,000

STATEMENT SHOWING THE AMOUNT OF WAR LOANS PROMISED AND ACTUALLY SUBSCRIBED TILL 7th APRIL 1917.

Taluka or Petha.	Total amount promised.	Amount actually invested.
Karwar	41,847-8	400-0
Ankola	34,326-0	...
Kumta	67,422-8	10,237-12
Honavar	61,865-0	1,600-0
Bhatkal	32,050-0	147-4
Siddapur	31,100-0	4,247-0
Sirsi	41,203-8	911-12
Yellapur	12,500-0	2,190-0
Mundgod	7,000-0	290-8
Haliyal	2,643-0	1,224-12
Supa Mahal	2,000-0	...
Bilkai „	30-0	...
Dandeli „	160-0	...
Kulgi „	7-12	7-12
Total	3,34,155-4	21,256-12

A Manual of Hindu Ethics
BY
G A Chandavarkar with an introduction by Prof Rama Deva B A M R A S It is an excellent book in 17 chapters treating of the sublime teachings of the Hindu Scriptures
Price annas ten only
For copies apply to
G A Chandavarkar
118 Residency Bazaars
Hyderabad (Deccan)

Kanara's War Loan.

Our offensive

By J T Lawrence Esq M A I C S

Kumta, Honavar and Bhatkal have all done splendidly Sirsi has made substantial progress The wealthy gentlemen of Siddapur Taluka are still thinking If patriots think, they can only come to one conclusion

Kanara's offensive is progressing In modern warfare the artillery first set to work & demolish the enemy's defences That done, the infantry advance to the attack When the infantry are within reach of their objective the artillery increase the range of their fire

The results recorded up to date in Kanara's great offensive against the enemy warrant a change of range At certain points in the attack great courage and energy has been shown The first objective is so nearly within reach that we must prepare for a further advance as follows –

Honavar	90 000
Kumta	1 00 000
Bhatkal	40 000

For the present Sirsi & Siddapur must concentrate upon their first objective

Sirsi	80 000
Siddapur	60 000

It is quite clear from results up to date that the people of the Sub division will invest 4 lakhs in War Loan Until we are all dead beat—and we have not nearly reached that stage yet it cannot be said that the people of Kanara have done their utmost

The aggregate result depends upon the ability of Sirsi and Siddapur to come into line with the other parts of the Sub Division I have not the slightest doubt they will do so vide their magnificent response to the War Fund Appeal) & demonstrate to loyal solidarity of the Sub Division

Keep it up!

News has just been received that at the end of March Kanara District led the Southern Division as regards response to the War Loan Appeal Sirsi Sub Division takes the larger share of [illegible] our Doubtless many of the richer districts will outstrip us before the race is finished But we may be proud of the fact that we were so prompt [illegible] our loyalty and set the pace Let every one see to it that our record remains honourable throughout the campaign

Aim at 6 lakhs for the Sub Division It can be done if each of us does our share [illegible] Sirsi Taluka is slow All other parts of the Sub-Division [illegible] made substantial progress during the week

THE KANARA NEWS
18th April 1917

"Act act in the living Present
Heart within and God overhead"

Necessity of Piers.

It is admitted on all hands that the existence of piers at all sea ports where steamers call, affords convenience & comfort to the travelling public and commerce It has been a standing complaint from a long time that several sea ports on the western coast are not provided with convenient piers This has been very keenly felt in the case of some of the ports of Ratnagiri & Kanara Districts So far as North Kanara is concerned there are no piers or even some convenient landing arrangement in the ports of Kumta Tadri and Bhatkal This state of things has been causing a good deal of hardship and inconvenience to the travelling public and trade Tadri as is well known is a port of some importance by reason of the salt and timber trade and the Maha Shivaratri festival of Gokarn close by But, as it is, the place is quite exposed to the westerly winds and currents There being no pier there the travelling people and traders are put to great inconvenience discomfort and trouble The same has been the case with Kumta too which is still a place of some commercial importance At one time, an attempt was made to have some patch work pier in the port but unfortunately that pier rickety as it was was washed away leaving the public in as discomfortable a situation as before The hardship to which women passengers are put is simply unsightly Thanks however to the poor fisher boys who perhaps out of pity for women class, ply their fishing boats between the passenger boats and the shore and save them from the situation Hence it is clear that these ports at any rate do stand in need of strongly built piers for the convenience of the travelling public & trade Bhatkal may for the present be let alone as we see that the fortunes of the place are likely to take an unexpected happy turn by reason of the Mysore State's intervention

Now as to Kumta and Tadri not to speak of other ports some practical scheme must be launched to provide them with piers It will be unjust & unfair to suggest that some agency should bear the entire cost We learn that already many schemes have been afloat & many suggestions are put forth We think however that every individual & association of individuals more or less connected with the traffic must be moved to bear the share of the estimated expenditure and thus co-operate in the scheme The bodies that may well be approached to participate

in the scheme are, in our opinion, the *following* — (1) The local Mu nicipalities (2) The Local Boards (3) The Steamer company (4) The Customs Department & (5) The travelling public Each of these must be taxed fairly In the case of the last something like a paltry poll tax or head tax, say at the rate of one anna per head must be levied and charged on the out-going tickets at each port. The money *for the present may* be advanced by one or more of the bodies concerned that can afford to do so & the build ing of the piers must be an actuality and in the mean while the collection must go on until the amount actually spent is realised from all sources taken together This scheme practi cal and feasible as it is, deserves to be considered from all its stand points and brought within practical politics at an early date in the interest of local trade steamer service, & travelling public We trust that our leaders & constituted bodies will take up the question for their mature consideration & perfect the scheme after discussing its pros & cons fully

The Tanga Service.

It is a happy thing to see that two companies *of tanga service* have entered into a competition of run ning tanga twice a day between Kumta, Honavar and Bhatkal The competition has become so much the keener that it is feared it is almost on the brink of becoming unhealthy No doubt the fares have gone down by reason of this competition, but that not without inconvenience, dis comfort and risk As a consequence of this, the passenger *traffic* is more than doubled Passengers are huddl- ed up together in a large number, say, even ten or more to occupy even an inch of space in the rickety tangas. The poor animals are made to bend down under the heavy burden & thus the tanga goes on trundling It is really a ghastly sight to see the poor animal dragging on an over load ed tanga along the dusty road A *passer by cannot but feel the necessi* ty of calling in the help of 'the Public Conveyance Act and the Prevention of Cruelty to Animals Act," if possi ble We invite the attention of the authorities that be to interfere in the interest of public health & safety & see that the unsightly John Gilpinian race run by the companies is regulated by some rules of discipline We invite the attention of the Public Works authorities also to the miser able condition of the seashore road between Kumta and Honavar & also Bhatkal which has been already dusty and fragile & has of late been undergoing a good deal of unusual wear & tear on account of the tug of war between the two companies The road is not only dusty & feeble but is also extremely narrow & as such prevents two carts from crossing each other with ease The culverts & drains too are not in good order All this certainly requires prompt attention & deserves to be kept in con stant repairs to be equal to the heavy strain brought to bear upon it every day by the keen competition

RANDOM THOUGHTS

The War Loan

It is most gratifying to note how India has been prompt enough to respond to the spirit stirring appeal made on behalf of the Victory Loan The figures reported show that by this time a little less than 12 crores have been contributed by all the parts of India Bombay of course taking the lead & heading the list The late- st figures to hand show that even poor benighted Kanara has not lagged behind It is with genuine pride we say that in point of contributions up till now our *District* leads the Southern Division We hope that our District will still exert itself to occupy a still higher position by reason of its contributions Poor Kanara then will find that she will by no means be neglected and uncared for

The Easter Conferences

This time among the *several* Conferences, there was one at Alibag — the united G S, B Conference. The President was Rao Bahadur Wagle of Indore They say the Presidential speech laying more stress upon *deeds* than on *words* was a masterly one. We are glad to note that the conference is still trying to educate the public minds, although we are sorry to record that its practical achievements have been very little, at least in the matter of welding up of the sub- sections in the true sense and hav ing intermarriages by shoals Many real well wishers of the cause still grumble that perhaps the game is not worth the candle It behoves the leaders to look to wider diffu sion of the right sort of education and creation of a true sentiment of consanguinity among the several sections & sub-sections of the com munity, before *any thing else* In fact the conference must be more of an educational type than a social one at this stage

The War Situation

Fresh troubles appear to be brewing in Greece America's deci sion to enter the war is hailed with joy by the entire Empire War between Cuba & Germany is resolv ed upon There is rupture between America & Austria Bulgaria has severed relations with the United States There is a great Anti German feeling in Latin America Thus the greatest crisis in the world's history has arrived Perhaps no past has shown & no future will show the like. The enemy is being continually harassed & is retreating All this augurs well for us and our Allies Our success is guaranteed & we believe we are within its sight

CORRESPONDENCE

S V K (Honawar)—

We hold over your Comments on 'Nautch Parties" for the next issue Edito

ಕಾನಡಾ ವೃತ್ತ.

ಹಿಂದಿ ಪ್ರಯೋಗಸ ಪೋದರು

ಕಳೆದ ವಿದ್ಯಾದಶಮಿಯಿಂದ ಪ್ರಕಟಿಸಲ್ಪಡುವ ಇಂಗ್ರೇಜಿ ಕನ್ನಡ ಸಾಪ್ತಾಹಿಕ ಪತ್ರಿಕೆಯು ಉತ್ತರ ಕನ್ನಡದಲ್ಲಿ ಇದೊಂದರ ಹೊರತು ಬೇರೆ ಸಾಪ್ತಾಹಿಕ ಪತ್ರಗಳು ಇರವು

ವಾರ್ಷಿಕ ವರ್ಗಣಿ:— ರೂ ೧ ೦ ೦

ಅಂಚೆವೆಚ್ಚ ಸಹಿತ.— " ೧ ೬ ೬

ಇದರಲ್ಲಿ ರಾಜಕೀಯ ಸಾಮಾಜಿಕ, ವ್ಯಾಪಾರ ವಿಷಯಕ ವಿಚಾರಪರಿಪೂರ್ಣ ಲೇಖಗಳೂ ಈಗಿನ ಮಹಾ ಯುದ್ಧದ ವಾರ್ತೆಯೂ ಎಲ್ಲರಿಗೂ ಬೋಧಪ್ರದ ರಂಜಕವಾಗುವಂತೆ ಬರೆಯಲ್ಪಡುತ್ತಿವೆ. ಉತ್ತರ ಕನ್ನಡದ ಸರ್ವಾಂಗ ಸುಧಾರಣೆಯೇ ಇದರ ಧ್ಯೇಯವು. ಅಲ್ಪ ಕಾಲದಲ್ಲಿ ಜನರ ಪ್ರೀತಿಗೆ ಪಾತ್ರವಾದ ಇದೊಂದು ಪತ್ರಿಕೆಯು.

ತ್ವರೆ ಮಾಡಿರಿ, ಮತ್ತು ಚಂದಾದಾರರಾಗಿರಿ.

ವ್ಯಾಪಾರಗಳ ಜಾಹೀರಾತು— ಸೋವಿಸು ದರದಿಂದ ಕಾದವುಗಳನ್ನು ಪ್ರಕಟಿಸುವರೆ ಇದೊಂದು ಉಪಯುಕ್ತ ಸಾಧನವು ವ್ಯಾಪಾರಿಗಳು ಇದರ ಪ್ರಯೋಜನವನ್ನು ತಕ್ಕೊಂಡರೆ ನಫೆಹೊಂದುವರು

ಪತ್ರ—ಕಾನಡಾ ವೃತ್ತ ಆಫೀಸ

ಕುಮಟಾ

ಕಾನಡಾವೃತ್ತ

೧೮ನೇ ಎಪ್ರಿಲ ೧೯೧೭

ಕಾನಡಾ ಜಿಲ್ಲೆಯ ಶಿಕ್ಷಣ.

ಸದ್ಯಕ್ಕೆ ಹಿಂದುಸ್ಥಾನದೊಳಗೆ ಪ್ರಚಲಿತವಾದ ಮಹತ್ವದ ವಿಷಯವು ಶಿಕ್ಷಣವು. ಬ್ರಿಟಿಷ ಸಾಮ್ರಾಜ್ಯದಲ್ಲಾಗಲಿ ಸುಧಾರಿಸಿದ ಬೇರೆ ಜನಾಂಗಗಳಲ್ಲಾಗಲಿ ಶಿಕ್ಷಣದಲ್ಲಿ ಹಿಂದುಸ್ಥಾನದ ಜನರಷ್ಟು ಹಿಂದುಳಿದ ಜನರು ಯಾರೂ ಇಲ್ಲವೆಂಬ ಸಂಗತಿಯು ಸುವಿಶ್ರುತವದೆ. ಎತ್ತ ನೋಡಿದರೂ ಅತ್ತ ಹಿಂದುಸ್ಥಾನದಲ್ಲಿ ನಿರಕ್ಷರತೆ ಕಲ್ಲಪ್ಪನು ಪ್ರಬಲನಾಗಿರುವನು. ನಮ್ಮ ಔದ್ಯೋಗಿಕವಾಗಲಿ ಕೃಷಿ ಸಂಬಂಧದಾಗಲಿ ಪ್ರಗತಿಯನ್ನು ಮಾಡಲಿಚ್ಛಿಸಿದರೆ ಈ ಕಲ್ಲಪ್ಪನ ಮುಂದೆ ಏನೂ ಕಾಟ ಸಾಗದೆ ಸರಕಾರದ ಮತ್ತು ಶಿಕ್ಷಿತ ಜನರ ಪ್ರಯತ್ನಗಳೆಲ್ಲ ಬಹುಷಃ ನಿಷ್ಫಲವಾಗತಕ್ಕಾಗುತ್ತವೆ ಈ ಕಲ್ಲಪ್ಪನನ್ನು ಸೋಲಿಸಿ ನಮ್ಮ ನಿರಕ್ಷರತೆಯನ್ನು ಹೋಗಲಾಡಿಸುವರ ಜನರ ಪ್ರತಿನಿಧಿಗಳು ಪ್ರಾಂತಿಕ ಮತ್ತು ವರಿಷ್ಠ ನ್ಯಾಯವಿಧಾಯಕ ಸಭೆಗಳಲ್ಲಿ ಅವರವರ ಶಕ್ತ್ಯನುಸಾರ ತೀರುತರಾಗಿ ಪ್ರಯತ್ನಿಸುತ್ತಿರುವರ ಇಂದಿಲ್ಲ ನಾಳೆಯಾದರೂ ಇವರ ಪ್ರಯತ್ನಗಳು ಕೊನೆಗಾಣದೆ ಇರವು ಎಂತ ನಾವು ದೃಢವಾಗಿ ನಂಬಿರುವೆವು ಇರಲಿ ಪ್ರಕೃತ ನಮ್ಮ ಜಿಲ್ಲೆಯ ಶಿಕ್ಷಣದ ಪ್ರಮಾಣವು ಹ್ಯಾಗಿದೆ ಶಿಕ್ಷಣ ಪ್ರಸಾರದ ಮೇಲಾಟದಲ್ಲಿ ನಮ್ಮ ಪ್ರಗತಿಯು ಎಷ್ಟು ಆದೆ ಎಂತ ಈ ಹೊತ್ತು ಚರ್ಚಿಸಲಿಚ್ಛಿಸುವೆವು

ಸರಾಸರಿ ನಾಲ್ಕು ಸಾವಿರ ಚದರ ಮೈಲು ವಿಸ್ತಾರವುಳ್ಳ ಕಾನಡಾ ಜಿಲ್ಲೆಯೊಳಗೆ ೩೨೩ ಶಾಲೆಗಳಿದ್ದು ೧೯೧೯ ಹುಡುಗರು ವಿದ್ಯಾರ್ಥಿಗಳಾಗಿರುವರು. ಲೋಕವಸತಿಯುಳ್ಳ ೧೨೮೯ ಹಳ್ಳಿಗಳೊಳಗೆ ೧೬೯ ಹಳ್ಳಿಗಳಲ್ಲಿ ಮಾತ್ರ ಶಾಲೆಗಳಿದ್ದು ಉಳಿದ ೧೦೫೦ ಹಳ್ಳಿಗಳಲ್ಲಿ ಇನ್ನೂ ಶಾಲೆಗಳನ್ನು ಸ್ಥಾಪಿಸುವದಿದೆ. ಜನಸಂಖ್ಯೆಯ ಮಾನದಿಂದ ನೋಡಿದರೆ ಮಾತ್ರ ಬೆಳಗಾಂವ ವಿಜಾಪುರ ಜಿಲ್ಲೆಗಳಿಗಿಂತ ನಾವು ಮುಂದೆ ಸಾಗಿರುವೆವು. ರತ್ನಾಗಿರಿಗಿಂತ ೨ ಪಟ್ಟು ಪ್ರಗತಿಯು ನಮ್ಮದಾಗಿರುತ್ತದೆಂತ ಹೇಳಲು ಅಡ್ಡಿಯಿಲ್ಲ. ದಾರವಾಡವು ಮಾತ್ರ ನಮ್ಮ ದಕ್ಷಿಣ ಭಾಗದಲ್ಲಿ ಒಟ್ಟು ಮುಂದರಿದಿರುವದು. ಜನಸಂಖ್ಯೆಯ ಶೇಕಡಾ ೪.೦೨ ವಿದ್ಯಾರ್ಥಿಗಳು ನಮ್ಮಲ್ಲಿದ್ದರೆ, ರತ್ನಾಗಿರಿಯ ಸರಾಸರಿಯು ೨.೭ಕ್ಕೆ ಮೀರುವದಿಲ್ಲ. ದಾರವಾಡ ಜಿಲ್ಲೆಯ ಶಿಕ್ಷಣ ಮಾತ್ರ ೪ ರಷ್ಟು ಬೆಳೆದಿದೆ. ಒದರೆ ಇಡೀ ಮುಂಬಯಿ ಇಲಾಖೆಯಲ್ಲಿ ಬರೋದೆ ಕೆಂಪದ ಶೇಕಡಾ ಸರಾಸರಿ ೧೪.೮ರಷ್ಟು ವೃದ್ಧಿಯಾಗಿದ್ದು ಬ್ರಿಟಿಷ ಹದ್ದಿನೊಳಗಿನ ಜಿಲ್ಲೆಗಳಲ್ಲಿ ಒಟ್ಟೋದ ೬.೯ ಪರಮಾವಧಿಯನ್ನೂ ನಾವಿದೆ. ನಮ್ಮ ಇಡೀ ದಕ್ಷಿಣಭಾಗದ ಸರಾಸರಿಯು ಶೇಕಡಾ ೩.೪ ಇದ್ದು, ಶಿಕ್ಷಣದಲ್ಲಿ ನಿಕೃಷ್ಟವಾಗಿರುವ ಸಿಂಧ ಪ್ರಾಂತದ ತುಲನೆಗೆ ನಮ್ಮ ಪ್ರಾಂತವು ಮಾತ್ರ ಹೋಲುತ್ತದೆ. ಏಡನ ದ್ವೀಪದಷ್ಟು ಸಹ ನಮ್ಮ ಪ್ರಗತಿಯು ಇಲ್ಲ

ಈ ಎಲ್ಲ ಮೂಕ ಸಂಖ್ಯೆಗಳನ್ನು ಮಾತಾಡಿಸಿದರೆ ನಮ್ಮ ಶಿಕ್ಷಣದ ಇತಿಹಾಸವು ತಿಳಿದುಬರುವದು. ಉಚ್ಚ ಶಿಕ್ಷಣದ ೧೦ ಇಂಗ್ರೇಜಿ ಶಾಲೆಗಳಲ್ಲಿ ಬರೇ ೩ ಹ್ಯಾಸ್ಕೂಲುಗಳಾಗಿರುವವು ಬಂಜೆಗೆ ಮಕ್ಕಳಾದಂತೆ ಇಡೀ ದಕ್ಷಿಣಭಾಗಕ್ಕೆ ಈಗ ಮಾತ್ರ ೧ ಇಂಗ್ರೇಜಿ ಕೊಲೇಜು ಸಿಗುವದಿದ್ದಾಗ, ಕಾನಡಾ ಜಿಲ್ಲೆಗೇ ಸ್ವತಂತ್ರ ಕೊಲೇಜಿನ ಲಾಭವಾಗುವ ಮಾತು ಭವಿಷ್ಯ ಪುರಾಣದೊಳಗಿದ್ದರೆ ಏನೋ! ನಾವು ಅರಿಯೆವು. ಔದ್ಯೋಗಿಕ ಶಿಕ್ಷಣದ ವಾರ್ತೆಯು ನಮ್ಮಲ್ಲಿ ಇಲ್ಲೇ ಇಲ್ಲ. ನಮ್ಮ ಜಿಲ್ಲೆಯ ಮುಖ್ಯ ವ್ಯವಸಾಯವಾಗಿರುವ ಬೇಸಾಯತನದ ವಿಷಯವಾಗಿ ಹೇಳಬೇಕಾದರೆ, ಅದರ ಪ್ರಯೋಗ ಶಾಲೆಯಾಗಲಿ ಶಿಕ್ಷಣಸಂಸ್ಥೆಯಾಗಲಿ ಇನ್ನೂ ನಿರ್ಮಿಸುವದೇ ಇದೆ. ನಮ್ಮ ಪ್ರಾಥಮಿಕ ಶಿಕ್ಷಣದ ಸ್ಥಿತಿಯು ನೋಡಿದರೆ ನಮ್ಮಲ್ಲಿ ೨೨೩ ಲೋಕಲ ಬೋರ್ಡ, ೨೮ ಮುನ್ಸಿಪಲ್ ೩೦ ಇತರೆ ಶಾಲೆಗಳು ಕೂಡಿ ೨೮೫ ಶಾಲೆಗಳಿರುವವು. ಇವುಗಳಲ್ಲಿ ೧೩೯೯೨ ವಿದ್ಯಾರ್ಥಿಗಳು ಕಲಿಯುತ್ತಿರುವರು. ಇದರ ಹೊರತು ೨೧ ಹುಡುಗಿಯರ ಶಾಲೆಗಳಿದ್ದು ಅವುಗಳಲ್ಲಿ ೧೩೬೨ ವಿದ್ಯಾರ್ಥಿನಿಗಳಾಗಿರುವರು. ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ೧ ಹುಡುಗನ ಶಿಕ್ಷಣಕ್ಕ ಅರೂ ೧೩೮ ಒಪ್ಪೈ ವಾರ್ಷಿಕ ವೆಚ್ಚವಾಗುತ್ತಿದ್ದು ಹುಡುಗಿಯರಿಗೆ ಇದಕ್ಕಿಂತ ರೂ ೧ ೧೨ ೫ ಕಡಿಮೆ ಬೀಳುತ್ತದೆ. ಹುಡುಗರ ಶಿಕ್ಷಣಕ್ಕೆ ೧ ಲಕ್ಷ ೨೦ ಸಾವಿರ ಚಿಲ್ಲರೆ ವೆಚ್ಚವಾಗಿದ್ದರೆ ಹುಡುಗಿಯರ ಲೆಕ್ಕಕ್ಕೆ ೯೩೦೦ ರೂಪಾಯಿ ಮಾತ್ರ ವೆಚ್ಚವಾಗಿರುವದು. ಇಡೀ ಲೋಕಲಬೋರ್ಡ ಶಾಲೆಗಳ ಫೀ ಉತ್ಪನ್ನವು ೯೧೮೨ ರೂ ಆಗಿದ್ದು ಎಲ್ಲ ಮುನ್ಸಿಪಲ್ ಶಾಲೆಗಳ ಫೀ ಉತ್ಪನ್ನವು ೧೬೫೭ ರೂ ಆಗಿರುವದು. ಇಷ್ಟು ಫೀ ಉತ್ಪನ್ನವನ್ನು ಇತರ ಬಾಬುಗಳಿಂದ ಕೂಡಿಸಿ ಕೊಟ್ಟರೆ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಲಿಕ್ಕೆ ಸುಸಾಧ್ಯವದೆ. ನಾಮದಾರ ಪಟೇಲರು ಸೂಚಿಸಿದಂತೆ ನಮ್ಮ ಮುನ್ಸಿಪಾಲಿಟಿಗಳಾದರೂ ತಮ್ಮ ೧೬೫೭ ರೂಪಾಯಿಯ ಫೀ ಉತ್ಪನ್ನವನ್ನು ಇತರೇ ಕರಗಳಿಂದ ತುಂಬಿಕೊಂಡು ತಮ್ಮ ಪ್ರಾಥಮಿಕ ಶಿಕ್ಷಣವನ್ನಾದರೂ ಉಚಿತವಾಗಿ ಯಾಕೆ ಕೊಡಬಾರದ? ಸಕ್ತಿಯ ಕಾಯಿದೆಯು ಏರ್ಪಡಿಸಿದ ಹೊರತು ಹುಡುಗರ ಸಂಖ್ಯೆ ಏರುವ ಸಂಭವವಿಲ್ಲ ಈ ಮಹತ್ವದ ಪ್ರಶ್ನೆಯನ್ನು ಮುನ್ಸಿಪಾಲಿಟಿಗಳು ಬೇಗನೇ ಚರ್ಚಿಸಿ ನಿಜವಾದ ಸ್ಥಾನಿಕ ಸ್ವರಾಜ್ಯದ ಲಾಭಗಳನ್ನು ಜನರಿಗೆ ಕೊಟ್ಟರೆ ಜನರ ಕಲ್ಯಾಣಮಾಡಿದಂತಾಗುವದು. ಕಾನಡಾ ಜಿಲ್ಲೆಯ ಸರ್ವಾಂಗ ಸುಧಾರಣೆಯನ್ನು ಮಾಡಲಿಚ್ಛಿಸುವ ದೇಶಾಭಿಮಾನಿಗಳು ಈ ಮಹತ್ವದ ವಿಷಯವನ್ನು ಸಾಂಗೋಪಾಂಗ ಚರ್ಚಿಸಿ ನಿರಕ್ಷರತೆಯ ಕಲ್ಲಪ್ಪನನ್ನು ನಿರ್ಮೂಲಿಸಬೇಕಾಗುವದು. ಅವರ ದೃಷ್ಟಿ ಕೋನವು ಈ ವಿಷಯದ ಕಡೆಗೆ ಬೇಗನೇ ಒಲಿಯಲಿ ಎಂತ ನಾವು ತುಂಬಾ ಆಶಿಸುವೆವು

ಸ್ಫುಟ ಸೂಚನೆಗಳು.

೧ ನಮ್ಮ ಜಿಲ್ಲೆಯೊಳಗೆ ಯುದ್ಧ ಸಾಲದ ರಕಮುಗಳು ಭರದಿಂದ ಕೂಡುತ್ತಲಿವೆ. ಇಷ್ಟರಿಂದಿಗೆ ಇಡೀ ಜಿಲ್ಲೆಯ ಅಂಕಗಳು ೨,೬೬,೫೨೧ಕ್ಕೆ ಮುಟ್ಟಿರುವವು. ಇಡಿ ದಕ್ಷಿಣ ಭಾಗದಲ್ಲಿ ನಮ್ಮ ಹೆಜ್ಜೆಯು ಮುಂದೆ. ನಮ್ಮ ರಾಜನಿಷ್ಠೆಯೇ ಅಷ್ಟು ಬಲವತ್ತರವದೆ. ಇದು ಸರಕಾರಕ್ಕೂ ಜನರಿಗೂ ಭೂಷಣಾವಹವಲ್ಲೆಂತ ಯಾರು ಹೇಳುವರು? ದಯಾಳು ಲೋರೆನ್ಸ ಸಾಹೇಬರು ಅನ್ನುವಂತೆ ಈ ಯುದ್ಧ ಸಾಲದ ಕಾದಾಟವೇ ನಾವು ನಡಿಸಿರುವೆವು. ಈ ಕಾರ್ಯದಲ್ಲಿ ನಾವು ವಿಜಯ ಹೊಂದುವದೆಂಬುದು ಖಂಡಿತ. ನಮ್ಮೊಳಗಿನ ಧನಿಕರೂ ಜಣವಂತರಾಯರೂ ಮತ್ತಿಷ್ಟು ಎಚ್ಚರಾಗ

, ಮತ್ತು ತಮ್ಮ ಕಾಂಚನವನ್ನು ಕೋಶದೊಳಗಿಂದ ಹೊರಗೆಸೆ ಅದರ ಪ್ರತಿಧ್ವನಿಯಿಂದ ಇನ್ನೂ ಹೆಚ್ಚೆಚ್ಚು ಚರಗಿಸಲಿ, ಆನಂದಗೊಳಿಸಲಿ ಎಂತ ನಾವು ಕೃತ್‌ಪೂರ್ವಕವಾಗಿ ಸೂಚಿಸುವೆವು ಯುದ್ಧಸಾಲಕ್ಕೆ ಹಣಕೊಡುವದನ್ನು ತಪ್ಪಿಸಿಕೊಳ್ಳುವದಕ್ಕೋ ಏನೋ, ಕೆಲವು ಕೃಪಣರು ಸುಮ್ಮಸುಮ್ಮನೆ ಅಭಾಸ ಮಾಡಹತ್ತಿರುವರೆಂದು ನಾವು ಕೇಳುತ್ತೇವೆ ಯುದ್ಧಸಾಲಕ್ಕೆ ಸಹಾಯ ಮಾಡದಿದ್ದರೆ ಸಕ್ತಿಯಿಂದ ಹಣ ವಸೂಲಿಯು ಮಾಡುವ ಕಟ್ಟಳೆಯಾಗಿದೆ ಎಂತ ಹೊನ್ನಾವರ ಅತ್ತಕಡೆಗೆ ಕೆಲ ಮೂರ್ಖ ಪಂಡಿತರು ಹೊಗಳಹತ್ತಿರುವರಂತೆ ಇಂಥ ಸುದ್ದಿಯಲ್ಲಿ ಸತ್ಯಾಂಶವಿದ್ದರೆ ಹೊನ್ನಾವರದ ಲೋಕಪ್ರಿಯ ಮಾಮಲೇದಾರರು ಕ್ಷಣ ಸಹ ವಿಲಂಬಮಾಡದೆ ಇಂಥ ಜನರ ಮನಸ್ಸಿನೊಳಗಿನ ಪಿಶಾಚ್ಚವನ್ನು ಹೊಗಲಾಡಿಸುವರು ಜನರೇನು ಇಷ್ಟು ಅವಿವೇಕಿಗಳಲ್ಲ ನಮ್ಮ ಸರಕಾರವು ಕರ್ತವ್ಯಪ್ರಿಯವಿದ್ದಷ್ಟು ನ್ಯಾಯಪ್ರಿಯವಿದೆಂದು ಯಾವಾಗಲೂ ನಾವು ತಿಳಿಯತಕ್ಕದ್ದು ನಮಗಂತೂ ಇಂಥ ಸುದ್ದಿಗಳು ವಿಶ್ವಸನೀಯವೆಂತ ಕಾಣುವದಿಲ್ಲ ಹ್ಯಾಗೂ ಇರಲಿ ಕಾಗೆಗಳ ಕೂಗಿನಿಂದ ಯುದ್ಧ ಕಾರ್ಯಕ್ಕೆ ಎಳ್ಳಷ್ಟು ಹಾನಿಯಾಗಗೊಡದಂತೆ ವರ್ತಿಸುವದು ನಮ್ಮೆಲ್ಲ ರಾಜನಿಷ್ಠರ ಕರ್ತವ್ಯವು

೨ ವಿಲಾಯತಿ ನೂಲಿನ ಬಟ್ಟೆಗಳ ಮೇಲೆ ಜಕಾತಿಯನ್ನು ಹಿಂದುಸ್ಥಾನ ಸರಕಾರದವರು ಏರಿಸಲು ವಿಲಾಯತಿ ವಸ್ತುಗಳ ಬೆಲೆಯು ಏರಿ ಅವುಗಳ ಮಾರಾಟವು ಸಹ ಕಡಿಮೆಯಾಗುವದೆಂದು ಸ್ವಾರ್ಥಪರಾಯಣ ಲಿಂಕಾಶಾಯರದ ವರ್ತಕರು ಆಕ್ರೋಶಮಾಡಹತ್ತಿದರು ಯಂತ್ರಗಳಿಂದ ಮಾಡುವ ಬಟ್ಟೆಗಳ ಸ್ಪರ್ಧೆಯಲ್ಲಿ ಹಿಂದುಸ್ಥಾನದ ಕೈಮಗ್ಗದ ವಸ್ತುಗಳ ಉತ್ಪತ್ತಿಯು ಕಡಿಮೆಯಾದಂದಿನಿಂದ ವಿಲಾಯತಿ ವಸ್ತ್ರದ ವ್ಯಾಪಾರವು ವೃದ್ಧಿ ಹೊಂದಹತ್ತಿತು ಆದರೆ ಹಿಂದುಸ್ಥಾನದಲ್ಲಿ ಸಹ ಯಂತ್ರ ಸಹಾಯದಿಂದ ಬಟ್ಟೆಗಳು ತಯಾರಿಸಲ್ಪಡಲು ಸರಕಾರಿ ತೆರಿಗೆಗಳು ದೇಶಿ ಪರದೇಶಿ ಬಟ್ಟೆಗಳಮೇಲೆ ಸಮಾಯಿಕವಾಗುವಂತೆ ಕಟ್ಟಳೆಗಳನ್ನು ವಿಲಾಯತಿ ವರ್ತಕರು ವಿಧಿಸಿಕೊಳ್ಳುತಿದ್ದರು ಪರದೇಶಿ ಬಟ್ಟೆಗಳಮೇಲಿನಷ್ಟೇ ಕರವನ್ನು ದೇಶಿ ಬಟ್ಟೆಗಳ ಮೇಲೆ ವಿಧಿಸುವದು ಹಿಂದುಸ್ಥಾನಕ್ಕೆ ತೀರ ಅನ್ಯಾಯಕರವೆಂತ ಈ ಪರದೇಶಿ ವರ್ತಕರಿಗೆ ಗೊತ್ತಿದ್ದರೂ ಬರೇ ಸ್ವಾರ್ಥ ದೃಷ್ಟಿಯಿಂದ ಅವರು ಹಟ ಹಿಡಿದು ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದರು ಪಾರ್ಲಿಮೆಂಟಿನಲ್ಲಿ ತಮ್ಮ ೬೦ ಪ್ರತಿನಿಧಿಗಳು ಸಿದ್ಧರಿದ್ದಾಗ ಇದಕ್ಕಿಂತ ಹೆಚ್ಚಿನ ಅನ್ಯಾಯಕರ ತೆರಿಗೆಯನ್ನು ಹಿಂದುಸ್ಥಾನದ ಬಟ್ಟೆಗಳ ಮೇಲೆ ಹಾಕಿಸುವ ಹಟವನ್ನು ಈ ವ್ಯಾಪಾರಿಗಳು ಹಿಡಿಯಲಿಲ್ಲವೆಂಬುದೊಂದೇ ಇವರು ಹಿಂದುಸ್ಥಾನದಮೇಲೆ ಮಾಡಿದ ಉಪಕಾರವು ಹ್ಯಾಗೂ ಇರಲಿ ಈ ವರುಷ ವಿಲಾಯತಿ ಬಟ್ಟೆಗಳ ಮೇಲೆ ಹೊರಿಸಿದ ಹೆಚ್ಚಿನ ಜಕಾತಿಯಿಂದ ಹಿಂದುಸ್ಥಾನದ ಬಟ್ಟೆಗಳ ಮೇಲಿನ ಅನ್ಯಾಯದ ತೆರಿಗೆಯ ನಿರಾಕರಣೆಯನ್ನು ಅಪ್ರತ್ಯಕ್ಷವಾಗಿ ಮಾಡಿದರಿಂದ ಈ ಸಾಹಸವು ಸರಕಾರಕ್ಕೆ ಬಹಳೇ ಭೂಷಣಾಸ್ಪದವು ಅನ್ಯಾಯದ ನಿರಾಕರಣೆಯೂ ಲೋಕಮತದ ಸಂಭಾವನೆಯೂ ಇದರಿಂದ ಆಗಿದೆಂದು ಹೇಳಲು ಅಡ್ಡಿಯಿಲ್ಲ

೩ ಹಿಂದುಸ್ಥಾನದ ಪಾರ್ಲಿಮೆಂಟಿನೊಳಗಿನ ಸಧ್ಯದ ಮಂತ್ರಿಗಳು ಚೆಂಬರಲೇನ ಸಾಹೇಬರು ತಮ್ಮ ರಾಜ್ಯದೊಳಗೆ ನಡೆದ ಚಲವಲಗಳ ವಿಷಯವಾಗಿ ಯಾರಾದರೂ ಪ್ರಶ್ನೆಗಳನ್ನು ಕೇಳಿದರೆ ಪಾರ್ಲಿಮೆಂಟ ಸಭೆಯಲ್ಲಿಯೇ ಈ ಧೊರೆಗಳು "ನಾನರಿಯೆ" ಎಂತ ಒಂದೆರಡಾವರ್ತಿ ಉತ್ತರ ಕೊಟ್ಟಿದ್ದರು ಅದ ಕಾರಣ "ನಾನರಿಯೆ" ಮಂತ್ರಿಗಳೆಂತ ಇವರಿಗೆ ಕೆಲವರು ನಿಷ್ಕಾರಣ ಸಂಬೋಧಿಸುತ್ತಿದ್ದರು ಹಿಂದುಸ್ಥಾನದ ವಿಷಯವಾಗಿ ಇವರಿಗೆ ಹೆಚ್ಚಿನ ಮಾಹಿತಿಯು ಇರಲಾರದೆಂಬ ಅಜ್ಞಾನದಿಂದಲೋ ಏನೋ ಲಿಂಕಾಶಾಯರದ ವರ್ತಕರು ಅವರ ಮುಂದೆ ಹೋಗಿ ಈಗ ಸಹ ಅಕಾಂಡತಾಂಡವ ಮಾಡದಿರಲಿಲ್ಲ "ನಮ್ಮ ಬಟ್ಟೆಗಳಮೇಲೆ ತೆರಿಗೆಯನ್ನು ಹೆಚ್ಚಿಸುವದು ಬಹು ಅನ್ಯಾಯವು ಇದನ್ನು ಕಡಿಮೆ ಮಾಡದಿದ್ದರೆ ಯುದ್ಧ ಕಾರ್ಯದಲ್ಲಿ ನಾವು ಇನ್ನೂ ಸಹಾಯ ಮಾಡಲೊಪ್ಪುವದಿಲ್ಲ ಇಷ್ಟೇ ಅಲ್ಲ ನಮ್ಮ ಚಲವಲವು ಸಹ ಭರದಿಂದ ಸಾಗುವದು" ಎಂತ ನಮ್ಮ ಮಂತ್ರಿಗಳಿಗೆ ಬೆದರಿಸಹತ್ತಿದರು ಆದರೆ ಹಿಂದುಸ್ಥಾನದ ಸಾಂಪತ್ತಿಕ ಇತಿಹಾಸವನ್ನು ಚಲೋ ಅರಿತಂಥ ಸ್ಟೇಟ ಸಕ್ರೆಟರಿಗಳು ಈ ವ್ಯಾಪಾರಿಗಳಿಗೆ ಹೆವರದೆ ನೂಲಿನ ಬಟ್ಟೆಗಳ ತೆರಿಗೆಯ ಸಾದ್ಯಂತ ವೃತ್ತವನ್ನು ಇವರಿಗೆ ಶ್ರುತಪಡಿಸಿ ಈ ತೆರಿಗೆಯ ವ್ಯವಹಾರದಲ್ಲಿ ಬಹುಕಾಲ ಹಿಂದುಸ್ಥಾನಕ್ಕೆ ಆಗುತ್ತ ನಡೆದ ಅನ್ಯಾಯವನ್ನು ಇವರಿಗೆ ಕಿವಿ ಹಿಡಿದು ತಿಳಿಸಿ ಹೇಳಿದರು ಚೆಂಬರಲೇನ ಧೊರೆಗಳು ಹಿಂದುಸ್ಥಾನದ ಪಕ್ಷದಿಂದ ಈ ವಿಷಯದಲ್ಲಿ ಕಾದಾಡಿದ ಬಗ್ಗೆ ನಾವು ಅವರಿಗೆ ಯಾವಾಗಲೂ ಕೃತಜ್ಞರಾಗಿರತಕ್ಕದ್ದು ಇಷ್ಟಾಗಿದ್ದರೂ ಈ ಬಟ್ಟೆಗಾರರು ಪಾರ್ಲಿಮೆಂಟಿನಲ್ಲಿ ಗೊಂದಲ ಮಾಡಹತ್ತಿದರು. ಇವರ ಪ್ರತಿನಿಧಿಗಳಿಗೆ ಮುಖ್ಯ ಪ್ರಧಾನರು ನಿರುತ್ತರ ಪಡಿಸಿದರೂ ಕಟ್ಟಕಡೆಗೆ ಯುದ್ಧದ ಸಮಾಪ್ತಿಯಾದ ನಂತರ ವಿಲಾಯತಿ ಬಟ್ಟೆಗಳ ತೆರಿಗೆಯನ್ನು ಪುನರಾಲೋಚಿಸುವೆವು ಎಂದು ಅವರಿಗೆ ಆಶ್ವಾಸನವು ಸಿಕ್ಕಿದೆ ಹಿಂದುಸ್ಥಾನದ ಹಿತವನ್ನು ಕಾಯುವದು ಹಿಂದುಸ್ಥಾನ ಸರಕಾರದ ಕೈಯೊಳಗಿದೆ ಅವರು ನ್ಯಾಯವಿಷಯಕ್ಕೊಂದು ಈಗ ತೋರಿಸಿದ ಧೈರ್ಯಬಲವು ಮುಂದೆ ಕುಂದಲಿಕ್ಕಿಲ್ಲವೆಂತ ನಾವು ನೆರೆನಂಬಿರುವೆವು

೪ ಯುದ್ಧ ಕ್ಷೇತ್ರವು ಕಳೆದ ಪಕ್ಷದಲ್ಲಿ ಮತ್ತಷ್ಟು ವಿಸ್ತಾರ ಹೊಂದುತ್ತಲಿದೆ ಯುದ್ಧದ ದಾವಾಗ್ನಿಯು ಅತ್ಲಾಂಟಿಕ ಮಹಾಸಾಗರವನ್ನು ದಾಟಿ ಕಟ್ಟಕಡೆಗೆ ಅಮೇರಿಕೆಗೆ ಹಬ್ಬಿತು (ಸಾಮದಾಮ ದಂಡಾದಿ) ಎಲ್ಲ ಉಪಾಯಗಳನ್ನು ನಡಿಸಿ ಏನೂ ಪ್ರಯೋಜನ ಹೊಂದದೆ ಅಮೇರಿಕೆಗೆ ಈಗ ಜರ್ಮನರಕೂಡ ಭೇದೋಪಾಯದಿಂದ ಯುದ್ಧ ಜಾಹೀರ ಮಾಡಬೇಕಾಯಿತು ಶಾಂತತೆ ಸುಖವನ್ನನುಭವಿಸುವ ತಮ್ಮ ರಾಷ್ಟ್ರಕ್ಕೆ ಯುದ್ಧಕ್ಕೆ ಕಳುಹಿಸುವಾಗ ಪ್ರೆಸಿಡೆಂಟ ವಿಲ್ಸನರು ತಮ್ಮ ರಾಷ್ಟ್ರೀಯ ಸಭೆಗೆ ಕಳುಹಿಸಿದ ಸಂದೇಶವು ಸಾತ್ವಿಕ ಮತ್ತು ಉದಾತ್ತ ಭಾವನೆಗಳಿಂದ ಪ್ರೇರೇಪಿತನಾಗಿರುವದು ಸತ್ಯ, ಶಾಂತಿ, ನ್ಯಾಯ, ಸ್ವಾತಂತ್ರ್ಯ ಮುಂತಾದ ಉಚ್ಚ ತತ್ವಗಳಿಂದ ಈ ಯುದ್ಧವು ಸಾಗಿದ್ದು ಕೇವಲ ಸ್ವಕರ್ತವ್ಯವೆಂತ ಅದರೊಳಗೆ ಸೇರಿಕೊಳ್ಳುವದನ್ನು ಅಮೇರಿಕೆಯು ನಿಶ್ಚಯಿಸಿದೆ ಜುಲುಮಿ ರಾಜ್ಯಪದ್ಧತಿಯಿಂದ ಮುಕ್ತವಾಗಿ ಲೋಕಸತ್ತೆಯ ಅನುಶಾಸನದ ಉಪಭೋಗವನ್ನು ಈಗೀಗ ತಕ್ಕೊಳ್ಳಹತ್ತಿದ ರಷ್ಯಾರಾಜ್ಯವನ್ನು ಇದೇ ದೃಷ್ಟಿಯಿಂದ ನಾವು ಅಭಿನಂದಿಸುವೆವು ಎಂತ ಅವರು ಹೇಳಿರುವರು ಈ ಹೊಸ ಲೋಕಸತ್ತೆಯ ಪ್ರತಿಧ್ವನಿಯು ರಷ್ಯಾದಿಂದ ಪ್ರಸಿದ್ಧಿಪಡಿಸಲ್ಪಡಹತ್ತಿದ ಕೂಡಲೇ ಏಕಸತ್ತಾಧೀಶ ಕೈಸರನು ಸಹ ಬೆದರಿ ತನ್ನ ಪ್ರಜೆಗಳಿಗೆ ಲೋಕಸತ್ತೆಯ ರಾಜ್ಯಾಧಿಕಾರಗಳನ್ನು ಯುದ್ಧ ಸಮಾಪ್ತಿಯ ನಂತರ ಕೊಡುವೆನೆಂದು ಜಾಹೀರು ಮಾಡಿರುವನು ಇಷ್ಟ್ಯಾರೆ ಈ ಯುದ್ಧದಿಂದ ಯುರೋಪಖಂಡಕ್ಕೆ ಅಮೋಲಿಕ ಲಾಭವಾಗುವ ಬಹು ಚಿನ್ಹಗಳು ಕಾಣುತ್ತವೆ ಬೇರೆ ಯಾವ ಭೂಪ್ರದೇಶಕ್ಕೆ ಯಾವ ಯಾವ ಮತ್ತು ಎಷ್ಟೆಷ್ಟು ಲಾಭಗಳು ಆಗುವವೋ ಎಂಬುದು ಭಾವೀ ಇತಿಹಾಸದಲ್ಲಿ ಬರೆದಿರುವದು ವರ್ತಮಾನ ಕಾಲದಲ್ಲಿ ನಿಶ್ಚಿತವಾಗಿ ಅದನ್ನು ಯಾರು ಹೇಳ್ಯಾರು?

ಯುದ್ಧವಾರ್ತೆಯು.

ಅಮೇರಿಕೆಯು ಕಟ್ಟಕಡೆಗೆ ಜರ್ಮನರ ಸಂಗಡ ಯುದ್ಧವನ್ನು ಜಾಹೀರಮಾಡಿತು ಇದರಿಂದ ಮಿತ್ರಪಕ್ಷದವರ ಬಲವು ಬಹಳೇ ಏರುವದು ಬೇಕಾದಷ್ಟು ಹಡಗುಗಳೂ ದ್ರವ್ಯ ಸಹಾಯವೂ ಮನುಷ್ಯಬಲವೂ ಅಮೇರಿಕೆಯಿಂದ ಸಿಕ್ಕಿದರೆ ಯುದ್ಧ ಸಮಾಪ್ತಿಯ ಕಾಲವು ಬೇಗನೇ ಸಮೀಪಿಸುವದು ಎಂಬ ಬಗ್ಗೆ ಏನೂ ಸಂದೇಹವಿಲ್ಲ ಫ್ರಾನ್ಸದ ರಣರಂಗದಲ್ಲಿ ಜರ್ಮನರು ಬೆಂಬಡಿಗೆ ಮುಂದರಿದು. ಪಲಾಯನಮಾಡಿ ತಮ್ಮ ನೆಲೆಗಳನ್ನು ಧ್ವಂಸಪಡಿಸಿ ತಡೆದಿಡುವರು ಸೇಂಟಕ್ವಿಂಟಿನ ಲೇಯೋನ, ಕೆಂಬ್ರಾಯಿ ರೇಷೆಗೆ ಸಮಾಂತರವಾಗಿ ಖಂದಕಗಳ ಆಶ್ರಯಕ್ಕೆ ಅವರ ಪಲಾಯನತೂರ ಸೇನೆಯು ಹೋಗಿ ತಡೆದಿರುವದು ಕಾಲ್ಕು ಜಾರಿವಿದ್ದ ಈ ಸೇನೆಯನ್ನು ತಡೆಸುವದು ಜರ್ಮನರಿಗೆ ಈಗ ಕಠಿಣವಾಗುವದು ಬ್ರಿಟಿಷರು ಜರ್ಮನರ ದೂರದ ಮತ್ತೊಂದು ಶಾಲಿನಮೇಲೆ ಬಿದ್ದು ಲೀಮಿ ಸಂಕದ ಹತ್ತರ ಶತ್ರುಗಳನ್ನು ಸೋಲಿಸಿ ದಿಕ್ಪಾಲಾಗಿ ಓಡಿಸಿರುವರು ಹನ್ನೊಂದು ಸಾವಿರ ಜರ್ಮನರು ಈ ಕಾಳಗದಲ್ಲಿ ಬ್ರಿಟಿಷರ ಸೆರೆಬಿದ್ದರು ಬಹಳೇ ತೋಪು ಬಂದೂಕಗಳು ಸಹ ಬ್ರಿಟಿಷರ ಕೈವಶವಾಗಿವೆ ಈ ವಿಜಯದಿಂದ ಬ್ರಿಟಿಷರಿಗೆ ಅನುಕೂಲವಾದ ನೆಲೆಗಳು ಸಿಕ್ಕಿ ಶತ್ರುಗಳಿಗೆ ನಿರಾಶ್ರಿತರಾಗಬೇಕಾಗಿದೆ ಮಿತ್ರ ಪಕ್ಷದವರಿಗೆ ಇದೊಂದು ಮಹತ್ವದ ವಿಜಯವು. ಫ್ರೆಂಚರು ಶತ್ರುಗಳನ್ನು ಒಯಿಜ ನದಿಯ ದಕ್ಷಿಣಕ್ಕೆ ಸೋಲಿಸಿ ಅವರನ್ನು ಕೌಸಿ ಜಂಗಲದ ವರೆಗೆ ಹಿಂದಕ್ಕೆ ಅಟ್ಟಿದರು

ಪೂರ್ವ ರಣರಂಗದಲ್ಲಿ ರಷ್ಯನರ ಹೊಸ ಸರಕಾರವು ಸೇನೆಗಳನ್ನು ಹುರಿದುಂಬಿಸಿದರಿಂದ ರಷ್ಯನರಿಗೆ ಸಹ ನವಚೇತನೆಯು ಉಂಟಾಗಿದೆ ರೀಗಾಪ್ರಾಂತ್ಯದಲ್ಲಿ ಶತ್ರುಗಳು ರಷ್ಯನರ ಖಂದಕಗಳನ್ನು ಕೈವಶ ಮಾಡಿಕೊಂಡರೂ ರಷ್ಯನರ ಕಠಿಣ ಕಾದಾಟದಿಂದ ಶತ್ರುಗಳಿಗೆ ಅವುಗಳನ್ನು ಬಿಟ್ಟು ಹೋಗಬೇಕಾಯಿತು

ಮೆಸೊಪೊಟೇಮಿಯಾದಲ್ಲಿ ರಷ್ಯನರೂ ಬ್ರಿಟಿಷರೂ ಕಿಜಿಲರಾಬಾತ ಎಂಬಲ್ಲಿ ಕೂಡಿರುವರೆಂದು ರಷ್ಯನ ರಾಜಧಾನಿಯಿಂದ ವಾರ್ತೆಯು ಬಂದಿದೆ ತುರುಕರ ಗತಿಯು ಏನಾಯಿತೆಂಬುದು ತಿಳಿಯುವದಿಲ್ಲ ಬ್ರಿಟಿಷರು ಬಗದಾದಿನ ಉತ್ತರದಲ್ಲಿರುವ ಹಾರ್ಬ ಎಂಬ ಊರು ಶತ್ರುಗಳು ಬಿಟ್ಟದ್ದು ಬ್ರಿಟಿಷರ ಕೈವಶವಾಗಿರುವದು.

ಸರ್ವಿಯಾದಲ್ಲಿ ದೊಡ್ಡ ದಂಗೆಯಾಗಿ ಬಲ್ಗೇರಿಯದ ೩-೪ ಸ್ಥಳದ ಭಾಗದವರು ಹೋಗಿ ಬಹಳೇ ಜನರನ್ನು ಕೊಂದು ಅದನ್ನು ನಿಲ್ಲಿಸಬೇಕಾಯಿತು.

ಇಹವೃತ್ತ.

ಕುಮಟೆ —ಶಕೆಯು ಬೀಳಹತ್ತಿದೆ ರೋಗಗಳೇನೂ ಇಲ್ಲ.

ಇಲ್ಲಿಯ ನೆರೆಹೊರೆಯ ಊರಿನ ಮತ್ತು ವೆಂಗುರ್ಲೇ ಅತ್ತಕಡೆಯ ಕೆಲಸಿ ಜನರು ಕೂಡಿ ಇಂಥ ಬಿಕ್ಕಟ್ಟು ಪರಿಸ್ಥಿತಿಯಲ್ಲಿ ೧೦ ವರ್ಷದೊಳಗಿನ ಹುಡುಗರಿಗೆ ೬ ಪೈ ಮತ್ತು ಮಿಕ್ಕಿದ ಜನರಿಗೆ ೧ ಆಣೆಯಂತೆ ವೇತನ ಕೊಂಡು ಕೆಲಸ ಮಾಡಬೇಕಾಗಿಯೂ ಇದಕ್ಕೆ ತಪ್ಪಿದರೆ ಶ್ರೀ ವೆಂಕಟರಮಣ ದೇವರಿಗೆ ೫ ರೂಪಾಯಿ ದಂಡ ಕೊಡಬೇಕಾಗಿಯೂ ಕರಾರು ಮಾಡಿಕೊಂಡಿರುವರು. ಈ ಕುರಿತು ಕೆಲವು ನಿವಾಸಿಕರು ಈ ಕಟ್ಟು ಮುರಿಸುವ ಪ್ರಯತ್ನ ಮಾಡಿದರೂ ಸ್ವಗೂಡಲಿಲ್ಲ

ಕಳೆದ ಚೈತ್ರ ಶುದ್ಧ ೧೫ರ ದಿವಸ ಬಾತ ರಥೋತ್ಸವಕ್ಕೆ ಹೋಗಿ ಸಾಯಂಕಾಲ ೬ ಘಂಟೆಗೆ ತಿರುಗಿ ಮನೆಗೆ ಹೋಗುವಾಗ ಒಬ್ಬ ಹೆಂಗಸಿನ ಮೈಮೇಲೆ ಹೆರವಟ್ಟೆಯ ಸಮೀಪ ಒಬ್ಬ ಅರಮರುಳ ಮದಾಂಧನು ಬಿದ್ದು ಪೀಡಿಸುವಾಗ ಗಿಬ್ಬ ಹ್ಯಾಸ್ಕೂಲಿನ ವಸತಿಗೃಹದ ಹುಡುಗರು ಸಹಾಯ ಮಾಡಿ ಬಿಡಿಸಿದರು. ಆಗ ಪೋಲಿಸಿನವರಿಗೆ ಕರೆಯಲಿಕ್ಕೆ ಹೋದರೆ ಎಲ್ಲ ಪೋಲಿಸರು ರಥೋತ್ಸವಕ್ಕೆ ಹೋಗಿದ್ದರಂತೆ ಇಂಥ ವ್ಯವಸ್ಥೆಯು ಅಭಿನಂದನೆಗೆ ಹೇಗೆ ಪಾತ್ರವಾದೀತು? ಇದಕ್ಕೂ ಹೆಚ್ಚಿನ ವ್ಯವಸ್ಥೆಯನ್ನು ಅವರು ಇಡಬೇಕು

ನಮ್ಮ ಎಗ್ಜಿಕ್ಯೂಟಿವ ಎಂಜಿನಿಯರ ಸಾಹೇಬರ ಸ್ವಾರಿಯು ಇಲ್ಲಿಗೆ ಬಂದು ಈವತ್ತಿನ ಬೋಟಿನಿಂದ ಭಟ್ಕಳಕ್ಕೆ ಹೋಗಿರುವದು

ನಮ್ಮ ಮಧ್ಯಭಾಗ ಪೊರೆಷ್ಟ ಸಾಹೇಬರ ಮುಂದೆ ಜಲಾವ ನಟ್ಟಿಗಯ ೩ ಕೂಪ್ರಗಳು ಲಿಲಾಂ ಆದವು ಬಾಕಿಯವುಗಳಿಗೆ ಯೋಗ್ಯ ಸವಾಲು ಬರಲಿಲ್ಲವದರಿಂದ ತಹಕೂಬು ಇಟ್ಟಿದ್ದಾರೆ

ಮುಂಬಯಿಯಿಂದ ಮಹಾಲು ಒಯ್ಯುವ ಕುರಿತು ಈ ವಾರದಲ್ಲಿ ಸ್ಪಶಲ್ ಆಗಬೋಟಿ ಬಂದಿರುವದು

ಟಪಾಲ ಸುಪರಿಂಟೆಂಡೆಂಟ ಸಾಹೇಬರು ಈವತ್ತಿನ ಬೋಟಿನಿಂದ ಇಲ್ಲಿ ಬಿಜಯಮಾಡಿದ್ದಾರೆ

ಹುಬ್ಬಳ್ಳಿಯಿಂದ ಕಾರವಾರಕ್ಕೆ ಒಂದು ಮೋಟಾರ ಸರ್ವಿಸ ಕಂಪನಿ ಶೇರು ತೆಗೆದು ಮಾಡುವ ವಿಚಾರ ನಡೆದದೆ. ಕಪ್ಪನೆಯು ಸ್ತುತ್ಯವದ ಎಲ್ಲರು ಮನಸ್ಸು ಮಾಡಿದರೆ ಅಸಾಧ್ಯವಲ್ಲ

ಅಂಕೋಲಾ —ಇಲ್ಲಿ ಬೆಳಂಬಾರದಲ್ಲಿ ಸಮುದ್ರದಲ್ಲಿ ಒಂದು ಪಾಣಬುಡಿ ಬೋಟಿಯು ಕಂಡಿತು ಎಂತಾ ಊರಲ್ಲಿ ಸುದ್ದಿ ಆದದ್ದರಿಂದ ಅ। ಕಲೆಕ್ಟರ ಸೆ. ಪ್ಲ ರೆಪಿನ್ಸ್ಯೂರವರು ತಪಾಸು ಮಾಡಿ ಹೋದರು

ಕವಳೆ ಮಠದ ಶ್ರೀ ಪೂರ್ಣಾನಂದ ಸ್ವಾಮಿಗಳವರ ಸ್ವಾರಿಯು ಇಲ್ಲಿಗ ಬಂದಿರುವದು

ಶ್ರೀ ವೆಂಕಟರಮಣ ದೇವರ ರಥೋತ್ಸವವು ಕಳೆದ ೧೫ರ ಮಿಯ ದಿವಸ ಸಮಾರಂಭದಿಂದ ನೆರವೇರಿತು.

ಹಳಿಯಾಳ —ಕಾಲರಾ ಕಡಿಮೆಯಾಗಿದೆ ಪ್ಲೇಗದ ಇಲಿಗಳ ಸಂಶಯು ಬಿರಹತ್ತಿದೆ ಅದರಬಗ್ಗೆ ಮ್ಯುನಿಸಿಪಾಲಿಟಿಯವರು ಇನ್ಸ್ನೋಕ್ಯುಲೇಶನದ ವ್ಯವಸ್ಥೆ ಮಾಡಿದರು ಹಳ್ಳಿಗಳಲ್ಲಿ ದನದ ಬೇನೆ, ಚಳಿಜ್ವರ ಇನ್ನೂ ತಗ್ಗಿಲ್ಲ ರೋಗ ಶಾಂತತಾಪ್ರೀತ್ಯರ್ಥ ನಡೆದ ಓಕಳಿ ಬಬನೆಯು ಬಹಳ ಉತ್ಸವದಿಂದ ಸಾಂಗವಾಯಿತು

ನಾ ಕಾವರ್ಣಯರೇಲ, ದ ಭಾ ಕಮಿಷನರ, ಕನ್ಸರವೇಟರ, ಕಲೆಕ್ಟರಸಾಹೇಬರವರು ಶಿರಾಶಿಗೆಂತ ದಾಂಡೇಲಿಗೆ ಬರುವವರಿದ್ದಾರೆ ಮುಕ್ಕಾಮು ತಾ ೧೬ ರಿಂದ ೨೨ ರ ವರೆಗೆ

ಈ ಸಾರೆ ಬೆಳೆ ಸೆಟ್ಟಗಿಲ್ಲದಿದ್ದರಿಂದಲೂ ಕೂಲಿದಾದ ಮೂಲಕ ಗಿರಾಕಿ ಇಲ್ಲದ್ದರಿಂದಲೂ ಎಪ್ರಿಲದ ಹಪ್ತ ತುಂಬುವದು ಜನರಿಗೆ ಬಹಳ ಪ್ರಯಾಸವಾಯಿತು. ಬತ್ತದ ಧಾರಣೆ ಇಳಿದದೆ

ಹಳ್ಳಿಯ ರಯತರು ಒಕ್ಕಲತನಕ್ಕೆ ಹತ್ತುವ ಕಷ್ಟಿಗ ಸಾಮಾನಿನಬಗ್ಗೆ ಹಾಗೂ [illegible] ಕಟ್ಟಿಗೆಬಗ್ಗೆ ಮಾಡಿಕೊಂಡ ವಿನಂತಿಗೆ ಫಾರೆಸ್ಟದವರಿಂದ ಇನ್ನೂ ವ್ಯವಸ್ಥೆಯಾಗಿಲ್ಲ ಹಂಗಾಮು ತೀರ ಸಮೀಪಿಸಿದ್ದರಿಂದ ಅಧಿಕಾರಿಗಳು ಯೋಗ್ಯ ವ್ಯವಸ್ಥೆ ಬೇಗನೆ ಮಾಡುವರೋ?

[illegible] ಇನ್ಸ್ಪೆಕ್ಟರರಿಗೆ ಕುನ ಟಿನ ವರ್ಗವಾಗಿದೆ

ವಿವಿಧ ವರ್ತಮಾನ.

ಈ ವರ್ಷದ ಸಂಯುಕ್ತದ ಗೌಡಸಾರಸ್ವತ ಬ್ರಾಹ್ಮಣಪರಿಷದೆಯು ರಾ। ಬ। ನಾಗಲೆ ಇಂದೂರಕರರ ಅಧ್ಯಕ್ಷತೆಯು ಕೆಳಗೆ ನಾಗಿತು.

— ಈ ವರ್ಷ ದಲ್ಲಿ ನಾಸಿಕದಲ್ಲಿ ಜರಗುವ ಮುಂಬಯಿ ಪ್ರಾಂತಿಕ ಪರಿಷದಯ ಅಧ್ಯಕ್ಷ ಸ್ಥಾನವನ್ನು ಪುಣೆಯ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ನಾ। ಶ್ರೀನಿವಾಸ ಶಾಸ್ತ್ರಿಗಳವರಿಗೆ ಕೊಟ್ಟದೆ ಈ ಮಾನಕ್ಕೆ ನಾ। ರು ಎಲ್ಲತರದಿಂದ ಯೋಗ್ಯರಿದ್ದಾರೆಂದ ಹೇಳಲು ಆವಶ್ಯವಿಲ್ಲ

ಹಿಂದುಸ್ಥಾನ ಸರಕಾರದವರು ಎಂದು ರೂಪಾಯಿಯ ಕರೆನ್ಸಿ ನೋಟುಗಳನ್ನು ತೆಗೆಯುವವರಿದ್ದಾರಂತೆ

— ಈ ತಿಂಗಳಲ್ಲಿ ಕೂಡಿದ ಕಾಂಗ್ರೆಸ ಸಭೆಯ ವರಿಷ್ಠ ಕಮಿಟಿಯ ಒಂದು ಸಭೆಯಲ್ಲಿ ಬರುವ ರಾಷ್ಟ್ರೀಯ ಸಭೆಯು ಕಲಕತ್ತೆಯಲ್ಲಿ ಸಗ ಡಬೇಕೆಂತಲೂ, ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಚಳವಳಿಗಾಗಿ ೧೯ ಜನ ಪ್ರತಿನಿಧಿಗಳು ಮೇ ತಿಂಗಳ ಅಂತ್ಯದೊಳಗೆ ಇಂಗ್ಲಂದಕ್ಕೆ ಹೊರಟು ಹೋಗಬೇಕೆಂತಲೂ ನಿರ್ಣಯಿಸಿದ್ದಾರೆ

— ಮುಂಬಯಿಯಲ್ಲಿ ಪ್ರಿನ್ಸೆಸಡೋಕದಲ್ಲಿದ್ದ ಒಂದು ಹಡಗಕ್ಕೆ ಬೆಂಕಿಬಿದ್ದು ೩ ಲಕ್ಷ ರೂಪಾಯಿಗಳ ನಾಮಾನ ನಷ್ಟವಾಯಿತು.

— ಮುಂಬಯಿ ಸರಕಾರದ ಸಮ್ಮತಿಪಡೆದು ವಸ್ಟರ್ನ ಇಂಡಿಯಾ ಟರ್ಫ ಕ್ಲಬ್ಬಿನವರು ಯುದ್ಧ ನಿಂಗಿಗಾಗಿ ಒಂದು ಸೋಡ್ತಿಯನ್ನು ತೆಗೆಯುವವರಿದ್ದಾರೆ ೧೦ ರೂ ಒಂದು ಟಿಕೇಟು, ಅರ್ಧ ಕೋಟಿಗಳ ನಂಬರ ಕೂಡಿದ ಕೂಡಲೆ ಸೋಡ್ತಿ ತೆಗೆಯುವರು ೧೦೦೦ ಇನಾಮುಗಳು ಮೊದಲನೇ ಇನಾಮು ೧೦ ಲಕ್ಷದು, ಟಿಕೇಟುಗಳನ್ನು ಮಾರಿಬಂದ ಹಣದಲ್ಲಿ ಇನಾಮು ವಗೈರೆ ತೆಗೆದು ಉಳಿದ ರಕಮು ಯುದ್ಧ ನಿಂಗಿಗೆ ಕೊಡಲ್ಪಡುವದು. ಜನರು ಯಥಾ ಶಕ್ತಿ ಟಿಕೇಟುಗಳನ್ನು ಕೊಂಡು ಸಾಮ್ರಾಜ್ಯಹಿತ ಸ್ವಾರ್ಥ, ಸಾಧಿಸಿಕೊಳ್ಳಬಹುದು ರಾಜನಿಷ್ಠೆ ತೋರಿಸಲಿಕ್ಕೆ ಇದೊಂದು ಮೂರನೇ ನಾವಸ್ಥ

— ಸರದಾರ ಟಾಟಾರವರು ಮುಂಬಯಿ ಬಂದರ ವ ಪಶ್ಚಿಮ ದಂಡೆಯ ರಕ್ಷಣೆಗಾಗಿ ಸಮುದ್ರಯಾನಗಳನ್ನು ಇಡುವರೆ ೧॥ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರ

ಸಾಭಾರ ಸ್ವೀಕಾರ— A Manual of Hindu Ethics by G A Chandawarker; It will be reviewed subsequently

We have to record the sad death of Rao Bahadur Sitarampant Patwardhan, the first Indian Educational Inspector of our Southern Division, at Nagar on 12th last He was a self made man & spent a large portion of his earnings in useful charities, mostly educational.

Just when we are going to the Press, we have heard the painful news about Mr Pandurang Keshav Kamat's demise at Bombay on Monday the 9th last The deceased was the uncle of the late lamented Mr Keshavrao Kamat, the well-known Government Pleader of Karwar. He served in the Revenue Department and was a pensioner His latter days of life were exceedingly embittered by reason of the untimely death of his three sons and the last rude shock that he received was by the death of Mr Keshavrao— the very prop and ornament of the family Surely we sincerely feel for the good family.

SUBSCRIPTION TO WAR RELIEF FUND IN THE SIRSI DIVISION KANARA, during the fortnight ending 31th March 1917

Taluka	Previous collections			Sums collected during the fortnight			Total up to date			Remarks
Sirsi	8883	15	0	521	6	0	9407	[illegible]	[illegible]	
Siddapur	7040	0	0	872	1	0	7912	1	0	
Kumta	6827	6	4	484	4	3	7311	2	[illegible]	
Honavar	70[illegible]	8	2	101[illegible]	15	[illegible]	731[illegible]	[illegible]	[illegible]	
Bhatkal	4600	0	0	28	9	0	1626	9	[illegible]	
Total	34366	7	6	2208	1	6	36,574	9	0	

Sd/ J T Lawrence,
Assistant Collector Sirsi Division Kanara

Printed & published by Krishnarao Keshav Shenvi at his Star of Kanara Press Kumta

Registered No. B. 127[illegible]

THE

KANARA NEWS.

ಕಾನಡಾ ವೃತ್ತ.

सत्यं ब्रूयात्प्रिय ब्रूयान्नब्रूयात्सत्यमप्रिय ।
प्रिय च नानृत ब्रूयादेष धर्मः सनातन ॥

ANGLO-VERNACULAR FORTNIGHTLY.

ಪತ್ರದ ವರ್ಗಣಿ -
ಕುಮಟೆಯಲ್ಲಿ ಆಗಾವು
ರೂಪಾಯಿ 1 0-0.
ಅಂಚೆವೆಚ್ಚ ಸಹಿತ
ರೂಪಾಯಿ 1-6-6
ಒಂದು ಸಂಚಿಕೆಗೆ 0-0-9

ಜಾಹಿರಾತುಗಳ ದರ.-
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳ ವರೆಗೆ ರೂ. 1-0-0
ಅನಂತ ಪ್ರತಿ ಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೨ ಮೂಹೆ ಮೇ, ಸನ್ ೧೯೧೭ ನೇ ಇಸವಿ. [ಸಂಚಿಕೆ ೧೫.

[illegible]

ಈ ಔಷಧವು ನರಸಂಸಾರವನ್ನು ಶಾಂತಿಗೊಳಿಸುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಚ್ಛ, ಮೂತ್ರಕೋಶ, ಅನ್ನಕೋಶ, ಕಲಿಜ, ಮೊದಲಾದ ಇಂದ್ರಿಯುಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ ತಲೆನೋವು, ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0-6-0. ವಿ ಪಿ ಬೇರೆ.
ಡಜನ್ ಶೀಸೆಗಳಿಗೆ ರೂ 4-0-0 ವಿ. ಪಿ ಸಹಿತ
ವಿಳಾಸ— ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ,
ಮಂಗಳೂರು.

मागणी करा.

हीच वेळ आहे.

आज सर्वत्र ठिकाणीं शाईपुड्या संबंधानें दुर्मीळता आणि विशेष महागाई असतां आम्ही काळीभोरशाईच्या पुड्या शेकडा १। रुपया भावानें आणि उत्तम निळिकाळीशाईच्या पुड्या शेकडा १ रुपया भावानें देत आहोंत. ट. खर्च शिवाय पडेल. तरी गरजुग्राहकांनी ही वेळ लक्षात आणून आपला फायदा करून घ्यावा.

पत्ता- वीरकर आणि विद्यार्थी मंडळी
शाईचा कारखाना, पोष्ट–सिन्नर,
जिल्हा नाशीक.

ज्योतिषी.

जनार्दन दत्तात्रय साने. बुधवार नं. २३४, पुणे ज्योतिषाचीं कामें सूक्ष्म तऱ्हेनें केलीं जातात. विशेष माहिती समक्ष अगर पत्रद्वारें.

☞ ಸರಿಯೊಂದು ಸಿದ್ಧವಾದ

ನಮ್ಮ ಅಧಿಕ ಲಕ್ಷಣ ಪಾಸಪುಳ್ಳ ಪಂಚಾಂಗಗಳನ್ನೇ ತರಿಸಿಕೊಳ್ಳಿರಿ, ಪ್ರತಿ ಒಂದಕ್ಕೆ ೨॥ ಆಣೆ. ಶೇ. ೧೦ ರೂ.
ಕೃಷ್ಣರಾವ ಕೇ. ಶೇಣವಿ, ಸ್ಟಾರ ಪ್ರೆಸ, ಕುಮಟಾ

ಹಿಂದುಸ್ಥಾನದ ಯುದ್ಧದ ಸಂಬಂಧದ

ದೊಡ್ಡ ಸಾಲವು. ೧೯೧೭.

ಹಿಂದುಸ್ಥಾನದ ಹಾಗೂ ಸಾಮ್ರಾಜ್ಯದ ಸಹಾಯಾರ್ಥವಾಗಿ ತೆಗೆದಂಥಾದ್ದು.

ಹಿಂದುಸ್ಥಾನ ಸರಕಾರದವರು ಈಗ ಎಲ್ಲರಿಗ ಹಣವನ್ನು ಸರಕಾರಿ ಸೆಕ್ಯೂರಿಟಿಗಳಲ್ಲಿ ಗುಂತಾಯಿಸಿ ಮತ್ತು ಅದರಿಂದ ಯುದ್ಧದಲ್ಲಿ ಜಯಹೊಂದುವವರಲ್ಲಿ ಎಲ್ಲರೂ ಸಹಾಯಮಾಡುವ ಹಾಗೆ ಪ್ರಸಂಗಗಳನ್ನು ತಂದು ಕೊಟ್ಟಿರುತ್ತಾರೆ ನೀವು ಶ್ರೀಮಂತರಿರಲಿಕ್ಕಿಲ್ಲ. ಆದರೆ ಎಲ್ಲಾ ಸ್ಥಿತಿಯು ಜನರಿಗೆ ಯುದ್ಧದಲ್ಲಿ ಜಯಹೊಂದುವ ಸಲುವಾಗಿ ಮದ್ದತ್ತು ಮಾಡಲಿಕ್ಕೆ ಶಕ್ಯವದೆ ೧೯೧೭ ಎಪ್ರಿಲ ೧ನೇ ತಾರೀಖಿನಿಂದ ಯಾವದೇ ಪೋಸ್ಟ ಆಫೀಸ ಸೇವಿಂಗ್ಸ ಬ್ಯಾಂಕಿಗೆ ಹೋಗಿರಿ—

ಅಲ್ಲಿ ಫಸ್ತ ಕೋಟು ೭-೧೨-೦ ಕೊಟ್ಟರೆ ೧೯೨೨ರಲ್ಲಿ ೧೦ ರೂಪಾಯಿ ಸಿಗುವವು.
" ೧೫—೮-೦ " " ೨೦ "
" ೩೮-೧೨-೦ " " ೫೦ "
" ೭೭—೮-೦ " " ೧೦೦ "

ರಾಶಿ ರೂಪಾಯಿ ೫೮೧೨-೮-೦ ಕೊಟ್ಟರೆ ೧೯೨೨ ರಲ್ಲಿ ೭೫೦೦ ರೂಪಾಯಿ ಸಿಗುವವು.

ಈ ಸರ್ಟಿಫಿಕೇಟುಗಳ ರೂಪದಿಂದ ಗುಂತಾಯಿಸಲಿಕ್ಕೆ ಬರುವಂಥಾ ಪರಮಾವಧಿ ರಕಂ ಇಷ್ಟೇ— ಇದರ ಮೇಲೆ ಇನ್‌ಕಂಟ್ಯಾಕ್ಸ ಮಾಫೀ ಇರುತ್ತದೆ ನಿಮಗೆ ಬೆಳೆಯುವ ಮಕ್ಕಳು ಇದ್ದು, ಗಂಡುಹುಡುಗರ ವಿದ್ಯೆಯ ಸಲುವಾಗಿ, ಹೆಣ್ಣು ಮಕ್ಕಳ ವರದಕ್ಷಿಣೆಯ ಸಲುವಾಗಿ ಹಣ ಕೂಡಿ ಹಾಕಬೇಕೆಂತ ಆಲೋಚನೆ ಇದ್ದರೆ ಜಗತ್ತಿನಲ್ಲಿ ಎಲ್ಲಕ್ಕಿಂತ ಅತಿಉತ್ತಮವಾದ ಹಣ ಗುಂತಾಯಿಸುವ ರೀತಿ ಇದೇ ಇರುತ್ತದೆ. ಮತ್ತು ಇದರ ಮೇಲೆ ಇನ್‌ಕಂಟ್ಯಾಕ್ಸ ಮಾಫಿ ಇರುವದೆಂಬದನ್ನು ನೆನಪಿನಲ್ಲಿ ತರಬೇಕು ಯಾವದೇ ಅಕಲ್ಪಿತ ಪ್ರಸಂಗದ ಮೂಲಕ ಅಥವಾ ವಿಪತ್ತಿನಲ್ಲಿ ನಿಮಗೆ ೧೯೨೨ ರ ಪೂರ್ವದಲ್ಲಿ ಹಣ ಬೇಕಾದರೆ ಪ್ರತಿ ೭-೧೨-೦ ರಕಮಿಗೆ ಪೋಸ್ಟ ಆಫೀಸಿನವರು ಕೆಳಗೆ ತೋರಿಸಿದ ಪ್ರಮಾಣದಂತೆ ಆ ತಾರೀಖಿನ ವರೆಗೆ ಬಡ್ಡಿ ಸಹಿತ ರಕಂ ಕೊಡುತ್ತಾರೆ

೧ ನೇ ವರ್ಷದ ಕೊನೆಗೆ—		೮—೧-೦
೨	" "	೮—೭-೦
೩	" "	೮-೧೪-೦
೪	" "	೯—೬-೦
೫	" "	೧೦-೦-೦

ಸರಕಾರೀ ಶರ್ತಗಳು ಬಹಳ ಉದಾರವಿರುತ್ತವೆ ವಿಶೇಷತಃ ಪೋಸ್ಟ ಆಫೀಸದ್ವಾರ ಸಣ್ಣ ರಕಂ ಇಡುವವರಿಗೆ ಅಂತೂ ಬಹಳೇ ಉದಾರವಿರುತ್ತವೆ

War Loan Figures.

SIRSI DIVISION.

Talukas.	*Promised*	*Paid.*
Kumta	1,01,597-4	19,084
Sirsi	1,01,160-4	11,525
Honavar	72,993 4	7,600 4
Siddapur	58,514-12	21,202
Bhatkal	36,189-4	2,706
Total	3,70,654-12-0	62,117-4-0

KARWAR DIVISION

Talukas.	*Promised*	*Paid.*
Karwar	62,292-12	1,400
Ankola	34,736	... ...
Yellapur	14,000	5,150
Mundgod	8,080	1,000
Haliyal	59,369-12	1,480-8
Supa	8,024	5,881-4
Total	1,86,502-8-0	14,911-12-0

THE KANARA NEWS

2nd May 1917

" Act— act in the living Present Heart within and God o'er head "

Kanara's Needs - II

by

(G A Chandavarkar Hyderabad, Decca)

In my last paper on ' Kanara Paramount Need " published in the issue of 12th December last I tried to bring home to the readers the necessity of affording greater educational facilities in the district The problem of education is not always an easy one nay at times it monstrously taxes the patience of even the greatest of educationist In a district like Kanara it assumes a more complex aspect The educational advancement needs among other things a sound financial organisation and men of light and leading That Kanara should remain still a backward district bears ample testimony to the fact that either one or both of these essential conditions are sadly wanting People there are who argue that in Kanara penury of the majority is responsible for the backwardness But poverty by itself can not be and has not been responsible for negligence in matters of education The history of education in the Punjab and in some districts of Bombay gives the direct to the erroneous statement Even the poorest districts and talukas there do boast of at least one secondary school in each But what tale has our district to relate? Are there not still *talukas* in Kanara where the school master we mean the Head master of a High School is conspicuous by his absence? Are the people in a hopeless state of poverty? Has abject poverty made them so callous as to neglect their primary duty of citizens? We think not If there is money for purposes of needless litigation & in wealth can flow for purposes of socio religious ceremonies in abundance— alas' to think of money lavished on dowries' why then does it not flow for satis fying the intellectual needs of the younger generation? We have not the least desire to preach sermons to the rich for they do not need them We are not also anxious to dilate upon the advantages of setting money for education for they are too well known and need no specific mention from an inexperienced youth writing from [illegible] hundreds of [illegible] birth [illegible] [illegible] purposes of education [illegible] middle [illegible] [illegible] Kumta? The following [illegible] with success elsewhere deserve some consideration —

(i) Every house hold however poor it may be should make it a point to set apart a portion of the food stuffs required for daily use When rice is being cooked a handful may be set apart in a separate vessel and when sufficient quantity is collected it may be handed over to the agents whose special business should be to collect funds every fortnight The proceeds from the sales of such articles should go to the education fund started by an organised body in a taluka In the Punjab they have *Ata Fund* funds collected by the sale of flour In Bengal they call this *Mooti chanda* The funds of the various educational institutions there receive substantial aid from such collections Such an allotment for us part of *Athithi yajna* (अतिथि यज्ञ) and *Bhoota yajna* (भूत यज्ञ) It will also teach the younger generation the virtue of self sacrifice in the noble cause of education The *house holder* गृहस्थ and his wife (गृहिणी) will both have indirectly freed themselves from *Rishi -Rinh* (ऋषिऋण) We hope that some arrangements will be made to organise charity in this direction.

ii) Money is spent like water in many of our socio religious ceremonies and we can assert without the least fear of contradiction that at least 60% of the money does not fall in the category of money well spent At times fabulous amounts are spent in dowries feasts on a stupendous scale are arranged and heaven knows what amount is set apart for nautch and other pleasure parties The idea proposed is that whenever any ceremony is performed in any house a compulsory tax must be levied and a small percentage of money must be collected for purposes of education in the locality We know that people will not willingly submit to this useful and necessary [illegible] but if the spiritual heads of the communities— *Gurus*— should issue their mandates calling upon their disciples to contribute at least 2% of the expenses towards education on every such occasion we opine that easily money can be collected and educational funds might be strengthened by such contributions If the financial condition of an institution be strong then none need despair of the future As such it should be the bounden duty of every one to put the existing institutions on a sound financial basis and then think of starting new ones Existing institu

Published by [illegible] Keshav Shenoy at his Star of Kanara Press Kumta

tions should not die for want of funds We hope those at the helm of educational institutions would devise simple but effective means of touching the pockets of the middle classes also

Co-operation at SIRSI.

The fourth annual General meeting of the Sirsi Urban Co-operative Society Ltd was held at the Mitra Samaj Hall, Sirsi, on the 18th Inst Mr V S Nilkund, the local leading pleader was voted to the Chair Mr S N Keshawain, Chairman of the Society then read the report on the working of the Society for the year ending 31st March 1917 The progress of the Society has been maintained as will be seen from the fact that the total number of members has risen from 2[illegible] to 367 and working capital from Rs 30849 to Rs 48038 Deposits have during the year under report increased from Rs 20461 to Rs 33418/ and share capital from Rs 8760 to Rs 12145/

The net profits of the year including Rs 7-12-1 brought forward from the last years account amounted to Rs 2310-12- as against Rs 1449-2-2 of the previous year After deducting ¼ of the amount for carrying to the Reserve, the balance was available to declare a dividend at 16/ But in order to further strengthen financially the position of the Society a dividend at 8% has been declared which absorbed Rs 963 10-6 The Society also set apart Rs 100 as their first contribution to the Education Fund" which they mean to develop by adding to it every year, when it reaches a decent amount, the Managing Committee will work out a scheme for utilising the amount

The Reserve Fund now amounts to Rs 3750/ including the amount added this year Out of it Rs 1000 have already been invested in the shares of the Bombay Central Co operative Bank and Rs 1000/ will shortly be invested in the Indian War Loan

The members of the Managing Committee were then elected for the ensuing year. Mr Keshwain was re elected Chairman Some other business of the Society was then transacted & the proceedings terminated with a vote of thanks to the President

RANDOM THOUGHTS

Co-operation

Elsewhere is given an account of the Co-operative Credit Society of Sirsi We congratulate the Society on the excellent work done during the last year The lions share of credit in the matter certainly goes to Mr Sheshgirirao Keshavain, the energetic & pushful Chairman of the Society We do not understand why other Societies of our district do not send in a brief account of their work for publication One can take a comparative view of the work done by different Societies and give praise where it is due A spirit of healthy emulation will also be brought into play among the several Societies specially among junior ones We hope the authorities concerned will consider the su[illegible] tion

The War Loan

The all India t tal h[illegible] [illegible] the 16 cro e for ce Bombay & C[illegible] cutta trying to keep pace with each other Our Kanara still occupies a high position in the Southern Division in point of War Loan Subscriptions Kumta and Sirsi vying with each other to take the lead The expected figures will be shortly reached and Kanara will have her duty done to the satisfaction of all In this connection it is gratifying to note that the Bombay Catholic Kanarites held a meeting under the chairmanship of the Hon Dr C Fernandes and subscribed on the spot Rs 50,000 to the War Loan the Hon Doctor himself contributing Rs 20 000 Bravo! Kanara Bravo! your work is not yet done Still push on and try to avoid the ur[illegible] be forever fallen "

Mr G V Desai

News comes from Bhatkal that a very warm send-off was given the other day to Mr G V Desai the out-going Mahalkari of that Petha The meeting was a perfect success That testifies to the real popularity of the Officer who, as is well known, has been able to be in the good books of both Government and the people wherever he may be by his genial manners and persuasive acts That in his early career he should have scored so much speaks volumes in his favour We are glad to hear that he is now transferred as Mamlatdar of Sirsi with First Class powers All this is giving the honour where it is due and assessing the true worth of a man We wish him a brighter career

[illegible]

We are very sorry to record the death of Mr G V Bhagwat on Sunday last at his residence here after a protracted illness His father was probably the first Havik gentleman who came to Kumta to do business as a Dalal and built up fair brokerage Mr Bhagwat had his father's good will & reputation to back him He was a leading supari Dalal a Municipal Councillor and Chairman of the local Honorary Bench of Magistrates He was a man of bubbling energy & strong self will When he would undertake a work of whatever type he would pursue the same with tenacity of purpose, & dogged perseverance at any sacrifice He had some magnetism about him which made many a man rally round him He was a man of bountiful instincts & was both kind & helpful to those who sought his shelter His chequered life career would much food for reflection to prospective public men and teach many a lesson to our youngster We offer our sincere condolence to the bereaved family

ಕಾನಡಾವೃತ್ತ

ತಾ ೨೧ ನೇ ೧೯೧೭

ಧನ್ಯ! ಕಾನಡಾ, ಧನ್ಯ!!

ಈಗಿನ [illegible] ಯುದ್ಧದಲ್ಲಿ [illegible] ಮೊದಲಾದ ಜಾತಿಯ ಶತ್ರು[illegible] ಡಿಸಿ ವಿಜಯಪೂರ್ವಕ [illegible] ತ್ರ್ಯದ ಪಾಲಕರೆನಿಸಿ [illegible] ಕ್ಷಪಾತಿಯಾದ ನಮ್ಮ ಬ್ರಿಟಿಶ ಸರಕಾರಕ್ಕೆ [illegible] ಗಣಿತ ದ್ರವ್ಯಬಲವು ಅತ್ಯವಶ್ಯವಾದುದು [illegible] ವಾದದರಿಂದ ರಾಜನಿಷ್ಠ [illegible] ಹ ೧೫೦ ಕೋಟಿ ರೂಪಾಯಿಯ ಸಾಲ ಪ್ರಕಟನೆಯನ್ನು ಹೊರಡಿಸಿದ್ದು ಸರ್ವಶ್ರುತವೇ. ಈ ಹಣವನ್ನು ಸಾಲವಾಗಿ ಜನರು ಕೊಡಲಿಕ್ಕೆ ತೊಡಗಿರುವರು. ನಮ್ಮ ಜಿಲ್ಲೆಯಿಂದ ಜಿಲ್ಲೆಯೊಳಗಿನ ಪ್ರತಿಯೊಂದು [illegible] ೫೦ ೬೦ ಸಾವಿರ ರೂಪಾಯಿಗಳ ವರೆಗೆ ಸಾಲಕೊಡುವ ಆಶ್ವಾಸನೆಗಳು ಪ್ರಕಟವಾಗುತ್ತ [illegible] ದಿನದಿಂದ ದಕ್ಷಿಣ ಭಾಗದಲ್ಲಿ ನಾವೇ [illegible] ದರಿದ್ದು ನೋಡಿ ಯಾರು ತಾನೇ "ಧನ್ಯ ಕಾನಡಾ, ಧನ್ಯ" ಅನ್ನಲಾರರು? ಇತರ ಧನವಂತ ಜಿಲ್ಲೆಗಳಿಗಿಂತ ನಮ್ಮ ಜಿಲ್ಲೆಯು ರಾಜನಿಷ್ಠೆಯಲ್ಲಿ ಮುಂದೆ ಆದದ್ದು — ಅದೂ ಸಹ ಈಗಿನ ದಿನಗಳಲ್ಲಿ — ನಮಗೆ ಎಷ್ಟು ಶ್ರೇಯಸ್ಕರವು! ಈ ವರುಷದ ನಮ್ಮ ಜಿಲ್ಲೆಯ ವ್ಯಾಪಾರದ ಗ್ರಹಗತಿಯು ವಿಪರೀತವೆಂತಲೇ ಹೇಳಬೇಕು. ಅಡಿಕೆ, ಯಾಲಕ್ಕಿ ವ್ಯಾಪಾರಿಗಳಂತೂ ನಷ್ಟ ಹೊಂದಿ ಕುಗ್ಗಿರುವರು. ಆಹಾರವಿಹಾರದ ಜೀನಸುಗಳ ದಾರಣೆಯು ತೇಜಿಯು. ಅದೆ ಉದ್ಯೋಗಧಂದೆಗಳನ್ನು ಜಗದ ನಿರುದ್ಯೋಗಿ ಕೂಲಿಗಾರರಿಗೆ ಕೆಲಸಕೊಡುವಾ ಎಂಥ ಸೇಳಿದರೆ ಭಾಂಡವಲವೇ ದೊರೆಯುವದಿಲ್ಲ. ಹೀಗಾಗಿ ಶ್ರೀಮಂತರ ಶ್ರೀಮಂತತನದ, ಬಡವರ ಬಡತನದ ಅಂತರವು ಕಡಿಮೆಯಾಗುತ್ತ ಹೋಗಿ ಅನೇಕರಿಗೆ ಹಣಗಳಿಸುವ ಮಾತು ಇರಲಿ, ಬರೇ ಹೊಟ್ಟೆ ಹೊರಕೊಳ್ಳುವದು ಸಹ ಪ್ರಯಾಸಕರವಾಗಿದೆ. ಇಂಥ ವಿಚಿತ್ರ ಪ್ರಸಂಗದಲ್ಲಿ ಸಹ ಸಾಮ್ರಾಜ್ಯದ ಕರ್ತವ್ಯಕ್ಕೆ ಎಚ್ಚತ್ತು ಶ್ರೀಮಂತರೂ ಬಡವರೂ ಕೂಡಿ ನಾಲ್ಕೈದು ಲಕ್ಷ ರೂಪಾಯಿಯ ಸಾಲವನ್ನು ಕೊಡಲಿಚ್ಛಿಸುವದು ನಮ್ಮ ಕಾನಡಾಜಿಲ್ಲೆಯ ಅಲೌಕಿಕ ಸ್ವಾರ್ಥತ್ಯಾಗದ ಮತ್ತು ನಿಸ್ಸೀಮ ರಾಜನಿಷ್ಠೆಯ ಸಾಕ್ಷಿಯಾಗಿ ಯಾವಾಗಲೂ ಇರುವದು

ಪ್ರಸ್ತುತಕ್ಕೆ ನಮ್ಮ ಕುಮಟಾ ತಾಲೂಕಿನ ಸಂಗತಿಯನ್ನೇ ನೋಡುವಾ. ಈ ತಾಲೂಕು [illegible] ಕೊಡಿಸಿ [illegible] ಸ್ವೀಕರಿಸಿದಾಗ [illegible] ಎಂಬ ಉದ್ದೇ[illegible] ಕರ್ತವ್ಯಪಾಲನೆಯ [illegible] ಬರುತ್ತಿದೋ [illegible] ಸಹ ಶಕ್ಯ [illegible] ಹತ್ತಿ [illegible] ನಮ್ಮ [illegible] ಪ್ರಜೆ[illegible] ಶ್ರೀಮಂತ [illegible] ಸಂಭಾವಿತ [illegible] ೧,೫೦೦ಕ್ಕೆ ರಕ[illegible] ರುವರು. ನಮ್ಮಲ್ಲಿಯ ಶ್ರೀಮಂತ, [illegible] ಬರೇ [illegible] ಮತ್ತು ಸೇನಕರು ಮಾತ್ರ ಇರಲಿ, ಸಣ್ಣ ಸಣ್ಣ ಅಂಗಡಿಕಾರರು ಸಹ ತಮ್ಮ ಶಕ್ತಿ ಮೀರಿ ಒಂದು ೧೦೦-೫೦ ರೂಪಾಯಿಗಳನ್ನು ಯಥಾಶಕ್ತಿ ಆದರೂ ಕರ್ತವ್ಯವೆಂದು ಸಂತೋಷದಿಂದ ಕೊಡಮಾಡಿ ತಮ್ಮ ಸಾಮ್ರಾಜ್ಯಭಕ್ತಿಯನ್ನು ವ್ಯಕ್ತಪಡಿಸಹತ್ತಿರುವರು. ತಿಂಗಳಿಗೆ ೮-೧೦ ರೂಪಾಯಿಗಳಿಂದ ತಮ್ಮ ಕಷ್ಟಪ್ರದ ಜೀವಿತಾರ್ಥವನ್ನು ಹ್ಯಾಗಾದರೂ ಸಾಗಿಸುವ ಬಡ ನೌಕರರು ಸಹ ಒಂದೆರಡು ತಿಂಗಳ ವೇತನವನ್ನು ಸ್ವೇಚ್ಛೆಯಿಂದ ಕೊಡಹತ್ತಿರುವರು. ಕನ್ನಡ ಶಾಲೆಯ ಬಾಲ ಪ್ರಜೆಗಳು ಶಿಕ್ಷಣಕ್ಕೆ ಅವಶ್ಯಕವಾದ ವೆಚ್ಚದ ಹೊರತು ಮತ್ತೇನೂ ತಿನ್ನದೇ, ಕಳೆದು ಹಾಕದೇ ಯಥಾಶಕ್ತಿ ಎರಡು ನಾಲ್ಕು ಆಣೆಗಳನ್ನು ಕೂಡಿಸಿ ತಮ್ಮ ಯುದ್ಧ ಸಾಲವನ್ನು ಎತ್ತುವರಿದ್ದಾರೆಂದು ಸುದ್ದಿ ಅದೆ!

ಈ ಎಲ್ಲ ಸಂಗತಿಗಳನ್ನು ನಿರೀಕ್ಷಿಸಲು ಈಗ ರಾಜಪ್ರಜೆಗಳ ಧರ್ಮದ ಪರೀಕ್ಷೆಯಾಗಹತ್ತಿದೆಂದು ಹೇಳಲು ಅಡ್ಡಿ ಇಲ್ಲ. ಯುದ್ಧಧಂದಿನ ಹಾಗೆಯೇ ಯುದ್ಧಸಾಲದ ಪ್ರಸಂಗವೆಂದರೆ, ಸರಕಾರವು ಪ್ರಜೆಗಳ ರಾಜನಿಷ್ಠೆಯನ್ನೂ ಕರ್ತವ್ಯದಕ್ಷತೆಯನ್ನೂ, ಪ್ರಜೆಗಳು ಸರಕಾರದ [illegible] ವ್ಯತಿಗೂಡಿದ ನ್ಯಾಯಪ್ರೀತಿಯನ್ನೂ ಪ್ರಜಾವತ್ಸಲತೆಯನ್ನೂ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಸಮಯವು ಮಹಾಯುದ್ಧದಂಥ ತೀರ ಇಕ್ಕಟ್ಟಿನ ಪ್ರಸಂಗದಲ್ಲಿ ಸಹ ನಮ್ಮ ಸರಕಾರವು ತನ್ನ ಉದಾತ್ತ ತತ್ವಗಳನ್ನನುಸರಿಸಿ— ಸಕ್ತಿ ಏನೂ ಇಲ್ಲ, ಹೆಚ್ಚಿನ ಆಗ್ರಹವೂ ಸಹ ಇಲ್ಲ— ಬರೇ ಜನರ ಆತ್ಮಸಂತೋಷದ ಮೇಲೆಯೇ ಅವಲಂಬಿಸಿದ್ದದ್ದೂ, ಪ್ರಜೆಗಳಾದರೂ ತಮ್ಮ ಸ್ಥಿತಿಗತಿಯ ಮಾತುಕಥೆಗಳನ್ನು ಬದಿಗೆ ಒತ್ತಿ ಕರ್ತವ್ಯಕ್ಕೆ ಎಚ್ಚತ್ತು ಲಕ್ಷಗಟ್ಲೆ ರೂಪಾಯಿಗಳನ್ನು ಸಾಲಕ್ಕೆ ಅರ್ಪಿಸುವದೂ, ಇಬ್ಬರ ಘನತೆಗೂ, ಔದಾರ್ಯಕ್ಕೂ, ಕರ್ತವ್ಯನಿಷ್ಠೆಗೂ ಶೋಭಿಸುವಂಥಾದ್ದೇ ಸಂಗತಿಯು. ಸುಧಾರಿಸಿದಂಥ ಆಂಗ್ಲಸರಕಾರವು ನಮ್ಮದು ಇಲ್ಲದಿದ್ದರೆ ಮೊಂಗಲಾಯಿಯ ಜುಲುಮು ನಮಗೆ ಸಹಿಸಬೇಕಾಗುತ್ತಿತ್ತು. ಇಂಗ್ರೇಜಿ ಸರಕಾರದ ಔದಾರ್ಯದ ಮತ್ತು ಶಿಕ್ಷಣದ ಲಾಭಗಳನ್ನು ಸವಿಗೆ ಕೊಟ್ಟಬಗ್ಗೆ ಇಂಥ ಸಂದರ್ಭ[illegible] ಸರಕಾರದ ಉಪಕಾರವನ್ನು ನಾವು ಎಷ್ಟೆಂದು ಎಣಿಸುವೆವು! ನೂರು ನೂರಾಇಪ್ಪತ್ತು ವರುಷದ ಸುಧಾರಣೆಯ ಆಳಿಕೆಯಿಂದ ಪವಿತ್ರರಾಗದೇ ಯುದ್ಧಸಾಲದಂಥ ಸಾಮ್ರಾಜ್ಯ ಕಾರ್ಯದಲ್ಲಿ ಕರ್ತವ್ಯ ಪರಾಙ್ಮುಖರಾಗುವಷ್ಟು ನಾವು ಅಧಮರುಳರೇ ಆಗಿದ್ದರೆ ಅನ್ಯ ಜನಾಂಗದವರ ದೃಷ್ಟಿಗೆ ನಾವು ಹಾಸ್ಯಾಸ್ಪದರಾಗುತ್ತಿದ್ದೆವಲ್ಲವೇ? ಇಂಥ ಪ್ರಸಂಗದಲ್ಲಿ ನಮ್ಮ ಅಜ್ಞಾನದಿಂದಾಗಲೀ, ಮೂರ್ಖತನದಿಂದಾಗಲಿ ಸರಕಾರಕ್ಕೆ ನಿರುಪಾಯವಾಗಿ ಸಕ್ತಿಯ ಉಪಾಯಗಳನ್ನು ಯೋಜಿಸುವ ಅವಶ್ಯಕತೆಯನ್ನು ನಾವು ಉಂಟುಮಾಡಿದರೆ ಶತಕ ಅರ್ಧಶತಕ ಅವ್ಯಾಹತ ನಡೆದ ಸುರಾಜ್ಯದ ಪರಿಣಾಮವು ನಮ್ಮ ಜನಾಂಗದ ಮೇಲೆ ಏನಾದಂತೆ ಆಗುತ್ತಿತ್ತು? ಇರಲಿ ನಾವು ಕರ್ತವ್ಯಕ್ಕೆ ಎಚ್ಚರಾದದ್ದು ಸಹಜವು, ಯಥಾಯೋಗ್ಯವು. ಈಗ ಈ ಪ್ರಕಾರ ಸರಕಾರ ಮತ್ತು ಪ್ರಜೆಗಳೊಳಗೆ ದಿನೇದಿನೇ ಬೆಳೆಯುತ್ತಿರುವ ಪರಸ್ಪರ ಪ್ರೀತಿ ವಿಶ್ವಾಸಗಳು ಹಿಂದುಸ್ಥಾನದ ಉಜ್ವಲ ಭವಿಷ್ಯಕಾಲದ ಶುಭಚಿನ್ಹಗಳಲ್ಲೆಂದು ಯಾರು ಹೇಳ್ಯಾರು? ನಮ್ಮ ಕರ್ತವ್ಯನಿಷ್ಠೆಯ ಮತ್ತು ಸ್ವಾರ್ಥತ್ಯಾಗದ ಧೈರ್ಯವನ್ನು ವಿಶ್ವಸಿಸಿ ಅಧಿಕಾರಿಗಳು ಮಾಡಿದ ಸೂಚನೆಯಂತೆ ಕುಮಟಾ ತಾಲೂಕಿನವರು ಒಂದು ಲಕ್ಷ ರೂಪಾಯಿಯ ಸಾಲವನ್ನು ಕೊಟ್ಟದ್ದು ಅವರಿಗೆ ಭೂಷಣಾವಹವೇ. ಇದರಿಂದ ಅವರು ಸತ್ವಹರಣರಾಗಲಿಲ್ಲೆಂಬದು ಸ್ಪಷ್ಟವದೆ. ಹ್ಯಾಗಾದರೂ ಮಾಡಿ ೧ ಲಕ್ಷದ ರಕಮು ತುಂಬಿಕೊಟ್ಟೇಕೊಟ್ಟರು. ಇಲ್ಲದಿದ್ದರೆ ಇಷ್ಟು ದಿವಸ ದುಡಿದು ರಾಜನಿಷ್ಠೆಯಿಂದ ಗಳಿಸಿದ ಹೆಸರನ್ನು ಕಳಕೊಂಡು ಛೀ ಅನ್ನಿಸಕೊಳ್ಳಬೇಕಾಗುತ್ತಿತ್ತು. ಈ ಪ್ರಕಾರ

Suppliment to this issue.

ಜಗದ್ವಿಖ್ಯಾತವಾದ **ದೇವೀಪ್ರಸಾದಕಂಪೆನಿಯ "ಸುಖಾಂಜನ"** ವೆಂಬ

ಧನ್ವಂತರೀ ಬಾಮ್

ಹಿಂದುಸ್ಥಾನದ ವನಸ್ಪತಿಗಳಿಂದಲೇ ತಯ್ಯಾರಿಸಲ್ಪಟ್ಟ ವೇದನಾಹಾರಿ ಮುಲಾಮು, ಇದರ ಉಪಯೋಗದಿಂದ ವಾತ, ಸಂಧಿವಾತ, ಹರಿವಾತ, ಪಂಗುವಾತ, ಪಕ್ಷವಾತ, ತಲೆಸಿಡಿತ, ತಲೆನೋವು, ಗಂಟುನೋವು ಸೊಂಟನೋವು, ಶಿರೋಭಾರ, ಅರ್ಧಾಂಗವಾಯು, ಪಾರ್ಶ್ವಶೂಲೆ. ಸಂದುನೋವು, ಘಾಯ, ಜಖಮು ಹಲ್ಲುನೋವು, ಉಳುಕು, ಕನ, ಶಳಕ, ಜಗತ, ಶೈತ್ಯ, ಕಟಿಶೂಲೆ, ಎದೆನೋವು, ಗಂಟಲುನೋವು, ನರಡಿ, ಬೆನ್ನುನೋವು ಮುಂತಾದ ಎಲ್ಲಾತರದ ವೇದನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಎಳೆಯ ಮಗುವಿನ ಕೋಮಲವಾದ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಉಪಯೋಗಿಸಬಹುದು ದೇಶದೇಶಾಂತರಗಳಿಂದ ಅನೇಕ ಜನ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರ (ಸರ್ಟಿಫಿಕೇಟು)ಗಳನ್ನೂ ಬಹುಮಾನಗಳನ್ನೂ ಪಡದಿರುತ್ತದೆ. ಎಲ್ಲಾಕಡೆಗಳಲ್ಲಿಯೂ ದೊರೆಯುತ್ತಿದ

ಬಾಟ್ಲಿ ೧ರ 0—7—0, ಒಂದು ಡಜನ್ ಬಾಟ್ಲಿಗಳಿಗ 1—12—0

ಈ ನಮ್ಮ 'ಧನ್ವಂತರೀ ಬಾಮಿಗೆ' ದೊರೆತ ಕೆಲವು ಸರ್ಟಿಫಿಕೇಟ್‌ಗಳನ್ನು ಈ ಕೆಳಗೆ ನಮೂದಿಸಿವೆ—

ರಾವ್‌ಬಹದ್ದೂರ್ ಎನ್ ಸುಬ್ಬರಾವ್, ಬಿ ಎ. ಬಿ ಎಲ್ ಮ್ಯುನ್ಸಿಪಲ್ ಚೆಯರ್‌ಮೇನರು, ಮಂಗಳೂರು, ಮತ್ತು ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರು ಬರೆಯುತ್ತಾರೆ—ನಿಮ್ಮ **'ಧನ್ವಂತರೀಬಾಮ್'** ಅತಿ ಉತ್ತಮವಾದ ಒಂದು ಮಹೌಷಧವಾಗಿರುತ್ತದಾಗಿ ತಿಳಿಸುವದ ಸಂತೋಷಪಡುತ್ತೇನೆ ಇದು ಓರಿಯಂಟಲ್‌ಬಾಮನ್ನು ಹಿಂಜರಿಯುವುದಿಲ್ಲ ನಿಮ್ಮ ಈ ಕೆಲಸಕ್ಕೆ ಒಳ್ಳೆ ವಿಜಯವುಂಟಾಗಲೆಂದು ಬಯಸುತ್ತೇನೆ

ಎಮ್ ಶಿವರಾವ್, ಎಲ್ ಎಮ್ (ಡಬ್ಲಿನ್) ಎಲ್ ಆರ್ ಸಿ ಪಿ ಎಂಡ್ ಎಸ್ (ಎಡಿನ್‌ಬರೊ) ಎಲ್ ಎಫ್ ಸಿ ಎಂಡ್ ಎಸ್, (ಗ್ಲಾಸಗೋ)ಮೆಡಿಕಲ್ ಪ್ರೆಕ್ಟೀಶನರ್, ಮಂಗಳೂರು, ಇವರು ಬರೆಯುತ್ತಾರೆ—ದೇವೀಪ್ರಸಾದ ಕಂಪೆನಿಯ **'ಧನ್ವಂತರೀಬಾಮು'** ಸುವಾಸನೆಯುಳ್ಳದ್ದಾಗಿ ತಲೆನೋವಿಗೂ, ಜಖ್ಖದ ಭಾಗಗಳಿಗೂ, ವಾತ ಮುಂತಾದ ಸಮಸ್ತ ಬೇನೆಗಳಿಗೂ ಅತ್ಯುತ್ತಮವಾದ ದಿವ್ಯೌಷಧವಾಗಿರುತ್ತದೆ. ಇವರ **'ರಿಂಗ್ ವರ್ಮ್ (ಗಜಕರ್ಣ) ಮುಲಾಮು'** ಎಲ್ಲಾ ತರದ ದದ್ದುಗಳ ವ ಖಜ್ಜಿಗಳ ಮೇಲೆ ಶೀಘ್ರಗುಣಕೊಡುವಂಥಾದ್ದು ಇವರ **'ದಂತರತ್ನ'** ಹಲ್ಲುಗಳ ದುರ್ಗಂಧವನ್ನು ನಾಶಮಾಡುವ ಸುಗಂಧವಾದ ದಿವ್ಯೌಷಧವಾಗಿರುತ್ತದೆ

ಶಿವರಾವ್, ಶಿವರಾಮ ಶಾಸ್ತ್ರಿ, ಬಿ ಎ ಎಲ್ ಎಲ್ ಬಿ ಕಾರವಾರ್, ಇವರು ಬರೆಯುತ್ತಾರೆ—ತಮ್ಮ **'ಧನ್ವಂತರೀ ಬಾಮು'** ಮತ್ತು **'ಗಜಕರ್ಣ ಮುಲಾಮು'** ಇವೆರಡನ್ನು ನಾನು ಸ್ವತಃ ಉಪಯೋಗಮಾಡಿ ನೋಡಿದೆನು ಅದರಿಂದ ನನಗೆ ಬಹಳ ಚಲೋ ಗುಣ ಸಿಕ್ಕಿರುತ್ತದೆ ಈ ಸಂಗತಿ ತಮಗೆ ತಿಳಿಸಲು ತುಂಬಾ ಸಂತೋಷಪಡುತ್ತೇನೆ ತಮ್ಮ ಕಂಪೆನಿಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ತಮಗೂ ಶ್ರೇಯೋಭಿವೃದ್ಧಿಯಾಗಲೆಂದು ನಿರಂತರ ಅಪೇಕ್ಷಿಸುತ್ತೇನೆ

ಜೆ ಕೊಯಿಲೊ, ಸಬ್ ಅಸಿಸ್ಟಾಂಟ್ ಸರ್ಜನ್, ಭಟ್ಕಳ್, ಇವರು ಬರೆಯುತ್ತಾರೆ—ತಮ್ಮ **'ಧನ್ವಂತರೀ ಬಾಮನ್ನು'** ಉಪಯೋಗಮಾಡಿ ನೋಡಿದ್ದಲ್ಲಿ ಬಹಳ ಸರ್ವೋತ್ಕೃಷ್ಟವೆಂದು ನನಗೆ ತಿಳಿದುಬಂದಿರುತ್ತದೆ

ಎನ್ ಎಸ್ ಹೆಗ್ಗಡೆ, ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಚಂದ್‌ಘಡ್, ಬೆಳಗಾಂವು ಜಿಲ್ಲೆ, ಇವರು ಬರೆಯುತ್ತಾರೆ—ಅಯ್ಯಾ ನಿಮ್ಮ ಬಾಮಿನ ಬಾಂಗಿಯು ನನಗೆ ತಲುಪಿತು ನಾನು ಸ್ವತಃ ಪರೀಕ್ಷಿಸಿದ ವಿನಹ ನನ್ನ ಅಭಿಪ್ರಾಯ ತಮಗೆ ಕೊಡಲಿಲ್ಲ ಈಗ ನಿಮ್ಮ ಕಾರ್ಯಸಾಧಕ ಔಷಧವು ಮಾಡಿದ ಆಶ್ಚರ್ಯಕರವಾದ ಗುಣವನ್ನು ನಿಮಗೆ ತಿಳಿಸುವರೆ ನಾನು ಬಹಳ ಸಂತೋಷಪಡುತ್ತೇನೆ ದೇವರು ನಿಮ್ಮ ಉದ್ಯೋಗದಮೇಲೆ ಅವನ ವರಗಳನ್ನು ದಯಪಾಲಿಸಲಿ

ದೇವಿಪ್ರಸಾದ **'ಗಜಕರ್ಣ ಮುಲಾಮು'**

ಇದನ್ನು ಒಂದೇ ಒಂದು ಸಾರಿ ಹಚ್ಚುವುದರಿಂದ ಖಜ್ಜಿ, ದದ್ದು, ಸೊಂಟಖಜ್ಜಿ, ನವೆ ಮುಂತಾದ ಸಮಸ್ತವಿಧವಾದ ತ್ವಕ್‌ವ್ಯಾಧಿ (ಚರ್ಮವ್ಯಾಧಿ)ಗಳು ಬಹು ಕ್ಷಿಪ್ರದಲ್ಲಿ ನಿವಾರಣೆಯಾಗುವುವು ಇದರಿಂದ ಇತರ ಮುಲಾಮುಗಳಂತೆ ಸೈರಿಸಲಾರದ ಉರಿಯುಂಟಾಗುವುದಿಲ್ಲ ಚರ್ಮದ ತೇಜಸ್ಸುಕುಂದಿಸುವುದಿಲ್ಲ, ಎಂಥಾ ಕಠಿಣವಾದ ಗಜಕರ್ಣವಾದರೂ ಮೂರುಸಾರಿ ತಾಗಿಸುವುದರೊಳಗಾಗಿ ಇದರ ಮೂಲೋತ್ಪಾಟನವಾಗುವುದು.

ಬಾಟ್ಲಿ ೧ರ 0—5—0, ಒಂದು ಡಜನಿಗೆ 3—8—0

ದೇವಿಪ್ರಸಾದ **'ಅಂಟಿಮಲೇರಿಯಾ' ಮಾತ್ರೆಗಳು**

ಇದರ ಸೇವನೆಯಿಂದ ಎಲ್ಲಾ ತರದ ಮಲೇರಿಯಾ ಜ್ವರಗಳು ಅತಿ ಶೀಘ್ರವಾಗಿ ನಿವಾರಣೆಯಾಗುವುವು ಮಲೆನಾಡು ಜ್ವರಗಳಿಗೆ ಅಪ್ರತಿಮವಾದ ಮದ್ದೆಂದರೆ ಇದೊಂದೇ ಸರಿ. ಇದರಂತಹ ನಿರಪಾಯವೂ ಗುಣಕಾರಿಯೂ ಆದ ಬೇರೆ ಮದ್ದೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಬಾಟ್ಲಿ ೧ರ 0—12—0, ಒಂದು ಡಜನ್ ಬಾಟ್ಲಿಗಳಿಗೆ 8—0—0

ವಾತುರ ಜನರು ನೆರೆದಿದ್ದರು ಇವರ ಮೇಲಿಂದ " ಪ್ರಸಾದ ಚಿನ್ಹಾನಿ ಪುರಃ ಫಲಾನಿ " ಎಂತ ಹೇಳಲು ಅ

ಔದಾಸೀನ್ಯವು ದೂರವಾಗಿ ಅವರು ಹೆಚ್ಚು ಕರ್ತವ್ಯ ಜಾಗೃತರಾದರೆ ಅವರ ಮ್ಯುನಿಸಿಪಾಲಿಟಿಗಳೂ ಲೋ

ನ್ನು ಕೊಡಲಿ, ಅವಕಾಶ ನಮ್ಮ ಒಪ್ಪಿಗೆ. ಯಾವ ಕಾಲೀಯ ಕೂಗಿನಿಂದಾದರೂ ದೊರೆಗಾದರಾಯಿತು.

... ದ ರೂಪಾಯಿಗಳನ್ನು ಕೊಡಿಸಿ ... | ... ದ ಜ್ಯಾಗೂಂಡ ನ್ಯಾಯಪ್ರೀತಿಯನ್ನೂ ಪ್ರಜಾ

ದೇವಿಪ್ರಸಾದ **'ಜಯಮಂಗಲವಟಿ'**

ಇದು ಎಂತಹ ಕಠಿಣವಾದ ಜ್ವರವನ್ನಾದರೂ ಒಂದೆರಡು ದಿವಸದಲ್ಲಿ ನಿಸ್ಸಂಶಯವಾಗಿ ನಿವಾರಣೆಮಾಡುವುದು ಇದು ಏಕಾಹಿಕ ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಶೀತ, ವಿಷ ಮುಂತಾದ ಸಮಸ್ತ ವಿಧವಾದ ಜ್ವರಗಳನ್ನು ಬಿಡದೆ ಗೆಲ್ಲುವುದು ಅನುಭವಸಿದ್ಧವಾದುದ

ಬಾಟ್ಲಿಗೆ 1—0—0 ಒಂದು ಡಜನಿಗೆ 10—0—0

ದೇವಿಪ್ರಸಾದ **'ರೋಮ ಸಂಹಾರಿ'**

ಈ ಪುಡಿಯನ್ನು ದಪ್ಪವಾಗಿ (ವೆಸ್ಲೀನಿನಂತೆ) ತಣ್ಣೀರಿನಲ್ಲಿ ಮಿಶ್ರಮಾಡಿ ಕೂದಲು ಇರುವ ಸ್ಥಳಕ್ಕೆ ದಪ್ಪವಾಗಿ ಹಚ್ಚಲು ಮೂರು ನಿಮಿಷದೊಳಗಾಗಿ ಕೂದಲು ಇಲ್ಲದೆ ಇದು ಹೋಗಿ ನಶ್ಶೆಯಾಗುವುದು ಚರ್ಮದ ಕಾಂತಿಯನ್ನು ಕುಂದಿಸುವುದಿಲ್ಲ, ಬಹಳಕಾಲದವರೆಗೆ ಕೂದಲು ಬೇರು ನ್ನವಿಸ್ಸ ಉಳಿಯುವುದಿಲ್ಲ ಬಾಟ್ಲ 1 ರ 0—8—0, ಡಜನಿಗೆ 5-0-0.

ದೇವಿಪ್ರಸಾದ **ಗುಲಾಬಿ** ಮತ್ತು **ಲಿಂಬೆಹಣ್ಣಿನ ಶರಬತ್ತುಗಳು**

ಅತ್ಯಂತ ಅಮೋಘವಾದ ಈ ಶರಬತ್ತಿನ ಐದು ಬಿಂದುಗಳನ್ನು ಒಂದು ಗ್ಲಾಸು ನೀರಿಗಾಗಲಿ, ಸೋಡಾವಿಗಾಗಲಿ ಹಾಕಿ ಕುಡಿದರೆ, ಬಹು ಮಧುರವೂ ಮನೋಹರವೂ ಆಗುವುದು, ದಾಹಶಾಂತಿಯಾಗುವುದು, ಬಿಸಿಲುಕಾಲದಲ್ಲಿ ಇದನ್ನು ಕುಡಿಯುವುದರಿಂದ, – ದೇಹದ ಉಷ್ಣಶಮನವಾಗುವುದು. ಮೂತ್ರದೋಷವನ್ನು ನಿವಾರಣೆಮಾಡುವುದು, ದೇಹಕ್ಕೆ ಶಕ್ತಿಯನ್ನುಂಟುಮಾಡುವುದು ಮಲಶೋಧನೆಯನ್ನು ಸರಾಗವಾಗುವಂತೆ ಮಾಡುವುದು, ಪ್ರಯಾಣಿಕರಲ್ಲಿ ಪ್ರತಿಬ್ಬರು ಇದನ್ನು ಇಟ್ಟುಕೊಂಡು ಉಪಯೋಗಿಸಿಕೊಳ್ಳುವುದರಿಂದ ಜಲದೋಷನಿವಾರಣೆಯಾಗುವುದು

ಸುಮಾರು ೨0 ಸಾರಿಗೆ ಸಾಕಾಗಬಹುದಾದ ಬಾಟ್ಲ 1 ರ 0 -8—0, ಒಂದು ಡಜನಿಗೆ 5—0—0

ದೇವಿಪ್ರಸಾದ **'ರತಿವಿಲಾಸ'** ಎಂಬ **ವೀರ್ಯಸ್ತಂಭನವಟಿ**

ರತಿವಿನೋದ ಕಾಲದಲ್ಲಿ ಜಾಗ್ರತೆಯಾಗಿ ವೀರ್ಯಸ್ಖಲನವಾಗದಂತೆ ಬಹಳ ಸಮಯ ಪರಿಯಂತರ ಶುಕ್ಲಕ್ಕೆ ಶಕ್ತಿಯನ್ನು ಕೊಟ್ಟು ಕಾಮಾದಿ ವಿಷಯಾಸಕ್ತಿಯನ್ನು ಹೆಚ್ಚಿಸಿ ಸಂಭೋಗದಲ್ಲಿ ಮಹದಾನಂದವನ್ನುಂಟುಮಾಡುವುದು.

ಬಾಟ್ಲ 1 ರ 1—0—0, ಒಂದು ಡಜನು ಬಾಟ್ಲಗಳಿಗೆ 10—0—0.

ದೇವಿಪ್ರಸಾದ **'ವಾತವಿಧ್ವಂಸಿನೀ ತೈಲ'**

ಇದರಿಂದ ವಾತ, ಪಕ್ಷವಾತ, ಪಂಗುವಾತ, ಹರಿವಾತ ಮುಂತಾದ ಸಮಸ್ತ ವಿಧವಾದ ವಾತಗಳನ್ನೂ ಕಸ, ಜಗತ, ಉಳುಕು ಮುಂತಾದ ಸಮಸ್ತ ಬೇನೆಗಳನ್ನೂ ಶೀಘ್ರವಾಗಿ ಪರಿಹರಿಸುವುದು

ಬಾಟ್ಲ 1 ರ 1—0—0, ಒಂದು ಡಜನು ಬಾಟ್ಲಗಳಿಗೆ 10—0—0

☞ ಇವುಗಳಲ್ಲದೆ ನಮ್ಮಲ್ಲಿ ಶಾಸ್ತ್ರೋಕ್ತವಾದ ಅನೇಕ ಮಹೌಷಧಗಳೂ, ಸುಗಂಧದ್ರವ್ಯಗಳೂ, ಕೇಶತೈಲಗಳೂ ಇರುತ್ತವೆ ಇವುಗಳ ಬಗ್ಗೆ ನಮ್ಮ ದೊಡ್ಡ ಕೆಟಲಾಗನ್ನು ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪು ಇಟ್ಟು ಬರೆದುಕೊಂಡಲ್ಲಿ **ಉಚಿತವಾಗಿ** ರವಾನಿಸಲ್ಪಡುವುದು 2 ಮೇಲಿನ ಎಲ್ಲಾ ಔಷಧಗಳಿಗೂ ವಿ ಪಿ ಚಾರ್ಜು ವಗೈರೆ ಪ್ರತ್ಯೇಕ ಬೀಳುವುದು 3. ಒಂದು ರೂಪಾಯಿಗೆ ಕಡಿಮೆಯಾದ ಔಷಧಗಳನ್ನು ವಿ ಪಿ ಮಾಡುವುದಿಲ್ಲ 4. ಜಾಸ್ತಿಯಾಗಿ ಔಷಧಗಳನ್ನು ಕೊಳ್ಳುವವರು ಕಾಲಾಂಶ ಹಣವನ್ನು ಮುಂಗಡವಾಗಿ ತಲ್ಪಿಸಬೇಕಾಗುವುದು 5. **ಹೆಚ್ಚಾಗಿ ಔಷಧಗಳನ್ನು ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಉಪಯುಕ್ತವಾದ ಯೋಗ್ಯ ಕಮಿಷನ್ ಕೊಡಲ್ಪಡುವುದು.** 6 ಎಲ್ಲಾ ಕಡೆಗಳಲ್ಲಿಯೂ ಏಜಂಟರುಗಳು ಬೇಕಾಗಿದೆ 7 ಏಜಂಟರಾಗಲು ಅಪೇಕ್ಷೆಯುಳ್ಳವರು ಬರೆದುಕೊಳ್ಳಬಹುದು. 8 ಎಲ್ಲಾ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಬೇಕು 9 **'ಧನ್ವಂತರೀ ಬಾಮಿನ'** ಸ್ಯಾಂಪಲನ್ನು ಅಪೇಕ್ಷಿಸುವವರು ಒಂದೂವರೆ ಆಣೆ ಸ್ಟಾಂಪುಯಿಟ್ಟು ಬರೆದುಕೊಂಡಲ್ಲಿ ರವಾನಿಸಲ್ಪಡುತ್ತೆ

ಎಲ್ಲಾ ಔಷಧಗಳು ಎಲ್ಲಾ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರನಡೆಸತಕ್ಕದ್ದು—

ಮೆಸರ್ಸ್ ಪಿ. ಸೀತಾರಾಮಯ್ಯ ಎಂಡ್ **ಬ್ರದರ್ಸ್,** ಕ್ಲೋತ್ ಮರ್ಚೆಂಟ್ಸ್, **ಬಾರ್ಕೂರು.** **ಇವರಲ್ಲಿಯೂ ದೊರೆಯುತ್ತೆ.**

ಪಿ. ಸುಬ್ಬರಾವ್, ಮೆನೇಜಿಂಗ್ ಪ್ರೊಪ್ರೈಟರ್, **ದೇವೀಪ್ರಸಾದ ಕಂಪೆನಿ, ಪಾಂಡೇಶ್ವರಂ,** ಪೋಸ್ಟು **ಬಾರ್ಕೂರು,** ದಕ್ಷಿಣ ಕನ್ನಡಾ

ಪ್ರಭಾಕರ ಮುದ್ರಾಯಂತ್ರ, ಉಡುಪಿ

ಇತರ ತಾಲೂಕಾಗಳೂ ತಮ್ಮ ಪಾಲಿಗೆ ಬಂದಷ್ಟು ರಕಮುಗಳನ್ನು ಕೊಟ್ಟು ರಾಜನಿಷ್ಠೆಯ ವ್ರತವನ್ನು ಆಚರಿಸಿದರೆ ಯುದ್ಧಕಾಲದ ಇತಿಹಾಸದಲ್ಲಿ ಕಾನಡಾ ಜಿಲ್ಹೆಯ ಹೆಸರು ಚಿರಸ್ಮರಣೀಯವಾಗುವದು.

ಸಾಲದ ಹಣದಿಂದ ಬಡ್ಡಿ ಸಿಗುವ ಸ್ವಾರ್ಥವು ಕೈಗೂಡಿ ಸಾಮ್ರಾಜ್ಯಸೇವೆಯನ್ನೂ ದೇಶಸೇವೆಯನ್ನೂ ಸಹಜವಾಗಿ ಸಾಧಿಸಿದಂತಾಗುತ್ತದೆ ಮತ್ತು ಅದರ ಲಾಭಗಳು ಭವಿಷ್ಯದ ಉದರದಲ್ಲಿದ್ದರೂ ಬಹಳೇ ಸುಖಕರವಾಗಿರುವವೆಂತ ಈಗಲೇ ಹೇಳಬಹುದು. ಶ್ರೀಮಂತರೂ ಬಡವರೂ ತಮ್ಮ ಅರ್ಜಿತಾರ್ಜಿತ ವಸ್ತುಗಳನ್ನು ಬದಿಗೊತ್ತಿ ಸಿಕ್ಕದಷ್ಟು ಹೆಚ್ಚೆಚ್ಚು ಹಣವನ್ನು ಕೂಡಿಸಿ 'ಜರ್ಮನರಿಂದ ಸ್ವಾತಂತ್ರ್ಯದ ಮತ್ತು ಸುಧಾರಣೆಯ ಶತ್ರುಗಳು ಬೇಗನೆ ನಾಶವಾಗಲೆಂದು' ಶಪಿಸಿ ನ್ಯಾಯನಿಷ್ಠ ಸರಕಾರದ ಕೈಯೊಳಗೆ ಇಂಥ ಹಣವನ್ನು ಯುದ್ಧಕಾರ್ಯಕ್ಕೆ ಅರ್ಪಿಸಿದರೆ ಅದು ವೈರಿಗಳನ್ನು ಯಮಸದನಕ್ಕೆ ಅಟ್ಟದೇ ಬಿಟ್ಟೀತೇ? ಇದಲ್ಲದೇ ಯುದ್ಧಸಮಾಪ್ತಿಯ ನಂತರ ಸಂಕಟಕಾಲದಲ್ಲಿ ಕಷ್ಟಪಟ್ಟು ನೆರವಾದ ಬಡಭಾರತೀಯ ಬಂಧುರನ್ನು ದಯಾಳು ಆಂಗ್ಲ ಸರಕಾರವು ತಮ್ಮ ಸುಖಮಯ ದಿವಸಗಳಲ್ಲಿ ಎಂದೆಂದೂ ಮರೆಯಲಿಕ್ಕಿಲ್ಲ ಎಂತ ಎಲ್ಲ ಪ್ರಜೆಗಳು ನಂಬಿರತಕ್ಕದ್ದು. ನ್ಯಾಯಪ್ರಿಯ ಮತ್ತು ಸ್ವಾತಂತ್ರ್ಯಪ್ರಿಯ ಬ್ರಿಟಿಷ ದೇವತೆಯು ನಮ್ಮ ಸಾತ್ವಿಕ ಆಕಾಂಕ್ಷೆಗಳನ್ನು ಎಂದೂ ನಿರಾಕರಿಸಲಿಕ್ಕಿಲ್ಲ. ಆದದರಿಂದ ಜನರಿಗೆ ಸಂಕ್ಷೇಪತಃ ನಾವು ಹೇಳುವದೇನಂದರೆ, ನಿಮ್ಮ ಸ್ವಾರ್ಥವನ್ನೂ ಬಡತನವನ್ನೂ ಬದಿಗ ಸಾರಿರಿ. ದೂರದೃಷ್ಟಿಯಿಂದ ವಿಚಾರಮಾಡಿ ಯುದ್ಧಸಾಲಕ್ಕೆ ಹಣಕೊಡತಕ್ಕವರು ಶೀಘ್ರವೇ ಕೊಟ್ಟು, ಕೊಟ್ಟವರು ಮತ್ತಿಷ್ಟು ಕೊಟ್ಟು ಸ್ವಾರ್ಥವೆಂಬುವದೇ ಸಾಮ್ರಾಜ್ಯಹಿತವೆಂತ ತಿಳಿದು, ಸ್ವದೇಶಾರ್ಥ ಸರಕಾರದ ಪ್ರೀತಿಪ್ರಸಾದಗಳನ್ನು ಈ ಮಹಾಪರ್ವಕಾಲದಲ್ಲಿ ಸಂಪಾದಿಸಿ "ಧನ್ಯ! ಕಾನಡಾ, ಧನ್ಯ!" ಎಂದೆನ್ನಿಸಿಕೊಳ್ಳಿರಿ.

ಸ್ಫುಟ ಸೂಚನೆಗಳು.

೧. ಅಂಕೋಲೆಯಲ್ಲಿ ಯುದ್ಧಸಾಲಕ್ಕೆ ಹಣ ಕೂಡಿಸಿ ಕೊಡುವದರ ನಾಗರಿಕರ ಮಹಾಸಭೆಯು ವಿಜೃಂಭಣೆಯಿಂದ ಕೂಡಿತೆಂದು ಕೇಳಿ ಆನಂದಪಡುತ್ತೇವೆ. ಲೋಕಪ್ರಿಯ ರಾ। ಬ। ಕಲೆಕ್ಟರ ಗೋಪಕರ ಸಾಹೇಬರಂಥ ವಿದ್ವಾಂಸರು ಅಧ್ಯಕ್ಷರು, ರಾಜನಿಷ್ಠ ಪ್ರಜೆಗಳ ಶ್ರೋತೃವರ್ಗವು ಒಂದು ಕಡೆಗೆ ಕೂಡಿದಮೇಲೆ ಸಭೆಯ ಕಾರ್ಯವು ಎಷ್ಟು ಉತ್ಸುಕತೆಯಿಂದ ನೆರವೇರಿತು ಎಂತ ಬೇರೆ ಹೇಳುವದು ಬೇಡ. ಈ ಸಂದರ್ಭದಲ್ಲಿ ೬೦೦—೫೦೦ ರೂಪಾಯಿಯ ಸೋಡತಿ ಟಿಕೀಟುಗಳು ಸಹ ಅರಕ್ಷಣದಲ್ಲಿ ಜನರ ಕೈಯೊಳಗೆ ಹಾರಿಹೋದದ್ದು ಯಾರಿಗೂ ತಿಳಿಯಲಿಲ್ಲ. ಇಷ್ಟು ಸೇವಾತುರ ಜನರು ನೆರೆದಿದ್ದರು. ಇದರ ಮೇಲಿಂದ "प्रथम चिन्हानि पुरः फलानि" ಎಂತ ಹೇಳಲು ಅಡ್ಡಿಲ್ಲ. ಅಧಿಕಾರಿಗಳು ಸೂಚಿಸಿದಂತೆ ೬೦ ಸಾವಿರ ರೂಪಾಯಿ ಇಷ್ಟು ರಕಮು ಅಂಕೋಲಾ ತಾಲೂಕಿನಿಂದ ಕೊಡಿಸತಕ್ಕದ್ದೆಂದು ನಿರ್ಣಯಿಸುವದು ಯುಕ್ತವು ಮತ್ತು ಸಾಧ್ಯವು ಎಂತ ತೋರಲಾಗದಿದ್ದರೂ ಅದಷ್ಟು ಹೆಚ್ಚು ರಕಮು ಕೂಡಿಸತಕ್ಕದ್ದೆಂದು ಜನರ ದೃಢಭಾವನೆಯಾಗಿದೆಂದು ಸರಕಾರಕ್ಕೆ ಈಗ ತಿಳಿಸಿದಂತಾಯಿತು. ಅದಕ್ಕೂ ಹೆಚ್ಚು ರಕಮು ಕೂಡಿಸಿದರೆ ಜನರಿಗೆ ಮತ್ತು ಭೂಷಣಾವಹವು. ಅದನ್ನು ಸಾಧಿಸುವದು ಜನರ ಪ್ರಯತ್ನಗಳನ್ನೇ ಅವಲಂಬಿಸಿ ಅದೆ. ಇರಲಿ. ಸಭೆ ಕೂಡಿಸಲಿಕ್ಕೆ ತೆಗೆದ ಜಾಹೀರಪತ್ರಿಕೆಯಲ್ಲಿ ತಿಳಿಸಿದಂತೆ ಸಭೆಗೆ ಹಾಜರಿರದೇ ಸರಕಾರದ 'ಅಪ್ರೀತಿಗೆ ಪಾತ್ರರಾದ ಜನರ ಹೆಸರುಗಳನ್ನು ವರಿಷ್ಠ ಅಧಿಕಾರಿಗಳಿಗೆ ತಿಳಿಸುವ ಆವಶ್ಯಕತೆಯು ಇಲ್ಲೇ ಇಲ್ಲವೆಂತ, ಮಾ ಉಚಿತವಾಗಿ ತಿಳಿಯದಿದ್ದರೂ ಈಗಾದರೂ ಸ್ಥಾನಿಕ ಅಧಿಕಾರಿಗಳಿಗೆ ತಿಳಿದಿರಲಿಕ್ಕೆ ಸಾಕು. ಇದೇ ನೋಟೀಸಿನ ತುದಿಯಲ್ಲಿ ಮತ್ತೊಂದು ಸೂಚನೆ ಮಾಡಿದ್ದು ದೃಷ್ಟಿಗೆ ಬೀಳುತ್ತದೆ. ನೇಟಿವ ಸ್ಥಾನಗಳ ಪರಿಷದ ಹಣ ಯುದ್ಧಸಾಲಕ್ಕೆ ಕೊಡದಿದ್ದರೆ ಸೂಚಿಸುವಾಗ ಅವುಗಳ ಠರಾವಿನಲ್ಲಿ 'ಅವಶ್ಯ' ಯೋಗ್ಯತೆಯೆಂದು ಉಲ್ಲೇಖಿಸಿರುವದು. ಇದರಲ್ಲಿ ಸ್ವಾರಸ್ಯವಿರುವದೆಂದು ಪತ್ರಿಕೆಯವರಿಗೆ ಮಾತ್ರವಲ್ಲ. ಈ ಅಪ್ರಾಸಂಗಿಕ ವಿಧಾನವನ್ನು ಸರಕಾರದವರಾಗಲಿ ಮಕ್ತೇಸರರಾಗಲಿ ಸ್ಪಷ್ಟೀಕರಿಸುವದು ಎಲ್ಲರಿಗೂ ಹಿತಕರವಲ್ಲ. ಹ್ಯಾಗೂ ಇರಲಿ. ಸದ್ಯಕ್ಕೆ ವ್ಯವಸ್ಥಾ ಅವ್ಯವಸ್ಥೆಯ ಪ್ರಶ್ನೆಯನ್ನು ಮರೆತು ಮಾತ್ರ ದೇವಸ್ಥಾನಗಳ ನಿಲ್ಲಿಕೆಯೊಳಗಿಂದ ಯುದ್ಧಸಾಲಕ್ಕೆ ಹಣ ಕೊಡಿಸುವದು ಮಕ್ತೇಸರರ ಕರ್ತವ್ಯವು. ನೋಟೀಸಿನ ಒಳಗಿನ ಮರ್ಮಾರ್ಥವನ್ನು ಏನೂ ಮನಸ್ಸಿನಲ್ಲಿ ಹಿಡಿಯದೆ ದೇವಸ್ಥಾನಗಳ ಧರ್ಮಾದಾಯವನ್ನು ಸುರಕ್ಷಿತವನ್ನು ಕಾಪಾಡಿದ ಸರಕಾರಕ್ಕೆ ದೇವರ ಬೊಕ್ಕಸ ಸಾಲಕೊಟ್ಟಾದರೂ ನೆನೆಸುವದೆಂದು ನಾವು ಸೂಚಿಸುತ್ತೇವೆ.

೨ ಕಳೆದ ಪಾರ್ಲಮೆಂಟಗಳಲ್ಲಿ ಮುಂಬಯಿ ಶಹರದಲ್ಲಿ ಆ ಇಲಾಖೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮೊದಲನೇ ಪರಿಷತ್ತು ನೆರವೇರಿತು. ನಮ್ಮ ಇಲಾಖೆಯೊಳಗಿನ ಮ್ಯುನಿಸಿಪಾಲಿಟಿ ಮತ್ತು ಲೋಕಲ ಬೋರ್ಡುಗಳ ತರ್ಫೆನಿಂದ ೧೩೫ ಬಿನ ಸರಕಾರಿ ಪ್ರತಿನಿಧಿಗಳು ಹಾಜರ ಇದ್ದರು. ಸಭಾಧ್ಯಕ್ಷರಾದ ನಾ॥ ಗವ್ಹರ್ನರ ದೊರೆಗಳು ಈ ಪ್ರಸಂಗದಲ್ಲಿ ಮಾಡಿದ ಉಪನ್ಯಾಸವು ಬಹು ಮನನೀಯವಾಗಿತ್ತು. 'ನಕ್ಷತ್ರಮಂಡಲವನ್ನು ನಿರೀಕ್ಷಿಸುತ್ತಿರುವ ಶಾಸ್ತ್ರಿಗಳು ಕಾಲಡಿಗೆ ಇರುವ ಕಂದಕವನ್ನು ಲಕ್ಷಿಸದೇ ಅದರೊಳಗೆ ಬೀಳುವಂತೆ, ಜನರು ತಮ್ಮ ತಾಲೂಕಿನ ತಮ್ಮ ಶಹರದ ಕುಂದು ಕೊರತೆಗಳನ್ನು ಮರೆಯುವರು. ಇವುಗಳನ್ನು ದೂರ ಪಡಿಸಲಿಕ್ಕೆ ಪ್ರಯತ್ನಿಸುವದೇ ನಿಮ್ಮ ಆದ್ಯ ಕರ್ತವ್ಯವು. ಸ್ಥಾನಿಕ ಸಂಸ್ಥೆಗಳು ನಿಮ್ಮ ಹಿತದ ದೆಸೆಯಿಂದ ಸ್ಥಾಪಿಸಿರುವರು. ಇವುಗಳ ಅಂತಸ್ಥ ಕಾರಭಾರವನ್ನು ನಮ್ಮ ಪ್ರತಿನಿಧಿಗಳು ಹ್ಯಾಗೆ ನಡಿಸುತ್ತಾರೆ?' ಎಂಬ ಪ್ರಶ್ನೆಗಳ ಕಡೆಗೆ ಕರ ಕೊಡುವ ಜನರ ಲಕ್ಷವು ಹೆಚ್ಚೆಚ್ಚು ಸೆಳೆದ ಹೊರತು ಈ ಸಂಸ್ಥೆಗಳ ಸ್ಥಿತಿಯು ಏನೂ ಸುಧಾರಿಸಲಿಕ್ಕಿಲ್ಲ. ಇವುಗಳ ಕಾರ್ಯಕ್ಷೇತ್ರವು ಬೆಳೆಯಲಿ ಬೆಳೆಯದಿರಲಿ ಜನರ ಔದಾಸೀನ್ಯವು ದೂರವಾಗಿ ಅವರು ಹೆಚ್ಚು ಕರ್ತವ್ಯಜಾಗೃತರಾದರೆ ಅವರ ಮ್ಯುನಿಸಿಪಾಲಿಟಿಗಳೂ ಲೋಕಲಬೋರ್ಡುಗಳೂ ಬೇಗನೇ ಸುಧಾರಿಸುವವು. ಗವ್ಹರ್ನರ ಸಾಹೇಬರ ಉಪದೇಶದ ತಾತ್ಪರ್ಯವು. ಸ್ಥಾನಿಕ ಸ್ವರಾಜ್ಯದ ಈ ಪ್ರಾಥಮಿಕ ಸಂಸ್ಥೆಗಳಿಗೆ ಈಗ ಮೂವತ್ತು ವರ್ಷ ಪ್ರಾಯವಾಯಿತು. ಆದರೆ ಅವು ಹೊಟ್ಟೆಯಲ್ಲೇ ಸರಿದಾಡುತ್ತವೆ. ಕಾಲು ಹೆಚ್ಚಿ ಇಡಲಾರವು. ಇದರ ಕಾರಣವೇನು? ಇವುಗಳಿಗೆ ಯಾವದೇ ಒಂದು ಬಾಲಗ್ರಹ ವ್ಯಾಧಿಯು ಹಿಡಿದಿರುವದು ನಿಜವು. ಹೊಸ ವೈದ್ಯರು ಹೇಳುವ "ಕರ್ತವ್ಯಜಾಗ್ರತೆ"ಎಂಬ ನಿದಾನದಿಂದ ಗುಣಾಂಶವು ಸಿಗುವದೆಂದು ನಾವು ಒಪ್ಪುತ್ತೇವೆ. ಆದರೆ ಜನರ ಹಿತದೃಷ್ಟಿಯನ್ನು ಹೆಚ್ಚು ಹೆಚ್ಚು ಎಳಕೊಳ್ಳುವಂತೆ ಅವರ ಸ್ಥಾನಿಕ ಸ್ವರಾಜ್ಯದ ಹಕ್ಕುಗಳ ಮಹತ್ವ ಬೆಲೆಯನ್ನು ಪರಿಸಿದರೆ ಔದಾಸೀನ್ಯದ ಹಳೆ ರೋಗವು ಅಲ್ಪ ಕಾಲದಲ್ಲಿ ನಾಶವಾಗುವದೆಂತ ನಮಗೆ ಕಾಣುತ್ತದೆ.

೩ ದೇಶ ಭೇದದಿಂದಾಗಲಿ ಕಾಲ ಭೇದದಿಂದಾಗಲಿ ಎಲ್ಲ ಪ್ರಾಂತಗಳಲ್ಲಿ ಸ್ಥಾನಿಕ ಸ್ವರಾಜ್ಯದ ಕುಂದುಕೊರತೆಗಳ ವ್ಯಾಧಿಯು ಒಂದೇ ತರದ್ದು ಇರಲಾರದು. ನಮ್ಮ ಇಲಾಖೆಯೊಳಗಿನ ಈ ಸಂಸ್ಥೆಗಳ ಪ್ರಕೃತಿಮಾನವನ್ನು ಚಿಕಿತ್ಸಿಸಿ ತಕ್ಕ ಉಪಚಾರ ಯೋಜನೆಯನ್ನು ವಿಧಿಸುವದರ ನಾವು ಸಹ ಒಂದು ಸ್ಥಾ. ಸ್ವ. ಪರಿಷತ್ತನ್ನು ಬೇಗನೇ ಕೂಡಿಸಬಹುದು. ಇದರಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂತ ಸಾತಾರೆಯ ಶ್ರೀ। ದಾದಾ ಸಾಹೇಬ ಕರಂದೀಕರ ಮಹಾಶಯರು ಎಲ್ಲ ಮ್ಯುನಿಸಿಪಾಲಿಟಿಗಳಿಗೂ, ಲೋ। ಬೋರ್ಡಗಳಿಗೂ ಕೇಳಿದ್ದರು. ಅವರ ವಿನಂತಿ ಪತ್ರಕ್ಕೆ ೫೭ ಮ್ಯುನಿಸಿಪಾಲಿಟಿಗಳು ೪ ಜಿಲ್ಹಾ ೨೯ ತಾಲೂಕ ಬೋರ್ಡಗಳು ಉತ್ತರ ಪಾಲಿಸಿರುವರು. ಕೆಲ ಮ್ಯುನಿಸಿಪಾಲಿಟಿಗಳಿಗೆ ಮತ್ತು ಬೋರ್ಡುಗಳಿಗೆ ಈ ಕಲ್ಪನೆಯ ಉತ್ಪಾದಕರು ಯಾರು? ಮತ್ತು ಕೆಲವರಿಗೆ ಈ ಭಾವೀ ಪರಿಷತ್ತಿನ ಚಾಲಕತ್ವವು ಯಾರ ಕೈಯಲ್ಲಿರುವದೆಂಬುವದು ತಿಳಿಯಬೇಕಾಗಿದೆ. ಒಂದೆರಡು ಬೋರ್ಡುಗಳಂತೂ ಸರಕಾರದ ಕೃಪೆಛಾಯೆಯಲ್ಲೇ ಈ ಚರ್ಚೆಯು ನಡಿಯಬೇಕೆಂದು ಹೇಳುವವು. ಹೀಗಿದ್ದರೂ ಇಂಥ ಸಂಶಯಗ್ರಸ್ತರ ಸಂಖ್ಯೆಯು ಅತ್ಯಲ್ಪವದೆ. ಬಹುಮತವು, ಈ ಕಲ್ಪನೆಯನ್ನು ಪುಷ್ಟೀಕರಿಸಿರುವದು. ಒಟ್ಟಾರೆ ದೊರಕಿದ ಉತ್ತರಗಳ ಅಭಿಪ್ರಾಯವು ಉತ್ತೇಜನಕಾರಕವೇ ಆಗಿರುವದೆಂತ ಶ್ರೀ। ದಾದಾ ಸಾಹೇಬರು ಬೆಳಗಾಂವಿನ ಭಾಷಣೆಯಲ್ಲಿ ತಿಳಿಸಿರುವರು. ಈಗ ಈ ಬೋರ್ಡು ಪರಿಷತ್ತಿನ (೧) ಸ್ಥಳ, ಕಾಲ (೨) ಚರ್ಚೆಯ ವಿಷಯ (ಮತದಾರರ ಕ್ಷೇತ್ರ ಚುನಾವಣೆ ಮುಂತಾದ ಮಹತ್ವದ ಕಲಮವು ನಾಗ ವರದೆ ಸ್ಥಾನಿಕ ಸ್ವರಾಜ್ಯದ ಘಟನೆ, ಅವುಗಳ ಉತ್ಪನ್ನ ವೆಚ್ಚದ ವಿಷಯಕ ಸ್ವಾತಂತ್ರ್ಯ, ಪ್ರಾಥಮಿಕ ಶಿಕ್ಷಣದ ವಿಸ್ತಾರ ಮುಂತಾದ ವ್ಯಾಪಕ ವಿಷಯಗಳು ಚರ್ಚೆಯೊಳಗೆ ಒಳಗೊಂಡಿರುವವು) ಬಿನ್ ಸರಕಾರಿ ಅಧ್ಯಕ್ಷರನ್ನು ಆರಿಸಿ ನಾ। ಪಟೇಲ, ಮಿ। ನೆಬಲವಾಲ ಇಲ್ಲವೇ ದಿ। ಬ। ಗೋಡಬೋಲೆಯಂಥವರಿಗೆ ಈ ಬಹುಮಾನವನ್ನು ಕೊಟ್ಟರೆ ಪರಿಷತ್ತಿನ ಠರಾವುಗಳಿಗೆ ಸರಕಾರದ ಮಾನ್ಯತೆಯು ಕಡಿಮೆ ಸಿಗುವದೆಂದು ನಮಗೇನೂ ಭೀತಿ ಇಲ್ಲ. ಭೀತಿ ಇದ್ದವರು ನೇಮಸ್ತಪಕ್ಷದ ಮಡಿಯನ್ನುಟ್ಟುಕೊಂಡ ರಾಣೇಬಿನ್ನೂರಿನ ರಾವಬಹಾದ್ದೂರರಿಗೆ ಅಧ್ಯಕ್ಷಸ್ಥಾನವನ್ನು ಕೊಡಲಿ, ಅದಕ್ಕೂ ನಮ್ಮ ಒಪ್ಪಿಗೆ. ಯಾರ ಕೋಳಿಯ ಕೂಗಿನಿಂದಾದರೂ ಬೆಳಗಾದರಾಯಿತು.

ಕಾನಡಾವೃತ್ತ— ಬುಧವಾರ, ತಾರೀಕು ೨೧ ಮಾಹೆ [illegible], ಸನ್ ೧೯೧೭ ನೇ ಇಸವಿ.

[illegible]ಪ್ರಾಂತ ಜಿಲ್ಹೆಯ ಮೊದಲನೇ ಪರಿಷತ್ತು [illegible] ಮಹನೀಯ ಶ್ರೀ। ದಾದಾ ಸಾಹೇಬರ ಅಧ್ಯಕ್ಷತೆ [illegible] ಕೆಳಗೆ ಅತಿ ಬರದಿಂದ ಜರಗಿತು ಅಧ್ಯಕ್ಷರ ಬಾ[illegible] ಬಹುಮಂದಿಯಿಂದ ಬೋಧಪ್ರದವಾಯಿತು [illegible] ಸಭೆಯ ಅಂತಿಮೋದ್ದೇಶವಾದ ಹೋಮ ರೂ[illegible] ಸ್ಥಿಕ ಸ್ವರಾಜ್ಯ ಶಿಕ್ಷಣ ಮೊದಲಾದ [illegible] ಷಯಗಳನ್ನು ಅವರು ಸಾಂಗೋಪಾಂಗ ಚರ್ಚಿ[illegible] ಸ್ವರಾಜ್ಯವಾಗಲಿ, ಜೀರ [illegible] ಘಟನೆಯಾಗಲಿ, ಸ್ವಪ್ರಂ[illegible] ಹೊತ್ತು ಅದರದೇನ [illegible] ನ್ಯಾ। ಸ್ವರಾಜ್ಯದ [illegible] ವರೆ ಜನರು ಆರಿಸಿದ ಪ್ರತಿನಿಧಿಗಳ [illegible] ಹಕ್ಕಿಗಿಂತ ಹೆಚ್ಚೆಚ್ಚು [illegible] ಇವುಗಳ ಅಧ್ಯಕ್ಷರು [illegible] ಬೇಕೆಂತಲೂ ಅವರು [illegible] ವ ಕ್ತು ಉಚಿತ ಪ್ರಾಥಮಿಕ ಶಿಕ್ಷಣದ [illegible] ಧಿಕಾರದ [illegible] ಅವರು [illegible] ರಾಷ್ಟ್ರೀಯ [illegible] ಸಭೆ ಮುಗಿಯಿತು [illegible] ಪತ ಭಾಗ್ಯದ [illegible] ಭಾಗ್ಯಹೀನ ನಾಗರಿಕರು [illegible] ಗಳ ದೇಶಭಕ್ತಿಯು [illegible] ತೆಯನ್ನು [illegible] ನಮ್ಮ [illegible]

[illegible] ಮಹಾತ್ಮಾ [illegible] ಒಂದಗಳನ್ನು ಪರಿಶೋಧಿಸಿ [illegible] ಅಲ್ಲಿಹ [illegible] ಧಿಯವರ [illegible] ಪವಿಸಿದ್ದರೆ [illegible] ಮವನ್ನು [illegible] ಕಾರವು [illegible] ಸ್ವಾತ್ರಿಕ ವಿಬಂಧವು

೬ ಓಂಗಲ [illegible] ಅಧಿಕ [illegible] ಲ [illegible] ಸಪ್ಪಟ್ಟಿರುವದ ಮತ್ತು ಮನುಷ್ಯ [illegible] ಪ್ರತಿರೋಧ [illegible] ದ್ದರು ಅವರ [illegible] ಸಂಕ್ರಾಂತಿ [illegible] ಅಶ್ವಿ [illegible] ಪಕ್ಷಗಳ ಆಧಾರದ [illegible] ನರ [illegible] ವಂಗಿಸಿದರು [illegible] ಮಾಡಿದ್ದರ [illegible]

[illegible]ನ್ಯಾಕಿಗೊಂತ [illegible] ಶಿಕ್ಷಾ [illegible] ಅವರ [illegible] ಮನಃಪೂರ್ವಕ ಅಭಿ[illegible]

೭ ಯುದ್ಧ [illegible] ಹೊನ್ನಾವರದ ಕೆಲ [illegible] ಕರ [illegible] ಅಧಿಕಾರಿಗಳು [illegible] ಸರಕಾರ [illegible] ಅವರನ್ನು [illegible]

ಯುದ್ಧವಾರ್ತೆಯು.

[illegible] ಒಂದು [illegible] ಅವರದಿ [illegible] ಆಗಿಯದೆ

ಮಸೊಪೊಟೇಮಿಯದಲ್ಲಿ [illegible] ಹತ್ತರ [illegible]

[illegible] ರಾತ್ರೆ [illegible] ಗಳು ಇಂಗ್ಲಿಷರ ದಂಡೆಯ [illegible] ಆಸ್ಟ್ರದಲ್ಲಿ ಬ್ರಿಟಿಷರ [illegible] ಗಸಿದರು. ಇದೇರೀತಿ, ಫ್ರೆಂಚರ ದಂಡೆಯ [illegible] ಮೇಲೆ ಹಲ್ಲೆ ಮಾಡಿದರೂ ವಿಶೇಷ ಹಾನಿಯೊಗಲಿಲ್ಲ

ಜನ [illegible] ಉತ್ಸಾಹವನ್ನು [illegible] ಸದ್ಭಕ್ತ ಹಿಂದುಸ್ಥಾನಕ್ಕೆ [illegible] ಜಲಸವಾದಿ [illegible]

ಅಮೇರಿಕೆಯು ಯುದ್ಧ [illegible] ಜರ್ಮನರು ಅಮೇರಿಕೆಯ ಪ್ರಾವಶ [illegible] ಬೋಟುಗಳಿಂದ ಸುತ್ತುಗಟ್ಟಿದ್ದಾರೆ ಅಮೇರಿಕೆಯೊಳಗಿ[illegible] ನ ಒಂದು ಮದ್ದುಗುಂಡಿನ ಕಾರಖಾನೆಗೆ [illegible] ಬೆಂಕಿ ಹತ್ತಿದ್ದರಿಂದ [illegible] ಜನರು ಸತ್ತರ [illegible] ಕೂಲಿಕಾರರಲ್ಲಿ [illegible] ಜರ್ಮನರ [illegible]

ಇಹವೃತ್ತ.

ಕುಮಟಾ— ಹೋದ ರವಿವಾರ ಇಲ್ಲಿಯ ಪ್ರಮುಖ ನಾಗರಿಕರಾದ ರಾ॥ ಗಣಪತ ವೆಂಕಟ ಸುಬ್ಬಾ ಭಾಗ ವತರು ಸ್ವರ್ಗಸ್ಥರಾದರೆಂದು ತಿಳಿಸಲು ಬಹಳೇ ವ್ಯಸನವಾಗುತ್ತದೆ [illegible] ರು ಇಲ್ಲಿಯ ಪ್ರಮುಖ ದಲಾಲರಿದ್ದು ೧೦-೩೦ ವರ್ಷಗಳಿಂದ ಮುನಿಸಿಪಾಲಿಟಿಯ ಸಭಾಸದರೂ ಬೆಂಚ ಮೆಜಿಸ್ಟ್ರೇಟ ಕೋರ್ಟಿನ ಚೇಅರಮನರೂ ಆಗಿದ್ದರು ಇವರ ಅಕಾಲದ ಮರಣದಿಂದ ಬಹಳ ಜನರು ನಿರಾಶ್ರಿತರಾಗಿರುವರು

—ಲೋರೆನ್ಸ ಸಾಹೇಬರು ಇಲ್ಲಿಂದ ಹೊನ್ನಾವರಕ್ಕೆ ಹೋಗಿರುವರು

—ಇಲ್ಲಿಯ ಮಾಮಲೇದಾರರಾದ ಮೊಂಟೇಥ ಸಾಹೇಬರಿಗೆ ಪೂನಾ [illegible] ನೇಮಿಸಿರುವರು.

—ಹೋದ ಗುರುವಾರ ಸಿಶಾನಿ ಇಲ್ಲದ [illegible] ಬೋಟುಗಳ ಮುಂಬಯಿ ಕಡೆಗೆ ಹೋಗುತ್ತಿದ್ದವು [illegible] ಗಳಲ್ಲಿ ನಡುವಿನದಕ್ಕೆ [illegible] ಇಲ್ಲಾಗಿತ್ತು

ಅಂಕೋಲಾ —ಇಲ್ಲಿಯ ಶ್ರೀ ಗಣಪತಿ ದೇವಸ್ಥಾನದ [illegible] ಹಣ ಕೆಲವು ವ್ಯಾಪಾರಿಗಳು ದೇವರಿಗೆ ಕೊಡಲಿಲ್ಲವೆಂಬ ಕಾರಣದಿಂದ ವ್ಯಾಪಾರಿಗಳಲ್ಲಿ [illegible] ದೇವರ ಹಣ ಕೊಡದೇ ಇರುವ ವ್ಯಾಪಾರಿಗಳ ಕೂಡ ವ್ಯವಹಾರ ನಡಿಸುವ ದಲಾಲರಿಗೆ ಕೆಲವು [illegible] ಬಹಿಷ್ಕಾರವನ್ನೇ ಹಾಕಿದ [illegible] ವ್ಯಾಪಾರಿಗಳು ತಮ್ಮ ಮತಭೇದಗಳನ್ನು ದೇವರಿಗೆ ಅನ್ಯಾಯ ಮಾಡದೇ [illegible] ಪಡಿಸಿಕೊಳ್ಳುವದು ಎಲ್ಲರಿಗೂ ಶ್ರೇಯಸ್ಕರವು

[illegible] ಕೂಲಿ ಕೆಲಸಕ್ಕೆ ಹೋಗಲಿಕ್ಕೆ ಒಪ್ಪದ [illegible] ಜನರು [illegible] ಗುರುಗಳಮೇಲೆ [illegible] ಮಾಡಿದರೆಂದು ಗುರುಗಳು [illegible] ದಂಡನೆ ಮಾಡಿದರಂತೆ [illegible] ಬಡವರಿಂದ [illegible] ಹೆಚ್ಚೆಚ್ಚು ರೂಪಾಯಿಗಳ ದಂಡನೆಯಲ್ಲ [illegible] ಶಿಕ್ಷೆ [illegible] ತಿಳಿಗೇಡಿ [illegible] ಅವರಿಗೆ ತಿಳಿಬಹುದು.

[illegible] ಪ್ರತಿಬಂಧಕ [illegible] ಬಂದಿದ್ದಾರೆ

ಈ ಸಲ [illegible] ಪ್ರಾಂತ [illegible] ಸರಿಕ [illegible] ಜನರ [illegible] ಸ್ವದೇಶಿಯ [illegible] ದಿಂದ [illegible] ಮುಹಿತ [illegible] ತಪ್ಪು [illegible] ಗುಪಗಿಲ್ಲ

[illegible]

Printed & [illegible] by [illegible] Krishna Sh[illegible] at the Star of K[illegible]

THE

KANARA NEWS.

ಕಾನಡಾ ವೃತ್ತ.

ಪತ್ರದ ವರ್ಗಣಿ –

ಕುಮಟೆಯಲ್ಲಿ ಅಗಾವು ರೂಪಾಯಿ 1 0-0.

ಅಂಚೆವೆಚ್ಚ ಶೇರಿ ರೂಪಾಯಿ 1-6-6

ಹಿಂಮ ಸಂಚಿಕೆ 0 0-9

ಸತ್ಯं ब्रूयात्प्रियं ब्रूयान्न ब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಜಾಹಿರಾತುಗಳ ದರ –
ಕನ್ನಡ, ಇಂಗ್ಲಿಷ ಪ್ರಾಕಾಶ್ಯಾಪಿನ (೧೪ಎಮ್ಸ್ಯೂಪ್ಡ್) ೮ ಸಾಲುಗಳ ವರೆಗೆ ರೂ 1 0 0
ಅನಂತ್ರ ಪ್ರತಿ ಸಾಲಿಗೆ 0-2 0
ಹೆಡ್ಡಿಂಗರ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

Registered No. B. 127

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೧೬ ಮಾಹೆ ಮೇ, ಸನ್ ೧೯೧೭ನೇ ಇಸವಿ. [ಸಂಚಿಕೆ ೧೬.

ಇಕ್ಲಿಪ್ಸ್ ಪ್ರೋಪ್ಸ್

ಈ ಔಷಧವು ನರಸಂಸಾರವನ್ನು ಕಾಯುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಂಕೆಗಳಿಗೆ ಕೈಕಂಡ ಔಷಧಿಯಾಗಿದೆ ಮೂತ್ರಗುಡ್ಡು ಮೂತ್ರಕೋಶ, ಅನ್ನಕೋಶ ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವನ, ಕೆಮ್ಮು ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ ತಲೆನೋವು ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0-6-0 ವಿ ಪಿ ಬೇರೆ
ಡಜನ್ ಶೀಸೆಗಳಿಗೆ ರೂ 4 0-0 ವಿ ಪಿ ಸಹಿತ
ವಿಳಾಸ– ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ, ಮಂಗಳೂರು

मागणी करा
हीच वेळ आहे.

आज सर्वत्र ठिकाणीं शाईपुड्या सबधाने दुर्मीळता आणि विशेष महागाई असता आम्ही काळीभोरशाईच्या पुड्या शेकडा १। रुपया भावानें आणि उत्तम निळिकाळीशाईच्या पुड्या शेकडा १ रुपया भावाने देत आहोत ट खर्च शिवाय पडेल तरी गरजुग्राहकानी ही वेळ लक्षात आणून आपला फायदा करून घ्यावा

पत्ता– वीरकर आणि विद्यार्थी मंडळी
शाईचा कारखाना, पोष्ट सिन्नर,
जिल्हा नाशीक

ज्योतिषी.

जनार्दन दत्तात्रय साने बुधवार न २३४, पुणे ज्योतिषाचीं कामें सूक्ष्म त हेने केलीं जातात विशेष माहिती समक्ष अगर पत्रद्वारे

ಸರಿಯೊಂದು ಸಿದ್ಧವಾದ

ನಮ್ಮ ಅಧಿಕ ಲಕ್ಷಣ ಮಾಸವುಳ್ಳ ಪಂಚಾಂಗಗಳನ್ನೇ ತರಿಸಿಕೊಳ್ಳಿರಿ, ಪ್ರತಿ ಒಂದಕ್ಕೆ ೨॥ ಆಣೆ ಕೆ ೧೦ ರೂ
ಕೃಷ್ಣರಾವ ಕೇ ಶೆಣವಿ, ಸ್ಟಾರ ಪ್ರೆಸ, ಕುಮಟಾ

ತ್ವರೆ ಮಾಡಿರಿ!] ಕಾನಡಾವೃತ್ತ [ಚಂದಾದಾರರಾಗಿರಿ!!

ಉತ್ತರ ಕನ್ನಡದಲ್ಲಿ ಲೋಕಸೇವೆಗೆ ತತ್ಪರವಾದ ಇದೊಂದೇ ವೃತ್ತಪತ್ರವು ಜನರ ಪ್ರೀತಿಗೂ ಆಶ್ರಯಕ್ಕೂ ಪಾತ್ರವಾಗಿದೆ ವಾರ್ಷಿಕ ಚಂದಾ, ರೂ ೧-೦-೦ ಅಂಚೆವೆಚ್ಚ ಶೇರಿ, ೧-೬-೬
ದೇಶಾಭಿಮಾನ ಹೊಂದಿರಿ ಚಂದಾದಾರರಾಗಿರಿ **ಕಾನಡಾವೃತ್ತ ಆಫೀಸ, ಕುಮಟಾ.**

ಈಗ ೩೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿ ಹೊಂದುತ್ತದೆ ಅಪಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಿಕ ಮತ್ತು ಮಾನಸಿಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಮಯವಾಗಿ ರಕ್ತವೃದ್ಧಿಯೂ ವೀರ್ಯಸಂಚಯವೂ ಆಗುತ್ತವೆ ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ನಾಶಿಯಾಗುವವು ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು ರಕ್ತ ಶ್ವೇತಸ್ರಾವಗಳಲ್ಲಿ ತತ್ಕಾಲ ನಾಶಹೊಂದುತ್ತವೆ ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ತ್ವರಿತವಾಗಿ ದೂರವಾಗಿ ವ್ಯಂಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳ ಎಡೆಯಾಗುವದು ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ಸಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೩೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು ಅಂಚೆವೆಚ್ಚ ಬೇರೆ ಬೀಳುವದು ೩೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗ ವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಸಿಕ್ಕಿರುವವು.

ವರ್ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ ಜೇ ಚವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ಬಗ್ಗೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು ಇದಲ್ಲದೆ

ಹೊಸ ಶಿಫಾರಸು ಪತ್ರವು.

ಸೌಂದರ್ಯ ಪಟ್ಟಣದೀಪ ನಾಗೋಬಾ ದೇವಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರೆಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು ಆದರೂ ಈಗ ತಿರುಗಿ ೬೭ ರೂಪಾಯಿಯ ಔಷಧಿಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ ಪಿ ದ್ವಾರ ಕಳುಹಿಸಿ ಉಪಕರಿಸಿರಿ ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸು ಪತ್ರಗಳನ್ನೂ, ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು ಡಬ್ಬಿಗಳು ಸಿಗುವ ಪತ್ತೆ –

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,
ಪೋಸ್ಟ, ನಿಪಾಣಿ (ಬೆಳಗಾಂವ).

A Manual of Hindu Ethics,

BY

G A Chandavarkar with an introduction by Prof Rama Deva B A M R A S. It is an excellent book in 12 chapters treating of the sublime teachings of the Hindu Scriptures

Price annas ten only

For copies, apply to

G. A. Chandavarkar,

118 Residency Baraais

Hyderabad, (Deccan)

WAR LOAN FIGURES TILL 12th MAY 1917, FROM THE COLLECTOR KANARA

Taluka or Petha	Total amount promised	Amount actually invested
Karwar	85 807-8*	33,471-8
Ankola	46,221-12	1,323-12
Kumta	1,21,941-0	25,434-12
Honavar	79,651-8	9,160 0
Bhatkal	38,117 12	4,527-12
Siddapur	88,379-12	31,385-0
Sirsi	1 43,725-4	10,101 12
Yellapur	20,800-0	7,690-0
Mundgod	16,080-0	1 897-8
Haliyal	75,476 2	5 231-8
Supa	9,479-8	7 140 1
Total	7,25,680-2	1,43,356-12

* These figures include amount promised and subscribed by the Assistant Collector and his staff

THE KANARA NEWS

16th May 1917

" Act—act in the living Present Heart within, and God o'er head "

Our King's Address.

His Majesty's touching reply to the Members of the Imperial War Conference contained among other things the following —

Empire's help

' In the midst of the present terrible struggle the magnificent contributions of men, munitions and money made by all parts of the Empire have been the source of greatest pride and satisfaction to me Vast armies have been raised by the Dominions which have taken, or are taking, the field side by side with those of the United Kingdom to fight the common foe in the cause of justice and of those free institutions which are the very key stone of the Empire It is fitting also that I should here especially refer to the munificent gifts of money made towards the expenses of the war by the Government Princes and peoples of India

Personal Reminiscences

May this comradeship in the field, this community of suffering and sacrifice draw together still closer than ever all parts of my possessions establishing fresh bonds of union that will endure to our mutual advantage long after the war and its horrors have passed away The Queen and I recall with the liveliest and the happiest recollections the visits which we have been privileged to pay to the different parts of the Dominions thereby gaining personal knowledge of the various countries and peoples their resources difficulties and all their varying problems and interests We do not forget the warm hearted loyal welcome given to us on those occasions and it is with feelings of affectionate regard that I shall ever follow the welfare of my subjects beyond the seas I look forward to the day when some of our children will in their turn have the opportunity of acquiring a similar priceless experience by such visits

Value of the Empire

I rejoice at the prospect of better means of communication which will more effectively link up the various portions of the Empire and trust that the days to come will see an ever increasing exchange of visits and personal intercourse between the Mother country and the Dominions, for do not sympathy and common brotherhood help to form the surest foundations on which the State can rest? The value of the Empire lies not in [illegible] and strength alone but in the several contributions that each of its diverse parts with the varying circumstances and conditions makes to one general stock of knowledge and progress ".

All this breathes real sympathy. His Majesty's reference to his personal visits no less than his appreciation of war services was certainly very genuine and inspiring. The King expressed satisfaction that the Indian representatives had taken part in the deliberations Thus the meeting was a grand success and the delegates were thoroughly impressed by the cordiality of their reception

That is how the ties knitting all parts of the Dominions can be strengthened That is how hearts become responsive.

Public Criticism

It is unfortunate that now a-days criticism of every sort is resented with utmost vehemence. It is a mistake to suppose that, as we rise up in the estimation of the public & occupy a higher position, we are going to be dubbed as infallible After all we are all human beings and, as such, we shall have our weaknesses and failings Some times we overdo things in the fervour of our zeal or enthusiasm At times we become so one eyed, that we think we are in the right & the whole outside world is in the wrong Nevertheless we like sweet criticism and turn wroth at bitter remarks But criticism of the purest sort however bitter, must be welcomed in the interest of the person or the cause criticised That enables the person criticised to examine himself and gives him an opportunity to mend himself. Sweet things may delight the man but they have a tendency to make him worse Therefore it is always better to speak the plain truth and call a Spade, a spade. It may irritate this man or that man for a moment, but after all true criticism indulged in in the best of spirits & with the purest of motives will have its desired effect

RANDOM THOUGHTS

Port of Bhatkal.

A few days back news came that there was no truth in the report that the port of Bhatkal would shortly be handed over to the Mysore Durbar for development as an outlet for the Mysore trade But the other day the Dewan of Mysore remarked - Measures to investigate the possibility of the harbour at Bhatkal are still proceeding The sea-board near Bhatkal is only about 10 miles from the State frontier We have arranged for the extension of the railway line from Shimoga to the top of the ghats for opening up forest The distance to Bhatkal from the terminus of the new railway will be less than 50 miles The length of the additional railway needed to join the sea board is much shorter & the descent is much easier than in the case of any other objective The investigations carried out regarding the suitability of Bhatkal are very promising and Government would not commit themselves to the project, unless it was found to be quite satisfactory both financially and from the engineering point of view ' All this is very assuring

A few queries

We are sorry to note that our Municipality has so to say thrown away our suggestions made in our issue of 15th Nov 1916, regarding octroi income, provision of Nakas & so on Probably the body thinks that the scheme is entirely utopian Are we to understand like that ?

We are equally sorry to see that the Pandurang Pai Memorial Committee seems to have shown no activity We shall be glad to publish in our fortnightly the figures of contributions made to the memorial, should the Secretary be pleased to supply the same from time to time At present we are in the dark about the movements of the committee in the matter Have we to understand that the energetic Secretary & his active co workers are sleeping over the matter ? We hope not That figure of the departed good man is still before our mind's eye Let us hope that our Secretary will take up the work right earnestly out of regard to the memory of the deceased We shall revert to these matters again

We have great pleasure in congratulating Mr Shrinivasrao Nadig on his success in the last B Ag examination Now that he is entering on practical life with an intimate knowledge of agriculture, and we trust that the promising young man will, by precept and example, create a taste for modern scientific agriculture among the neighbouring rayats

---

ಯುದ್ಧವಾರ್ತೆಯು.

ಪಶ್ಚಿಮ ರಣಭೂಮಿ — ಬ್ರಿಟಿಶರು ಸ್ಕಾರ್ಪೇಡ ಹತ್ತರ ೨೦ ಸಾವಿರ ಜರ್ಮನ ಸೈನಿಕರನ್ನೂ, ತೋಫುಗಳನ್ನೂ ತೆಗೆದುಕೊಂಡರು ಆದರೂ ಜರ್ಮನರು ಹಿಂದೆ ಸರಿದ ಕಾಂಬ್ರೆ ೩ ಲಕ್ಷ ಸೈನ್ಯದೊಳಗಿಂದ ೩-೪ ಲಕ್ಷ ಸೈನ್ಯವನ್ನು ತಂದು ಬಲಿ ಕೊಟ್ಟು ಬ್ರಿಟಿಶರು ಕೈವಶ ಮಾಡಿಕೊಂಡ ಫ್ರೆಂಚ್ ಜನರ ಎಪಬಲ್ಖುಗಗಳ ಪೈಕಿ ಎಡ ಭಾಗವನ್ನು ಸ್ವಾಧೀನ ಮಾಡಿಕೊಂಡರು ಈ ಕದನದಲ್ಲಿ ಬ್ರಿಟಿಶರಿಗೆ ಅಲ್ಪ ಸ್ವಲ್ಪವೇ ನಷ್ಟವಾಯಿತು. ಈಗಂತೂ ಜರ್ಮನರ ಸೈನ್ಯಬಲವು ೩-೪ ಲಕ್ಷ ಉಳಿದಂತಾಯಿತ ಫ್ರೆಂಚರು ಎದುರು ಬರುತ್ತಿರುವ ಹಿಂಡೆನಬರ್ಗರವರ ಸೈನ್ಯವನ್ನು ಭೇದಿಸಿ ಹಲವು ಮೈಲು ಮುಂದರಿದು ಅನೇಕ ಭಾಗಗಳಲ್ಲಿ ಜಯ ಹೊಂದಿ ವ್ಹೆಂಕ್ಲೂರೊ ತಪ್ಪಲು ವರೆಗೆ ಹೋಗಿದ್ದಾರೆ

ಪೂರ್ವ ರಣಭೂಮಿ — ರಶ್ಯದ ಸೋಶಿಯಾಲಿಸ್ಟಂಬ ಲೋಕ ಸತ್ತೆಯು ಒಪ್ಪಂದ ಮಾಡಬೇಕೆಂದು ಹಟ ಹಿಡಿದಾಗ್ಯೂ ಮಂತ್ರಿ ಮಂಡಳವು ಸ್ವತಂತ್ರ ತಹವನ್ನು ಮಾಡದೆ ಅಂತ್ಯದ ವರೆಗೆ ಯುದ್ಧವನ್ನು ನಡಿಸುವ ಆಗ್ರಹ ಹಿಡಿದಿದೆ ರಶ್ಯನರಿಗೆ ಸ್ವಲ್ಪ ಸ್ವಲ್ಪ ಕಾದಾಟದಲ್ಲಿ ಅತ್ರಿತ್ರಲಾಗಿ ಜಯ ಸಿಗುತ್ತಿದ್ದಾವೆ ಗ್ರೀಸದಲ್ಲಿ ಯುದ್ಧ ಮೂಲಕ ದೇಶದಲ್ಲೆಲ್ಲ ಗೊಂದಲವಾದದರಿಂದ ಅರಸರು ರಾಜ್ಯಪದತ್ಯಾಗ ಮಾಡುವ ವಿಚಾರದಲ್ಲಿದ್ದಾರಂತೆ

ಮೆಸೊಪೊಟಾಮಿಯಾದಲ್ಲಿ ತುರ್ಕರ ಒಂದು ಸೈನ್ಯವು ಹಿಂಜರಿದು ಟೈಗ್ರೀಸ ನದಿಯ ಹತ್ತರ ಕಾದಾಡುತ್ತಿದೆ ಸಾಮಾರಾದಲ್ಲಿ ಹಿಂಜರಿದ ಇನ್ನೊಂದು ಸೈನ್ಯವು ಟ್ರಿಕೀಟ ಪಟ್ಟಣವನ್ನು ಆಕ್ರಮಿಸಿ ಅದೆ

ಅಮೇರಿಕದವರು ಮಿತ್ರ ಪಕ್ಷಕ್ಕೆ ಕೂಡಿದ್ದರಿಂದ ಹಣವು, ಮದ್ದುಗುಂಡು ಸಾಕಷ್ಟು ಕೊಡುವದಲ್ಲದೆ ಸ್ವತಃ ಸ್ತ್ರಿಯಿಂದ ಸೈನ್ಯ ಭರತಿ ಮಾಡಿ ಫ್ರಾನ್ಸದ ರಣಭೂಮಿಯ ಮೇಲೆ ಕಳಿಸುವವರಿದ್ದಾರೆ

ಜರ್ಮನರು ಅತ್ಯಾಚಾರದಿಂದ ಮಿತ್ರ ಸಂಘದವರ ೩೫-೪೦ ಹಡಗಗಳನ್ನು ಪ್ರತಿ ಪಕ್ಷಕ್ಕೆ ಮುಳುಗಿಸುತ್ತಿದ್ದದರಿಂದ ಇಂಗ್ಲಂಡದಲ್ಲಿ ಆಹಾರದ ಜೀನಸುಗಳ ಕೊರತೆಯು ಬಹಳೇ ಇರುತ್ತದೆ ರಶ್ಯಾಸಿ ಕೊಟ್ಟದ್ದಕ್ಕಿಂತ ಹೆಚ್ಚು ಆಹಾರ ಜನರಿಗೆ ಕೊಡಬಾರದೆಂಬ ಕಟ್ಟಳೆ ಮಾಡಿದ್ದಲ್ಲದೆ ಸ್ವತಃ ಬಾದಶಹರವರು ಮಿತವ್ಯಯ ಮಾಡಿ ಉದಾಹರಣೆ ಹಾಕಿಕೊಡುತ್ತಿದ್ದಾರೆ ಜರ್ಮನರು ಪಾಸಿಫಿಕ ಮಹಾಸಾಗರದಲ್ಲೆಲ್ಲ ವಿನಾಶ ಬೋಟಿಯ ಹಾಕುವ ನಿಶ್ಚಯ ಮಾಡಿದ್ದಾರೆ. ಬ್ರಿಟಿಶರ ನೌಕಾ ಸೇನಾಪತಿಗಳು ವಿನಾಶಿಬೋಟಗಳನ್ನು ನಿರ್ಮೂಲ ಮಾಡುವ ನಿರ್ಧಾರ ಮಾಡಿದ್ದಾರೆ ಡಚ್ ಮತ್ತು ಇಂಗ್ಲಿಷರ ದಂಡೆಗುಂಟ ಸಂಚರಿಸುವ ಜರ್ಮನ ವಿನಾಶಿ ಬೋಟಿಗಳನ್ನು ಸದ್ಯಕ್ಕೆ ಇಂಗ್ಲಿಷರು ಓಡಿಸಿಬಿಟ್ಟರು

ಇಹವೃತ್ತ.

ಕುಮಟಾ — ರಿಕ್ರೂಟಿಂಗ ಮಾಮಲೇದಾರ ರಾ, ಗರ್ಡೆಯವರು ಭಟ್ಕಳ ವರೆಗೆ ತಿರುಗಾಡಿ ಇಲ್ಲಿ ಪುನಃ ಬಂದಿರುವರು

ಡೆ। ಎ। ಇ। ಫರ್ನಾಂಡಿಸರವರು ಇಲ್ಲಿಗೆ ಬಂದು ಕನ್ನಡ ಶಾಲೆಗಳ ಪರೀಕ್ಷೆ ನಡಿಸುತ್ತಿದ್ದಾರೆ.

ಕಸ್ಟಮ ಕಲೆಕ್ಟರರು ಇಲ್ಲಿ ಬಂದು ತಪಾಸು ಮಾಡಿ ಕಾರವಾರಕಡಿಗೆ ಹೋದರು

ಶೇತಕಿ ಪ್ರಯೋಗದ ಹೊಲದ ಕೆಲಸವು ಬರದಿಂದ ನಡೆದದೆ.

ಅಂಕೋಲಾ — ರಿಕ್ರೂಟಿಂಗ ಮಾಮಲೇದಾರ ಮಿ ಗರ್ಡೆಯವರು ಇಲ್ಲಿಗೆ ಬಂದು ೭ ಜನರನ್ನು ಸೈನ್ಯದೊಳಗೆ ಮತ್ತು ಸೈನ್ಯದ ಕೆಲಸಕ್ಕೆಂತ ದಾಖಲು ಮಾಡಿಕೊಂಡು ಕುಮಟಕಡೆಗೆ ತೆರಳಿದರು ದಾಖಲಾದವರಲ್ಲಿ ೫ ಶಿದ್ದಿಯರು ೧ ಕ್ರಿಸ್ಟನ್ ೧ ಹಿಂದು ಜಾತಿಯವರಿದ್ದಾರೆಂತ ಕೇಳುತ್ತೇವೆ

'ಯುದ್ಧವೂ ಕ್ರೈಸ್ತ ಧರ್ಮವೂ' ಎಂಬ ವಿಷಯದ ಮೇಲೆ ಶ್ರೀಯುತ ವಿಶ್ವನಾಥರಾವ ಸಿ ಪ್ರಭು ಬಿ ಏ ರವರ ಆಧ್ಯಕ್ಷತೆಯ ಕೆಳಗೆ ಕಾರವಾರದ ಮಿ. ಮಥಾಇ ಎಂಬ ಮಿಶನರಿ ಗೃಹಸ್ಥರು ಇಲ್ಲಿಯ ಎಡವರ್ಡ ಲಾಯಬ್ರರಿಯಲ್ಲಿ ಸ ಶಾಸ್ತ್ರೀಯ ವ್ಯಾಖ್ಯಾನವನ್ನು ಕೊಟ್ಟರು. ಆಧ್ಯಕ್ಷರ ಸಮಾರೋಪವು ಸಹ ಮನನೀಯವಾಗಿತ್ತು

ಬೆಲೇಕೇರಿಯಲ್ಲಿ ಒಬ್ಬ ಖಾರವೀ ಜಾತಿಯ ಮನುಷ್ಯನಿಗೆ ೧೫ ದಿವಸಗಳಲ್ಲಿ ಮೂರು ಸಾರೆ ಸರ್ಪವು ಕಚ್ಚಿತು ಪ್ರತಿಸರ್ತಿ ಹತ್ತು ಹದಿನೈದು ಕೋಳಿಗಳನ್ನು ಹಚ್ಚಿ ವಿಷ ತೆಗಿಯಲಾಯಿತು ಆ ಮನುಷ್ಯನು ಸುದೈವದಿಂದ ಇನ್ನೂ ಬದುಕಿದ್ದಾನೆ ಏನೂ ವಿಷಬಾಧಕವಾಗಲಿಲ್ಲ.

ಭಟ್ಕಳ — ಪೇಟೆ ವಿಷಯದಲ್ಲಿ ಮೈಸೂರು ದಿವಾನರು ಸದ್ಯಕ್ಕೆ ಇಲ್ಲಿ ಬಂದು ಹೋದರು ಯುವರಾಜರು ಬರುವವರಿದ್ದಾರಂತೆ.

ಹಳಿಯಾಳ.— ಊರಲ್ಲಿ ಹವಾಮಾನವು ಸುಧಾರಿಸುತ್ತಿದ್ದಾಗ್ಯೂ ಇಲಿಗಳು ಬೀಳುತ್ತಿದ್ದು ೧-೨ ಪ್ಲೇಗು ಮರಣಗಳು ಆದವು. ಸ್ಥಲಾಂತರ ಮಾಡುವವರಿಗೆ ಫೋರೆಸ್ಟ ಖಾತೆಯವರಿಂದಾಗಲೀ, ಮುನಿಸಿಪಾಲಿಟಿಯಿಂದಾಗಲೀ ಸಾಕಷ್ಟು ಸಹಾಯವಾಗುವದಿಲ್ಲ. ಆ ವರೆ ತಾಲೂಕಿನಲ್ಲಿ ಹವೆಯು ನೆಟ್ಟಗದೆ

ಇಲ್ಲಿಯ ಶೇಂದಿ ದುಕಾನದಾರನಿಗೆ ಕಡಿಮೆ ಅಳತೆ ಇಟ್ಟಿದ್ದರ ಮೇಲಿಂದ ೨ ತಿಂಗಳ ಶಿಕ್ಷೆಯಾಯಿತು.

ಇಲ್ಲಿಯ ಹೊಸ ಮಾಮಲೇದಾರರು ಜನರ ಸ್ಥಿತಿಗತಿಗನುಸರಿಸಿ ಯುದ್ಧಸಾಲವನ್ನು ಎತ್ತುತ್ತಲಿದ್ದಾರೆ. ಬಡವರು ಸಹ ಯಥಾಶಕ್ತಿ ಖುಷಿಯಿಂದ ಕೊಡುತ್ತಾರೆ.

ಕಾನಡಾವೃತ್ತ.

ಬುಧವಾರ ತಾ ೧೬ ನೇ ಮೇ ೧೯೧೭

ಇಂಗ್ರಜಿ ಶಿಕ್ಷಣವೂ, ದೇಶ ಭಾಷೆಗಳೂ.

ಹಿಂದುಸ್ಥಾನದ ಇತಿಹಾಸವೆಂದರೆ ಒಂದು ಮಿಶ್ರಣವು. ಬಲು ವರ್ಷಗಳಿಂದ ವಿಷವೇಂತ ಶಾಲೆಗಳಲ್ಲಿ ನಮಗೆ ಈ ಮಿಶ್ರಣವನ್ನು ಶಿಕ್ಷಣದಿಂದ ಕಲಿಸುತ್ತಿರುತ್ತಾರೆ. ಈ ವಸ್ತು ಯಾವ ಜೀನಸುಗಳಿಂದ ಯಾರು ತಯಾರಿಸಿದ್ದಾರೆ? ಇದು ಸವಿಯೋ, ಕಹಿಯೋ? ಸವಿಯಾಗಿದ್ದರೆ ಇದರೊಳಗೆ ಬರೆ ಸೇರು ಎಷ್ಟು ವಿದೇಶೀ ಸಕ್ಕರೆ ಎಷ್ಟು, ಇಷ್ಟು ವಿಚಾರವನ್ನು ಮಾಡುವದೆ ನಮ್ಮ ಅಭ್ಯಾಸಕರ ಶಕ್ತಿ ಇದ್ದರೂ ಅವಸರವೇನೂ ಇಲ್ಲ, ವನೋಧೈರ್ಯವು ಸಹ ಅಷ್ಟೇ ಇರುವದು ಹಿಂದುಸ್ಥಾನದ ಇತಿಹಾಸ ಶಿಕ್ಷಣದ ಗತಿಯು [illegible] ಗಿದ್ದರ, ಹಿಂದುಸ್ಥಾನದ ಭಾಷಾ ಶಿಕ್ಷಣದ ಕಥೆಯು ಮತ್ತೂ ಮನೋರಂಜಕವದೆ. ಇದರೊಳಗೆ ದೇಶದ ಇತಿಹಾಸದ ಶಿಕ್ಷಣದಿಂದ ನಮಗೆಷ್ಟು ಲಾಭವಾಗಿರುವದೋ ಅಷ್ಟೇ ಭಾಷಾ ಶಿಕ್ಷಣದಿಂದ ಸಹ ಆಗಿರುವದು. ವೇದ ಪುರಾಣ ಕಾಲದಲ್ಲಿ, ಅಂದಿನಿಂದ ಇತಿಹಾಸ ಕಾಲದಲ್ಲಿ ನಮ್ಮ ಶಿಕ್ಷಣದ ಸ್ಥಿತ್ಯಂತರಗಳು ಬಹಳಾಗುತ್ತ ಬಂದವು, ಇವುಗಳೊಳಗೆ ಆವಶ್ಯಕ ಅನಾವಶ್ಯಕ ಸ್ಥಿತ್ಯಂತರಗಳೆಷ್ಟು? ಹೀಗೆ ಹಳೇ ಕಾಲವನ್ನು ಬಿಟ್ಟುಬಿಟ್ಟರೂ ಮೆಕಾಲೆ ಸಾಹೇಬರ ಸಾಹಸದಿಂದ ನಮ್ಮ ವಿದ್ಯಾಮಂದಿರಗಳೊಳಗೆ ಪ್ರವೇಶ ಹೊಂದಿದ ಇಂಗ್ರಜೀ ಶಿಕ್ಷಣದಿಂದ ನಾವು ಯಾವ ಬಂದರಕ್ಕೆ ಮುಟ್ಟಿರುವೆವು? ಎಂಬೀ ಪ್ರಶ್ನೆಗಳನ್ನು ಚರ್ಚಿಸಬೇಕಾದರೆ, "ಹಿಂದುಸ್ಥಾನದ ಶಿಕ್ಷಣದ ಇತಿಹಾಸ" ವೆಂಬ ಮಹಾಗ್ರಂಥವನ್ನು ನಾವು ಬರೆಯಬೇಕಾಗುವದು. ಈ ವ್ಯಾಪಕ ವಿಷಯವನ್ನು ವೃತ್ತಪತ್ರಗಳಲ್ಲಿ ಚರ್ಚಿಸುವದು ಅಶಕ್ಯವಾದಾಗ ಪ್ರಸಂಗತಃ ವರ್ತಮಾನಕಾಲದ ಪರಿಸ್ಥಿತಿ ಶಿಕ್ಷಣ ಕ್ರಮದಲ್ಲಿ ಅದರ ಮಹತ್ವದ ಅಂಗವಾಗಿರುವ ದೇಶಭಾಷೆಯ ಅವಸ್ಥೆಯನ್ನು ಕುರಿತು ಎರಡು ಶಬ್ದಗಳನ್ನು ಬರೆಯಬಿಚ್ಛಿಸಿದ್ದೇವೆ.

ಮೊಟ್ಟಮೊದಲ. ಈಗಿನ ಉಚ್ಚಶಿಕ್ಷಣ ಕ್ರಮದಲ್ಲಿ ದೇಶಭಾಷೆಗಳಿಗೆ ಇಂಗ್ಲಿಷ ಭಾಷೆಯ ತೊತ್ತಿನಂತೆಯೇ ನಡಿಸುತ್ತಾರೆಂತ ಹೇಳಿದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ಈ ದಾಸ್ಯತ್ವದ ಪರಿಣಾಮವು ಇಷ್ಟಾಗಿದೆಲ್ಲ— ನಮ್ಮ ಯುವಕರೆಲ್ಲರು ಕೇವಲ ವಿದೇಶಿ 'ಭಾಷಾರ್ಥಿ' ಗಳಾಗಿ ಹೋಗಿರುವರು "ವಿದ್ಯಾರ್ಥಿ" ಯರೆಂಬ ಶಬ್ದಾರ್ಥವನ್ನೇ ಕಳಕೊಂಡಿರುವರು. [illegible] ವಿದ್ಯಾರ್ಥಿಗಳನ್ನ ಬೇಕಾದರೆ ನಮ್ಮ [illegible] ತೊತ್ತಿಗಗಳೆಂದೇ ಮನುಷ್ಯ ಪ್ರಾಣಿ [illegible] ಹೇಳಬೇಕಾಗುವದು. ವಿದೇಶಿ ಭಾಷೆಯನ್ನು ಅದರ ಶಬ್ದಾಲಂಕಾರಗಳನ್ನು ವೆಚಿತ್ರಗಳನ್ನೂ ತಿಳಕೊಳ್ಳುವದರಲ್ಲಿಯೇ ತಮ್ಮ ಆಯುಷ್ಯದ ಉತ್ತಮಕಾಲವನ್ನು ವೆಚ್ಚ ಮಾಡಿ ಕಟ್ಟಕಡೆಗೆ ವ್ಯವಹಾರಕಾರ್ಯದಲ್ಲಿ [illegible] ಯಾವ ಹುದ್ದೆಗಳ [illegible] ದಿನೇದಿನೇ ಬೆಳೆಯುತ್ತ ನಡೆದದೆ. ಇದರ ನಿಜವಾದ ಕಾರಣವನ್ನು ಶೋಧಿಸಲು ನಮ್ಮ ಹ್ಯಾಸ್ಕೂಲುಗಳಲ್ಲಿ ನಡೆದ ಇಂಗ್ಲೀಷ ಭಾಷೆ [illegible] ಶಿಕ್ಷಣ ಪದ್ಧತಿಯೊಂದಲೇ ಹೀಗೆ [illegible] ಹ್ಯಾಸ್ಕೂಲ ಬಿಡುವಕರಿಗೆ ಕೆಂದುಬರ [illegible] ಇತಿಹಾಸ, ಭೂಗೋಲ [illegible] ಇತರೇ ವಿಷಯಗಳನ್ನ ಸಹ ಇಂಗ್ಲೀಷ [illegible] ಮೂಲಕಲೇ ಕಲಿಸುವ [illegible] ಹುಡುಗರ [illegible] ಶಕ್ತಿ [illegible] ತರ್ಕಶಕ್ತಿಯು [illegible] ಅನರೂ [illegible] ಇದರ ಮತ್ತೊಂದು [illegible] ಗಿರುವದು, ದೇಶ [illegible] ವಸ್ತ್ರಯು [illegible] ಪ್ರತಿಭಾ ಸಹ ಕೆಟ್ಟು ಹೋಗಿ [illegible] "[illegible]" ಎಂತ ದೇಶದ ಪ್ರಸಂಗತ್ತ [illegible] ಬಿ ಎ ಎಸ್ ಎ., [illegible] ಸಹ [illegible] ಕೆಟ್ಟು ಹೋದ [illegible] ಎಂತ [illegible] ಇಂಥ ಪ್ರಯೋಗ ಮಾಡಿದ [illegible] ಜಪಾಂಗದವರ ಗತಿ [illegible] ಅಗಳು ವಿದೇಶೀ ಭಾಷೆಯ ಮೂಲಾಂತರ ಕಲಿಸಿದ ಶಿಕ್ಷಣದಿಂದ ಆಗುವ ಹಾನಿಯು, ಈ ಕೃತ್ರಿಮ ಪ್ರಯೋಗವನ್ನ ಕೆಲಕಾಲ ನಡಿಸಿ ನೋಡಿದಕೊಡಲೇ ಜಪಾನಿ ವಿದ್ಯಾಧಿಕಾರಿಗಳಿಗೆ ತಿಳಿದು ಬಂದು ಜಪಾನ ದೇಶದಕ್ಷಿಕ್ಷಣದಲ್ಲಿ ಇಂಗ್ಲಿಷ ಭಾಷೆಯ ಹೊರ್ತು ಇತರೇ ಉಪಯುಕ್ತ ವಿಷಯಗಳನ್ನು ದೇಶ ಭಾಷೆಯಿಂದಲೇ ಕಲಿಸತಕ್ಕದ್ದೆಂದು ಕಟ್ಟಳೆಯಾಯಿತು. ಇದರಿಂದ ಜಪಾನದ ವಿದ್ಯಾಪ್ರಸಾರವು ಎಷ್ಟಾಯಿತು, ಈ ಪ್ರವೃತ್ತಿ ದೇಶದ ಸುಧಾರಣೆಯು ಸಹ ಎಷ್ಟು ಅಲ್ಪಕಾಲದಲ್ಲಿ ವೃದ್ಧಿ ಹೊಂದಿತು ಎಂಬ ಸಂಗತಿಗಳನ್ನು ಈಗ ಯಾರಿಗೂ ಹೇಳಬೇಕೆಂತಿಲ್ಲ.

ಈಗ ಈ ವಿಚಾರಗಳನ್ನು ನಾವು ಪ್ರಕಟಿಸುವ ಕಾರಣವೇನೆಂದರ - ನಮ್ಮ ಹ್ಯಾಸ್ಕೂಲಗಳೊಳಗಿನ ಈ ಮಹತ್ವದ ದೋಷವನ್ನು ಅಧಿಕಾರಿಗಳೂ, ಪಂಡಿತರೂ ಚರ್ಚಿಸಹತ್ತಿರುವರು. ಡ್ಯಾರೆಕ್ಟರರ ಪರಿಷತ್ತಿನಲ್ಲಿ ನಾಮದಾರ ಚೆಮ್ಸಫರ್ಡ ಧೊರೆಗಳು ನಮ್ಮ ನಮ್ಮ ಇಂಗ್ರಜಿ ಶಿಕ್ಷಣದೊಳಗಣ ಇವೇ ದೋಷಗಳ ಅನುವಾದವನ್ನು ಮಾಡಿರುವರು. ನಮ್ಮ ಮಾಜೀ ವಿದ್ಯಾಧಿಪತಿಗಳಾದ ಶಾರ್ಪ ಸಾಹೇಬರು ಸಹ ಇಂಥ ಕುಂದುಗಳನ್ನು ಅನುಲಕ್ಷಿಸಿ ಹ್ಯಾಸ್ಕೂಲಗಳೊಳಗಿನ ಇತರೇ ವಿಷಯಗಳನ್ನು ಬೇಕಾದರೆ ದೇಶ ಭಾಷೆಯ ಮುಖಾಂತರ ಕಲಿಸಬಹುದೆಂತ ಪ್ರತಿಪಾದಿಸಿದ್ದರು. ಆದರೂ ಆಂಗ್ಲಭಾಷೆಯ ಅಂಧ ಪಕ್ಷಪಾತಿಗಳಿಗೆ ಇದರ ಮರ್ಮವು ತಿಳಿಯದೇ ಅವರು ತಮ್ಮ ಹಳೇ ಪದ್ಯಗಳನ್ನೇ ಹಾಡುತ್ತಿರುವರು. ಡ್ಯಾರೆಕ್ಟರ ಸಾಹೇಬರ ಹುಕುಮಿನ ಪರಿಣಾಮವು ಹ್ಯಾಸ್ಕೂಲಿನ ಶಿಕ್ಷಣದಮೇಲೆ ಇನ್ನೂ ಏನೂ ಆಗಿಲ್ಲ. ಫ್ಯಾನಲ ಪರೀಕ್ಷೆಯ ಉಮೇದವಾರರಲ್ಲಿ ಸಹ ದೇಶಭಾಷೆಯಿಂದ ಉತ್ತರ ಕೊಡಲಿಚ್ಛಿಸುವವರ ಸಂಖ್ಯೆಯು ಶೇಕಡಾ ೩-೪ ಸಹ ಇರುವದಿಲ್ಲ ಹೀಗಾಗಿ ಈವತ್ತಿನವರೆಗೆ ವಿದ್ಯಾಸುಧಾರಕರು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದದರಿಂದ ಪುಣೆಯಲ್ಲಿ ಅಧ್ಯಾಪಕರೂ, ಪಂಡಿತರೂ ಒಂದಾಗಿ "ಶಿಕ್ಷಾವಿಚಾರ ಮಂಡಳ" ವೆಂಬ ಸಂಸ್ಥೆಯನ್ನು ಸ್ಥಾಪಿಸಿ ನಮ್ಮ ಶಿಕ್ಷಣ ಪದ್ಧತಿಯನ್ನು ಸುಧಾರಿಸಲಿಕ್ಕೂ ದೇಶಭಾಷೆಯನ್ನು ಉದ್ಧರಿಸಲಿಕ್ಕೂ ಸುಸಂಘಟಿತ ಪ್ರಯತ್ನವನ್ನು ಮಾಡಹತ್ತಿರುವರು. ಈ ಮಂಡಲದೊಳಗಿನ ಪ್ರಮುಖ ಸಭಾಸದರಾದ ಪ್ರೊಫೆಸರ ಹರಿಭಾವು ಲಿಮಯೆರವರು ಮುಂಬಯಿ ಯುನಿವ್ಹರ್ಸಿಟಿಯ ಮೆಂಬರರಾಗಿದ್ದು ಸಿನೇಟ ಸಭೆಯಲ್ಲಿ ಈ ದೇಶಭಾಷೆಯ ಪ್ರಶ್ನೆಯನ್ನು ಬೇಗನೇ ಚರ್ಚಿಸುವವರಿದ್ದಾರೆ. ಮೆಟ್ರಿಕ್ಯುಲೇಶನ್ ಪರೀಕ್ಷೆಯ ಉಮೇದವಾರರಿಗೆ ಇತರೇ ವಿಷಯಗಳಲ್ಲಿ ದೇಶಭಾಷೆಯಿಂದ ಪರೀಕ್ಷಿಸಬಹುದೆಂತ ಒಂದು ಠರಾವನ್ನು ಅವರು ಮುಂದಿಟ್ಟಿರುವರು. ಶಿಕ್ಷಾವಿಚಾರಮಂಡಳದ ಚಾಲಕರು ಇಲಾಖೆಯೊಳಗಿನ ಇಂಗ್ರಜಿ ಅಧ್ಯಾಪಕರ ಮತ್ತು ವಿದ್ಯಾಸುಧಾರಕರ ಈ ವಿಷಯದ ಅಭಿಪ್ರಾಯಗಳನ್ನು ಸಂಗ್ರಹಿಸಿರುವರು. ಈ ಮತಗಳನ್ನು ಅನುಸರಿಸಿ ಪ್ರೊ. ಲಿಮಯೆರವರು ಮೆಟ್ರಿಕ್ಯುಲೇಶನ ಪರೀಕ್ಷೆಯನ್ನು ತಿದ್ದುಪಡಿಸಬೇಕೆಂತ ಕೇಳಲುದ್ಯುಕ್ತರಾಗಿರುವರು. ಇವರ ಮತವನ್ನು ಮಹಾರಾಷ್ಟ್ರ, ಗುಜರಾತ ಪ್ರಾಂತದವರು ವ್ಯಾಖ್ಯಾನಗಳಿಂದಲೂ ವೃತ್ತಪತ್ರಗಳಿಂದಲೂ ಪುಷ್ಟೀಕರಿಸಿರುವರು. ಆದರ ಕನ್ನಡ ಪ್ರಾಂತದವರ ಬೆಂಬಲವು ಇವರಿಗೆ ಎಷ್ಟಾಗಿದೆಂದು ತಿಳಿಯುವದಿಲ್ಲ. ನಮ್ಮ ಕನ್ನಡಿಗರು ಯಾವಾಗಲೂ ಕುಂಭಕರ್ಣನಂತೆ ನಿದ್ರಾವಶವಾಗಿರುವರು. ಅವರು ಇನ್ನಾದರೂ ಎಚ್ಚತ್ತು ಈ ವಿಷಯವನ್ನು ಆಸ್ಥೆಯಿಂದ ಕೈಕೊಂಡು ಅನ್ಯ ಪ್ರಾಂತದವರಂತೆ ತಮ್ಮ ಮತವನ್ನು ಪ್ರಕಟಿಸಿದರೆ ತಮ್ಮ ಕರೆನಾಡಿನ ಹಿತವನ್ನು

ಸಾಧಿಸಿದಂತಾಗುತ್ತಿತ್ತೆಂದು ನಮಗೆ ಹೇಳಬೇಕಾಗಿದೆ. ಮೆಟ್ರಿಕ್ಯುಲೇಶನ್ ಪರೀಕ್ಷೆಯು ಸಣ್ಣ ನದಿಯನ್ನಾದರೂ ಈಗ ನಾವು ದಾಟಿಸಿದರೆ ಮುಂದಿನ ಮಹಾಸಾಗರವನ್ನು ದಾಟಲಿಕ್ಕೆ ದೇಶಭಾಷೆಗಳಿಗೆ ತನ್ನಿಂದ ತಾನೇ ಧೈರ್ಯವಾಗುವದು. ಈ ಮಹಾಸಾಗರದ ಮಾತು ಇರಲಿ,-ಕೆಲವರಿಗೆ ಇದರಿಂದ, ಕಣ್ಣುಕತ್ತಲೆಯ ಬಾಧೆಯಾಗುವದು. ಸದ್ಯಕ್ಕೆ ನದಿಯನ್ನಾದರೂ ದಾಟುವ ಸಾಹಸವನ್ನು ನಾವು ತೋರಿಸುವಾ ಮುಂದಿನ ಮಾತು ಮುಂದೆ.

ಸ್ಫುಟ ಸೂಚನೆಗಳು.

೧ ಯುದ್ಧನಿಧಿಯ ಕಾರ್ಯವು ದಿನೇದಿನೇ ಮುಂದರಿಸುತ್ತದೆಂಬುದು ಆನಂದಕರ ವರ್ತಮಾನವು. ಇಡೀ ಹಿಂದುಸ್ತಾನದ ವಾಗ್ದಾನದ ೧೯ ೧೬,೭೪,೩೦೫ ರೂಪಾಯಿಗಳಾದರೆ ಮುಂಬಯಿ ಇಲಾಖೆಯು ೭,೪೦,೪೫,೩೭೫ ರಕಮನ್ನು ಕೊಟ್ಟು ಅಗ್ರಸ್ಥಾನದ ಬಹುಮಾನವನ್ನು ಹೊಂದಿರುವದು. ಈ ಮೇಲಾಟದಲ್ಲಿ ಹಿಂದುಳಿಯ ಬಾರದೆಂತ ನಮ್ಮ ಜಿಲ್ಹೆಯು ಹಗಲಿರುಳು ದುಡಿದು ರೂ. ೭,೩೫,೬೪೦ ಇಷ್ಟು ರಕಮಿನ ಆಶ್ವಾಸನಗಳನ್ನು ಇಷ್ಟರೊಳಗೆ ಕೂಡಿಸಿರುವದು. ಪ್ರತಿ ಒಂದು ತಾಲೂಕು ತನ್ನತನ್ನ ಪಾಲನ್ನು ರಾಜಭಕ್ತಿಯಿಂದ ಅರ್ಪಿಸುವದಕ್ಕೆ ಆತುರವಾಗಿರುವಂತೆ ಯತ್ನಿಸುತ್ತಿರುವದು ಈ ಭೂಷಣಾಸ್ಪದ ಕರ್ತವ್ಯದಲ್ಲಿ ಶಿರ್ಶಿ ತಾಲೂಕಿಗೆ ಅಗ್ರಪೂಜೆಯ ಸನ್ಮಾನವು ಸಿಕ್ಕಿದ್ದು ಯಥಾಯೋಗ್ಯವು ಈ ಪಕ್ಷವಲ್ಲಿಯೇ ಶಿರ್ಶಿಯು ಗಕ್ಕನೆ ಎಚ್ಚತ್ತು ಈ ಶರ್ಯತಿನಲ್ಲಿ ಕುಮಟೆಯು ಉಚ್ಚಸ್ಥಾನವನ್ನು ಹಿಡಿದುಕೊಂಡೇ ಕೊಂಡಿತು. ಹೊನ್ನಾವರದ ಲಕ್ಷ್ಮೀದೇವಿಯು ಮಾತ್ರ ಹಿಂದುಮುಂದೆ ಯಾಕೆ ನೋಡುತ್ತಾಳೆ, ಎಂಬದು ನಮಗೆ ತಿಳಿದುಬಂತು ಕಳೆದ ಸಂಚಿಕೆಯಲ್ಲಿ ಆಶ್ವಾಸನೆ ಕೊಟ್ಟಂತೆ ಚವಕಶಿ ಮಾಡಲು ಅಧಿಕಾರಿಗಳು ಪತ್ತಾ ಯನಾದುತ್ತಾರೆಂತ ಹೇಳುವ ಹೊನ್ನಾವರದ ೩ ವೃಥಾಬೊಬ್ಬೆಯಲ್ಲಿ "ತೋಳ ಬಂತಲೇ ತೋಳ ಬಂತು" ಕೂಗಾಟವೇ ಹೆಚ್ಚಾಗಿತ್ತೆಂದು ನಮಗೆ ಕಂಡು ಬಂತು ಈ ಗೊಂದಲದಲ್ಲಿ ಅತಿಶಯೋಕ್ತಿಯೇ ಹೆಚ್ಚು ಎಂದು ಈಗ ವಿಶ್ವಸನೀಯ ಆಧಾರದಿಂದ ನಾವು ಹೇಳುವೆವು. ಯುದ್ಧನಿಧಿಯ ಕಾರ್ಯದಲ್ಲಿ ಉತ್ಸುಕತೆಯ ಭರದಿಂದ ಕೆಳಗಿನ ಅಧಿಕಾರಿಗಳು ಅಲ್ಪಸ್ವಲ್ಪ ಮರ್ಯಾದಾತಿಕ್ರಮ ಮಾಡಿದ್ದಾದರೆ, ದಯಾಳು ಮೇಲಧಿಕಾರಿಗಳು ತಮ್ಮ ಕೈಕೆಳಗಿನ ಆಫೀಸರರಿಗೆ ವಾಗದಂಡನೆ ಮಾಡಿ, ಇಲ್ಲವೇ ಉಪದೇಶಮಾಡಿ ಸೌಮ್ಯ ಉಪಾಯಗಳಿಂದಲೇ ಮುಂದರಿಯಲಿಕ್ಕೆ ತತ್ಪರರಿದ್ದಾರೆಂತ ಹೊನ್ನಾವರದ ಜನರು ಈಗಾದರೂ ನಂಬಿ ಬಹುದು ಅಧಿಕಾರಿಗಳ ಸಹಾನುಭೂತಿಯು ದೃಷ್ಟಿಯು ಅವರ ಮೇಲೆ ಪರಿಪೂರ್ಣವದೆ, ಎಂತ ನಾವು ಈಗ ಖಾತ್ರಿಯಿಂದ ಹೇಳುವೆವು. ಅಧಿಕಾರಿಗಳಿಗೇನೂ ಇದರಲ್ಲಿ ಸ್ವಹಿತ ಸಾಧಿಸುವದಿರುವದಿಲ್ಲ. ಕೆಳಗಿನ ಅಧಿಕಾರಿಗಳಾಗಲಿ, ಜನರಾಗಲಿ, ಇಂಥ ಕೆಲಸಗಳಲ್ಲಿ ಸ್ವಾರ್ಥದೃಷ್ಟಿಯನ್ನು ಹಿಡಿಯುವದು ದೊಡ್ಡ ತಪ್ಪೆಂತ ಎಲ್ಲರೂ ಬಲ್ಲರು. ಜನರೆಲ್ಲರು ಒಂದಿಷ್ಟು ಒಂದು ನೆವ ಹೇಳುವದನ್ನು ಬಿಟ್ಟು ಶಿರ್ಶಿಯ ಬಾಂಧವರ ಔದಾರ್ಯದ ಉದಾಹರಣೆಯನ್ನು ಮುಂದಿಟ್ಟು ತಮ್ಮ ತಮ್ಮ ತಾಲೂಕಿನ ಈ ವಿಷಯದ ಕರ್ತವ್ಯವನ್ನು ಕೊನೆಗಾಣಿಸುವರಾಗಿ ನಾವು ಕೋರುತ್ತೇವೆ

೨ ಯುದ್ಧಸಮಾಪ್ತಿಗೆ ಅನುಲಕ್ಷಿಸಿ ಕೂಡಿಸಿದ ಸಾಮ್ರಾಜ್ಯದ ಪರಿಷತ್ತು ಆನಂದದಿಂದ ಪಾರಂಗಂಡಿತು ಈ ಪರಿಷತ್ತಿನ ಪ್ರತಿನಿಧಿಗಳು ಪರಮ ಪೂಜ್ಯ ಜೋರ್ಜ ಬಾದಶಹರಿಗೆ ಮಾನ ಪತ್ರವನ್ನು ಕೊಟ್ಟು ದಯಾಳು ಅರಸರನ್ನು ಮನ್ನಿಸಿದರು. ಸಾಮ್ರಾಜ್ಯದ ಹಿತದ ಐಕ್ಯದ, ಮತ್ತು ವಿಜಯಪ್ರಾಪ್ತಿಯ ಮಹತ್ವದ ವಿಷಯಗಳನ್ನು ಚರ್ಚಿಸಿ ಐಕ್ಯಮತದಿಂದ ಎಲ್ಲರ ರಾವುಗಳನ್ನು ಏರ್ಪಡಿಸಿ ಪ್ರತಿನಿಧಿಯಾದ ಅತಿಥಿಗಳ ಮತ್ತು ಪ್ರಧಾನಮಂಡಳದ ಯಜಮಾನರ ಈ ಐತಿಹಾಸಿಕ ಸಮಾರಂಭವು ಅರಸರ ಆಶೀರ್ವಾದದೊಡನೆ ಕೊನೆಗಂಡಿತು ಈ ಪರಿಷತ್ತಿನಲ್ಲಿ ಯುದ್ಧವಿಷಯಕ ಮತ್ತು ಸಾಮ್ರಾಜ್ಯದ ವ್ಯಾಪಾರ ವಿಷಯಕ ಠರಾವುಗಳ ಹೊರ್ತು ಸಾಮ್ರಾಜ್ಯದ ಪುನರ್ಘಟನೆಯ ಮಹತ್ವದ ಚರ್ಚೆಯು ಸಹ ನಡೆಯಿತು. ಈ ವಿಷಯದ ಮಹತ್ವಕ್ಕನುರೂಪವಾಗಿ ರಾಜಕೀಯ ಪುನರ್ಘಟನೆಯ ಚರ್ಚೆಯಿಂದಲೇ ಸ್ವತಂತ್ರವಾದ ಪರಿಷತ್ತು ಮುಂದೆ ಕೂಡುವದಿದ್ದರೂ ಅದರ ಮೂಲತತ್ವಗಳನ್ನು ಈಗಲೇ ನಿಶ್ಚಯಿಸಿರುವರು ವಸಾಹತುಗಳಿಗೆ ಅವುಗಳ ಅಂತರ್ಗತ ಕಾರಭಾರದೊಳಗೆ ಸಹ ಈಗಿರುವದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಟ್ಟು ಸಾಮ್ರಾಜ್ಯದೊಳಗಿನ ಸ್ವರಾಜ್ಯದೇವತೆಯನ್ನು ಅದಷ್ಟು ಪೂರ್ಣವಾಗಿ ತೃಪ್ತ ಪಡಿಸತಕ್ಕದ್ದಲ್ಲದೆ ಹಿಂದುಸ್ಥಾನಕ್ಕೆ ಸಹ "ಮಹತ್ವದ ಭಾಗ" ವೆಂತ ಸಾಮ್ರಾಜ್ಯದೊಳಗೆ ಮನ್ನಿಸತಕ್ಕದ್ದೆಂತ ನಿಸ್ಸಂಶಯ ತಾತ್ವಿಕ ನಿರ್ಣಯವಾದಂತಾಗಿದೆ. ಹಿಂದುಸ್ಥಾನಕ್ಕೆ ಕೊಟ್ಟ ಈ 'ಮಹತ್ವದ ಭಾಗದ' ಬಹುಮಾನದಿಂದ 'ವಸಾಹತುಗಳ ಸ್ವರಾಜ್ಯದ' ಬಹುಮಾನಕ್ಕೆ ಎಷ್ಟು ಯೋಜನ ಅಂತರವದೆಂಬದು ಪರಿಷತ್ತಿನ ಮೆಂಬರರೇ ತಿಳಿಸಿ ಹೇಳಿದ್ದರೆ ಹಿಂದುಸ್ಥಾನವು ಅವರಿಗೆ ಮತ್ತಿಷ್ಟು ಋಣಿಯಾಗುತ್ತಿತ್ತು ಈ 'ಮಹತ್ವದ" ಅರ್ಥವನ್ನು ತಿಳಿಯದೆ ಹಿಂದುಸ್ಥಾನವು ತನಗೇನೂ ಹೆಚ್ಚಿನ ಲಾಭವಾಗಲಿಲ್ಲೆಂತ ತಿಳಿದರೆ ಈ ತಪ್ಪು ಪರಿಷತ್ತಿನ ತಲೆಯಮೇಲೆ ಹೊರಿಸುವದು ನ್ಯಾಯವಾಗಲಿಕ್ಕಿಲ್ಲವೇನು!

೩. ಸರಕಾರದ ಕೀರ್ತಿಯು ಎಷ್ಟು ಸೋಜ್ವಲವಿದ್ದರೂ, ನ್ಯಾಯದೇವತೆಯು ಎಷ್ಟು ನಿಪಕ್ಷಪಾತಿಯಿದ್ದರೂ, ರಾಜ್ಯಾಡಳಿತೆಯ ತತ್ವಗಳು ಎಷ್ಟು ಉದಾತ್ತವಿದ್ದಾಗ್ಯೂ, ಸರಕಾರದ ಹೆಸರು ಕಾಪಾಡುವದು ಅದವಾ ಕೆಡಿಸುವದು ಆ ತತ್ವಗಳನ್ನು ಪ್ರತ್ಯಕ್ಷ ಅಮಲಿನಲ್ಲಿ ತರಲು ನೇಮಿಸಿದ ಅಮಲದಾರರ ಕೃತ್ಯಗಳ ಮೇಲೆ ಎಷ್ಟರಮಟ್ಟಿಗೆ ಅವಲಂಬಿಸಿರುವದೆಂಬದು ಕೆಳಗಿನ ಸಂಗತಿಯಿಂದ ಕಂಡುಬಂದೀತು ಸರ್ ವ್ಹೆಲೆಂಟ್ಯಾನ ಚಿರೋಲರೆಂಬ ಬಿನ್‌ಅಧಿಕಾರಿ ಗೃಹಸ್ಥರು ಲೋಕಮಾನ್ಯ ಟಿಳಕರಮೇಲೆ ಸುಳ್ಳು ಆರೋಪ ಮಾಡಿದರೆಂದು ಚಿರೋಲ ಸಾಹೇಬರ ಮೇಲೆ ಲೋ। ಟಿಳಕರವರು ಲಂಡನ ಹೈಕೋರ್ಟಿನಲ್ಲಿ ಫಿರ್ಯಾದಿ ಮಾಡಿರುವರು. ಈ ವಿಷಯದಲ್ಲಿ ಎರಡೂ ಪಕ್ಷಗಳ ಸಾಕ್ಷಿಗಳನ್ನು ತೆಗೆದುಕೊಳ್ಳಲು ಒಂದು ಕಮಿಶನವು ಇಂಗ್ಲಂಡದಿಂದ ಇಲ್ಲಿ ಬೇಗನೆ ಬರುವದಿದ್ದರಿಂದ ಇಬ್ಬರೂ ಆತ್ಮಸಮರ್ಥನಾರ್ಥವಾಗಿ ಪೂರ್ವ ತಯಾರಿ ಮಾಡುತ್ತಲಿದ್ದಾರೆ. ಆಗ್ಗೆ ಚಿರೋಲ ಸಾಹೇಬರ ಈ ತೀರ ಖಾಸಗಿ ತನಖಿಯಲ್ಲಿ ಸಹ ಕೆಲವು ಗುಪ್ತ ಪೋಲೀಸರು ಸರಕಾರೀ ಕೆಲಸವೆಂಬಂತೆ ಊರೂರಿಗೆ ಹೋಗಿ ಜನರನ್ನು ಎಳತಂದು ಚಿರೋಲ ಸಾಹೇಬರಿಗೆ ಅನುಕೂಲವಾದ ಸಾಕ್ಷಿಗಾರರನ್ನು ಹುಡುಕಿ ತೆಗೆಯಲು ಮತ್ತು ಇತರ ಪುರಾವೆಯನ್ನು ಕೂಡಿಸಲು ತೊಡಗಿರುವರೆಂಬರ್ಥದ ಲೋ। ಟಿಳಕರ ಒಂದು ದೂರು ವಿಚಾರಣಾರ್ಥವಾಗಿ ಸಾಮುದಾರ ಗವರ್ನರ ಸಾಹೇಬರಕಡೆಗೆ ಸದ್ಯಕ್ಕೆ ಬಂದಿರುವದೆಂದು ಕೇಳುತ್ತೇವೆ. ಈ ತೀರ ಖಾಸಗಿ ತನಖಿಯಲ್ಲಿ ಅಧಿಕಾರಿಗಳು ಕೈಹಾಕುವ ಪಕ್ಷಮನಾಯಿ ಇದ್ದರೂ, ಬೇರೆಯವರ ಬೇಕಾಯಿದೇಶೀರ ವರ್ತನವನ್ನು ಕಂಡು ಹಿಡಿಯುವ ಗುಪ್ತಪೋಲೀಸರು ತಾವ್ಯಾಕೆ ಕಾಯಿದೆ ಮುರಿದಾರೆಂಬದು ತಿಳಿಯುವದಿಲ್ಲ. ಕದಾಚಿತ್ ಚಿರೋಲ ಸಾಹೇಬರು ಗವರ್ನರ ಮೊದಲಾದ ಬಡೆ ಬಡೇ ಅಧಿಕಾರಿಗಳ ಮನೆಯಲ್ಲಿ ಬಹು ದಿವಸಗಳಿಂದ ನೆಂಟನಂತೆ ಇದ್ದುಕೊಂಡದ್ದನ್ನು ನೋಡಿ ಈ ಗುಪ್ತ ಪೋಲೀಸರು ಚಿರೋಲರ ಸೇವೆಮಾಡಿ ಗವರ್ನರ ಮೊದಲಾದವರ ವಿಶೇಷ ಪ್ರೀತಿವಿಶ್ವಾಸಕ್ಕೆ ಪಾತ್ರರಾಗುವರೆಂದು ನಂಬಿದ್ದರೋ ಏನೋ? ಆದರೆ ನಾ। ಗವರ್ನರ ಸಾಹೇಬರು ನ್ಯಾಯ ಪಕ್ಷಪಾತಿಗಳು. ತಾವು ಏನೂ ಆ ಸುದ್ದಿಗೆ ಹೋಗದಿದ್ದರೂ, ಈ ಸಂಗತಿಯ ವಿಚಾರಮಾಡಿ ತೀರ್ಪುಕೊಡುವ ಕಷ್ಟಕರ ಪ್ರಸಂಗವು ಪುಣ್ಯಾತ್ಮರ ಮೇಲೆ ಬಂದೊದಗಿದೆ. ಹೇಗಂದರೆ, ನ್ಯಾಯದೇವತೆಯನ್ನು ಸ್ಮರಿಸಿ ಅಧಿಕಾರದ ದುರುಪಯೋಗ ಮಾಡಿದವರನ್ನು ದಂಡಿಸುವದೋ, ಇಲ್ಲವೆ, ಗುಪ್ತಪೋಲೀಸರಂಥ ನಂಬಿಗಸ್ತ ಸೇವಕರ ಹಿಂದಿನ ಸೇವೆಯನ್ನೂ ಮುಂದಿನ ಉಪಯುಕ್ತತೆಯನ್ನೂ ಸ್ಮರಿಸಿ ಅವರ ತಿಳಿಗೇಡಿತನಕ್ಕೆ ನಗೆಯಿಂದಲೇ ತಿರಸ್ಕರಿಸುವದೋ ಎಂಬ ನಾಜೂಕು ಪ್ರಶ್ನೆಯು ಅವರ ಮುಂದಿರುವದು. ಆದ್ದರಿಂದ ಇದರ ತೀರ್ಪು ಹ್ಯಾಗಾಗುವದೆಂದು ತಿಳಿಯಲು ಜನರು ಉತ್ಸುಕರಾದದ್ದು ಸಹಜವು.

ವಿವಿಧ ವರ್ತಮಾನ.

ಕಲ್ಕತ್ತೆಯಲ್ಲಿ ಸುಮಾರು ರಾತ್ರಿ ೮ ಘಂಟೆಗೆ ಆರು ಜನ ದರೋಡೆಖೋರರು ಒಂದು ಆಭರಣಗಳ ವ್ಯಾಪಾರಸ್ಥನ ಅಂಗಡಿಯಲ್ಲಿ ಸಾಮಾನು ತೆಗೆದುಕೊಳ್ಳುವ ನೆವದಿಂದ, ಹೆಚ್ಚೆಚ್ಚು ಕ್ರಯದ ಆಭರಣಗಳನ್ನು ತರಿಸಿ, ನಾಕಷ್ಟು ಬಂದಕೂಡಲೇ, ಇಬ್ಬರನ್ನು ಕೊಂದು ಮತ್ತಿಬ್ಬರನ್ನು ಘಾಯ ಪಡಿಸಿ ೫-೧೦ ಸಾವಿರ ಮೌಲ್ಯದ ಆಭರಣಗಳನ್ನು ತೆಗೆದು ಪಲಾಯನ ಮಾಡಿದರು, ಪೋಲೀಸಿನವರು ತನಖಿಯನ್ನು ಮಾಡುತ್ತಿರುವರು.

ಕೈ। ಅಣ್ಣಾಸಾಹೇಬ ಪಟವರ್ಧನರು ಹೇಳಿದ ಮೇರೆಗೆ ಡಾ। ಹರಿಗೋವಿಂದದೇವ ಸಾಠೆ ನಾರಾಯಣ ಪೇಠ, ಪುಣೆಯವರು ಆಯುರ್ವೇದ ವನಸ್ಪತಿಗಳಿಂದ, ಕೂಸುಗಳಿಗೂ, ಅಶಕ್ತರಿಗೂ ಉಪಯೋಗಿಸುವದೆ 'ಅಣ್ಣಾಂಚೆ ಅನ್ನ'ವನ್ನು ತಯಾರಿಸಿರುವರು. ಇತ್ತಲಾಗಿ ನಮ್ಮ ಕಡೆಗೆ ಪ್ರಚಲಿತವಾಗಿರುವ ಮೆಲಿನ್ಸಫೂಡ, ಬೆಂಝರ ಮುಂತಾದವುಗಳಿಗಿಂತ ಈ ದೇಶೀ 'ಅನ್ನ' ವು ಶ್ರೇಷ್ಠವಿರುತ್ತದೆಂದು ಹೇಳುತ್ತಾರೆ.

ಮೆಸೊಪೊಟೆಮಿಯಾದಲ್ಲಿ ವ್ಯಾಸರಾಯರ ಮಗನು ಮೃತಪಟ್ಟನೆಂದು ತಿಳಿಸಲು ವ್ಯಸನವಾಗುತ್ತದೆ.

ನಾಸಿಕದಲ್ಲಿಯ ಮುಂಬಯಿ ಪ್ರಾಂತಿಕ ಸಭೆಯು ನಾ। ಶ್ರೀನಿವಾಸ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ತಾ. ೧೩-೧೪-೧೫ನೇ ದಿವಸ ವಿಜೃಂಭಣೆಯಿಂದ ನಾಗಿತು.

6 ಕಾನಡಾವೃತ್ತ— ಬುಧವಾರ ತಾರೀಕು ೧೬ ಮಾಹೆ ಮೇ, ಸನ್ ೧೯೧೭ ನೇ ಇಸವಿ

ಪತ್ರವ್ಯವಹಾರ.

ಕಷ್ಟ ತಪ್ಪಿಸುವರೋ ?

ಅಯ್ಯಾ ಕಾನಡಾವೃತ್ತ ಪತ್ರಾಧಿಪರೇ,

ಬಗ್ಗೋಣದಲ್ಲಿ ಮುನಿಸಿಪಾಲಿಟಿಯ ರಸ್ತೆಯ ಆಚೆಗೆ ಲೋಕಲ್‌ಬೋರ್ಡಿನ ರಸ್ತೆ ಇದೆ ಅದು ಅಲ್ಲಲ್ಲಿ ಮೇಲೆ ಕೆಳಗೆ ಆಗಿದ್ದದರಿಂದ ಹಾದು ಹೋಗುವಾಗ ಗಾಡಿಯವರೂ, ಎತ್ತುಗಳೂ 'ದೇವರೇ, ಯಾಕೆ ಹೊಟ್ಟೆ ಕೊಟ್ಟೆ' ಎಂತ ದೂರುತ್ತಾರೆ ಕೆಲವು ಕಡೆಯಲ್ಲಿ ಮಳೆನೀರಿನಿಂದ ಕೊರಕಲ್ಲು ಬಿದ್ದಿರುತ್ತದೆ ಕೊರಕಲ್ಲು ಬಹು ಆಳವಾದಲ್ಲಿ ಗಾಡಿಯು ಪೂರಾ ಮುರಿದು ಬೀಳದಂತೆ ಮಣ್ಣು ಹಾಕಿದ್ದಾರೆ ಒಂದು ಕಡೆಯಲ್ಲಿ ಏರೆ ಹೋಗುವಾಗ ಗಾಡಿಯವರು ಕೆಳಗಿಳಿದು ಬಹು ಜಾಗ್ರತೆಯಿಂದ ಹೋಗಬೇಕಾಗುತ್ತದೆ. ಇಷ್ಟೆಲ್ಲಾ ಖಟಾಟೋಪವನ್ನು ೩ ಫರ್ಲಾಂಗಿನ ಒಳಗೆ ಮಾಡಬೇಕಾಗುತ್ತದೆ ಇದರ ಮೇಲಿಂದ ಆ ಮಾರ್ಗದ ಹೀನಾವಸ್ಥೆಯು ವಾಚಕರ ಮನಸ್ಸಿನಲ್ಲಿ ಬಿಂಬುವದು ಈ ಮಾರ್ಗವು ಮುನಿಸಿಪಾಲಿಟಿಯ ಮಾರ್ಗವು ತೀರಿತೆಂದು ತಿಳಿಯಬೇಕೆಂಬೋ, ಯಾ ಮುನಿಸಿಪಾಲಿಟಿ ಮಾರ್ಗದಿಂದ ಸುಖದಿಂದ ಬಂದ ಎತ್ತುಗಳಿಗೆ ಕಷ್ಟ ಕೊಟ್ಟು ಜಗತ್ತಿನಲ್ಲಿ ಸುಖವಿದ್ದಲ್ಲಿ ದುಃಖವದೆಂಬ ಸರ್ವಮಾನ್ಯ ತತ್ವವನ್ನು ಕಲಿಸಲಿಕ್ಕೋ ಏನೋ ನಮ್ಮ ಲೋಕಲ್‌ಬೋರ್ಡ ಮಾರ್ಗವು ಹಾಗೆ ಇಟ್ಟಿರುತ್ತದೆ ಆ ರಸ್ತೆ ವ ಅಲ್ಲಿ ಹಾದು ಹೋಗುವ ಗಾಡಿ ಇವೆರಡೂ ಒಂದು ಸರ್ಕಸ ಕಂಪನಿಯಲ್ಲಿದ್ದರೆ, ಅಂಥಾ ಕಠಿಣ ಕಸರತ್ತು ಮಾಡಿದ್ದಕ್ಕಾಗಿ ಎಷ್ಟೋ ತಿಫಾರಸು ಪತ್ರಗಳು ಸಿಕ್ಕುತ್ತಿದ್ದವು

ಈಗ ನಮ್ಮ ಲೋಕಲ್‌ಬೋರ್ಡಿನ ಮೆಂಬರರು ಈ ವರ್ಷವಾದರೂ ಈಕಡೆಗೆ ಲಕ್ಷಕೊಟ್ಟಾರೇ ಇದಕ್ಕೆ ಯುದ್ಧ ಪರಿಸ್ಥಿತಿಯನ್ನು ಹೇಳಕೂಡದು ಗಾಡಿಕಾರರ ಕಡೆಯಿಂದ ಯಾರೂ ಇಲ್ಲದ ಬೆಟ್ಟದಲ್ಲಿ ಕಸರತ್ತು ಮಾಡಿಸಿ ದೇವರು ಕೊಟ್ಟ ಶಕ್ತಿಯ ದುರುಪಯೋಗ ಮಾಡಿಸಕೂಡದು ರಸ್ತೆ ದುರುಸ್ತಿ ಶಿಕ್ಷಣ ಮುಂತಾದವುಗಳಿಗೆಂತ ಲೋಕಲ್ಫಂಡು ಕೊಡಲ್ಪಡುತ್ತದೆ ಇಷ್ಟು ಹತ್ತಿರ ಇರುವ ರಸ್ತೆಯು ಈ ರೀತಿಯಿಂದ ಮೇಲೆ ಬಾಕಿ ರಸ್ತೆಗಳು ಹ್ಯಾಗೆ ಇವೆಯೋ ಏನೋ? ವಾಚಕರು ಚೌಕಶಿ ಮಾಡಬಹುದು ಇದರ ಹೊರತು ಈ ರಸ್ತೆಯ ಸ್ಥಿತಿಯು ನಮ್ಮ ಲೋಕಲ್‌ಬೋರ್ಡ ಮೆಂಬರರ ಕರ್ತವ್ಯದಕ್ಷತೆಯ ಸಾಕ್ಷಿ ಕೊಡುತ್ತದೆ ಆದದ್ದಾಯಿತು, ಮಾತಾಡಿ ಫಲವಿಲ್ಲ ಈ ವರ್ಷವಾದರೂ ನಮ್ಮ ಲೋಕಲ್‌ಬೋರ್ಡಿನ ಲೋಕ ಪ್ರತಿನಿಧಿಗಳು ಈ ರಸ್ತೆ ದುರುಸ್ತಿಗಾಗಿ ಬಜೆಟಿನಲ್ಲಿ ಹಣವನ್ನು ಮಂಜೂರ ಮಾಡಿ ಬಡವರ ಗೋಳಾಟವನ್ನು ತಪ್ಪಿಸುವರಾಗಿ ನೆರೆ ನಂಬಿದ್ದೇನೆ

ತಮ್ಮ ವಿಧೇಯ
ಬಗ್ಗೋಣ ನಿವಾಸಿ

ಕಾನಡಾವೃತ್ತದ ಸಂಪಾದಕರಿಗೆ —

ಪ್ರಿಯಮಹಾಸಾಹೇಬರೇ,

ಕಾನಡಾವೃತ್ತದ ಕಳೆದ ಎಪ್ರಿಲ ೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಸಿದ್ಧವಾದ ಅಂಕೋಲೆಯ ಬಾತಮೀ ಪತ್ರಕ್ಕೆ ಸಂಬಂಧವುಳ್ಳ ಈ ಕೆಳಗಿನ ನಾಲ್ಕು ತಪ್ಪುಗಳನ್ನು ನಿಮ್ಮ ಪತ್ರದ ಮುಂದಿನ ಸಂಚಿಕೆಯಲ್ಲಿ ನೀವು ದಯಮಾಡಿ ಪ್ರಕಟಿಸುವಿರಾಗಿ ನಂಬುತ್ತೇನೆ

ಹಲವು ಕಡೆಯಲ್ಲಿ ಆದಂತೆ ಅಂಕೋಲೆಯಲ್ಲಿಯೂ ಆಗೇರ ಜನರಲ್ಲಿ ಕೆಲವು ಕೂಲಿ ಜನರನ್ನು ಕೂಡಿಸುವ ದೆಸೆಯಿಂದ ಮಾಮಲೇದಾರಸಾಹೇಬರು ಊರಜನರನ್ನು ಕರಿಸಿ ಆಬಗ್ಗೆ ಅವರಿಗೆ ತಿಳಿಸಿ ಹೇಳಿದ್ದರಷ್ಟೇ ಆದರೆ ಈ ಸಂಬಂಧ ನನ್ನ ವಿಷಯದಲ್ಲಿ ಸದರಿ ಪತ್ರದಲ್ಲಿ ಅನೃತ ವ ನಿಂದಾಯುಕ್ತ ವೃತ್ತಾಂತವನ್ನು ಪ್ರಕಟಿಸುವದಕ್ಕೆ ನಿಮ್ಮ ಹೆಸರಿಲ್ಲದ ಬಾತಮೀದಾರನಿಗೆ ಏನು ಪ್ರೇರಣೆ ಆಯಿತೆಂಬದು ತಿಳಿಯದು ಸಭೆಯಲ್ಲಿ ನೆರೆದ ಮೆ। ಹು। ಡಿ। ಕಲೇಕ್ಟರ ಸಾಹೇಬರವರಿಗೂ, ಮಾಮಲೇದಾರಸಾಹೇಬರವರಿಗೂ ವ ಬೇರೇ ಹಲವು ಜನರಿಗೂ ನಿಜವಾಗಿ ನಡೆದ ಸಂಗತಿ ಗೊತ್ತಿದ್ದು ಸದರಿ ಬಾತಮೀಪತ್ರದಲ್ಲಿ ನನ್ನ ಸಂಬಂಧ ಬರೆದ ಹಕೀಕತು ಎಷ್ಟು ಅಯಥಾರ್ಥ ವ ಅಸಹ್ಯಕರವೆಂಬುವದು ಅವರಿಗೆ ಖಾತ್ರಿ ಆಗಿರುತ್ತದಷ್ಟೇ

ಸಭೆಯ ಉದ್ದೇಶವನ್ನು ಜನರಿಗೆ ತಿಳಿಸಿದ ಮೇಲೆ ಅಲ್ಲಿ ಕೂಡಿದ ಎಷ್ಟೋ ಜನರು ತಮ್ಮ ತಮ್ಮ ತಾಬೆಯಲ್ಲಿರುವ ಆಗೇರ ಜನರಿಗೆ ತಿಳಿಸಿಹೇಳುತ್ತೇವಾಗಿಯೂ ತಂವು ಹೇಳುವದಲ್ಲದ ಅಮಲದಾರಜನರು ಹೇಳಿದಲ್ಲಿ ಹೆಚ್ಚಿನ ಪರಿಣಾಮವಾದೀತೆಂತಲೂ, ಆಳುಗಳ ಮನಸ್ಸಿದ್ದರೆ ತಮ್ಮ ಅಡ್ಡಿ ಇರಲಿಕ್ಕಿಲ್ಲವೆಂತಲೂ ಹೇಳಿದ ಮೇರೆಗೆ ನಾನು ಸಹ ಹೇಳಿದ್ದಿರುತ್ತದೆ ಇದಕ್ಕಿಂತ ಹೆಚ್ಚಿಗೆ ಹೇಳುವದು ಯಾರಿಗೂ ಸಾಧ್ಯವಿದ್ದಿಲ್ಲ ಆದರೆ ನಿಮ್ಮ ಬಾತಮೀದಾರನ ಹೇಳಿಕೆಯಂತೆ ಯಾರಿಂದಾಗದ ಕೆಲಸ ನಾನು ಮಾಡುತ್ತೇನಾಗಿಯೂ, ನನ್ನ ಆಳುಗಳಲ್ಲದ ಬೇರೆ ಆಳುಗಳನ್ನು ಸಹ ತಂದು ಕೊಡುವೆನಾಗಿಯೂ, ನನ್ನ ಸಂಗಡ ಒಬ್ಬ ಶಿಪಾಯಿಯನ್ನು ಕೊಟ್ಟರೆ ಆಳುಗಳನ್ನು ಸಕ್ತಿಯಿಂದ ಹಿಡಿದು ತರುವೆನಾಗಿಯೂ ನಾನು ಹೇಳಿದ್ದನೆಂಬುವದಾಗಲೀ, ಹು। ಡಿ। ಕಲೇಕ್ಟರ ಸಾಹೇಬರವರು ಅಲ್ಲಿ ನಡೆದ ವಿಷಯದಲ್ಲಿ ನನ್ನ ಯಾವದೇ ನಡತೆಯಬಗ್ಗೆ ಸಿಟ್ಟಾಗಿದ್ದರೆಂಬುವದಾಗಲಿ ಖರೇ ಅಲ್ಲ. ಬೇರೇ ಆಗೇರ ಜನರನ್ನು ಕೊಡುವದಕ್ಕಾಗಲಿ, ನನ್ನ ಆಳುಗಳನ್ನು ಅವರ ಮನಸ್ಸಿನ ವಿರುದ್ಧ ಕೊಡಲಿಕ್ಕಾಗಲಿ ನನಗೆ ಸಾಧ್ಯವಿಲ್ಲ, ಮತ್ತು ಆಗೇರ ಜನರ ಮೇಲೆ ಅಷ್ಟು ವಶೀಲಿ ಸಹ ನನ್ನಲ್ಲಿರುವದಿಲ್ಲ ಯಾ ಉಂಟೆಂದು ನಾನು ತೋರಿಸಿದ್ದೂ ಇಲ್ಲ ಈ ವಿಷಯದಲ್ಲಿ ಮಾಮಲೇದಾರ ಸಾಹೇಬರಿಗೆ ನನ್ನಿಂದಲೇ ಮುಖ್ಯ ಉತ್ತೇಜನವಾಗಿರುತ್ತದೆಂಬ ಸೂಚನೆ ಸಹಾ ತಿಳಿಗೇಡಿತನದ್ದಾಗಿರುತ್ತದೆ ನಾನು ಆಡಿದ್ದೆಂಬ ಮಾತುಗಳಿಂದ ಆಗೇರ ಜನರು ಊರು ಬಿಟ್ಟು ಬೆಟ್ಟದಲ್ಲಿ ಆಡಗಿಕೊಂಡಿರುವರೆಂತ ನಿಮ್ಮ ಬಾತಮೀದಾರನ ಇನ್ನೊಂದು ಹೇಳಿಕೆಯು ಆಗದಿ ಅವಿಚಾರಿ ಜನರ ಹೇಳಿಕೆಯಂತೆ ಆದೆ ಸರಕಾರದವರು ಕೂಲಿ ಜನರನ್ನು ಹುಡುಕುತ್ತಿರುವರೆಂಬ ಸಂಗತಿ ಇದಕ್ಕೂ ಬಹಳ ತಿಂಗಳು ಮುಂಚೆ ಆಗೇರ ಜನರಿಗೆ ತಿಳಿದು ಅವರು ಅಜ್ಞಾನದಿಂದ ಆಡಗಿಕೊಳ್ಳಹತ್ತಿದ್ದರು

ಸರಕಾರದವರು ನೆರೆಯಿಸಿದ ಸಭೆಯಲ್ಲಿ ಅವರ ಹೇಳಿಕೆಮೇರೆಗೆ ಹೋಗಿ ನಮ್ಮ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವದು ನಮ್ಮ ಕರ್ತವ್ಯವಾಗಿರುತ್ತದೆ ಹೀಗಿದ್ದು ಬಾಕಿ ಜನರಂತೆ ನನ್ನಿಂದಾದಷ್ಟು ನಾನು ಪ್ರಯತ್ನ ಮಾಡುತ್ತೇನಾಗಿ ಸದರಿ ಸಭೆಯಲ್ಲಿ ತಿಳಿಸಿದ್ದು ಅವ್ಯಾಪಾರೇಷು ವ್ಯಾಪಾರ ಮಾಡಿದಹಾಗೆ ಆಯಿತೆಂತ ಯಾವ ವಿಚಾರಿ ಮನುಷ್ಯನೂ ತಿಳಿಯಲಿಕ್ಕಿಲ್ಲ ಆದರೆ ಸದರಿ ಬಾತಮೀದಾರನು ವಿನಾಕಾರಣ ಈ ವಿಷಯದಲ್ಲಿ ತನ್ನ ಮನಸ್ಸಿನ ವಿಲಕ್ಷಣ ಸ್ವರೂಪವನ್ನು ಪ್ರಕಟನೆ ಮಾಡಿದ್ದು ನೋಡಿ ಬಹಳ ಖೇದವಾಗುತ್ತದೆ, ಸದರಿ ಸಭೆಯ ಉದ್ದೇಶದ ಕುರಿತು ಆಗೇರ ಜನರ ಕೈವಾರಿ ಎಂದು ಎಣಿಸಿಕೊಳ್ಳುವ ನಿಮ್ಮ ಬಾತಮೀದಾರನ ಅಂಬೋಣವು ಏನಿರುತ್ತದೆಂಬದು ಸ್ಪಷ್ಟ ತಿಳಿಯುವದಿಲ್ಲ, ಆ ಉದ್ದೇಶವು ಅವನ ವಿಚಾರಕ್ಕೆ ಸಮ್ಮತವಾಗಿದ್ದರೆ ಇಂಥ ವೃಥಾ ಟೀಕೆ ಮಾಡುವದಕ್ಕಿಂತ ಸರಕಾರಕ್ಕೆ ಆಗೇರ ಜನರ ಸಹಾಯವಾಗುವಂತೆ ಇನ್ನೂ ಹೆಚ್ಚಿನ ಉಪಾಯ ತೋರಿಸಿ ಕೊಟ್ಟಲ್ಲಿ ಅವನು ಶ್ರೇಯಸ್ಕರ ಕೆಲಸ ಮಾಡಿದಂತೆ ಆಗುತ್ತಿತ್ತು

ಮಹಾಯುದ್ಧದ ಸಾಲಕ್ಕೆ ಯಥಾನುಶಕ್ತಿ ಸಹಾಯ ಮಾಡುವದು ಪ್ರತಿ ಒಬ್ಬ ಮನುಷ್ಯನ ಕೆಲಸವಾಗಿರುತ್ತದೆ ಆದರೆ ನಾನು ಎಷ್ಟು ಸಾಲ ಕೊಡಬೇಕೆಂಬುವದು ನಿಮ್ಮ ಬಾತಮೀದಾರನು ಸೂಚಿಸುವದರಿಂದ ಅವನು ಅವ್ಯಾಪಾರೇಷು ವ್ಯಾಪಾರ ಮಾಡಿದಂತೆ ಆಗಿರುತ್ತದೆ

ಸರಕಾರದವರಿಗೆ ಈ ಸಮಯದಲ್ಲಿ ಕೂಲಿ ಜನರ ಆವಶ್ಯಕತೆ ಇರುತ್ತದೆಂಬದು ನಿರ್ವಿವಾದವಾದ ಮಾತು, ಮತ್ತು ಈಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಊರ ಜನರು ಸಹಾಯ ಮಾಡುವದು ಅವರ ಕೆಲಸವಾಗಿರುತ್ತದೆ ಆದರೆ ಸಕ್ತಿಯಿಂದ ಇಂಥ ಸಹಾಯ ತಕ್ಕೊಳ್ಳಬೇಕೆಂತ ಎಂದಿಗೂ ನನ್ನ ಅಂಬೋಣ ಯಾ ಹೇಳಿಕೆ ಇರುವದಿಲ್ಲ ಒಳ್ಳೇ ರೀತಿಯಿಂದಲೇ ಊರ ಜನರು ವ ಅಮಲದಾರರು ಕೂಡಿ ಈ ಕೆಲಸ ನೆರವೇರಿಸತಕ್ಕದ್ದಿರುತ್ತದೆ. ಹೊರತು ಒಬ್ಬನು ಇನ್ನೊಬ್ಬನ ಹೇಳಿಕೆಯ ಕುರಿತು ನಿಷ್ಕಾರಣ ಟೀಕೆ ಮಾಡುವದರಿಂದ ಪ್ರಸ್ತುತ ಹೇತು ಸಾಧಿಸುವಂತೆ ಇಲ್ಲ ಈ ವಿಷಯದಲ್ಲಿ ಆಗೇರ ಜನರ ಪೂರ್ಣ ಪರಿಚಯವುಳ್ಳಂತೆ ತೋರುವ ನಿಮ್ಮ ಬಾತಮೀದಾರನಂಥ ಜನರು ಬೇರೆ ಜನರ ಅಲ್ಪಸ್ವಲ್ಪ ಪ್ರಯತ್ನದ ಕುರಿತು ವೃಥಾ ಟೀಕೆ ಮಾಡುವದರಕಡೆಗೆ ಲಕ್ಷ್ಯ ಕೊಡದೆ, ಅವರಿಗೂ ಉತ್ತೇಜನ ಕೊಟ್ಟು, ತಾವು ಸಹ ಸರಕಾರಕ್ಕೆ ಸಹಾಯವಾಗುವಂತೆ ಉಪಯೋಗದ ಕೆಲಸ ಮಾಡುವದರಲ್ಲಿ ತೊಡಗುವರಾಗಿ ನಂಬುತ್ತೇನೆ

ನಾಗಪ್ಪ

* * *

ಮೇಲಿನ ನಾಗಪ್ಪ ಶೆಟ್ಟರ ಖುಲಾಸೆಯನ್ನು ಕರ್ತವ್ಯವೆಂತ ಆನಂದದಿಂದ ಪ್ರಕಟಿಸಿದ್ದೇವೆ ಜನರ ಮುಂದಾಳುಗಳ ಸಾರ್ವಜನಿಕವರ್ತನದ ಗುಣದೋಷಗಳನ್ನು ಸಂಕ್ಷಿಪ್ತವಾದ ಬಾತಮೀ ಪತ್ರಗಳಲ್ಲಿ ಯಥಾರ್ಥವಾಗಿ ಪ್ರತಿಬಿಂಬಿಸುವದು ಕಷ್ಟ ಸಾಧ್ಯವಾದಾಗ ಶ್ರೀ। ಶೆಟ್ಟರಂತೆ ಔದಾರ್ಯವಂತ ಪುಢಾರಿಗಳು ಆತ್ಮನಿವೇದನೆಯಿಂದ ಸ್ಪಷ್ಟೀಕರಿಸುವದು ಸತ್ಯ ನಿರ್ಣಯಕ್ಕೆ ಬಹಳೇ ಉಪಕಾರಕವಾಗುತ್ತದೆ ಇರಲಿ ನಾಗಪ್ಪರಾಯರು ಅಂತ್ಯದ ಕಲಮಿನಲ್ಲಿ ಸೂಚಿಸದಂತೆ ಅಂಕೋಲೆಯ ರಾಜನಿಷ್ಠ ಮುಂದಾಳುಗಳು ಗತಗೋಷ್ಟಿಯ 'ಟೀಕೆ' ಯಲ್ಲಿ ಹೊತ್ತು ಗಳೆಯದೆ ಸಾಮ್ರಾಜ್ಯದ ಈ ಮಹತ್ಕಾರ್ಯದಲ್ಲಿ "ಪುನಃ ಪುನಃ" ಪ್ರಯತ್ನ ಮಾಡುವರಾಗಿ ನಾವು ನಂಬುತ್ತೇವೆ ಯಾಕೆಂದರೆ

> " विघ्नैः पुनः पुनरपि प्रतिहन्यमाना
> प्रारभ्यमुत्तमजना न परित्यजन्ति "

ಸಂಪಾದಕ.

Printed & Published by Krishnarao Keshav Shenvi at his Star of Kanara Press, Kumta

THE
KANARA NEWS.
ಕಾನಡಾ ವೃತ್ತ.

ಪತ್ರದ ವರ್ಗಣಿ -
ಕುಮಟೆಯಲ್ಲಿ ಅಗಾವು ರೂಪಾಯಿ 1-0-0
ಅಂಚೆವೆಚ್ಚ ಸೇರಿ ರೂಪಾಯಿ 1-6-0
ಒಂದು ಸಂಚಿಕೆ 0-0-9

सत्यं ब्रूयात्प्रियं ब्रूयान्नब्रूयात्सत्यमप्रियं ।
प्रियं च नानृतं ब्रूयादेष धर्मः सनातन ॥

ಜಾಹಿರಾತುಗಳ ದರ -
ಕನ್ನಡ, ಇಂಗ್ಲಿಷ ಸ್ಮಾಲ ಪ್ಕಾಯಿಕ (೧೫ ಎಮ್‌ಉದ್ದ) ೮ ಸಾಲುಗಳ ವರೆಗೆ ರೂ 1 0-0
ಅನಂತರ ಪ್ರತಿ ಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

. Registered No. B. 1270

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೩೦ ಮಾಹೆ ಮೇ, ಸನ್ ೧೯೧೭ ನೇ ಇಸವಿ. [ಸಂಚಿಕೆ ೧೭.

ಇಕ್ಲಿಪ್ಸ ಪಿಲ್ಸ

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕೆಮ್ಮು ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಅಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ ಶೀಸೆ 1 ಕ್ಕೆ 0-6-0 ವಿ ಪಿ ಬೇರೆ ಡಜನ್ ಶೀಸೆಗಳಿಗೆ ರೂ 4-0-0 ವಿ. ಪಿ ಸಹಿತ

ವಿಳಾಸ— ದಿ ಇಕ್ಲಿಪ್ಸ ಏಜನ್ಸಿ, ಕಂಕನಾಡಿ, ಮಂಗಳೂರು.

मागणी करा
हीच वेळ आहे.

आज सर्वत्र ठिकाणी शाईपुड्या सबधाने दुर्मीळता आणि विशेष महागाई असता आम्ही काळीभोरशाईच्या पुड्या शेकडा १। रुपया भावानें आणि उत्तम निळिकाळीशाईच्या पुड्या शेकडा १ रुपया भावाने देत आहोत ट. खर्च शिवाय पडेल. तरी गरजुग्राहकानी ही वेळ लक्षात आणून आपला फायदा करून घ्यावा

पत्ता— **वीरकर आणि विद्यार्थी मंडळी शाईचा कारखाना, पोष्ट—सिन्नर,** जिल्हा **नाशीक**

ज्योतिषी.

जनार्दन दत्तात्रय साने. बुधवार नं २३४, पुणे ज्योतिषाची कामें सूक्ष्म तऱ्हेने केली जातात. विशेष माहिती समक्ष अगर पत्रद्वारे

☞ **ಸರಿಯೆಂದು ಸಿದ್ಧವಾದ**
ನಮ್ಮ ಅಧಿಕ ಅಕ್ಷೇನ ಮಾಸಫಲ್ಲ ಪಂಚಾಂಗಗಳನ್ನೇ ತರಿಸಿಕೊಳ್ಳಿರಿ, ಪ್ರತಿ ಒಂದಕ್ಕೆ ೨॥ ಆಣೆ. ಸೇ ೧೦ ರೂ.
ಕೃಷ್ಣರಾವ ಕೇ. ಶೇಣವಿ, ನ್ಯಾಶನಲ್ ಪ್ರೆಸ, ಕುಮಟಾ

ದೇಶಾಭಿಮಾನಿಗಳೇ !] ಕಾನಡಾವೃತ್ತ. [ಚಂದಾದಾರರಾಗಿರಿ!!

ಉತ್ತರ ಕನ್ನಡದಲ್ಲಿ ಲೋಕಸೇವೆಗೆ ತತ್ಪರವಾದ ಇದೊಂದೇ ವೃತ್ತಪತ್ರವು ಜನರ ಪ್ರೀತಿಗೂ ಆಶ್ರಯಕ್ಕೂ ಪಾತ್ರವಾಗಿದೆ ವಾರ್ಷಿಕ ಚಂದಾ, ರೂ ೧-೦-೦ ಅಂಚೆವೆಚ್ಚ ಸೇರಿ, ೧-೬-೬
ದೇಶಾಭಿಮಾನ ಹಿಡಿಯಿರಿ, ಚಂದಾದಾರರಾಗಿರಿ **ಕಾನಡಾವೃತ್ತ ಆಫೀಸ, ಕುಮಟಾ.**

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿ ಹೊಂದುತ್ತದೆ. ಅವಿಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಕ ಮತ್ತು ಮಾನಸೀಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಯುಕ್ತವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ ರಕ್ತ ದೋಷದಿಂದ ಆಗುವ ಎಲ್ಲಾ ರೋಗಗಳು ತಪ್ಪದೆ ನಾಶಿಯಾಗುವವು ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು ರಕ್ತ ಶ್ವೇತಸ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ತ್ವರೆಯಾಗಿ ದೂರವಾಗಿ ವ್ಯಂಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ಸಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೪೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು ಅಂಚೆವೆಚ್ಚ ಬೇರೆ ಬೀಳುವದು. ೪೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಸಿಕ್ಕಿರುವವು.

ವರ್‍ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ. ಜೀ. ಜವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ಬಗ್ಗೆಯಿಂದ ೩೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು ಇದಲ್ಲದೆ,

ಹೊಸ ಶಿಫಾರಸು ಪತ್ರವು.

ಸಂಗಮನೇರ ಪಟ್ಟಣದಿಂದ ನಾಗೋಬಾ ನೇವಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರಿಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು. ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಮಾನದಿಂದ ಹೊಗಳಹತ್ತಿರುವರು. ಆದರೂ ಈಗ ತಿರುಗಿ ೨೬ ರೂಪಾಯಿಯ ಔಷಧಿಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ ಪಿ ದ್ವಾರ ಕಳುಹಿಸಿ ಉಪಕರಿಸಿರಿ ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು.

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು ಡಬ್ಬಿಗಳು ಸಿಗುವ ಪತ್ತೆ —

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,
ಪೋಸ್ಟ, ನಿಪಾಣಿ (ಬೆಳಗಾಂವ).

Notice.

It has been decided to raise a Labour Corps for service in France from the Bombay Presidency The Corps will be commanded by Lieut Colonel J R Hill, late 12th Pioneers It will be employed purely on labour work The terms of employment can be obtained from the offices of the Collector, Assistant and Deputy Collectors, Mamlatdars and Mahalkaris or from a District Assistant Recruiting officer Contractors Muccadams and others having command of labour are invited to assist in the raising of the Corps by bringing in men Those bringing in labour will be suitably rewarded

Collector of Kanara

ನೋಟೀಸು.

ಮುಂಬಯಿ ಇಲಾಖೆಯಿಂದ ಫ್ರಾನ್ಸದಲ್ಲಿ ಕೆಲಸ ಮಾಡಲಿಕ್ಕೆ ಒಂದು ಮಜೂರದಾರರ ಸೇನಾತುಕಡಿಯನ್ನು ರವಾನಿಸುವದು ನಿಶ್ಚಯಿಸಿರುತ್ತದೆ ಸದರಿ ತುಕಡಿಯ ಅಧಿಪತ್ಯವನ್ನು ಹಿಂದ ಹನ್ನೆರಡನೇ ಪಾಯೊನಿಯರದ ಸೇನಾಧಿಪತಿ ಇದ್ದ ಲೆಫ್ಟನಂಟ ಕರ್ನಲ ಜೆ ಆರ್ ಹಿಲ್ಲ ಇವರು ನಡಿಸುವರು ಸದರಿ ತುಕಡಿಯು ಜನರಿಗೆ ಫಕ್ತ ಮಜೂರದಾರರ ಕೆಲಸವನ್ನು ಹಚ್ಚುವರು ನವಕರಿಯ ಪಗಾರ ವಗೈರೆ ಶರ್ತುಗಳನ್ನು ಮೆ॥ ಕಲೆಕ್ಟರ ಅಸಿಸ್ಟಂಟ ಕಲೇಕ್ಟರ ಡೆಪ್ಯುಟಿ ಕಲೇಕ್ಟರ ಸಾ॥ ರವರ ಆಫೀಸಿನಿಂದ ಯಾ ಮಾಮಲೇದಾರ, ಮಹಾಲ್ಕರಿಯವರ ಆಫೀಸಿನಿಂದ ಯಾ ಡಿಸ್ಟ್ರಿಕ್ಟ ಅಸಿಸ್ಟಂಟ ರಿಕ್ರೂಟಿಂಗ ಆಫೀಸರರಿಂದ ತಿಳಕೊಳ್ಳಬಹುದು. ಕಂಟ್ರಾಕ್ಟರ, ಮುಕಾದಮ, ಮಜೂರದಾರರ ತಂಡಿನ ಮುಖ್ಯಸ್ಥರಾದ ಇತರೇ ಜನರು, ಮಜೂರದಾರರನ್ನು ತಂದು ಕೊಟ್ಟು ಮದ್ದತ್ತು ಮಾಡಬೇಕೆಂತಾ ನಾವು ಇಚ್ಛಿಸುತ್ತೇವೆ ಮಜೂರದಾರರನ್ನು ತಂದು ಕೊಟ್ಟವರಿಗೆ ಯೋಗ್ಯ ಬಕ್ಷೀಸು ಕೊಡುವದರಲ್ಲಿ ಬಂದೀತು

Collector of Kanara

A Manual of Hindu Ethics,

BY

G. A Chandavarkar with an introduction by Prof Rama Deva B.A M R.A S It is an excellent book in 12 chapters treating of the sublime teachings of the Hindu Scriptures

Price annas ten only

For copies, apply to

G A Chandavarkar,
118 Residency Bazaars.
Hyderabad, (Deccan)

NOTICE.

The Gibb High School will re open on 5th June next at 7 a m when all classes will begin work Boys seeking admission into the school must present themselves before the undersigned with their last Leaving Certificates on that day

10th May 19[illegible] } **N S Kamat,** Superintendent Gibb High School Kumta

THE KANARA NEWS
[illegible]th May 1917

"A[illegible] a[illegible] the living Present!
Heart within and God o'er head"

The Indian War Loan work in Kanara

In sp[illegible] of s[illegible] me niggardliness of a [illegible] ble character in some quarters, [illegible] Kanara has ungrudgingly made [illegible] the call for War Loan It has really surpassed our expectations in this respect in consideration of its backwardness in every direction Even the Government officers were diffident when they originally fixed five lacs as its share of the War Loan But the public were so prompt in responding to the appeal [illegible] the Government that the original limit was shortly reached and the present figure is close on eight lacs & is still growing The enthusiastic response made by the public is as much the outcome of their patriotic spirit as of the zeal and indefatigableness of the Government Officers and the public leaders We must not however lose sight of the potent fact that the people have been actuated more by higher motives of patriotism & duty than mere prudential considerations It is on that account they deserve our warm approbation We are glad that the district has acquitted itself very creditably of the heavy responsibility on its head & has luckily escaped being permanently damned as unpatriotic and looked upon as deserving to be the neglected part of the Indian Empire It has doubtless raised itself in the estimation of the Government and has entitled itself to the right of receiving better attention to its needs in future But Kanara's duty is not yet done It must still aspire, if it can, to reach one million with all its might

The people will be more than pleased to learn the splendid news that something like Rs 50,000 has been actually invseted during the last week in the Sirsi sub-division only. Here we make a strong appeal to those who have made promises already to fulfill them at once, of their own accord, in order to leave the war loan committees free to confine their energy to the work of recording more promises By the bye, we feel it our duty to suggest that the workers in the War Loan Committes should use their discretion as to who should be approached and who should be totally exempted. Let care be taken to see that none shall feel the necessity of borrowing money in order to go in for the War Loan. We shall not be sorry if an additional burden is brought to bear on the shoulders of the rich by totally exempting men of very limited resources Government does not expect compulsion to be used in raising the loan as is quite clear from the following communique issued by the Government of Bengal.- "In view of the several complaints that subordinate officers of Government have been exercising undue influence and pressure upon the public to subscribe to the war loan, the Governor in Council desires to state for general information that he issued instructions before the loan opened against any appearance of compulsion or extravagant and sensational appeals These instructions have been recently repeated " We hope there is no necessity of a similar communique being issued by the Bombay government also Kanara is remarkably cool headed & can ill afford to lose that reputation even in these days of universal agitation

Visitors' Books in Vernacular Schools

It is a happy sign of the times that the educated people of India are almost unanimous in their readiness to adopt the vernaculars as the media of instruction not only in secondary Schools but even in Colleges. The public opinion is ever growing stronger and stronger in favour of this cherished reform and we cannot but be too certain of the fact that in no distant future we shall be fortunate to see the desired change But it seems our educational authorities are still ignorant of this change in the ideas of the people so much so that they will pursue their own unintelligent methods of work The reason why we are compelled to make this remark is that the other day when we had an occasion to open the Visitors' Book of a vernacular school of this place we were surprised to find that the remarks left by the D E Inspector on the work of the School in the recent annual examination were written in English The remarks were obviously meant for the guidance of the Kanarese knowing Head-master & his assistants and as such ought to have been worded in the Vernacular only Otherwise how are they to understand and carry out the instructions of the officer? It is really a humiliating sight that the masters should move in search of English knowing persons to get themselves acquainted with the Inspector's remarks, good or condemnatory, and have them copied down for submission to the local authorities This is one of the many instances to show how the Educational Department lacks initiative even in simple matters No wonder then if the poor vernacular teachers follow in the wake of their superiors! Let us hope that the department will make the necessary reform at least in this matter and relieve the masters of the necessity of moving from person to person with the Visitors' Book in hand which, we presume to say, they have to do with great reluctance and sense of humiliation

---

RANDOM THOUGHTS

The war situation

It is gratifying to note that the new methods resorted to by the British Admiralty have been very successful to get the sub marine danger under control Between 1st & 5th of May no less than twelve German sub marines have been accounted for, which we learn from a well authenticated report from Paris The news that there is a steady increase in the arrivals and sailings of ships and a decrease in those sunk by sub marines exposes the futility of the German boast to starve the United Kingdom by sub-marine blockade The western & Italian fronts are very active, the Allies being the masters of the situation in spite of persistent counter attacks by the enemy The British have destroyed the whole of the Hindenburg line The Americans will join hands with the Allies in actual warfare by landing a division in France in a short time Besides a flotilla of American Destroyers is already rendering very valuable services to the British naval forces in European waters. All this assures us of our firm conviction that victory will crown the allied arms before long.

Irish Question

One more attempt at the settlement of the vexed Irish question is made by Mr Lloyd George The Premier stated in the House of Commons the other day that his government proposed to summon a Convention of Irishmen of all sections and political parties to draft a constitution for the government of Ireland within the Empire If a substantial agreement is reached between all the parties, the Imperial government will undertake to give legislative effect to it So long Ireland played the role of a critic but now that she has been confronted with the problem of framing the constitution she cannot but give due weight to the obstacles and difficulties & also the remedy to avoid them. It is the honest desire of Mr Lloyd George that Ireland should no longer remain 'the uncured sore' of the Empire sapping its vigour but an active helper towards the speedy & successful termination of the war. He is to be commended as much for the novelty & originality of his proposal as for his astute statesmanship At any rate, Mr. George need not entertain any fears of becoming unpopular with this or that party if the Convention fails to reach any agreement We sincerely wish entire success to the deliberations of the Convention, thus enabling Ireland to win Home Rule on which she has set her heart for centuries

Russia

The Russian affairs were so long in a muddle The Council of Workmen's and Soldiers' Delegates had assumed the administrative powers without caring for the Provisional Government and there were evident symptoms of universal anarchy But we hear with pleasure that Government is reorganised and has commanded the confidence of the nation Government has declared that free Russia will fight the Germans in co operation with the allies and will never consent to leave under the yoke of German militarism the territories lost owing to the negligence of the old regime. Free Russia has spoken out her mind & will certainly stand by her word We need not be discouraged about Russia. Day after day we shall hear very encouraging news from that great Democracy Let her strain her every nerve to follow the words of the present Premier of the British Empire viz "National discipline is a condition of national freedom"

6 ಕಾನಡಾವೃತ್ತ— ಬುಧ— —

ಅಭಿನಂದನವಾಗಿ ಆನಂದಾತಿರೇಕದಿಂದ ಇಡೆ ... ತ್ತೇ ದುಮುದುಮಿಸಿತು

ನಿಜ ಸ್ವಾತಂತ್ರ್ಯಪ್ರೇಮವೆಂದರೆ ತನ್ನ ಸ್ವಾತಂತ್ರ್ಯವೊಂದನ್ನೇ ಅಲ್ಲದೆ ಎರಡನೇಯವರ ಸ್ವಾತಂತ್ರ್ಯಕ್ಕೂ ಎಚ್ಚರವಿಟ್ಟು ಅದನ್ನು ಕಾಪಾಡಿಕೊಳ್ಳುವದ ... ತಂತ್ರ್ಯದ ತವರಮನೆಯೆಂಬ ಕೀರ್ತಿಯು ಇಂಗ್ಲಂಡದ ಇತಿಹಾಸದಲ್ಲಿ ಇರಲು ಇಂಗ್ಲಂಡವು ಹಿಂದುಸ್ಥಾನಕ್ಕೆ ಸ್ವರಾಜ್ಯ ದಾನಮಾಡಿ ತನ್ನ ಕೀರ್ತಿ ... ವದೆಂದು ಅಪೇಕ್ಷಿಸುತ್ತೇವೆ ನಮಗೆ ಅವಸರ ... ಡಬೇಡಿರೆಂದು ಆಗಾಗ್ಗೆ ಹೇಳುವದು ... ಕೀಯ ವಿಷಯಗಳಲ್ಲಿ ನೀವು ... ಚಾತುರ್ಯವನ್ನು ಗಳಿಸಿಕೊಂಡಿಲ್ಲ ನಿಮ್ಮ ... ಧಾರ್ಮಿಕ ... ಸಾಮಾಜಿಕ ವೈಮನಸ್ಯ ... ತಾಗಿಲ್ಲ ಆದ್ದರಿಂದ ತುಸು ಕೂತ ಮಲಗಿಕೊಳ್ಳಿರಿ ಆದರೆ ... ವು ನಿಲ್ಲುವದಾದರೂ ಎಷ್ಟು ವರುಷ? ಶಿಕ್ಷಣ ... ವತ್ತು, ಯಾವ ವೃಷ್ಟಿಯಿಂದ ನೂ ದಿವರೂ ನಾವು ಸ್ವರಾಜ್ಯರಹಿತ ಸ್ಥಿತಿಯಲ್ಲಿ ... ದವು ಮೆಲ್ಲಮೆಲ್ಲಗೆ ಕ್ರಮಕ್ರಮೇಣ ... ವರ್ಷಗಳಾದರೂ ... ಸ್ಥಳಗಳೊಳಗೆ ... ನಡೆದಿರುತ್ತದೆ ಕಾಲಗಣತಿಯ ... ಯನ್ನು ಮಾಡಿದರೆ, ಅದರಲ್ಲಿ ಉದಾತ್ತವಾದ ವಿಚಾರಗಳೂ ಉದಾರ ಆಶ್ವಾಸನಗಳೂ ಶಿಕ್ಷಣ ... ವು ಆದರೆ, ಕೃತಿಯ ಮಾತು ಬಂದರೆ ... ವದು, ಶಬ್ದಪ್ರಹಾರಕ್ಕೆ ಆರಂಭಿಸುವದು ... ಲ್ಲಿ ಏನಾದರೊಂದು ಕ್ಷುಲ್ಲಕವಾದ ಅನುಕೂಲತೆ ... ನ್ನ ಬೀಸಾಡಿ ಬಿಡುವದು ಇವನ್ನೆಲ್ಲ ನಾವು ಸುಮ್ಮನಿದ್ದು ತಾಳಿಕೊಳ್ಳುತ್ತಿದ್ದರೂ ನಾವು ... ಭಾರವನ್ನು ಒಮ್ಮೆಲೇ ಒದಗಿಸಿ ಮಾಡಿಬಿಟ್ಟೇವೆಂಬ ವಿಚಾರವಾದರೂ ಅಧಿಕಾರಿಗಳ ಮನಸ್ಸಿನಲ್ಲಿ ಹೇಗೆ ಬರುತ್ತದೆಯೋ ತಿಳಿಯದು ಇರಲಿ

ಇಷ್ಟಾದಬಳಿಕ ಅಧ್ಯಕ್ಷರು ಹಿಂದೀಜನರಿಗೆ ದೊಡ್ಡದೊಡ್ಡ ಅಧಿಕಾರದ ಸ್ಥಾನಗಳನ್ನು ಕೊಡುವದರಲ್ಲಿ ವ ಕಾಯಿದೆ ಕೌನ್ಸಿಲದ ಸುಧಾರಣೆಯ ಮಂಡನೆಯನ್ನು ಸಪ್ರಮಾಣವಾಗಿಯೂ ಸಉಪಪತ್ತಿಕವಾಗಿಯೂ ವಿವೇಚಿಸಿದರು

ಸಂಪೂರ್ಣವಾದ ಜಗತ್ತಿನ ಚಕ್ರವು ವೇಗದಿಂದ ಭ್ರಮಿಸುತ್ತಿರುವಾಗ ನಾವು ಮಾತ್ರ ಮಂದಗತಿಯಿಂದ ಮಾರ್ಗವನ್ನು ಕ್ರಮಿಸಬೇಕೆಂದು ಹೇಳುವದು ಅಶಕ್ಯವು ಚಿಕ್ಕಮಕ್ಕಳಿಗೆ ಮಾಡುವ ... ಯ ಉಪದೇಶವನ್ನು ಇನ್ನು ಮುಂದ ಕೇಳುವರಾರು? ಇಂಥ ಪರಿಸ್ಥಿತಿಯನ್ನು ಅನುಲಕ್ಷಿಸಿಯೇ ಲ್ಲೊಯ್ಡ ಜೊರ್ಜ ಸಾಹೇಬರು ಅನ್ನುವದೇನಂದರೆ, "ಯುದ್ಧವು ಸಮಾಪ್ತಿಯಾದಬಳಿಕ ಪೂರ್ವಪರಂಪರೆಯೇ ಮುಂದೆ ನಡೆಯಲಾರದು ಯುದ್ಧದಾವಾನಲದ ಪ್ರಖರ ಬೆಳಕಿನಲ್ಲಿ ಈ ಸಂಗತಿಯು ... ಪ್ರತ್ಯಕ್ಷಕ್ಕೆ ಬಂದಿರುವದರಿಂದ ಸಾಮ್ರಾಜ್ಯದ ಪುನರ್ಘಟನೆಯಾಗುವ ಕಾಲದಲಿ ಮಣ್ಣು ತಿನ್ನುತ್ತ ಮೂಲೆಗುಂಪಾಗಿ ಬಿದ್ದಿರುವ ಮಾತಗಳನ್ನು ತಲೆಯಮೇಲೆ ಇಟ್ಟುಕೊಂಡು ಕುಣಿಯಬೇಡಿರಿ ಅನೇಕ ಪೀಳಿಗೆಗಳಲ್ಲಿ ದುರ್ಲಭವಾಗಿದ್ದ ಅನುಭವಜ್ಞಾನವು ನಮಗೆ ಮೂರು ನಾಲ್ಕು ವರುಷಗಳಿಂದ ದೊರೆತಿದೆ ಅದನ್ನು ಕಣ್ಣುಮರೆಮಾಡಿ ನಿಮ್ಮ ಭವಿಷ್ಯೋದಯಕ್ಕೆ ನೀವು ಮುಂದಾಗಬೇಡಿರಿ"

ಆ ಬಳಿಕ ಅಧ್ಯಕ್ಷರು ಆಯಾತ್ಮಜಕಾತಿನ ತಾತ್ವಿಕ ವಿಚಾರ ಸ್ಥಾನಿಕ ಸ್ವರಾಜ್ಯ ಮುಂತಾದ ಸಂಗತಿಗಳ ವಿವೇಚನಮಾಡಿ ತಮ್ಮ ಭಾಷಣವನ್ನು ಮುಗಿಸಿದರು

ಯುದ್ಧವಾರ್ತೆಯು.

ಪಶ್ಚಿಮರಣಭೂಮಿ ಶತ್ರುಗಳ ಒಪ್ಪಂದದ ಮಂತ್ರಕ್ಕೆ ಮಿತ್ರರು ಮದ್ದುಗುಂಡುಗಳಿಂದಲೇ ಉತ್ತರ ಕೊಡುತ್ತಾರೆ ಬ್ರಿಟಿಶರು ರೋ ಬುಲೇಕೋರ್ಟ ಗಾವ್ರೆಲ ಮುಂತಾದ ಮಹತ್ವದ ಠಾಣ್ಯಗಳನ್ನು ಸ್ವಾಧೀನ ಮಾಡಿಕೊಂಡಿರುವರು ಇದರೊಳಗೆ ಶತ್ರುಗಳ ಹಾನಿಯು ಹೇಳಲಾಗಲ್ಲ! ೫೦ ಸಾವಿರ ಶತ್ರುಸೈನಿಕರು ಸೆರೆಬಿದ್ದಿದ್ದಾರೆ ಫ್ರೆಂಚರು ಚೆಮ್ಸ್‌ದ ಪೂರ್ವಭಾಗಗಳಲ್ಲಿಯ ೩ ಸಾಲು ಖಂದಕಗಳನ್ನು ಕೈವಶ ಮಾಡಿಕೊಂಡಿದ್ದರಲ್ಲದೆ ವ್ಹಂಜ್ಲೆರೆ ಕೆಲಿಫೋರ್ನಿಯದ ಮೇಲೆ ಹಲೆಮಾಡಿ ಕೊನೇಲೆಟಟದಲ್ಲಿ ಭದ್ರವಾಗಿದ್ದಾರೆ

ಇಷ್ಟು ದಿವಸ ನಿದ್ರಾವಸ್ಥೆಯಲ್ಲಿದ್ದ ಇಟಾಲಿಯು ಈಗ ಎದ್ದು ಬಹಳೇ ಪರಾಕ್ರಮಗಳನ್ನು ಮಾಡತೊಡಗಿದೆ ಸ್ವಲ್ಪ ದಿವಸಗಳಲ್ಲಿಯೇ ... ಕಾಸೋ ... ಮತ್ತು ... ಗಳನ್ನು ಹಸ್ತಗತ ಮಾಡಿಕೊಂಡಿದ್ದರಿಂದ ಆಸ್ಟ್ರಿಯನ್ನರ ಸೈನ್ಯದಲ್ಲಿ ವ್ಯವಸ್ಥೆಯಾಗಿದ್ದಲ್ಲದೆ ಬಂದು ... ಉರಪನು ... ರಿಂದ ಆಸ್ಟ್ರಿಯದ ಪ್ರತಿಗಾಮಿ ... ದ ಕೌಂಟ ... ಮಂತ್ರಿಮಂಡಳವು ರಾಜನಾಮೆ ಕೊಟ್ಟಿತು ಇದರಿಂದ ಆಸ್ಟ್ರಿಯದಲ್ಲಿಯ ಜರ್ಮನ ಪಕ್ಷಸ್ತವು ನಷ್ಟವಾಯಿತ ಟ್ರೀಸ್ಟವು ಇಟಾಲಿಯನರ ವಶವಾಗುವ ಸಂಭವವಿದೆ ಇಟಾಲಿಯನರ ವ ಮಿತ್ರರ ಪಶ್ಚಿಮ ರಣರಂಗದ ಮೇಲಿನ ಹಲ್ಲೆಗಳ ಮೂಲಕ ಶತ್ರುಸೈನ್ಯವು ಸಾಲೋನಿಕಾದ ಬದಿಗೆ ಹಿಂಜರಿಯುತ್ತದೆ

... ಯುವಾಯುನರವಲ್ಲಿ ... ನದೀವೆ ... ಕುರ್ದ ಮತ್ತು ... ರಿಗೆ ಕಠಿನವಾಗಿ ... ದರು ಸೋತರು

ಅಮೇರಿಕೆಯಿಂದ ... ರವರ ಕೈಕೆಳಗೆ ಒಂದು ಸೇನಾತುಕಡಿಯನ್ನು ಫ್ರಾನ್ಸದ ರಣಭೂಮಿಗೆ ... ಮೇಲೆ ಕಳಿಸಲ್ಪಟ್ಟದೆ ಒಬ್ಬಾರೆ ಈ ಪಕ್ಷದಲ್ಲಿ ಮಿತಸಂಘಕ್ಕೆ ಅಪಜಯವು ಹೆಸರಿಗೆ ಇಲ್ಲ

ತಹದ ಚರ್ಚೆಯು ಶತ್ರುಪಕ್ಷದಲ್ಲಿಯೇ ನಡೆಯಿತು ರಶಿಯವು ರಾಜ್ಯಕ್ರಾಂತಿಯಿಂದ ಬಲಹೀನವಾಗಿದೆಂದು ಭಾವಿಸಿ ಜರ್ಮನರೂ ಆಸ್ಟ್ರಿಯನರೂ ಅದನ್ನು ಸವಿಸವಿ ಮಾತುಗಳಿಂದ ಮಿತ್ರಸಂಘದಿಂದ ಒಡಿಸಿ ಅದಕ್ಕೆ ಬೇಕಾದ ಸವಲತ್ತಿಗಳನ್ನು ಕೊಟ್ಟು ಸ್ವತಂತ್ರ ತಹ ಮಾಡಬೇಕೆಂದು ಬಹುಪರಿಯಿಂದ ಯತ್ನಿಸಿದಾಗ್ಯೂ ರಶಿಯವು ಸವಿನುಡಿಗಳಿಗೆ ಬಲಿ ಬೀಳದೆ ಅಂತ್ಯದವರೆಗೆ ಮಿತ್ರಸಂಘದವರಂತೆಯೇ ಕಾದಾಡುವ ನಿರ್ಧಾರ ಜಾಹೀರು ಮಾಡಿದುದೆ ಮಿತ್ರರಿದ್ದರೆ ಇಂಥಾ ದೃಢ ಸ್ನೇಹಿಗಳಾಗಬೇಕು ಈ ಯುದ್ಧದಲ್ಲಿ ಒಟ್ಟು ೮೦ ಲಕ್ಷ ಜನರು ಬಲಿ ಬಿದ್ದವರಿಂದ ಇಂಥಾ ನಿರುಪಯೋಗಿ ಸವಲತ್ತಿಗಳನ್ನು ಪಡೆದು ಉದಾತ್ತ ತತ್ವಗಳನ್ನು ಬದಿಗೊತ್ತಿ ಒಪ್ಪಂದ ಮಾಡುವದು ಜಾಣತನದ್ದಲ್ಲವೆನ್ನುವರು ಧೂರ್ತರಂತ ಏಕಸತ್ತಾಧೀಶ ಕೈಸರರೂ ರಾಜಿನಾಮೆ ಕೊಟ್ಟಿದ್ದೂ ... ಒಪ್ಪಂದದ ಸುದ್ದಿ ಬೇಡ

ಇಹವೃತ್ತ.

ಕುಮಟಾ — ಕಳೆದ ೨-೩ ದಿವಸಗಳಿಂದ ಪ್ರತಿ ರಾತ್ರಿ ಮಳೆ ಬೀಳುತ್ತಿದೆ

— ಹೊನ್ನಾವರ ಬಾಸೆಲ್ ಮಿಶನ ಶಾಲೆಯ ವ್ಯವಸ್ಥಾಪಕರಾದ ರೆವ್ಹ| ಲುಟ್ಜ ರವರು ಸ್ವಿಟ್ಝರ್ಲಂಡವೆಂಬ ತಟಸ್ಥ ರಾಷ್ಟ್ರದವರಿದ್ದಾಗ್ಯೂ ಸ್ವದೇಶಕ್ಕೆ ಹೋಗಬೇಕೆಂದು ಸರಕಾರದ ಹುಕುಮ ಆದದರಿಂದ ಅವರು ಹೋಗಲು ಇಲ್ಲಿ ಬಂದಿದ್ದಾರೆ

— ಇಲ್ಲಿ ಆಕ್ಬೈರ ಬೋಟಿಯು ರವಿವಾರಕ್ಕೆ ಬಂದು ಎರಡು ದಿವಸ ತಡೆದಾಗ್ಯೂ ತುಫಾನಿನ ಮೂಲಕ ಜನರನ್ನೂ, ಸಾಮಾನನ್ನೂ ಇಳಿಸದೆ ಯಾ ತೆಗೆದುಕೊಳ್ಳದೆ ಬರೇ ೧೮೦ ದಾಗಿನೆಗಳನ್ನು ಇಳಿಸಿ ಹೋಯಿತು ಜನರು ಪಡಾವಿನಿಂದ ಹೋಗುವಾಗ ಎರಡು ಮೂರು ತೆರಗಳು ಬಿದ್ದದರಿಂದ ಹಿಂದೇ ಬಂದರು

— ಕಲೇಕ್ಟರ ಮತ್ತು ಆಸಿಸ್ಟಂಟ ಕಲೇಕ್ಟರರ ಸ್ವಾರಿಗಳು ಇಲ್ಲಿ ಒಂದು ಸೋಮವಾರದಿವಸ ಕಾರವಾರ ಬದಿಗೆ ತೆರಳಿದವು ಪೋಲಿಸ ಸುಪರಿಂಟೆಂಡೆಂಟರು ಈ ಹೊತ್ತು ಬಂದಿರುವರು

ಹೊನ್ನಾವರ— ಇಲ್ಲಿಯ ಶಿಕಾರರ ಒಂದು ಮಚ್ವೆಯು ತಡಡಿಯಲ್ಲಿ ಮುಣುಗಿ ೮-೧೦ ಸಾವಿರ ರೂಪಾಯಿಗಳ ಹಾನಿಯಾಯಿತು ಇದಲ್ಲದೆ, ನಾಲ್ಕು ಜನ ವ್ಯಾಪಾರಿಗಳ ರಾಗಿ ತುಂಬಿದ ಮಚ್ವೆಯು ಮುಣುಗಿ ೨-೩ ಸಾವಿರ ರೂಪಾಯಿಗಳ ಹಾನಿಯಾಯಿತು.

— ಇಲ್ಲಿಯ ಫಾದರ ಡಿಸೋಜಾರವರಿಗೆ ಮುಂಬಯಿಗೆ ಬದಲಿ ಆದ್ದರಿಂದ ಅವರಿಗೆ ಆಡಂಬರದಿಂದ ಸನ್ಮಾನಿಸಿ ಕಳಿಸಿಕೊಟ್ಟರು

— ಡೆ| ಎ| ಇ| ಫರ್ನಾಂಡಿಸರವರು ಹೊನ್ನಾವರ ಅತ್ತಕತೆಯ ಪರೀಕ್ಷೆ ಮುಗಿಸಿ ಕಾರವಾರಕ್ಕೆ ತೆರಳಿದರು

ವಿವಿಧ ವರ್ತಮಾನ.

— ಮಜರದಾರ ತಂಡಿನ ಕೂಲಿಕಾರರ ಭರತಿ ಮಾಡುವರೆ ಏಜಂಟರು ಮೇಹರಗಂಜ ಸಂಸ್ಥಾನಕ್ಕೆ ಹೋದಾಗ ಸುಮಾರು ೫೦೦ ಕೂಲಿಕಾರರು ಒಟ್ಟಾಗಿ ಧನುಷ್ಯಬಾಣಗಳನ್ನು ಸುರಿವಿ ಏಜಂಟರನ್ನು ಸಾಕುಬೇಕು ಮಾಡಿದರು ಇದನ್ನು ತಿಳಿದು ಬಾಲಸೋರದ ಕಲೆಕ್ಟರರು ಸಶಸ್ತ್ರ ಪೋಲಿಸರನ್ನು ತೆಗೆದುಕೊಂಡು ಹೋದಾಗ್ಯೂ ಈ ಬಂಡಾಳಿಯನ್ನು ಮುರಿಯುವದು ಅಸಾಧ್ಯವಾಯಿತು ಬಂಡಖೋರರು ಅಲ್ಲಿಂದ ಹಾದು ಹೋಗುವ ರೇಲ್ವೆಯನ್ನು ನಿಲ್ಲಿಸಿ ಉತಾರು ಜನರಿಗೆ ಬಾಣಗಳಿಂದ ಜರ್ಜರಿಸಿ ೧ ಲಕ್ಷ ರೂಪಾಯಿಗಳ ಲೂಟ ಮಾಡಿದರು

— ಬೇರಡ ಜಾತಿಯ ೯೦ ದರೋಡೆಖೋರರ ಒಂದು ಟೋಳಿಯು ಪೋಲೀಸ ಖಾತೆ ಪೂರ್ಣವಾಗಿ ಸಾತಾರೆಯ ಮಾವ ಲೇದಾರರ ಮುಂದೆ ಬಂದದೆ ಖಟಲೆಯಲ್ಲಿ ೮೦೦ ಸಾಕ್ಷಿದಾರರಿದ್ದು ೩-೪ ತಿಂಗಳು ನಡೆಯುವದಿರುವದರಿಂದ ಒಬ್ಬ ಸ್ವತಂತ್ರ ಮಾಮಲೇದಾರನು ನೇಮಿಸಲ್ಪಡುವನು ವಕೀಲರಮೇಲೆ ಲಕ್ಷ್ಮೀ ಪ್ರಸಾದವಾಯಿತು!

ಕಲಕ್ಟರ ಸಾಹೇಬರು ತಿಳಿಸಿದಂತೆ ತಾ ೨೬ನೇ ಮೇ ವರೆಗಿನ ಯುದ್ಧಸಾಲದ ರಕಮುಗಳು ...

	ಮಾಗ್ದಾಸಗಳು	ವಸೂಲಾದದ್ದು
ಶಿರ್ಸಿ	೧ ೭೧,೫೭೯ ೪	೫೧,೨೨೭-೮
ಕುಮಟಾ	೧ ೨೧,೫೬೬-೪	೬೦ ೦೨೪ ೧೨
ಸಿದ್ದಾಪುರ	೯೬ ೨೧೭-೩	೬೯ ೪೬೪-೮
ಕಾರವಾರ	೯೪,೫೧೬-೬	೨೮ ೨೭೮ ೧೨
ಹೊನ್ನಾವರ	೮೯ ೨೬೨ ೪	೧೨,೦೬೨-೦
ಅಂಕೋಲಾ	೫೫ ೦೬೫ ೦	೧,೫೨೨ ೧೨
ಭಟಕಳ	೭೮ ೪೩೦ ೧೨	೬ ೭೧೬-೪
ಯಲ್ಲಾಪುರ	೨೨ ೦೨೦-೦	೧೧,೨೭೦-೦
ಸೂಪಾ	೨೦,೮೦೫ ೧೨	೨೦ ೨೬೨-೮
ಮುಂಡಗೋಡ	೧೯,೭೦೦-೦	೪,೫೫೦-೦
ಜುಮ್ಲಾ	೮ ೨೪ ೬೪? ೧೨	೨ ೫೪ ೭೫೨ ೬

Printed & Publis[illegible] by Kr[illegible] Keshav She[illegible] at h s Star of Kanara Press Kumta

THE

KANARA NEWS.

ಕಾನಡಾ ವೃತ್ತ.

ANGLO-VERNACULAR FORTNIGHTLY.

Registered No. B. 1270

ಪತ್ರದ ವರ್ಗಣಿ –

ಕುಮಟೆಯಲ್ಲಿ ಆಗಾವು

ರೂಪಾಯಿ 1 0 0.

ಅಂಚೆವೆಚ್ಚ ಸಹಿತ

ರೂಪಾಯಿ 1–6–6

ಒಂದು ಸಂಚಿಕೆಗೆ 0–0–9.

ಜಾಹಿರಾತುಗಳ ದರ.–

ಕನ್ನಡ, ಇಂಗ್ಲಿಷ, ಮರಾಠಿ ಪ್ರಕಟನ (೧೪ಎಮ್‌ಉದ್ದ) ೮ ಸಾಲುಗಳ ವರೆಗೆ ರೂ 1 0 0

ಅನಂತರ ಪ್ರತಿ ಸಾಲಿಗೆ 0 2 0

ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ನ ಭ್ರूयात्सत्यमप्रियं । प्रियं च नानृतं ब्रूयादेष धर्मः सनातनः ॥

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೧೪ ಮಾಹೆ ಜೂನ, ಸನ್ ೧೯೧೭ ನೇ ಇಸವಿ. [ಸಂಚಿಕೆ ೧೮.

[illegible]

ಈ ಔಷಧವು ನರಸಂಸಾರವನ್ನು ಕಾಯುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ ಮೂತ್ರಗುಚ್ಛ ಮೂತ್ರಕೋಶ ಅನ್ನಕೋಶ, ಕಲಿಜ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ಸೇವಸ ಕೆಮ್ಮು ಅಗ್ನಿಮಾಂದ್ಯ, ಹೊಟ್ಟೆನೋವು ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು ಕಿವಿನೋವು, ಸೂತಕದ ಅಕ್ರಮಗಳು ಈ ಔಷಧಿಯಿಂದ ಬೇಗನೆ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0–6 0 ವಿ ಪಿ ಬೇರೆ

ಡಜನ್ ಶೀಸೆಗಳಿಗೆ ರೂ 4–0–0 ವಿ ಪಿ ಸಹಿತ

ವಿಳಾಸ– ದಿ ಇಕ್ಲಿಪ್ಸ ಏಜನ್ಸಿ, ಕಂಕನಾಡಿ, ಮಂಗಳೂರು.

मागणी करा

हीच वेळ आहे.

आज सर्वत्र ठिकाणीं शाईपुड्या सवधाने दुर्मीळता आणि विशेष महागाई असता आम्ही काळीभोरशाईच्या पुड्या शेकडा १। रुपया भावानें आणि उत्तम निळिकाळीशाईच्या पुड्या शेंकडा १ रुपया भावाने देत आहोंत ट खर्च शिवाय पडेल. तरी गरजुग्राहकानी ही वेळ लक्षात आणुन आपला फायदा करून घ्यावा

पत्ता– वीरकर आणि विद्यार्थी मंडळी शाईचा कारखाना, पोष्ट–सिन्नर, जिल्हा नाशीक

ज्योतिषी.

जनार्दन दत्तात्रय साने बुधवार न २३४, पुणे ज्योतिषाचीं कामें सूक्ष्म तऱ्हेने केलीं जातात विशेष माहिती समक्ष अगर पत्रद्वारे

☞ ಸರಿಯೊಂದು ಸಿದ್ಧವಾದ

ನಮ್ಮ ಅಧಿಕ ಅತ್ಯಂತ ಮಾಸವುಳ್ಳ ಪಂಚಾಂಗಗಳನ್ನೇ ತರಿಸಿಕೊಳ್ಳಿರಿ ಪ್ರತಿ ಒಂದಕ್ಕೆ ೨। ಆಣೆ ಶೇ ೧೦ ರೂ

ಕೃಷ್ಣರಾವ ಕೇ ಶೇಣವಿ, ಸ್ವಾರ ಪ್ರೆಸ ಕುಮಟಾ

ಬೇಕು! ಬೇಕು!!] ಕಾನಡಾವೃತ್ತ. [ವಾತ್ಮೀದಾರರು !!!

ಪ್ರತಿ ತಾಲೂಕಿನಿಂದ ನಿಜವಾದ ಮಾಹಿತಿ ಆಗಿಂದಾಗ್ಗೆ ಪೂರೈಸುವ ವಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿಹೊಂದುತ್ತದೆ ಅವಿಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಿಕ ಮತ್ತು ಮಾನಸಿಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಯುಕ್ತವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ನಾಶಿಯಾಗುವವು ಹೊರಗಿನ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೆ ಶಮನವಾಗುವವು ರಕ್ತ ಶ್ವೇತಸ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ಸ್ಥೈರ್ಯವಾಗಿ ದೂರವಾಗಿ ಸಂತಾನರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೫ ದಿವಸ ಸಾಕಾಗುವ ಡಬ್ಬಿಯಿಂದ ಉತ್ತಮ ಗುಣವು ಕಂಡುಬರುವದು ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೩೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಯಿಂದ ರೋಗವು ನಿರ್ಮೂಲವಾಗುವದು ಅಂಚೆವೆಚ್ಚ ಬೇರೆ ಬೇರೆ ಮತ್ತು ೩೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಸಿಕ್ಕಿರುವವು.

ವರ್ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ತೀ ಚೆ ಚವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ದೆಶೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು ಇದಲ್ಲದೆ

ಹೊಸ ಶಿಫಾರಸು ಪತ್ರವು.

ಸಂಪ ಚೇ ವಟ್ಟದಿಂದ ನಾಗೋಬಾ ನೇಮಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಖೊತ್ತಿನವರಿಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು ಆದರಿಂದ ಈಗ ತಿರುಗಿ ೨೭ ರೂಪಾಯಿಯ ಔಷಧಿಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ ಪಿ ದ್ವಾರ ಕಳುಹಿಸಿ ಉಪಕರಿಸಿರಿ ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು ಡಬ್ಬಿಗಳು ಸಿಗುವ ಪತ್ತೆ —

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,

ಪ್ರೋಪ್ರೈ, ನಿಪಾಣಿ (ಬೆಳಗಾಂವ).

Manual of Hindu Ethics,

BY

G A Chandavarkar with an introduction by Prof Rama Deva BAMRAS It is an excellent book in 12 chapters treating of the sublime teachings of the Hindu Scriptures

Price annas ten only

For copies, apply to

G A Chandavarkar,
118 Residency Baraars
Hyderabad, (Decan)

THE KANARA NEWS

13th June 1917

' Act—act in the living present
Heart within and God o'erhead

The Language Problem of Kanara

BY

(G A Chandavarkar Hyderabad Dn)

There can be no denying the fact that language and literature are the life blood of a nation The best thoughts of the best minds are embodied in the literature of a country. Unity in language forms the essential factor of the very existence of a nation A community without a literature of its own will one day find itself placed between the devil and the deep sea Either it must be completely wiped out or it must be submerged in another community which has a language and a literature of its own Now in all seriousness we beg to place before our readers the language problem of Kanara When we think of the problem in all its aspects we confess we grow pessimistic about the future of a particular community of Kanara The community which is styled as the Goud Saraswat community of Kanara including the various sub sects boasts of *Konkani* as its mother tongue Now what does the *Konkani* language connote & denote? We do not profess to go into the historical origin of this language nor do we intend to establish its superiority as an Aryan dialect It might be that its origin can be traced to the *Prakrit* language but that has nothing to do with our purpose to day Its close resemblance to and similarity with the Sanskrit language are we opine, questions of mere academic interest Today we must face the facts squarely in the face We must wipe the dust of prejudice from our eyes and view the situation The majority of these people speak this *Konkani* language. This language has no independent alphabets It is not a written language & consequently has no literature of its own Those boys whose mother tongue is *Konkani* are at a decided disadvantage in their school career This language affords them no help whatsoever in their early education The utility of vernaculars as the *Media* of instruction is practically accepted by many educationists But what fate awaits these youngsters? When they attend a school they must learn a foreign language either Kanarese or Marathi by the term foreign here we mean a language different from their mother tongue We have given some thought to this question and arrived at the conclusion that the boys with *Konkani* as their mother tongue are seriously handicapped At any rate they are at a greater disadvantage than the boys with Marathi or Kanarese as their mother tongue Now the question arises is not Kanara labouring under a disadvantage from the linguistic point of view? Will *Konkani* ever develop itself into a literary language? What would be the future of a community without a written language of its own? At least for purposes of every day dealings would not the community submerge into another community which has a written language of its own? How will futurity be benefitted? How can the best thoughts of its members be embodied for the benefit of the future generations? Is not this linguistic disability a serious one for the progress of the community? We hope that some serious consideration will be bestowed upon this linguistic probleen and men of light and leading in Kanara will propose some solution of this momentous question There may be some people who may argue that adoption of Kanarese will serve the purpose of the *Konkani* speaking people well, as it has been doing in the past Of course necessity it is that has forced the people to adopt that language But we hazard an opinion that the *Konkani* speaking people will find it easier to adopt Marathi as their language in preference to the Dravidian Kanarese language and that slowly but surely *Marathi* should take the place of *Konkani* Every household may try the experiment and begin teaching Marathi almost as a compulsory language and eventually make that as our mother-tongue Probably we may be stigmatised as committing a heinous crime in trying to kill the sweet konkani language. We may not do it Nature will work by its own methods The language is bound to go to the wall The doctrine of the Survival of the fittest' will surely exercis its influence and sound the death knell whether we will it or not We feel very keenly on this subject and hope that other persons interested in the topic will offer their own criticisms We have merely placed the problem before our readers and shall be glad to be benefitted by the suggestions and criticisms of the educationists of the District We hope to revert to this subject again In the meantime we invite opinions on the subject

Kanara's Share in the Honours List

In the whole array of Khan Bahadurs Rao Bahadurs, Rao Sahebs not to speak of higher honours such as a C I E a K C I E etc, not a single honour has fallen to the share of poor Kanara What a hard lot to those who have perspired to earn a place in the List! Is there such a

dearth of men in the whole official or non-official circle of Kanara, that it has not been possible for Government to pick up at least one whose services should receive due recognition from the state? Should we say this shows the low water mark of Kanara's public life? Looking at least to the splendid work done in connection with the Imperial War Relief Fund and recently the War Loan by officials as well as non officials of Kanara, we expected not a few honours on the memorable occasion of His Majesty's Birth day But we must admit that with those who wanted to rise Rao Bahadurs and Rao Sahebs from their beds on the morning of June 4th, we too are disappointed Though we do not claim to possess clear knowledge as to the nature of the test that a recipient of an honour should satisfy, it is our firm coviction that the work in the above mentioned spheres deserves to be recognised with no small honours We honestly believe that those who have worked heart and soul in these spheres have not only served Government but the public as well It is through their untiring efforts that the Government have obtained an unexpectedly large sum of money & that the public have been taught to feel, in a practical way, the fire of enthusiasm and patriotism which has been glowing in the heart of the whole British Empire at this great crisis That such workers should, to all appearances escape the notice of those who are responsible for the selection may be wrongly construed as an indication of the deplorable want of knowledge of human psychology on their part Every one knows that a title in itself has very little intrinsic value but considered from another aspect it possesses such mysterious charms as to spur some men on to action, who would otherwise have preferred to remain inactive We sincerely sympathise with such, if there be any, & earnestly hope that their distinguished services are reserved for due recognition in the next Honours List.

RANDOM THOUGHTS

The Baggon Road

We fail to understand why some authorities desire to know the name of the correspondent whose letter describing the bad condition of the Baggon Road we published in our previous issue So long as the facts are not misrepresented, it is immaterial whether A or B wrote it Let it be known at the outset that we never undertake the responsibility of publishing any correspondence unless and until we make sufficient enquiries into the facts mentioned therein In this particular case we have personally satisfied ourselves about the actual condition of the road which is, on making due allowance for the humour as faithfully described as could be It is now rumoured that the road in question has long been abandoned by the Local Board If this report be true, are we to understand that the Baggon and Kalbag public have no claims on the local cess for repairing this only road of the villages As long as they are not so informed is it not reasonable that the road ought to be kept in proper repairs by the Board? We are told that the bridge at the other extremity of the road was erected some time back by the same Board. How is it then that this road which leads to it can be easily abandoned? The whole affair about this road is a mystery It is the right of the public concerned to know the solution of the mystery without further delay through proper authorities This is in our opinion a vital matter of public interest

Firewood Contracts

We learn to our surprise that most of the firewood coupes of the Southern Division, if not, of the whole District, have failed to invite bidders. Should we say that all the contractors who were so long making fat profits in the official reports of Rangers and in the tabular statements of Income-tax Registers have dwindled into happy paupery or happier insolvency Has the river of their borrowed capital run off? Something is out of joint somewhere We are unable to find it out We are more concerned & apprehensive about local Depots that supply us firewood for every day use, than the export marts We shall be hard put to it if they fail us. The D F Officer of our Division will, we hope, kindly bestir himself look up to the prospects and early register contracts at least for Depots without waiting for handsome bid & even with an offer of advance sums in exceptional cases of urgency.

GIBB HIGH SCHOOL, KUMTA.

LIST OF SUCCESFUL STUDENTS

Matric Result for 1917

(in order of merit)

1 S K Kallapur 336
2 D N Koppiker 326
3 N S Nayak 266
4 M R Balwalli 263
5 S P Pandit 254
6 N V Kasbekar 252
7 D M Redkar 250
8 G G Shastri 213

School Final Result.

1 L M Navaratna
2 R V Govekar
3 A V Pai
4 M D Shanbhag

Presidency result 34 9 p c
School result 42 1 p c (Matric)
Do 50 p c (Final)

NOTICE.

If a sufficient number of candidates be forthcoming, we intend to start from this month an independant 'special class" with a view to coach up boys in Arithmetic, Book-keeping, General English, English Composition, Correspondence & other useful subjects to enable them to be fit for semi-Government & private service & otherwise be useful in any walk of life Candidates must have completed A V Standard VI or at least V For syllabus & other details, apply to the undersigned

GIBB HIGH SCHOOL, Kumta, 5th June 1917 — N S Kamat, *Superintendent*

ಕಾನಡಾವೃತ್ತ.

ಬುಧವಾರ ತಾರೀಕು ೧೩ ಮಾಹೆ ಜೂನ ೧೯೧೭.

ಕರ್ನಾಟಕ ಕಾಲೇಜಿಗೆ

ಸ್ವಾಗತಂ ಸುಸ್ವಾಗತಂ

ಸಂಸಾರಿಕ ಜನರಿಗೆ ಬರೇ ಒಂದು ವಿವಾಹದಂಥ ಕಾರ್ಯದಲ್ಲಿ ಸಹ ವಾಙ್ನಿಶ್ಚಯವಾದನಂತರ ದಿವಸಗಳನ್ನು ಕಳೆಯುವದು ಅಸಹ್ಯಕರವಾಗುತ್ತದೆ. ನಮ್ಮ ದಕ್ಷಿಣಭಾಗದಲ್ಲಿ ಯುನಿವ್ಹರ್ಸಿಟಿ ಶಿಕ್ಷಣದ ಕಾಲೇಜು ಸ್ಥಾಪಿಸಬೇಕೆಂತ ಸರಕಾರದ ವಾಙ್ನಿಶ್ಚಯವಾಗಿ ೪-೫ ವರ್ಷಗಳು ಗೊತ್ತಿಲ್ಲದೆ ಕಳೆದು ಹೋದವು. ಕರ್ನಾಟಕ ಪ್ರಾಂತಕ್ಕೆ ಈ ವಿದ್ಯಾಕನ್ಯೆಯ ವಿವಾಹವು ಆಗೇ ಆಗುವದು ಎಂತ ಜನರು ನಂಬಿದ್ದರೂ ಯಾವದೇ ಕಾರಣದಿಂದಾಗಲಿ ಕಾಲಹರಣವಾದದ್ದನ್ನು ನೋಡಿ ಏನಾದರೂ ಅಶುಭ ಸಂಭವಿಸುವದೋ ಏನೋ ಎಂತ ಜನರಿಗೆ ಸಂಶಯದ ಭೀತಿಯಾಗಿತ್ತು. ಇದರ ಕಾರಣಗಳನ್ನೇನೂ ಚರ್ಚಿಸಲಿಚ್ಛಿಸುವದಿಲ್ಲ. ಈಗ ಈಶೇಚ್ಛೆಯಿಂದ ಜನರ ಸಂಕೇತದಂತೆ ಮತ್ತು ಸರಕಾರವು ಕೊಟ್ಟ ವಚನದಂತೆ ಬರುವ ಜೂನ ೨೦ ನೇ ತಾರೀಕಿನ ಸುಮುಹೂರ್ತದಲ್ಲಿ ಈ ವಿವಾಹದ ಶುಭಮಂಗಲ ಸಾವಧಾನವಾಗುತ್ತದೆಂದು ಕೇಳಿ ನಮಗೆ ಅತ್ಯಾನಂದವಾಗಿದೆ. ಆದುದರಿಂದ ಈ ಸೌಭಾಗ್ಯದ ಪ್ರಸಂಗದಲ್ಲಿ ನಾವು ನಮ್ಮ ಕರ್ನಾಟಕ ಕಾಲೇಜಿಗೆ ಹೃತ್ಪೂರ್ವಕವಾಗಿ ಸ್ವಾಗತಬಯಸುವೆವು

ಹಿಂದುಸ್ಥಾನದಲ್ಲೆಲ್ಲ ಉಚ್ಚ ಶಿಕ್ಷಣ ಸ್ಥಿತಿಯನ್ನು ಅವಲೋಕಿಸಿದರೆ ದಿನೇ ದಿನೇ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಸಾಕಷ್ಟು ಶಿಕ್ಷಣಾಲಯಗಳಿಲ್ಲದೆ ನಿರಾಶೆಯಿಂದ ಮೈ ಮುದುಗಿಸಿ ಕೊಡುಕೊಳ್ಳುವಂಥ ಪ್ರಸಂಗ ಬಂದೊದಗಿದೆಂದು ಹೇಳಬೇಕಾಗುತ್ತದೆ. ಬಂಗಾಲದಲ್ಲಂತೂ ಅನೇಕ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದರಿಸುವದು ಅಸಾಧ್ಯವಾಗಹತ್ತಿದೆ. ಮುಂಬಯಿ ಇಲಾಖೆಯಲ್ಲಿ ಒದುಪರಿಯಿಂದ ಹೀನಾವಸ್ಥೆಯಲ್ಲಿರುವ ಭಾಗವು ದಕ್ಷಿಣ ಭಾಗವು. ಇದಕ್ಕೆ ಮುಖ್ಯ ಕಾರಣವು ಶಿಕ್ಷಣಾಭಿವೃದ್ಧಿಯ ಸಾಧನಗಳ ಕೊರತೆಯು. ಜನರ ದುರ್ದೈವದಿಂದ ನಮ್ಮ ಬಹಳೇ ಕುಂದು ಕೊರತೆಗಳು ಸರಕಾರದ ದೃಷ್ಟಿಗೆ ಬೀಳುವದಿಲ್ಲ. ಜನರ ಮುಂದಾಳುಗಳ ಕಣ್ಣರಿಕೆಗೆ ಸಹ ಒಮ್ಮೊಮ್ಮೆ ಅವು ಬರುವದಿಲ್ಲೆಂಬುವದು ಮತ್ತೂ ಆಶ್ಚರ್ಯಕರವು. ಇಲ್ಲದಿದ್ದರೆ ಈ ಕರ್ನಾಟಕ ಕಾಲೇಜದ ಜನ್ಮವು ೧೦—೨೦ ವರ್ಷಗಳ ಹಿಂದೆಯೇ ಆಗಿಹೋಗುತ್ತಿತ್ತು. ನಮ್ಮ ಶಿಕ್ಷಣ ವಿಸ್ತಾರವು ಸಹ ಈಗಿದ್ದಕ್ಕಿಂತ ಅಷ್ಟೊಂದಿಗೆ ಬಹಳೇ ಹೆಚ್ಚಾಗುತ್ತಿತ್ತು. ಇಂಥ ಸಂದರ್ಭದಲ್ಲಿ ೫ ವರ್ಷಗಳ ಹಿಂದೆ ನಮ್ಮ ಪ್ರತಿನಿಧಿಗಳಾದ ನಾಮದಾರ ಮಿ॥ ಬೆಳವಿ ಮತ್ತು ರಾವಬಹಾದ್ದೂರ ರೊದ್ದ ಇವರು [illegible]ಚ್ಚರಾಗಿ ಇಂಥ ಮಹತ್ವದ ವಿಷಯವನ್ನು ಕೈಕೊಂಡದ್ದೇ ಸುದೈವವೆಂತ ಹೇಳಬೇಕು ಇವರಿಬ್ಬರ ಸಾಹಸ ಮತ್ತು ನಾಮದಾರ ಹಿಲ್ ಸಾಹೇಬರಂಥ ವಿದ್ಯಾ[illegible]ಕ್ತವಾತಿಗಳ ಸಹಾನುಭೂತಿ ಮತ್ತು ಜನರ ಔದಾರ್ಯದೃಷ್ಟಿ ಇವೆಲ್ಲವುಗಳಿಂದ ಈ ಕಲ್ಪನೆಗೆ ಮೂರ್ತಸ್ವರೂಪವು ಬೇಗನೇ ಬಂತೆಂಬುವದು ಎಲ್ಲರಿಗೂ ಭೂಷಣಾಸ್ಪದವು. ವಂತಿಕೆಯನ್ನು ಕೂಡಿಸುವ ಕಾರ್ಯದಲ್ಲಿ ಮುಪ್ಪಿನ ಕಾಲದಲ್ಲಿ ಸಹ ರಾವಬಹಾದ್ದೂರ ರೊದ್ದರವರು ಮಾಡಿದ ಪರಿಶ್ರಮ, ಸಾಹಸ ಮತ್ತು ನಮಗೆ ಗೊತ್ತಿದ್ದಂತೆ ಅವರ ಸ್ವಾರ್ಥತ್ಯಾಗವನ್ನು ಯಾವಾಗಲೂ ಜನರು ಮರೆಯಲಿಕ್ಕಿಲ್ಲ. ಇದಕ್ಕಾಗಿ ಕರ್ನಾಟಕ ಪ್ರಾಂತವು ಅವರಿಗೆ ಸದೈವ ಋಣಿಯಾಗಿರುವದು. ನಮ್ಮ ಲಿಂಗಾಯತ ಬಂಧುಗಳ ಚಾಲಕರಾದ ರಾವಬಹಾದ್ದೂರ ಅರ್ತಾಳರವರು ಸಹ ತಮ್ಮ ಬ್ರಾಹ್ಮಣ-ಅಬ್ರಾಹ್ಮಣರ ದ್ವೈತವನ್ನು ಪಶ್ಚಾತ್ತಾಪಪೂರ್ವಕ ಮರೆತು ಈ ಮಹತ್ಕಾರ್ಯವನ್ನು ಕೊನೆಗಾಣಿಸಲು ನೆರವಾದದ್ದು ಅವರ ದೇಶಪ್ರೀತಿಯ ಲಕ್ಷಣವೇ ಎಂತ ನಾವು ಯಾಕೆ ತಿಳಿಯಬಾರದು?

ಸದ್ಯಕ್ಕೆ ಧಾರವಾಡದಲ್ಲಿ ಕಾಲೇಜನ್ನು ಸ್ಥಾಪಿಸುವದು ನಿಶ್ಚಿತವಾಗಿದೆ. ಈ ಸಂಸ್ಥೆಯಿಂದ ದಕ್ಷಿಣಭಾಗದ ವಿದ್ಯಾರ್ಥಿಗಳಿಗೆ ಬಹಳ ಫಾಯಿದೆಯಾಗುವದೆಂತ ಹೇಳಲು ಅಡ್ಡಿಯಿಲ್ಲ. ಇದಕ್ಕಿಂತ ಹೆಚ್ಚಿನ ಫಾಯಿದೆ ಧಾರವಾಡದೊಳಗಿನ ಸಮಾಜಕ್ಕೂ ಆಗುವದೆಂತ ಯಾಕೆ ಹೇಳಬಾರದು? ಧಾರವಾಡದೊಳಗಿನ ಸಾಮಾಜಿಕಸುಧಾರಣೆಯ ಸ್ಥಿತಿಯು ಅಲ್ಲಿಯ ಪ್ರಾಥಮಿಕ ಶಿಕ್ಷಕರ ವಿದ್ಯಾಲಯದ ವಸತಿಗೃಹದಲ್ಲಿ ಯಥಾರ್ಥವಾಗಿ ಪ್ರತಿಬಿಂಬಿಸಿದುದನ್ನು ಅವನ್ನು ನೋಡಿದವರೆಲ್ಲರೂ ಒಪ್ಪಿಯಾರು. ‘ಆಚಾರ್ಯರ ಮಗನಾಗಿ ಪುರಾಣಿಕರ ಅಳಿಯನಾಗಿ ಭ್ರಷ್ಟನಾದರೆ ಎಮ್ಮೆ ......’ ಎಂಬಂತೆ ಕನ್ನಡ ಪ್ರಾಂತದಲ್ಲೆಲ್ಲ ವಿದ್ಯಾದಾನವನ್ನು ಕೊಟ್ಟು ಸಂಸ್ಕೃತಿಯನ್ನು ಹುಟ್ಟಿಸುವ ಕನ್ನಡ ಶಿಕ್ಷಕರು— ಅಂಥ ಶಿಕ್ಷಕರನ್ನು ತಯಾರಿಸುವ ವಿದ್ಯಾಮಂದಿರವು, — ಈ ಮಂದಿರದ ವಿದ್ಯಾರ್ಥಿವಸತಿಗೃಹದಲ್ಲಿ ನಿಜವಾದ ಶಿಕ್ಷಣದಿಂದ ಹುಟ್ಟುವ ಔದಾರ್ಯ ಮತ್ತು ಸಂಸ್ಕೃತಿಗಳಿಗೆಲ್ಲ ತೀರ ವಿಪರೀತವಾದಂಥ, ಧಾರ್ಮಿಕವೆಂತ ಹೇಳಲ್ಪಡುವ, ತಪ್ಪು ತಿಳುವಳಿಕೆಗಳ ಗೊಂದಲವೆಷ್ಟು? ಅವುಗಳನ್ನು ನೋಡಿದರೆ ಅಲ್ಲಿಯ ವಿದ್ಯಾರ್ಥಿಗಳಮೇಲೆ ಶಿಕ್ಷಣದ ಸಂಸ್ಕಾರವು ತೀರ ಕಡಿಮೆ ಎಂತಲೇ ಹೇಳಬೇಕಾಗುವದು. “ಇಲ್ಲಿ ಕಟ್ಟಬೇಡ ಅಲ್ಲಿ ಮುಟ್ಟಬೇಡ” ಎಂಬ ಅಲ್ಲಿಯ ಸಾಮಾಜಿಕ ಶಾಸನಗಳು ಎಷ್ಟು ಅಪಮಾನಕರ ಮತ್ತು ನಿಂದ್ಯ ವಿದ್ದವೆಂತ ಆ ವಸತಿಗೃಹದೊಳಗಿನ ಸಹವಾಸದ ಸುಖವನ್ನು ಅನುಭವಿಸಿದವರಿಗೇ ಗೊತ್ತು. ಇದಕ್ಕಾಗಿ ಅಲ್ಲಿಯ ಅಧ್ಯಾಪಕರಿಗಾಗಲಿ ವಿದ್ಯಾರ್ಥಿಯರಿಗಾಗಲಿ ದೂಷಿಸುವದು ಯೋಗ್ಯವಲ್ಲ, ಅಲ್ಲಿಯ ಸಮಾಜವೇ ಅಷ್ಟು ಹಿಂದುಳಿದದೆ. ಈ ಅಪ್ರಕೃತ ವಿಷಯವನ್ನು ಇಷ್ಟು ವಿಸ್ತಾರವಾಗಿ ನಾವು ಚರ್ಚಿಸುವ ಉದ್ದೇಶವೇನಂದರೆ ಇನ್ನಾದರೂ ಇಂಥ ಸಾಮಾಜಿಕ ತಿಳುವಳಿಕೆಗಳು ದೂರಾಗತಕ್ಕದ್ದು. ಕರ್ನಾಟಕ ಕಾಲೇಜದಂಥ ಉಚ್ಚ ಶಿಕ್ಷಣದ ಸಂಸ್ಥೆಯು ನೆರೆಹೊರೆಯಲ್ಲಿ ಬೆಳೆಯಲು ಸಮಾಜದ ಸುಧಾರಣೆಗೆ ಎಲ್ಲ ಪರಿಯಿಂದ ಪರಿಸ್ಥಿತಿಯು ಬಹಳೇ ಅನುಕೂಲವಾಗುವದು. ಜನರು ಮಾತ್ರ ತಮ್ಮ ಪುರಾಣಮತದ ತಪ್ಪು ತಿಳುವಳಿಕೆಗಳನ್ನು ತ್ಯಜಿಸಲಿಕ್ಕೆ ಉತ್ಸುಕರಾದರಾಯಿತು. ಶಿಕ್ಷಣದಿಂದ ಆದ ಸಾಮಾಜಿಕ ಸುಧಾರಣೆಯೇ ನಿಜವಾಗಿ ಚಿರಸ್ಥಾಯಿ ಆಗುತ್ತದೆ ಆದುದರಿಂದಲೇ ಈ ಹೊಸ ಕಾಲೇಜಿನಿಂದ ಧಾರವಾಡದೊಳಗಿನ ಸಮಾಜಕ್ಕೆ ಸಹ ಫಾಯಿದೆಯಾಗುವದೆಂತ ನಾವು ಹೇಳುವೆವು. ಈಶಕೃಪೆಯಿಂದ ಈ ಹೊಸ ಸಂಸ್ಥೆಯು ಚಿರಕಾಲ ಬಾಳಲಿ ಮತ್ತು ಕರ್ನಾಟಕದೊಳಗಿನ ವಿದ್ಯಾರ್ಥಿಗಳಿಗೆಲ್ಲ ಇದರಿಂದ ನಿರಂತರ ವಿದ್ಯಾಮೃತವನ್ನು ಕುಡಿಯುವ ಅನುಕೂಲತೆಯಾಗಲೆಂತ ಪ್ರಾರ್ಥಿಸಿ ಈ ಸ್ವಾಗತ ಲೇಖವನ್ನು ಮುಗಿಸುತ್ತೇವೆ.

ಸ್ವರಾಜ್ಯ ಸಂಘದ ಪರಿಷತ್ತು.

ಕಳೆದ ತಾ। ೧೭ನೇಗೆ ನಾಶಿಕದಲ್ಲಿ ಮೊದಲನೇ ಸ್ವರಾಜ್ಯ ಸಂಘದ ಪರಿಷತ್ತು ಸಂಘದ ಅಧ್ಯಕ್ಷರಾದ ಬೆರಿಸ್ಟರ ಬಾಪ್ಟಿಸ್ಟಾ ಇವರ ಅಧ್ಯಕ್ಷತೆಯಲ್ಲಿ ನಿರ್ವಿಘ್ನತೆಯಿಂದ ಜರಗಿತು. ನಿರ್ವಿಘ್ನತೆಯಿಂದ ಹೇಳುವ ಕಾರಣವೇನಂದರೆ ಈ ಸಭೆಯು ಮೊದಲು ಖಾಸಗಿ ಎಂದು ಜಾಹೀರುಮಾಡಿದ್ದಾಗ್ಯೂ ಸಂಘದ ಕಾರ್ಯಕ್ರಮವನ್ನು ತಿಳಕೊಳ್ಳಲಿಕ್ಕೆ ಯಾವಾಗಲೂ ತತ್ಪರರಾದ ಪೋಲೀಸರು ತಮ್ಮನ್ನು ಪ್ರವೇಶಿಸಿಕೊಳ್ಳುವ ಹಟ ಹಿಡಿದಿದ್ದರಿಂದ, ಈ ಹಟಕ್ಕೆ ಶಿಕ್ಷೆಮಾಡುವ ಉದ್ದೇಶದಿಂದ ವ್ಯವಸ್ಥಾಪಕರು ಸಭೆಯ ಖಾಸಗೀ ಸ್ವರೂಪವನ್ನು ತೆಗದು ಹಾಕಿ, ಪೋಲೀಸರನ್ನೂ, ಜನರನ್ನೂ ತೆಗೆದುಕೊಂಡರು. ಸ್ವರಾಜ್ಯ ಸಂಘದ ಪರಿಷದೆಯಲ್ಲಿ ಹೋಗಿ ಪೋಲೀಸರು ಎಂಥ ವಿಜಯವನ್ನು ಹೊಂದಿದರೆಂಬುವದು ಅವರಿಗೇ ಗೊತ್ತು. ಇರಲಿ. ಅಧ್ಯಕ್ಷರು ಸ್ವರಾಜ್ಯ ಯಾನೆ ಹೋಮರೂಲವು ಸಾಮ್ರಾಜ್ಯಕ್ಕೆ ಅಪಕಾರಿಯಲ್ಲದೆ ಉಪಕಾರಿ ಎಂತಲೂ, ಯೋಗ್ಯ ಕಾಲದಲ್ಲಿ ಸ್ವರಾಜ್ಯ ಕೊಡದಿದ್ದರಿಂದ ಇಂಗ್ಲಿಷರು ಅಮೇರಿಕೆಯನ್ನೂ, ರೋಮನರು ತಮ್ಮ ರಾಜ್ಯವನ್ನೇ ಕಳಕೊಂಡರೆಂತಲೂ, ಖರೇ ಸ್ವಾತಂತ್ರ್ಯ ಪ್ರೀತಿಯು ಬೇರೆ ದೇಶಗಳಿಗೆ ಸ್ವರಾಜ್ಯ ಕೊಡುವದಲ್ಲಿಯೇ ಇರುತ್ತದೆಂತಲೂ, ಇಂಗ್ಲಂಡದ ಇತಿಹಾಸವು ಇಂಗ್ಲಿಷರ ಕಲ್ಪನಾಶಕ್ತಿಯ ಅಭಾವದಿಂದ ಮಾಡಿದ ಕೃತ್ಯಗಳ, ಮತ್ತು ಅವುಗಳ ಪರಿಣಾಮಗಳ ಸಾಕ್ಷಿ ಕೊಡುತ್ತದೆಂತಲೂ, ಮಹಾಯುದ್ಧದಿಂದ ಇಂಗ್ಲಿಷರು ಯೋಗ್ಯ ಬೋಧ ಪಡೆದು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡದಿರಲಾರರೆಂತಲೂ, ಹಿಂದುಸ್ಥಾನವು ಸ್ವರಾಜ್ಯಕ್ಕೆ ಪಾತ್ರವಿದ್ದದರಿಂದ ಬ್ಯೂರೋಕ್ರಸಿ ಯಾನೆ ಅಧಿಕಾರೀ ವರ್ಗದವರ ಏಕ ತಂತ್ರೀ ಕಾರಭಾರವು ಇನ್ನು ಮುಂದೆ ನಡೆಯುವದು ಅಸಾಧ್ಯವೆಂದೂ ಪ್ರತಿಪಾದಿಸಿದರು. ಆಮೇಲೆ ಸಂಘದ ವಾರ್ಷಿಕ ರಿಪೋರ್ಟು ಓದಲಾಯಿತು ಒಟ್ಟಿಗೆ ಸಭಾಸದರು ೧೪ ಸಾವಿರಕ್ಕೆ ಮೀರಿದ್ದರೆ ಬೆಳಗಾಂವಿಯಲ್ಲಿ ೩೦೭೪, ಧಾರವಾಡದಲ್ಲಿ ೫೫, ವಿಜಾಪುರದಲ್ಲಿ ೧೦ ಇರುವಾಗ ಕಾರವಾರದಲ್ಲಿ ೪ ಮಂದಿ ಯಾಗಿರುವರು. ಸ್ವರಾಜ್ಯ ಸಂಘಕ್ಕೆ ನಮ್ಮಂಥ ನಿದ್ರಾವಸ್ಥ ಜಿಲ್ಹೆಯೊಳಗಿಂದ ಸಭಾಸದರು ಸಿಕ್ಕಿದರು ಎಂಬ ಒಂದೇ ಸಂಗತಿಯು ಸ್ವರಾಜ್ಯದ ಲೋಕ ಪ್ರೀತಿಯ ಸಾಕ್ಷಿ ಎಂತ ಯಾಕೆ ಹೇಳಬಾರದು? ನಾಲ್ಕು ಸದ್ಗೃಹಸ್ಥರ ಪೈಕಿ ರಾ॥ ಎಸ್. ಕೆ ಕೊಪ್ಪೀಕರವರು ನಮ್ಮ ಜಿಲ್ಹೆ ತರ್ಫೆನಿಂದ ಮಧ್ಯವರ್ತಿ ಮಂಡಳದಲ್ಲಿ ನೇಮಿಸಲ್ಪಟ್ಟಿರುವರು. ವಾಡಿಕೆಯಂತೆ ರಿಪೋರ್ಟು ಮಂಜೂರಾದ ನಂತರ ಕರ್ನಾಟಕ ಶಾಖೆಯ ಅಧ್ಯಕ್ಷರಾದ ನಾ॥ ಬೆಳವಿಯವರು, ವಿಲಾಯತಿಯಲ್ಲಿ ಲೋಕಮತ ಜಾಗ್ರತಮಾಡುವರೆ ಒಂದು ಪ್ರತಿನಿಧಿ ಮಂಡಳವನ್ನು ಕಳಿಸಬೇಕೆಂಬ ಠರಾವನ್ನು ಮಂಜೂರು ಮಾಡಿಕೊಂಡರು. ಅಧ್ಯಕ್ಷರ “ನುತಿ ಮೇರೆಗೆ

ಲೋಕ॥ ಶರ್ಮ್ಮಯೋಗೀ ಟಿಳಕರವರು, "ಬರೇ ಠರಾವುಗಳನ್ನು ಪಾಸ್ ಮಾಡಿ ನಿಲ್ಲದೆ ಯುಕ್ತ ಕೃತಿಯನ್ನೇ ಮಾಡಬೇಕೆಂತಲೂ, ಸ್ವರಾಜ್ಯವಾದಿ ಎಂದು ಹೇಳಲು ಹೆದರಬಾರದೆಂತಲೂ, ರಾಷ್ಟ್ರೀಯ ಸಭೆಯ ಸ್ವರಾಜ್ಯದ ಠರಾವನ್ನು ಅಮಲಿನಲ್ಲಿ ತರುವದೆ ಈ ಸಂಘವಾಗಿದ್ದದರಿಂದ ಸ್ವರಾಜ್ಯ ಸಂಘವು ರಾಷ್ಟ್ರೀಯ ಸಭಾಂತರ್ಗತ ಸಂಸ್ಥೆಯೆಂತಲೂ, ಪ್ರತಿಯೊಬ್ಬರು ಸ್ವರಾಜ್ಯ ಸಂಘಕ್ಕೆ ಸಹಾಯ ಮಾಡುವದು ಕರ್ತವ್ಯವೆಂತಲೂ ಹೇಳಿ" ಸ್ವಸ್ಥಾನವನ್ನು ಸೇರಿದರು. ಈ ಉಪದೇಶವನ್ನು, ಎಲ್ಲ, ಸುಶಿಕ್ಷಿತರೆಂದು ಮೆರೆಯುವ ಮಹನೀಯರು ಧ್ಯಾನದಲ್ಲಿಟ್ಟು, ಸ್ವರಾಜ್ಯವಿಷಯದ ತಾತ್ಪರ್ಯವನ್ನು ಬಿಡಿಗೊತ್ತಿ ತಮ್ಮ ಯೋಗ್ಯತೆಗನುಸಾರವಾಗಿ ಸಭಾಸದರನ್ನು ಕೂಡಿಸಿ ಕೊಡುವರಾಗಿ ನಂಬಿ ಈ ಚಿಕ್ಕ ಲೇಖವನ್ನು ಮುಗಿಸುವೆವು. ಸ್ವರಾಜ್ಯ ಸಂಘದ ವಿಷಯ ಹೆಚ್ಚಿನ ಮಾಹಿತಿ ಬೇಕಾದವರು, ಚಿಟಣೀಸ, ಸ್ವರಾಜ್ಯ ಸಂಘ, ಪುಣೆ, ಇವರಿಗೆ ಬರೆಕೊಳ್ಳುವದು.

ಸ್ಫುಟ ಸೂಚನೆಗಳು.

೧. ಯುದ್ಧ ಕಾಲದ ಕಾರ್ಯದಲ್ಲಿ ಸರಕಾರೀ ಅಧಿಕಾರಿಗಳ ಕರ್ತವ್ಯಮರ್ಯಾದೆಯು ಎಷ್ಟು ವಿಸ್ತೃತವಿರತಕ್ಕದ್ದು, ಎಂಬ ಪ್ರಶ್ನೆಯ ನಿಶ್ಚಿತ ಉತ್ತರವನ್ನು ತಿಳುಕೊಳ್ಳಲಿಚ್ಛಿಸುವವರು ನಮ್ಮ ಮುಂಬಯಿ ಸರಕಾರದವರು ಪ್ರಕಟಿಸಿದ ಮುದ್ರಣಲೇಖ (Press note) ವನ್ನು ಸಂದರ್ಶಿಸಬಹುದು. ಈ ವಿಷಯ ಸರಕಾರದ್ದು ಜಾಹೀರು ಮಾಡಿದ ಎಲ್ಲ ತತ್ವಗಳು ಸರ್ವಮಾನ್ಯವಾಗದಿದ್ದರೂ ವರ್ತಮಾನಪತ್ರಗಳಲ್ಲಿ ನಡೆದ ಚರ್ಚೆಯನ್ನು ಆದರಿಸಿ ಬೇಗನೇ ಚೌಕಶಿ ಮಾಡಿ ತಮ್ಮ ಅಭಿಪ್ರಾಯವನ್ನು ಜನರಿಗೆ ಸ್ಪಷ್ಟವಾಗಿ ತಿಳಿಸಿದ್ದರಬಗ್ಗೆ ನಾ॥ ವಿಲ್ಲಿಂಗಡನ ಧೊರೆಗಳಿಗೂ ಸರಕಾರಕ್ಕೂ ನಾವು ಅಭಿನಂದಿಸುತ್ತೇವೆ. ಕ್ರೊನಿಕಲ್ ಪತ್ರದಲ್ಲಿ ಮಾಡಿದ ಆರೋಪಗಳೆಲ್ಲ ಸುಳ್ಳಾಗಿರಬೇಕು. ಇಲ್ಲವೆ ನಿರಾಧಾರವಾಗಿಯಾದರೂ ಇದ್ದಿರಬೇಕು, ಎಂತ ಸರಕಾರಿ ಧ್ವನಿತಾರ್ಥವು ಜಾಹೀರಾಗಿದೆ ಆದರೂ ಎಲ್ಲ ಸಂಗತಿಗಳನ್ನು ಅನುಲಕ್ಷಿಸಿ ನಮಗೆ ಇಷ್ಟು ಹೇಳಬೇಕಾಗುತ್ತದಲ್ಲ— ರಾಮಪುರ ಹಳ್ಳಿಯ ಅಷ್ಯಕ್ಷಾಹಿ ಡಿ. ಮನೇಜರರು ನಾತ್ವಿಕ ವತ್ತಾಯದ ಮರ್ಯಾದೆಯನ್ನು ಕರ್ತವ್ಯದ ಭರದಲ್ಲಿ ಅಲ್ಪ ಸ್ವಲ್ಪ ಅತಿಕ್ರಮಿಸಿದ್ದಿರಬೇಕು ಇಲ್ಲದಿದ್ದರೆ ಇಷ್ಟು ವ್ಯಥಾಗೊಂದಲವು ಎಂದೂ ಸಂಭವಿಸುತ್ತಿದ್ದಿಲ್ಲ. ಇರಲಿ ಸರಕಾರದ ಸಂಗಡ ಕ್ರೊನಿಕಲ್ ಪತ್ರದ ಸಂಪಾದಕರಿಗೂ ಲೋಕಪಕ್ಷದ ನ್ಯಾಯ್ಯ ಕಾದಾಟವನ್ನು ನಡಿಸಿದಬಗ್ಗೆ ಅಭಿನಂದಿಸತಕ್ಕದ್ದು.

೨. ಜನರು ತಮ್ಮ ಮನೋಗತವನ್ನು ರಾಜ್ಯಕರ್ತರಿಗೆ ತಿಳಿಸುವದು—ಅಪ್ರತ್ಯಕ್ಷವಾಗಿ ಒಂದುಪರಿಯಿಂದ ಅವರ ಹತ್ತರ ಸಂಭಾಷಿಸುವದು, ಸರ್ವ ಸಾಧಾರಣ ರೀತಿಯಂತೆ "ಅರ್ಜಿ" ಗಳ ಮುಖಾಂತರವೇ. ನಮ್ಮ ದೂರುಗಳನ್ನಾಗಲಿ ನಮ್ಮ ಭಕ್ತಿಯನ್ನಾಗಲಿ ಸರಕಾರಕ್ಕೆ ತಿಳಿಸುವ ಇದೊಂದು ಉಪಯುಕ್ತ ಸಾಧನವು. ಅಧಿಕಾರಿಗಳ ಕೈಯಿಂದ ನ್ಯಾಯ ಪಡೆಯುವದೊಂದೇ ಇದರ ಪ್ರಧಾನ ಉದ್ದೇಶವು. ಈ ಅರ್ಜಿಯ ಸಾಧನವನ್ನು ಅವಿಚಾರದಿಂದ ಉಪಯೋಗಿಸಿ ಏನೂ ಫಲಪ್ರಾಪ್ತಿಯಾಗದಿದ್ದರೆ ಅರ್ಜಿದಾರರು ಅಧಿಕಾರಿಗಳಿಗಿಂತ ತಮ್ಮ ದುರ್ಭಾಗ್ಯವನ್ನೇ ದೂಷಿಸುವದು ಯೋಗ್ಯವು. ಇಂಥ ಅವಿಚಾರದೊಳಗೆ "ಹೆಸರಿಲ್ಲದ" ಅರ್ಜಿಗಳನ್ನು ಮಾಡುವದು ದೊಡ್ಡ ಅವಿಚಾರವು. ಈ ವಿಷಯವು ನಮಗೆ ಸೂಚಿಸಲು ಕಾರಣವೇನಂದರೆ ಸಿದ್ದಾಪುರದೊಳಗಿನ ಕೆಲ ಜನರು ಜಲಾವ ಕಟ್ಟಿಗೆಯ ಸಂಬಂಧದ ತಮ್ಮ ದೂರುಗಳನ್ನು ಹೆಸರಿಲ್ಲದ ಅರ್ಜಿಗಳಿಂದ ದೂರಪಡಿಸಿಕೊಳ್ಳಲಿಕ್ಕೆ ಹವಣಿಸುತ್ತಿದ್ದರೆಂದು ನಮ್ಮ ಕಿವಿಗೆ ಬಂದಿತ್ತು. ಇಂಥ ಎಷ್ಟು ಅರ್ಜಿ ಮಾಡಿದರೂ ಅರಣ್ಯರುದನದಂತೆ ಬಹಳ ದಿವಸ ಏನೂ ನಿಷ್ಪತ್ತಿಯಾಗಲಿಲ್ಲವೆಂಬದೇನೂ ಆಶ್ಚರ್ಯಕರವಲ್ಲ. ಕಟ್ಟಕಡೆಗೆ ಅವರ ಸುದೈವದಿಂದಲೇ ಫೋರೆಸ್ಟ ಅಧಿಕಾರಿಗಳು ಆಕಸ್ಮಿಕ ಕಾರಣದಿಂದ ಜನರ ಅನಾನುಕೂಲತೆಯನ್ನು ಕಂಡು ಹಿಡಿದು ಆದಷ್ಟರಮಟ್ಟಿಗೆ ಅದನ್ನು ದೂರಪಡಿಸಿದ್ದು ಅಭಿನಂದನಾಸ್ಪದವು ಆದರೆ ಸಿದ್ದಾಪುರದ ಬಾಂಧವರಿಗೆ ನಾವು ಸೂಚಿಸುವದೇನಂದರೆ, ಅವರ ಸಾರ್ವಜನಿಕ ದೂರುಗಳೇನಾದರೂ ಇದ್ದಲ್ಲಿ ಅವುಗಳನ್ನು ಸ್ವದಸ್ತೂರ ಸಹಿನಿಶಿ ಸರಕಾರಕ್ಕೆ ತಿಳಿಸುವರೆ ಅವರಿಗೆ ಅಂಜಿಕೆಯುಂಟಾದರೆ ಅಂಥ ದೂರುಗಳನ್ನು ಸಹಿನಿಶಿ ನಮಗೆ ತಿಳಿಸಿದ್ದಲ್ಲಿ ಅವುಗಳನ್ನು ಸರಕಾರದ ಮುಂದಿಟ್ಟು ತೀರ್ಪು ಹೊಂದಲಿಕ್ಕೆ ನಾವು ಕರ್ತವ್ಯಬದ್ಧರಾಗಿಯೇ ಇರುವೆವು. ನ್ಯಾಯಪ್ರಿಯ ಸರಕಾರದ ಮುಂದೆ ನಮ್ಮ ದೂರುಗಳನ್ನು ಇಡುವದಲ್ಲದೆ ಬೇರೆ ಯಾರ ಮುಂದೆ ಇಡುವದು? ಬೇಕಾದರೆ ಅರ್ಜಿದಾರರ ಹೆಸರನ್ನು ತಿಳಿಸದಿರುವದು ವೃತ್ತಪತ್ರದ ಧರ್ಮದಂತೆ ನಮಗೆ ಸಾಧ್ಯವದೆ. ಖಾಸಗಿ ಅರ್ಜಿದಾರರಿಗೆ ಮಾತ್ರ ಅಷ್ಟು ಸಾಧ್ಯವಲ್ಲ. ಇದನ್ನು ಸಾರ್ವಜನಿಕ ಅರ್ಜಿದಾರರೆಲ್ಲರು ತಿಳಿದಿರಲಿ.

೩. ಕಳೆದ ಜೂನ ೧ ನೇ ತಾರೀಕಿನಿಂದ ಕುಮಟಾ ಕಟ್ಟಿಗೆಯ ಡೀಪೋವನ್ನು ಹೊಸ ಕಂಟ್ರಾಕ್ಟದಾರರು ನಡಿಸಹತ್ತಿರುವರು. ಈ ವರ್ಷದ ಡೀಪೊ ದುಕಾನು ಹೊಸದಾಗಿದ್ದರೂ ಅದರ ವರ್ತಕರು ಇಲ್ಲಿಯ ಜನರ ಹಳೇ ಪರಿಚಯದವರೇ. ಅಭ್ಯಾಸವಿಲ್ಲದ ದುಕಾನವೆಂತಲೋ ಏನೋ ಗಿರಾಕಿ ಜನರು ಒಳಗೆ ಪ್ರವೇಶಿಸುವ ಮುಂಚೆಯೇ ನಡುಗುತ್ತ ಹೆಜ್ಜೆ ಇಡುತ್ತಾರೆ. ಅಂತಃಪ್ರವೇಶವಾದವರಿಗೆ ಡಿಪೋದಲ್ಲಿ ಕಟ್ಟಿಗೆ ಹೆಚ್ಚು ಸಿಗುವದಕ್ಕಿಂತ ಕಾಯಿದೆಯ ಬಿಡುಬಿರುಸು ಮಾತುಗಳೇ ಹೆಚ್ಚು ಸಿಗುತ್ತವೆಂತ ಕೆಲವರು ಹೇಳುತ್ತಾರೆ (೧) ಕಟ್ಟಿಗೆ ತೂಕ ಮಾಡುವ ಮಜೂರಿ ಗಿರಾಕಿಯೇ ಸಹಿಸಬೇಕು. (೨) ವರ್ತಕರು ಕೊಟ್ಟಷ್ಟೇ ಕಟ್ಟಿಗೆಯನ್ನು ಕೊಳ್ಳಬೇಕು. (೩) ಮಣಕ್ಕೆ ೪ ಆಣೆವರೆಗೆ ಯಾ ಅದಕ್ಕೂ ಹೆಚ್ಚು ದರದಿಂದ ಮಾರಲಿಕ್ಕಾಗುವ ಕಟ್ಟಿಗೆಯನ್ನು ಬರೇ ೩ ಆಣೆಗೆ ಕೊಟ್ಟಬಗ್ಗೆ ಗಿರಾಕಿಗಳು ಆಭಾರಿಯಾಗಿರಬೇಕು, ಎಂಬ ಅನೇಕ ಶಾಸನಗಳ ಯಥಾವಿಧಿ ಮನ್ನಣೆಯಾದ ಕೂಡಲೆ ಕಟ್ಟಿಗೆಯನ್ನು ಹೊತ್ತುಕೊಂಡು ದುಕಾನದಿಂದ ಹೊರ ಬೀಳಬೇಕಾಗುತ್ತದೆಂದು ಜನರು ಅಲ್ಲಲ್ಲಿ ಹೇಳಾಡುತ್ತಾರೆ. ಡೀಪೊ ನಡಿಸುವ ಸರಕಾರಿ ನೇಮುಗಳು ನಮಗೆ ಚನ್ನಾಗಿ ಗೊತ್ತಿಲ್ಲದಿದ್ದರೂ ಇಂಥ ಹಾಸ್ಯಾಸ್ಪದ ಕಟ್ಟಳೆಗಳನ್ನು ಸರಕಾರವು ಎಂದೂ ವಿಧಿಸಿರಲಿಕ್ಕಿಲ್ಲವೆಂತ ನಮಗೆ ಖಾತ್ರಿಯದೆ ಆದಕ್ಕಾಗಿ ವರ್ತಕರು ಹೀಗೆ ಹೇಳ್ಯಾರೆಂತ ನಾವು ಏನೂ ನಂಬುವದಿಲ್ಲ. ಶಿಕ್ಕಶಿಕ್ಕಂತೆ ೩ ಆಣೆಯ ದರವನ್ನು ೪ ಆಣೆಗೆ ಏರಿಸುವ ಸ್ವಾತಂತ್ರ್ಯವನ್ನು ಸರಕಾರವು ಇನ್ನುವರೆಗೆ ಯಾವ ವರ್ತಕನಿಗೂ ಕೊಟ್ಟದ್ದಿಲ್ಲ. ಇಂಥ ಸುದ್ದಿಯನ್ನು ನಂಬುವ ಜನರು ಮಾತ್ರ ತಿಳಗೇಡಿಗಳು. ಜನರ ದೂರುಗಳಲ್ಲಿ ಸತ್ಯಾಂಶವಿದ್ದರೆ "ಕಟ್ಟಿಗೆಯು ಹತ್ತರ ಬೆಲ್ಲವಿಲ್ಲದಿದ್ದರೂ ಬೆಲ್ಲದಂಥ ಮಾತು ಇಲ್ಲವೇನ.?" ಎಂಬ ಗಾದೆ ವಾಕ್ಯವನ್ನು ಎಚ್ಚರಿಕೆಗೆ ತಂದು ಸವಿಮಾತುಗಳಿಂದಾದರೂ ಗಿರಾಕಿಗಳಿಗೆ ತೃಪ್ತಪಡಿಸುವ ಔದಾರ್ಯವನ್ನು ಈ ವರ್ತಕರು ತೋರಿಸುವರಾಗಿ ನಾವು ಕೋರುತ್ತೇವೆ.

ಪತ್ರವ್ಯವಹಾರ.

ಉತಾರು ಜನರ ಗೋಳಾಟ.

ಅಯ್ಯಾ ಪತ್ರಾಧಿಪರೇ,

ಕುಮಟಾ ತಾರಿಯ ಮಕ್ತೆದಾರನು ಉತಾರ ಜನರಿಗೆ ವ ಗಾಡಿಕಾರರಿಗೆ ಎಷ್ಟು ಪರಿಯಿಂದ ತಾಪದ್ರವ ಕೊಡುತ್ತಾನೆಂದು ಕೆಳಗಿನ ಸಂಗತಿಗಳಿಂದ ಕಂಡುಬಂದೀತು.

೧. ಪ್ರತಿ ಒಂದು ದೋಣಿಯ ಮೇಲೆ ೨ ದೋಣಿಕಾರರಂತೆ ೩ ದೋಣಿಗಳಮೇಲೆ ೬ ದೋಣಿಕಾರರನ್ನು ಇಡಬೇಕೆಂದು ಪಟ್ಟ ಶರ್ತವಿದ್ದಾಗ್ಯೂ ಸದ್ಯಕ್ಕೆ ಬರೇ ೨ ಜನರನ್ನು— ಅವರು ಸಹ ಚಲೋ ಮಾಹಿತಿ ಇಲ್ಲದವರು— ನೇಮಿಸಿ ಅಮದು ರಫ್ತುಗಳಿಗೆ ಸುಸ್ತ ಮಾಡುತ್ತಿರುವನು ಸರಕಾರಿ ಅಮಲದಾರರು ಬರುವ ವರ್ತಮಾನ ಕೇಳಿ ಅಷ್ಟು ಹೊತ್ತಿನ ಪೂರ್ತಿ ನವಕರ ನಾಮೆ ಇಲ್ಲದ ಕೆಲಶಿ ಜನರನ್ನು ನೇಮಿಸುವನು.

೨. ಸ್ವಾತ್ರಿವೇಳ್ಯಾ ಎರಡೂ ಬಾಜುವಿನಲ್ಲಿ ಕಂಬ ನಿಲ್ಲಿಸಿ ಲಾಟಣ ಹಚ್ಚಬೇಕೆಂದು ಪಟ್ಟೇ ಶರ್ತವಿದ್ದಾಗ್ಯೂ ಹಾಗೆ ಮಾಡಿಲ್ಲ ಅದ್ದರಿಂದ ಉತಾರು ಜನರು ಕತ್ತಲೆಯಲ್ಲೇ ನೀರಲ್ಲಿಳಿದು ಹೋಗಬೇಕಾಗುತ್ತದೆ.

೩. ಇಳತವಿದ್ದಾಗ ಹೊಳೆ ದಾಟ್ಯು ಬಂದ ಅಜ್ಞ ಜನರಿಗೆ ವ ಗಾಡಿಕಾರರಿಗೆ ಗೈರಸಮಜೂತಿಕೊಟ್ಟು ಅವರಿಂದ ಪೂರ್ಣ ಹಾಸಲು ವಸೂಲುಮಾಡುವನು

ಇಂಥ ಅವ್ಯವಸ್ಥೆಯನ್ನು ಕುರಿತು ಉತಾರು ಜನರು ಕೇಳಿದರೆ, ಈ ವರ್ಷ ಗುತ್ತೆಯ ಮೊಬ್ಲಗು ಹೆಚ್ಚಿರುವದರಿಂದ ಪಟ್ಟೆ ಶರ್ತುಗಳಂತೆಯೇ ಹ್ಯಾಗೆ ನಡೆಯುವದು ಎಂತ ಸಡಪೋತಿ ಉತ್ತರ ಕೊಡುವನು.

ಈ ರೀತಿ ಪಟ್ಟೆಯುಳ್ಳಿರುವ ಕಾಯಿದೆಗಳನ್ನು ಮುರಿದು ಬಿರ್ಜ ಗುಳಿಸುವದಲ್ಲದೆ, ಎಲ್ಲೂ ಇಲ್ಲದ ಕಾಯಿದೆಗಳನ್ನು ನಿರ್ಮಾಣಮಾಡಿ ಹಣ ವಸೂಲು ಮಾಡುವ ಇಂಥ ಪ್ರಕಾರವು ಎರಡು ತಿಂಗಳುಗಳಿಂದ ಅವ್ಯಾಹತ ನಡೆದಿದ್ದರೂ, ಈ ಬಗ್ಗೆ ಇನ್ನೂ ಏನೂ ವ್ಯವಸ್ಥೆ ಆಗಲಿಲ್ಲವೆಂದು ನೋಡಿ ವ್ಯಸನವಾಗುತ್ತದೆ. ಈ ಅವ್ಯವಸ್ಥೆಯನ್ನು ಪ್ರತ್ಯಕ್ಷ ನೋಡಿ ಕುಮಟೆಯ ವ ಕಲಬಾಗದ ಗ್ರಾಮಸ್ಥರು ಹಾಗೂ ಲೋಕಲ್ ಫಂಡ ಸಬ್ ಓವರ್ಸೀಯರರು ಮೇಲಾಧಿಕಾರಿಗಳಿಗೆ ರಿಪೋರ್ಟ ಮಾಡಿರುವರೆಂದು ಕೇಳುತ್ತೇನೆ. ಆದರೆ ಅವುಗಳ ಗತಿ ಏನಾಯಿತೆಂದು ತಿಳಿಯುವದಿಲ್ಲಾ. ಈಗಾದರೂ ಮೇಲಾಧಿಕಾರಿಗಳು ತಕ್ಕ ವ್ಯವಸ್ಥೆ ಮಾಡುವರಾಗಿ ನಂಬುತ್ತೇನೆ,

ತಮ್ಮ ವಿಧೇಯ,

ತಾ. ೨೮-೫-೧೯೧೭. ಜನರ ಹಿತವಾದಿ.

ವಿವಿಧ ವರ್ತಮಾನ.

—ಮೈಸೂರಿನ ರಾಯರ ಜನ್ಮದಿವಸದ ಉತ್ಸವಕ್ಕೆ ನೆರೆದ ದರಬಾರದಲ್ಲಿ ನರ್ತಕಿಯರನ್ನು ತರಲಿಲ್ಲವಂತೆ, ಇನ್ನು ಮುಂದೆಯಾದರೂ ಈ ಶುಭಕಾರ್ಯದಲ್ಲಿ ಅವರ ಪ್ರವೇಶವಾಗಬಾರದೆಂದು ಆಜ್ಞಾಪಿಸಿರುವರು. ಇದು " ಪೂಜ್ಯವೋ, ತ್ಯಾಜ್ಯವೋ ! "

ಅಮೇರಿಕಕ್ಕೆ ಹೋಗಿ ಅಲ್ಲಿಯ ವಿಶ್ವವಿದ್ಯಾಲಯದ ಉಚ್ಚ ಪದವಿಯನ್ನು ಹೊಂದಿದ ಡಾ| ಲಿಂಗೇಶ ಮಹಾಭಾಗವತ ಕುರ್ತಕೋಟಿ, ಪಿಎಚ್. ಡಿ. ಇವರು ಕರವೀರ ಮಠದ ಜಗದ್ಗುರುಗಳಾದರು.

ಹುಬ್ಬಳ್ಳಿಯಲ್ಲಿ ಇದೇ ತಿಂಗಳದ ೧ ನೇ ತಾರೀಕಿಗೆ 'ಮಹಮ್ಮಡನ್ ಹ್ಯಾಸ್ಕೂಲ' ಸ್ಥಾಪನವಾಯಿತು. ಅಲ್ಲಿ ಕನ್ನಡ, ಮರಾಠಿಯ ಬದಲಾಗಿ ಉರ್ದು ಭಾಷೆಯಿಂದ ಇಂಗ್ಲಿಷ ಕಲಿಸುವರು. ಈ ನೂತನ ಸಂಸ್ಥೆಯು ಚಿರಾಯುವಾಗಲೆಂದು ಬಯಸುತ್ತೇವೆ.

ಮೈಸೂರ ಸಂಸ್ಥಾನದ ಪ್ರತಿಬಂಧಕ ವನಗಾವಲುಗಳಿಂದ ಹುಲ್ಲನ್ನು ಕ್ರಯ ಕೊಡದೆ ಕೊಯ್ದುಕೊಂಡು ಹೋಗಬಹುದೆಂದು ಮೈಸೂರ ಸರಕಾರವು ಅಪ್ಪಣೆಕೊಟ್ಟಿರುತ್ತದೆ.

ಜರ್ಮನರು ತಮ್ಮ ಹೆಣಗಳನ್ನು ಸುಟ್ಟು ಅವುಗಳ ರಸದಿಂದ ಸಾಬೂನು, ಗ್ಲಿಸರ್ಯಾನ ಮುಂತಾದ ಸಾಮಾನುಗಳನ್ನು ತಯಾರಿಸುವರಂತೆ!

ಇಡೀ ಹಿಂದುಸ್ಥಾನದ ಯುದ್ಧ ಸಾಲದ ವಾಗ್ದಾನಗಳು ೩೦ ಕೋಟಿಯ ಸಮೀಪ ಬಂದಿರುತ್ತವೆ!

ಇಹ ವೃತ್ತ.

ಕುಮಟಾ— ರೋಹಿಣೆ ನಕ್ಷತ್ರದ ಮಳೆಯು ೫-೬ ದಿವಸ ಸುರಿಯಿತು. ಮೃಗಶಿರೆಯು ಸಹ ಚಲೋ ಅನುಗ್ರಹಮಾಡುವದೆಂತ ಚಿನ್ಹಗಳು ತೋರುತ್ತವೆ. ಇಷ್ಟರೊಂದಿಗೆ ಮಳೆಯು ೧೯-೨೯ ಇಂಚು ಆಯಿತು. ಜನರು ವಾರ್ಷಿಕ ನಿಯಮದಂತೆ ಹೊಲಗಳನ್ನು ಬಿತ್ತ ಹತ್ತಿರುವರು.

ಕೈಲಾಸವಾಸಿ ಗಣಪತ್‌ವೆಂಕಟ ಸುಬ್ಬಾ ಭಾಗವತ ಇವರ ಜಾಗಕ್ಕೆ ಇಲ್ಲಿಯ ತಾಲೂಕ ಲೋಕಲ್ ಬೋರ್ಡಿಗೆ ಮಿ|| ಮಂಜುನಾಥ ದೇವರಾವ ಕುಲಕರ್ಣಿಯವರನ್ನೂ ಮತ್ತು ಮ್ಯುನಿಸಿಪಾಲಿಟಿಗೆ ಮಿ|| ಎಮ್. ಬಾಬಣ್ಣಾಕಾಮತರನ್ನು ನೇಮಿಸಿರುವರು.

ಅಗ್ನಿರ ಬೋಟಿಯ ಮೇಲಿಂದ ಮುಂಬಯಿಗೆ ಹೋಗತಕ್ಕ ಮಹಾಲು ಹೋಗದೆ ಇದ್ದು ಅದು ಈಗ ಗಾಡಿಗಳ ಮೇಲೆ ಹಾವೇರಿಯ ಮೇಲಿಂದ ಮುಂಬಯಿಗೆ ಕಳುಹಿಸಬೇಕಾಯಿತು. ಇಲ್ಲಿ ಇಳಿಯತಕ್ಕ ಮಹಾಲು ಸಹ ಇಳಿಯದೆ ಕಾರವಾರ ಬಂದರದಲ್ಲಿ ಇಳಿಸಿದ್ದು ಅಲ್ಲಿಂದ ಗಾಡಿಗಳಮೇಲಿಂದ ಇಲ್ಲಿಗೆ ತರಬೇಕಾಯಿತು. ಕಾರವಾರದಿಂದ ಇಲ್ಲಿಗೆ ಬರತಕ್ಕ ಮಹಾಲಿನ ಗಾಡಿಗಳ ಪೈಕಿಂ ಒಂದು ಗಾಡಿಯು ಉರುವಳೆ ತಾರಿಯಲ್ಲಿ ಮಹಾಲು ಸಹಿತ ಮುಳುಗಿತು. ಆ ಮಹಾಲು ಪೂರ್ಣ ಕೆಟ್ಟು ಹೋಯಿತು.

ಕುಮಟೆಯ ತಾರಿಯಲ್ಲಿ ಒಬ್ಬ ಮನುಷ್ಯನು ಸ್ವತಃ ದೋಣಿ ತೆಗೆದು ಹೋಗುವಾಗ ಮುಳುಕಿದ ಮೇಲೆ ಬೇರೆಯವರು ಅವನನ್ನು ಮೇಲೆ ತೆಗೆಯ ಬೇಕಾಯಿತು. ಈ ಸಂಬಂಧ ಚೌಕಶಿ ನಡದದಂತೆ.

ಹೆಗಡೆಯಲ್ಲಿ ದನಗಳ ರೋಗವು ಬಹಳೇ ಹಾವಳಿಯನ್ನು ಮಾಡತೊಡಗಿದೆ. ಗ್ರಾಮಸ್ಥರು ಅಧಿಕಾರಿಗಳಿಗೆ ತಿಳಿಸಿ ಪಶುವೈದ್ಯರನ್ನು ಬೇಗನೇ ತರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು.

ಕಾರವಾರ.—ಕೋ| ಸಂಘದ ವಾರ್ಷಿಕ ಸಭೆಯಾಗಿ ಒಟ್ಟಿಗೆ ೧೦೫೭ ರೂಪಾಯಿ ಮುನಾಫೆಯಾಯಿತೆಂದು ಜಾಹೀರು ಮಾಡಲ್ಪಟ್ಟಿದೆ. ಡಿವ್ಹಿಡೆಂಡ ಶೇ| ೬|. ರಂತೆ ಕೊಡುವದೆಂತ ನಿಶ್ಚೈಸಿರುತ್ತದೆ.

ಕಾರವಾರ ಹ್ಯಾಸ್ಕೂಲಿನಿಂದ ಮೆಟ್ರಿಕ ಪರೀಕ್ಷೆಯಲ್ಲಿ ಪಾಸಾದ ಉಮೇದವಾರರು:—

Students & Exstudents.

Bijur G. R., Divekar V. R., Wagle P. V., Wagle V. V., Wagle S. A.. Palekar M. B., Narvekar R. M., Kaikini S. S., Koppikar S. K., Yardi M. R., Nadkarni S. G., Kasarkod B. R., Shanbhag D. V., Kamat P. S.

ಸ್ಕೂಲ ಫ್ಯಾನಲ ಪರೀಕ್ಷೆಯಲ್ಲಿ ಪಾಸಾದವರು:—

(Bombay:—) Dhopale P. V., Gokarn S. M., Kayasare G. V., Mankikar D. M., Marballi B. R., Nadakarni N. S., Nadkarni D. S., Nagarkatti R. S., Nayak L. S., Shanbhag D. V.,

(Dharwar:—) Stalekar M. B., Naik. D. R., Naik A. P., Shenvi N. G.

ಹಳಿಯಾಳ.— (೮-೬-೧೭) ಒಂದೆರಡು ದಿವಸಗಳಿಂದ ಮೋಡಗಳು ಕವಿಯ ಹತ್ತಿವೆ. ಸ್ವಲ್ಪ ಮಳೆ ಬಿದ್ದು ಹವೆಯು ಶೀತಲವಾಗಹತ್ತಿದೆ. ಮಳೆಯ ದೆಶೆಯಿಂದ ಚಿಂತಾಕುಲರಾದ ಜನರಿಗೆ ಅಲ್ಪ ಶಾಂತಿಯು ದೊರಕಿತು. ಬಿತ್ತುವ ಕೆಲಸ ಪ್ರಾರಂಭಿಸಿದೆ.

ಊರಲ್ಲಿ ಇಲಿಗಳು ಇನ್ನೂ ಬೀಳುತ್ತಲಿದ್ದಾವೆ. ಮಧ್ಯದಲ್ಲಿ ೩-೪ ಕೊಲೆರಾ ಮರಣಗಳಾದವು; ತಾಲೂಕಿನ ಹವಾಮಾನವು ನೆಟ್ಟಗಿದೆ. ಮಳೆಯ ಪೂರ್ವಚಿನ್ಹಗಳು ಕಾಣಹತ್ತಿವೆ;

ಡೇ ಕ. ಮಿ|| ಜೋರಕರವರ ಅಧ್ಯಕ್ಷತೆ ಕೆಳಗೆ ವಾರಲೋನ ಮತ್ತು ಕೂಲಿಕಾರರ ಭರ್ತಿಯ ವಿಷಯವಾಗಿ ಸಭೆಗೂಡಿ ಒಂದು ಕಮಿಟಿಯನ್ನು ನೇಮಿಸುವದು ನಿಶ್ಚಯವಾಯಿತು.

ಶ್ರೀಮತ್ ಕವಳೆ ಮಠದ ಪೂರ್ಣಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಸಭೆಗೂಡಿ ಸ್ವಜ್ಞಾತಿಯ ವೈದಿಕರ ಕಡೆಯಿಂದಲೇ ಧಾರ್ಮಿಕ ಕೃತ್ಯಗಳನ್ನು ಕಾಯಂವಾಗಿ ನಡಿಸುವದೆ ನಿಶ್ಚಯಿಸಿ ಅವರ ವೇತನ ವೆಚ್ಚದ ಕುರಿತು ಚಿರಂತನ ವ್ಯವಸ್ಥೆ ಮಾಡುವದೆ ಕಮಿಟಿಯು ನೇಮಿಸಲ್ಪಟ್ಟಿತು. ಸ್ವಾಮಿಯವರ ಸ್ವಾರಿಯು ಧಾರವಾಡಕ್ಕೆ ತೆರಳಿತು.

ಜಂಗಲ್ ಕೂಪುಗಳಿಗೆ ಯೋಗ್ಯ ಸವಾಲು ಬಾರದ್ದರಿಂದ ಕೆಲವು ಕಂಪಾರ್ಟಮೆಂಟಗಳು ಪುನಃ ಸವಾಲಿಗೆ ಇಟ್ಟಿರುತ್ತಾರೆ.

ಗಾಡಿಗಳು ಬಿಟ್ಟಿಗೆ ಹಿಡಿಯಲ್ಪಡುವದರಿಂದ ಜನರಿಗೆ ಸ್ವಲ್ಪ ಕಷ್ಟ ಸಂಭವಿಸುತ್ತದೆ. ಏನಾದರೂ ವ್ಯವಸ್ಥೆ ಮಾಡಿ ಅಧಿಕಾರಿಗಳು ಇದನ್ನು ದೂರಪಡಿಸಬಹುದು.

ಯುದ್ಧವಾರ್ತೆಯು.

ಈ ಪಕ್ಷದಲ್ಲಿ ಇಟಾಲಿಯು ಸಾನಜಿಓವ್ಹಾನೀಯನ್ನು ಕೈವಶ ಮಾಡಿಕೊಂಡು ಹಮರ್ಡಾವನ್ನು ಮುತ್ತಿ ಟ್ರೀಸ್ಟದ ಹತ್ತರ ಬರುತ್ತಿದೆ.

ಪಶ್ಚಿಮ ರಣಭೂಮಿಯಲ್ಲಿ ಇಂಗ್ಲಿಷ ಸೇನಾಧಿಪತಿಯು ಮತ್ತ ಹೊಸ ಸಮರ ವ್ಯಾಪಾರಕ್ಕೆ ಆರಂಭಿಸುತ್ತಿದ್ದಾನೆ.

ರಶಿಯಾದಲ್ಲಿಯ ಸೈನಿಕರೆಲ್ಲರೂ ತಮ್ಮ ನೌಕರಿಯನ್ನು ಬಿಟ್ಟು ಹೋದದ್ದರಿಂದ ಅವರನ್ನು ತಂದು ವ್ಯವಸ್ಥೆ ಮಾಡುವವರೆಗೆ ಕೆಲ ತಿಂಗಳು ಹೋದಾವು. ಕೆಲ ಜಿಲ್ಹೆಗಳಂತೂ ಸದ್ಯದ ರಶಿಯನ ಸರಕಾರಕ್ಕೆ ಕೇಳುವದೇ ಇಲ್ಲ. ಕೂಲಿಕಾರರಲ್ಲಿ ಅಸಮಾಧಾನ ಉಂಟಾಗಿದೆ. ೧೯೧೪ರಲ್ಲಿಯ ಯುದ್ಧಖಾತೆಯ ಪ್ರಧಾನರ ಮೇಲೆ ಸೈನಿಕರಿಗೆ ತುಪಾಕಿ, ಮದ್ದುಗುಂಡುಗಳನ್ನು ಪೂರೈಸದೆ ಶತ್ರುಗಳಿಗೆ ಘಾತಮಿ ಕೊಟ್ಟರೆಂಬ ಆರೋಪ ಸಿದ್ಧವಾಗಿರುವದು.

ಇಂಥ ಘಾತಮಿದಾರರನ್ನು ಕೈಸರನು ತನ್ನ ಕುಯುಕ್ತಿಯಿಂದ ಸಂಪಾದಿಸಿದ ಮೇಲೆ ರಶಿಯನರಿಗೆ ಸೋಲಾದರೆ ಆಶ್ಚರ್ಯವೇನು? ಇನ್ನು ಮುಂದೆ ಮಾತ್ರ ಇಂಥ ಅವ್ಯವಸ್ಥೆಯಾಗದಂತೆ ಹೊಸ ಸರಕಾರವು ಬಂದೋಬಸ್ತು ಮಾಡಿಯದೆ. ರಣಶೂರ ಬ್ರುಸಿಲಾಫರು ಸೇನಾಧಿಪತ್ಯವನ್ನು ಕೈಕೊಂಡಮೇಲೆ ಇನ್ನೇನು ಬೇಕು?

ಅಮೇರಿಕೆಯಲ್ಲಿ ಇಂಗ್ಲಂಡದ ಮಂತ್ರಿ ಮಿ. ಬಾಲ್ಫೋರವರು ಹೋದಂದಿನಿಂದ ಉಭಯರಾಷ್ಟ್ರಸ್ನೇಹವು ದೃಢವಾಗಿದೆ. "ಸ್ವರಾಜ್ಯ, ಸ್ವಾತಂತ್ರ್ಯ, ಏಕಸತ್ತಾತ್ಮಕ ರಾಜ್ಯಪದ್ಧತಿಗಾಗಿ ನಾವು ಜಗಳಾಡುತ್ತೇವೆ"ಂತೆ ಅವರು ಒಟಾವಾದಲ್ಲಿಯ ತಮ್ಮ ಭಾಷಣದಲ್ಲಿ ಹೇಳಿದರು.

ಆಸ್ಟ್ರಿಯಾದ ಅರಸು ಯಾರೂ, ಯಾರನ್ನೂ ಸೋಲಿಸಲಿಲ್ಲೆಂಬ ಕರಾರಿನಮೇಲೆ ತಹ ಮಾಡಲಿಕ್ಕೆ ಒಪ್ಪಿದ್ದಾರೆ.

ಅತ್ಯಾಚಾರ.— ಹೋದ ಪಕ್ಷದಲ್ಲಿ ೨೩ ದೊಡ್ಡ ಹಡಗಗಳನ್ನು ಮುಳುಗಿಸಿದರು. ಮೀನು ಹಿಡಿಯುವ ಬೋಟಗಳಂತೂ ಜಲಸಮಾಧಿ ಕೊಂಡುತ್ತಲಿವೆ. ಒಂದು ರಾತ್ರಿ ಒಂದು ಬೋಟಿಗೆ ೭ ಬೋಟಗಳು ಸಮುದ್ರ ತಳಕ್ಕೆ ಹೋದವು. ಇಂಗ್ಲಿಷರು ಆಸ್ಪತ್ರಿ ಹಡಗುಗಳ ದುರುಪಯೋಗ ಮಾಡುತ್ತಾರೆಂಬ ನೆವದಮೇಲಿಂದ ಅವುಗಳನ್ನು ಸಹ ಮುಳುಗಿಸುತ್ತಾರೆ.

ವೈಮಾನಿಕಹಲ್ಲೆ.— ೧೬ ವಿಮಾನುಗಳು ಇಂಗ್ಲಂಡದ ಆಗ್ನೇಯ ಭಾಗದಮೇಲಿನ ಶಹರದ ಮಾರ್ಗಗಳಮೇಲೆ ಬಾಂಬುಗಳನ್ನು ಒಗೆದು ೭೬ ಜನರನ್ನು ಕೊಂದರು; ಮತ್ತು ೧೭೪ರನ್ನು ಗಾಯಪಡಿಸಿದರು. ಇದಲ್ಲದೆ ಬಹಳೇ ಮಾಲು ನಷ್ಟವಾಯಿತು. ಅವುಗಳಲ್ಲಿ ೩ ವಿಮಾನುಗಳಿಗೆ ಇಂಗ್ಲಿಷ ವೈಮಾನಿಕರು ನೆಲ ತೋರಿಸಿದರು.

ಅ| ಕಲೆಕ್ಟರ ಸಾಹೇಬರು ತಿಳಿಸಿದಂತೆ ತಾ ೨ ನೇ ಜೂನ ವರೆಗಿನ ಯುದ್ಧಸಾಲದ ರಕಮುಗಳು.

ತಾಲೂಕು	ವಾಗ್ದಾನಗಳು	ವಸೂಲಾದದ್ದು
ಶಿರ್ಶಿ	೧,೭೯,೩೪೬—೪	೮೯,೫೦೮—೦
ಕುಮಟಾ	೧,೪೧,೮೬೧—೧೨	೬೨,೮೭೬—೦
ಸಿದ್ದಾಪೂರ	೧,೦೫,೯೭೨—೦	೫೮,೦೨೪—೦
ಹೊನ್ನಾವರ	೧,೦೦,೮೫೬—೧೨	೨೭,೩೨೯—೪
ಭಟ್ಕಳ	೪೦,೦೬೨—೮	೧೩,೦೧೮—೪
ಅ|ಕ| ಆಫೀಸರರು	೨,೭೧೩—೪	೨,೩೫೭—೪
ಜುಮ್ಲಾ	೫,೭೦,೮೧೨—೮	೨,೫೩,೧೧೩—೧೨

ಟಿ. ಜಿ. ಮಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ, ಸ್ನಾಯುಗಳ ನೆಗಡಿ, ನರಗಳ ಸೆಡತ, ಕೆಮ್ಮು, ಜ್ವರ, ಕೊಲೆರಾ, ಬೀಗು, ಬಾಣಂತೀರೋಗ, ಪ್ಲೇಗ, ಹೊಟ್ಟೆಕಡತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ. ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯುವದೆ.

ಬಾಟ್ಲಿ ಕಿ. ೧|| ರೂ. ಟಪಾಲ ಹಾಸಲು ೪ ಆಣೆ ಬೇರೆ ಒಂದೇ ಸರ್ತಿ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ. ಕಮಿಶನ್ ಹೊರತು ಅಂಚೆವೆಚ್ಚ ಬೇರೆ.

ದದ್ರುಘ್ನ ಜಾಲೀಮಬಾಮ:— ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇನಾಯಿ ರೋಗಗಳ ತುಳಗಳು, ಉರಿ, ಬೆಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು.

ಬಾ. ಕಿ. ೧೨ ಆಣೆ. ಅಂಚೆವೆಚ್ಚ ೩ ಬಾಟ್ಲಿ ವರೆಗೆ ೪ ಆಣೆ ಬೇರೆ. ಪತ್ತೆ:—

ಸಂಜೀವನಾರ್ಕ ಆಫಿಸ, ಕುಲಾರ್ ಮುಂಬಯಿ,

Printed & Publi ed by Ky shnarao Keshav Shenvi at his Star of Kanara Press, Kuinta.

ಪತ್ರದ ವರ್ಗಣಿ:-
ಕುಮಟೆಯಲ್ಲಿ ಅಗಾವು
ರೂಪಾಯಿ 1-0-0.
ಅಂಚೆವೆಚ್ಚ ಶೇರಿ
ರೂಪಾಯಿ 1-6-6.
ಒಂದು ಸಂಚಿಕೆಗೆ 0-0-9.

THE

KANARA NEWS.

ಕಾನಡಾ ವೃತ್ತ.

सत्यं ब्रूयात्प्रियं ब्रूयान्न ब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ, ಪ್ಯಾಕಾ ಟೈಪಿನ (೧೫ ಎಮ್‌ಉದ್ದ) ೮ ಸಾಲುಗಳ ವರೆಗೆ ರೂ. 1-0-0. ಅನಂತ್ರ ಪ್ರತಿ ಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

Registered No. B. 1270

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೨೭ ಮಾಹೆ ಜೂನ, ಸನ್ ೧೯೧೭ ನೇ ಇಸವಿ. [ಸಂಚಿಕೆ ೧೯.

ಗೃಕ್ಷಪ್ ಪ್ರಿಪ್

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಚ್ಛ, ಮೂತ್ರಕೋಶ, ಅನ್ನಕೋಶ, ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ ಶೀಸೆ 1 ಕ್ಕೆ 0-6-0. ವಿ. ಪಿ. ಬೇರೆ.
ಡಜನ್ ಶೀಸೆಗಳಿಗೆ ರೂ 4-0-0. ವಿ. ಪಿ. ಸಹಿತ.
ವಿಳಾಸ.- ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ,
ಮಂಗಳೂರು.

ಟಿ. ಜಿ. ಮಹಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ ಸ್ನಾಯುಗಳ ಸೆಗಡಿ, ಸರಗಳ ಕ್ಷತ, ಕೆಮ್ಮು, ಜ್ವರ, ಕೊಲೆರಾ, ಬೀಗು, ಬಾಣಂತೀರೋಗ, ಪ್ಲೇಗ, ಹೊಟ್ಟೆಕಡಿತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ. ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದೆ. ಬಾಟ್ಲಿ ಕಿ. ೧|| ರೂ. ಟಪಾಲ ಹಾಸಲು ೪ ಆಣೆ ಬೇರೆ. ಒಂದೇಸರತೀ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ. ಕಮಿಶನ್ ಹೊರತು ಅಂಚೇವೆಚ್ಚ ಬೇರೆ.

ಪದ್ರುಘ್ನ ಜಾಲೀಮಬಾಮು:— ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ಕುಳಗಳು, ಉರಿ, ಬೆಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು.

ಟಾ. ಕಿ. ೧೨ ಆಣೆ. ಅಂಚೆವೆಚ್ಚ ೩ ಬಾಟ್ಲಿ ವರೆಗೆ ೪ ಆಣೆ ಬೇರೆ. ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ. ಪತ್ತೆ:—

ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ,

ज्योतिषी.

जनार्दन दत्तात्रय साने. बुधवार नं. २३४, पुणें. ज्योतिषाचीं कामें सूक्ष्म तऱ्हेनें केलीं जातात. विशेष माहिती समक्ष अगर पत्रद्वारें.

ಬೇಕು! ಬೇಕು!!] ಕಾನಡಾವೃತ್ತ. [ಬಾತ್ಮೀದಾರರು !!!

ಪ್ರತಿ ತಾಲೂಕಿನಿಂದ ನಿಜವಾದ ಮಾಹಿತಿ ಆಗಿಂದಾಗ್ಗೆ ಪೂರೈಸುವ ಬಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು.

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಿಗಳನ್ನೂ ಸಂಪಾದಿಸಿದ

❀ ವಜ್ರಾಂಗ ಭೈರವ ❀

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿ ಹೊಂದುತ್ತದೆ. ಅವಿಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಿಕ ಮತ್ತು ಮಾನಸಿಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಮಯವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ. ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ನಾಶಿಯಾಗುವವು. ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು. ರಕ್ತ ಶ್ವೇತಶ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ. ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ಕ್ಷಯವಾಗಿ ಪೂರವಾಗಿ ರೋಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು. ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ನಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು. ಹಳೇ ರೋಗಿಗಳಿಗೆ ೪|| ರೂಪಾಯಿ ಬೆಲೆಯ ೩೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು. ಅಂಚೆವೆಚ್ಚ ಬೇರೆ ಬೀಳುವದು. ೩೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ. ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ.

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಶಿಕ್ಕಿರುವವು.

ವರ್ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ. ಬೀ. ಜವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ಪಶೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು. ಇದಲ್ಲದೆ,

ಹೊಸ ಶಿಫಾರಸು ಪತ್ರವು.

ನೆಂಮಜೇಪಟ್ಟಣದಿಂದ ನಾಗೋಬಾ ನೇಮಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರಿಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು. ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು. ಆದರೂ ಈಗ ತಿರುಗಿ ೩೦ ರೂಪಾಯಿಯ ಔಷಧೀಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ. ಪಿ. ದ್ವಾರ ಕಳುಹಿಸಿ ಉಪಕರಿಸಿರಿ. ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು.

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು. ಡಬ್ಬಿಗಳು ಸಿಗುವ ಪತ್ತೆ :—

ಮೆಸರ್ಸ ಎಲ್. ಕೆ. ಆರ್., ಶ್ರೀ ಅರ್ಹಂತ ಪ್ರಾಸಾದಿಕ ಕಂಪನಿ,
ಪ್ರೊಪ್ರೈಟರ್ಸ, ನಿಪಾಣಿ (ಬೆಳಗಾಂವ).

Notice.

The old wooden bungalow of the District Superintendent of Police at Karwar, will be sold by public auction on the 10th July 1917 at 8 A M The sale will be held in the premises of the said bungalow The intending bidders are requested t attend the sale at the time and place mentioned above The conditions of sale will be available for perusal in the undersigned's office and in the offices of the P W D Sub Divisional Officers Karwar Kumta Yellapur Sirsi and Haliyal on all days from 11 A M to 5 P M except on Sundays and holidays

N. N. Ayyangar.

Executive Engineer, Kanara

ಜಾಹೀರನಾಮೆಯು.

ಹೊನ್ನಾವರ ಮುನಿಸಿಪಾಲಿಟಿ ಕ್ಲಿ ಪದ ಕ್ಕೆ ೧೫-೦-೦ ರೂಪಾಯಿ ಪಗಾರಿನ ಆಕ್ಟ್ರಾಯ್ ಸ್ಪೆಕ್ಟರದ ಜಾಗಾ ಖಾಲಿ ಉಂಟು ಆ ಜಾಗಕ್ಕೆ ತಿ ಲೋ ಇಂಗ್ಲಿಷ ಬಿಲ್ಲಾಪ ತರುಣ ಉಮೇದವಾರ ನ್ನು ನೇಮಿಸತಕ್ಕದ್ದದೆ ಕಾರಣ ಸದರಿ ಜಾಗಾ ಅ ಪೇಕ್ಷೆಮಾಡುವ ಉಮೇದವಾರರು ಇಂಗ್ಲಿಷ ಮತ್ತು ಕನ್ನಡ ಅಕ್ಷರದ ನಮೂನೆ ವ ಸರ್ಟಿಫಿಕೇಟುಗಳ ಸ ಗ್ತ ಇಟ್ಟು ಈ ಜಾಹಿರನಾಮೆ ಪ್ರಸಿದ್ಧವಾದ ೩ ದ ತಿಂಗಳ ಒಳಗೆ ನಮ್ಮ ಕಡೆಗೆ ಲೇಖಿ ಅರ್ಜಿ ತರಾದ ತಕ್ಕದ್ದು ಅದವಾ ಸಮಕ್ಷ ಭೆಟ್ಟಿಯಾಗತಕ್ಕದ್ದು

ತಾರೀಕು ೨೦-೬-೧೯೧೭

R. R. Divekar.
Vice President
Municipality Honawar

War Loan Progress Report for the week ending 16-6-1917

KARWAR SUB DIVISION.

Taluka	Promised	Investment
Karwar	1,14,174-4	68,992-0
Haliyal	1,01,029-0	35,216 4
Supa	24,239-4	23,963-0
Yellapur	31 835-0	20,820-0
Ankola	59 992-8	8 866 0
Mundgod	27,080-0	7 324-12
Total	3 58,350-6	1 65,179-0

SIRSI SUB DIVISION.

Taluka	Promised	Investment
Sirsi	1 83 855-0	1,13,971-4
Kumta	1,47,787-4	82,642-12
Siddapur	1,07,902-0	79,247-0
Honavar	1,05,972 0	35,210 12
Bhatkal	42,371-4	18,545 12
Asst Collector & staff	2713-4	2,357-4
Total	5,90 600-12	3,31,974-12

NAMES OF GENTLEMEN WHO HAVE PROMISED Rs 5000/ AND ABOVE

1 Rao Saheb Gopal Anant Giri, Haliyal 25,000
2 Mr Channappa Adivappa Kittur, Haliyal 10,000
3 „ Mangeshrao S Mirjankar, Kumta 8 100
4 Dattatraya Yeshwant Deshpande Haliyal 8,000
5 Bhavanishankar Sadashiv Wagh Karwar 8,000
Rao Saheb P N Pandit 7,400
Mr Dhanappa Padmappa Alur, Sirsi 6 000.
8 Wamanrao Deshpande, Haliyal 6 000
9 N B Muzumdar Karwar 5,400
10 Vithal Das Shanbhag, Honawar 5 075
11 Shri Madhuleshwar Dev Banwasi, Sirsi 5,000
12 Mr Sadashiv Venkatraman Hante Kumta 5 000
13 Handas Dayal Shet Kumta 5 000
14 N N Ayyangar Karwar 5 000
1 Khan Saheb Dadabhoy Karwar 5000
16 Mr Krishnarao Deshpande Haliyal 5 000

THE KANARA NEWS

27th June 1917

" Act—act in the living present Heart within, and God o'er head

The Karnatak College.

After all the Karnatak College is an established fact For long it was a standing grievance that the Karnatak was practically neglected in point of facilities of higher education Attempts were made to get the grievance redressed and the question was hammered in the council and outside that by the leaders of the Karnatak with all vehemence Thanks to the leaders—specially to Rao Bahadurs Rodda and Rudra Gowda & the Hon Mr Belvi for the zealous & single minded efforts to the public for their ready response to the spirit-stirring appeal for funds, and last but not least to the Government for crowning those efforts with success by starting the College Fortunate is the college in having for its Principal a gentleman of the highest calibre, wide sympathies, and most genial disposition like Prof. Rawlinson. The College was opened the other day and is thus launched under the best auspices and has a great future before it We trust our Karnatak students will take the best possible advantage of the College & show to the world of what intelligent stuff they are made This day two decades hence, we shall note with pleasure that the educational status of our Karnatak is remarkably raised and our province is by no means lagging behind in the race of higher education God bless the institution !

Local Dispensary.

The Kumta Municipality must be congratulated on the unique acquisition they have made in Dr Vithalrao Khambatkone, the new Sub Assistant Surgeon in charge of the local dispensary. In less than four months Dr Khambatkone has won remarkable popularity by his courteous behaviour towards poor sufferers It is well known that his services are available at any moment unlike those of his predecessors One has only to visit the Dispensary to judge of his popularity by looking at the crowds of patients pre eminently poor We wonder where those unfortunate sufferers were so many years The Dispensary, it is well known had for many years been regularly deserted by the people who even went to the length of openly expressing that it had better been closed and and a large amount of money annualy expended on it saved They were so disposed evidently on account of inefficient and incompetent hands that were so long put in charge of it. To speak the truth

they looked upon the dispensary with indifference ever since the abolition of the post of Asstt Surgeon through the shortsighted policy of the then Municipal councillors It must however, be said to the credit of Dr Khambatkone that he has won back the confidence of the public and has retrieved the honour of the Dispensary by his remarkable success By the bye, we hear with regret that the petty stock of medicines which was in previous years considered more than sufficient is nearly run out owing to the constant rush of patients. We make a strong appeal to the Municipality that instead of being frightened by the incident they should make up their minds at once to sanction a decent grant for fresh stock & give the fullest benefit of a successful doctor hitherto denied to the public

Kanara s prominent contributions

In another place, will be seen the names of the galaxy of important contributors to the War Loan from Kanara. That forms the cream of Kanara s wealthier section, as judged from the amount of contributions Thanks to our Collector & other authorities concerned for having dragged some of these men from their obscurity and made them unstring their purses for a very noble and patriotic cause Does this not prove that full many a gem of purest ray serene the dark unfathomed caves " of Kanara bear It the good fortune of Kanara that some of these 'uncut diamonds" whose lustre & patriotism were lying dormant so long could be induced to come out in open day-light and exhibit their power of lending to end the war Certainly we are proud of these men Now that the spark of patriotism and enlightenment is kindled in them & they are aroused to a sense of public duty we think we may always count upon their substantial help & solid co operation in any movement of public utility set afoot in Kanara Our district need despair no more in the matter of the sinews of war in any propaganda of public usefulness Long live those pillars of Kanara's edifice to help the uplift of our benighted district.

RANDOM THOUGHTS

Our B A Result

First Class

Mr N V Nayak

Mr G V. Gollerkeri

Second Class

Mr Siddik Ismael Hassan Bapu

Mr Kuberkodi S N

Pass

Mr Kasbekar W R

Mr Shirali M S

Mr Gulwadi S S

Mr Koppikar N R

Mr Karnakar G. S

We are justly proud of our new bachelors of Art, two of whom come in the First class and two in the Second Kanara has given another proof testifying to the intelligence of its students Given opportunities they can very well vie with others if not excel them That out of 16 First Class B A s of this year, two—Messrs N V Nayak & Gollerkeri should be from Kanara alone is no small credit It is gratifying to see that one of these second class B A s is a backward Mahomedan (Navayat) from Bhatkal We offer our hearty congratulations to all these young men & wish them a brighter career Messrs Nayak & Karnakar matriculated from the local Gibb H School

Lieut Dabholkar honoured

It is a pleasure to note that Lieut A Y Dabholkar— the Mesopotamian hero- was honoured by the Bombay Goud Saraswat Samaj for his being awarded a Military Cross for gallantry He was one of the few Deccani Gowd Saraswat Brahmans that had obtained commission in the I M S He served His Majesty with devotion and zeal characteristic of his community whose traditional history is so very glowing in the matter of steadfast loyalty & gallant work as well as in pre-eminent learning and statesmanlike acumen In honouring him our Government has honoured itself & the community to which he belongs.

Mr Savoor, the Wrangler

Mr S R Savoor s success as a Wrangler of the Cambridge University will be hailed with unmixed joy by our country & specially by that intelligent Gowd Saraswat community to which he has the honour to belong Mr. Savoor comes form a very notable Saraswat family of Mangalore being related to Rao Bahadur S. Mangeshrao, retired Professor of the Madras Presidency College and deserves to be highly congratulated on his brilliant success It is redounding to the credit of South Canara that it could produce a wrangler of no mean distinction & prove to the world that the community is as prolific of First Class mathematicians as of eminent Judges, noted Lawyers, famous Doctors and well read Scholars We welcome him heartily

A grateful correction

A friend informs that Subhedar Buddan Khan who has earned a Khan Bahadurship for his military achievements is a native of Sadashivagad The Government Gazette made no mention of his native district hence our misunderstanding We gladly hasten to make this correction We congratulate the Khan Bahadur on the distinction he has won and thank the Government for selecting a military man in preference to a host of other aspirants

The Sea shore Road.

The road from Kasarkod to Bhatkal along the sea shore is as bad as bad could be It is practically washed away by the rains in many places & many of the culverts are in such a delapidated condition that some have already given way and some more want to follow suit— to the great inconvenience and discomfort of the travelling public and the cart traffic We have personally

visited the line and can specify and even quote numbers if necessary of culverts totally or partially broken The double gutters between miles 61 & 64 are not cleansed & repaired Will the authorities concerned enquire into the matter & set matter right for the good of the public? We hope they will

The Bench Magistracy

A vacancy in the local honorary Bench has made idle prophets astir and the powers of nomination are nearly arrogated to itself by dame rumour These prophets and their dame should know that British justice is the bulwark of British Rule and is surely not a matter to be trifled with in the manner they would foolishly expect us to believe It is natural that the Government should feel the awful weight of its responsibilities in the matter and wait so long in making the wisest choice The credentials of candidates recommended for the honor will have to be scrupulously scrutinised, their aptitude and ability to understand and administer criminal law and, above all, their moral uprightness and strength will have to be carefully looked into. This must and will determine the choice In short, it is the moral man and not the material one that should adorn the seat The higher the powers of the Bench, the harder is the task The existing constitution of the Bench requires strengthening and the new nomination must more than make up for its strength We fervently hope that the Government will see that we shall have a right man in the right place

To,

The Editor of

'THE KANARA NEWS," KUMTA.

Sir,

An appointment of a clerk on a monthly salary of Rs 8 is lately made in the Edward School, Ankola I strongly protest that the appointment is objectionable in every way

In the first place the said post is quite superfluous For, to quote only one instance among many, in the Gibb High School Kumta which is a considerably bigger institution than the Edward School and where naturally the clerical work too must be enormously heavier, no special clerk is engaged, the clerical work being done by some member of the teaching staff. Secondly the financial condition of the Edward School is very poor which is evident from the low salary which the staff draws Is it not then extremely inadvisable to thrust this unnecessary expenditure of about Rs 100 on the already starving institution? Lastly the crowning blunder about the whole affair is that the appointment is made by the Vice President of the School Committee, perhaps in anticipation of the sanction but virtually without the consent of the Committee This is indeed the last way to be adopted in such vital matters I therefore earnestly hope that now at least the other members of the School Committee will open their eyes and mend the matter at once.

ANKOLA } A well wisher
1-6-17 } of the School

A public prayer was held in all the Temples at Honavar on the 14th June 1917 at 5 p m

'May Ye Gods whom I gladly ... paid
Now render help with all your Heavenly aid
Her Arms what Gods Ye gave
Her noble cause for Nations danger save
War God help Her and the moon on high
And all the Heavenly bodies be ever nigh
Ye shall guard Her when Your praise we sing
And help Her cause and Her Allies in everything
Make all Her wars now happy may success
With golden fruit Her hope and labour bless'

[by S R K]

ಮುದ್ರಾಸ ಸರಕಾರದ ಹುಕುಮು.

ಬಿಝೆಂಟಬಾಯಿಯುರ ಬಂದಿವಾಸ

ಅರುಂಡೇಲ ಮತ್ತು ವಾಡಿಯಾ ಸಹಿತ

ಡಿಫೆನ್ಸ ಆಫ್ ಇಂಡಿಯಾ ಕಾನೂನಿನ್ವಯ, ಮ ದ್ರಾಸ ಸರಕಾರವು ಮಿಸೆಸ್ ಬಿಝೆ ೧೬ ಮೆ॥ ಅರುಂ ಡೇಲ ಮತ್ತು ಬಿ ಪಿ ವಾಡಿಯಾ ಈ ಮೂವರಿಗೆ ಆಜ್ಞಾಪಿಸಿದ್ದೇನಂದರೆ ನೀವು ನಿಮ್ಮ ವರ್ತನದಿಂದ ಸಾರ್ವಜನಿಕ ಶಾಂತತೆಗೆ ಅಪಾಂ ... ತುವಂತೆ ಕಂಡುಬಂದದರಿಂದ ಮತ್ತು ಸಬಲ ಕಾರಣ ಗಳ ಮೇಲಿಂದ ಇನ್ನು ಮುಂದೆ ಸಹ ಅದರಂತೆಯೇ ವರ್ತಿಸುವದು ತೋರಿದ್ದರಿಂದ ಈ ಹುಕುಮಿನ ಮೂ ಲಕ ನಿಮಗೆ ತಿಳಿಸಲ್ಪಡುತ್ತದಲ್ಲಾ,— ಈ ಹುಕು ಮು ಮುಟ್ಟಿದಂದಿನಿಂದ ನೀವು ಯಾವದೇ ರೀತಿಯಿಂ ದ ಲೇಖನ, ಭಾಷಣ, ವ್ಯಾಖ್ಯಾನ ಮುಂತಾದ ವ್ಯವ ಸಾಯಗಳನ್ನು ನಡಿಸಕೂಡದು. ೧೪ ದಿವಸದ ಅವಧಿ ಯೊಳಗೆ ಮದರಾಸು ಮತ್ತು ಚಿಂಗಲಪಟ ತಾಲೂಕು ಗಳನ್ನು ಬಿಟ್ಟು ಸರಕಾರವು ತೋರಿಸಿಕೊಟ್ಟ ೭ ಜಿಲ್ಲೆ ಗಳಪೈಕಿ ಯಾವದೇ ೧ ಜಿಲ್ಲೆಯಲ್ಲಿ ವಾಸ್ತವ್ಯಮಾಡ ಬೇಕು ಸರಕಾರಿ ಸೆನ್ಸರರು ಮಾನ್ಯಮಾಡದಂಥ ಯಾವದೇ ಪತ್ರವ್ಯವಹಾರವನ್ನು ನಡಿಸಕೂಡದು

ಈ ವಿಷಯದ ಲೋಕಮತ.

ಮಿಸೆಸ ಬಿಝೆಂಟರು ಥಿಯೊಸಫಿಕ ಸೊಸಾಯಿಟಿಯ ಅಧ್ಯಕ್ಷರು, ಸ್ವರಾಜ್ಯ ಸಂಘದ ಅಧ್ಯಕ್ಷರು, ಲೋಕ ನಾಯಕರಲ್ಲಿ ಅಗ್ರಸ್ಥಾನವನ್ನು ಪಡೆದವರಾದ್ದರಿಂದ ಇಡೀ ಹಿಂದುಸ್ಥಾನದಲ್ಲೆಲ್ಲ ಚಲವಲಉಂಟಾಗಿದೆ ಸ ರಕಾರದ ಈ ಕೃತ್ಯದಿಂದ ಹೋಮರೂಲ ಸಂಸ್ಥೆಗಳಿಗೆ ಚಾಲನೆ ಕೊಟ್ಟಂತೆ ಆಗಿ ಪ್ರಮುಖ ಬೆರಿಸ್ಟರರೂ, ಕೌನ್ಸಿಲದ ಮೆಂಬರರೂ ಮತ್ತು ಕೆಲವು ಮುಖಂಡ ರೂ ತಡಮಾಡದೆ ಹೋಮರೂಲಿನ ಸಭಾಸದರಾಗಿ ಸರಕಾರದ ಹುಕುಮನ್ನು ನಿಷೇಧಿಸಹತ್ತಿದವರು ಸ್ವರಾ ಜ್ಯದ ಚಳವಳಿಗೆ ಇದರಿಂದ ಅನಪೇಕ್ಷಿತ ಚಾಲನೆಯೇ ಸಿಗುವದೆಂತ ಹೇಳಲು ಅಡ್ಡಿ ಇಲ್ಲ ಈ ವಿಷಯ ತಮ್ಮ ನಿಷೇಧಕ ಮತವನ್ನು ವ್ಯಕ್ತ ಪಡಿಸುವಾಗ ವರಿಷ್ಠ ಕೌನ್ಸಿಲಿನ ಮೆಂಬರರೂ, ಸರ್ವಂಟಆಫ್ ಇಂಡಿಯಾ ಸಂಸ್ಥೆಯ ಅಧ್ಯಕ್ಷರೂ ಗೋಖಲೆಯವರ ಪಟ್ಟ ಶಿಷ್ಯ ರೂ ಆದ ನಾವದಾರ ಶ್ರೀನಿವಾಸ ಶಾಸ್ತ್ರಿಗಳು ಹೇ ಳುವದೇನಂದರೆ—

" ಮಿಸೆಸ ಬಿಝೆಂಟರೂ ಅವರ ಇಬ್ಬರು ಸಹಕಾರಿ ಮಿತ್ರರೂ ನಡಿಸಿದ ರಾಜಕೀಯ ಚಳವಳಿಯು ಶಾಂ ತತೆಯ ಮತ್ತು ಸನದಶೀರ ದಾರಿಯಿಂದಲೇ ನಡೆದಿ ತ್ತು ಅವರ ಉಪ್ಯಾಹತ ಕಾರ್ಯಕ್ರಮದಿಂದ, ಮ ದ್ರಾಸ ಇಲಾಖೆಯೊಳಗಿನ ಸ್ಥಿರವಾದ ಶಾಂತತೆಯು ಹ್ಯಾಗೆ ಮುರಿಯುತ್ತಿತ್ತು? ... ನಡಿಸಲಿಕ್ಕೆ ಸರಕಾ ರಕ್ಕೆ ಏನು ತೊಂದರೆಯಾಗುತ್ತಿತ್ತು? ಏನೇನೂ ಉ ಹಿಸುವದು ಶಕ್ಯವಲ್ಲ ಸರಕಾರದ ಅಪ್ರೀತಿಯನ್ನು ಹುಟ್ಟಿಸುವಂಥ ಆಕ್ಷೇಪಕರ ಸಾಧನಗಳಿಂದ ಅವರು ತಮ್ಮ ರಾಜಕೀಯ ಚಳವಳಿಯನ್ನು ನಡಿಸುತ್ತಿದ್ದರೆಂ ಬ ಕೇವು ಒಂದಲ್ಲಿ ಅಂದ ಆರೋಪಗಳನ್ನು ಪುರಾ ವೆಯಿಂದ ಸಿದ್ಧಪಡಿಸಿ ನ್ಯಾಯ ಕೋರ್ಟುಗಳಿಂದ ಆ ರೋಪಿಯರಿಗೆ ಆತ್ಮಸಮರ್ಥನೆಯ ಅವಕಾಶವನ್ನು ಕೊಟ್ಟು ತೀರ್ಪುಹೊಂದಲಿಕ್ಕೆ ಆತಂಕವೇನಿತ್ತು? ಶಕ್ತಿ ವಂತ ಸರಕಾರವು ಸಾರ್ವಜನಿಕ ಶಾಂತತೆಯನ್ನು ಕಾಪಾಡಲಿಕ್ಕಂತ ಇಂಥ ಅಧಿಕಾರಿಗಳನ್ನು ಹಿಡಿ ಯುವ ಮೋಹಕ್ಕೆ ಒಳಗಾಗದಾದರು ಕಾಯಿದೆಯ ರಾಜಮಾರ್ಗವನ್ನೇ ಸ್ವೀಕರಿಸಬೇಕು ... ಸರ ಕಾರದ ಈ ನಿರ್ಬಂಧದ ಹುಕುಮನ್ನು ತೀವ್ರ ... ದ ನಾನು ನಿಷೇಧಿಸುತ್ತೇನೆ ... ಬಿಝೆಂಟರಂಥ ದಕ್ಷ ಚಾಲಕರಿಲ್ಲದೆ, ಹಿಂದೂ ದೇಶ ... ಬಿಟ್ಟ ಧೈರ್ಯ ಶಾಲಿ ದುರಂದರನ್ನು ಕಳಕೊಂಡಂತಾಗಿದೆ ಇದರಿಂದ ಆದ ಹಾನಿಯು ಅಷ್ಟಿಷ್ಟಲ್ಲ ಲೋಕ ಪಕ್ಷಕ್ಕೆ ಕಟ್ಟಿ ... ಹೋದಷ್ಟು ... ರೂ ರಾಜಕೀಯ ... ಸಾಮ್ರಾಜ್ಯ

ದೊಳಗಿನ ಸಮಾನತೆಯ ಪದವನ್ನು ಪಾಹತುಗಳಂತೆ ಹಕ್ಕಿನಿಂದ ಪಡಕೊಳ್ಳುವ ಮಹತ್ಕಾರ್ಯವನ್ನು ಮುಂದೆ ಸಾಗಿಸಲೇ ಬೇಕು" (V S Shastri.

ಈ ವಿಷಯದ ತಮ್ಮ ನಿಷೇಧವನ್ನು ಪ್ರಕಟಿಸುವಾಗ ಎಸ್. ಆರ್. ಬೊಮ್ಮನಜಿರೆಂಬ ಹೋಮರೂಲ ಸಭಾಸದರು, ನಾಮದಾರ ಮಿ॥ ಎಮ್. ಎ. ಜಿನ್ನಾರವರಿಗೆ ಪತ್ರವನ್ನು ಬರೆದು, ಹೋಮರೂಲ ಲೀಗದ ಕಾರ್ಯವನ್ನು ನಡಿಸುವರೆ ೧ ಲಕ್ಷ ರೂಪಾಯಿ ಕೊಡಮಾಡಿ, ನಾಮದಾರ ಜಿನ್ನಾರವರಿಗೆ ಲೀಗದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರೆ ಬೇಡಿಕೊಂಡಿರುವರು ಮಿ॥ ಜಹಾಂಗೀರ ಪೆಟಿಟರವರು ಸಹ ಕ್ರೊನಿಕಲ ಪತ್ರಕ್ಕೆ ಬರೆದು ತೀವ್ರಶಬ್ದಗಳಿಂದ ತಮ್ಮ ನಿಷೇಧವನ್ನು ತಿಳಿಸಿರುವರು ನಾಮದಾರ ಮದನಮೋಹನ ಮಾಲವೀಯರು ಅಲಾಹಾಬಾದಿನಿಂದ ಕ್ಷಣ ಸಹ ತಡೆಯದೆ ಸಿಮಲೆಗೆ ಹೋಗಿ ಸ್ವತಃ ವ್ಹಾಯಿಸರಾಯ ದೊರೆಗಳಿಗೆ ಲೋಕಮತದ ಕ್ಷುಬ್ಧತೆಯನ್ನು ತಿಳಿಸುತ್ತಿರುವರು ಮುಂಬಯಿ-ಪುಣೆಯಿಂದ ಶ್ರೀ. ಪಂಢರಿನಾಥ ತೇಲಂಗ, ಶ್ರೀ. ಕೇಳಕರರವರು ಮದ್ರಾಸಿಗೆ ಹೋಗಿ ಬಿಝೆಂಟಳ ಹತ್ತರ ಸಮಕ್ಷ ಮಾತನಾಡಿ, ನ್ಯೂಇಂಡಿಯಾ ಪತ್ರದ ಸಂಪಾದಕತ್ವವನ್ನು ಶ್ರೀಯುತ ತೇಲಂಗರವರಿಗೆ ಕೊಡುವದು ನಿಶ್ಚೈಸಲ್ಪಟ್ಟಿತು. ಅದರಂತೆ ೨೦೦೦ ರೂಪಾಯಿಯ ಜಾಮೀನಿಕೆ ಕೊಟ್ಟು ೨ ದಿವಸ ಪ್ರಸಿದ್ಧವಾಗದಿದ್ದ "ನ್ಯೂ ಇಂಡಿಯಾ" ಪತ್ರವು ಪುನಃ ಚಾಲುಮಾಡಲಾಯಿತು.

ಕಾನಡಾವೃತ್ತ.

ಬುಧವಾರ ತಾರೀಕು ೨೭ ಮಾಹೆ ಜೂನ ೧೯೧೭.

ಕರ್ನಾಟಕ ಸಾಹಿತ್ಯ ಪರಿಷತ್ತು.

ಈಗಿನ ಕಾಲವೆಂದರೆ ನಮ್ಮ ದೇಶವು ಉನ್ನತಾವಸ್ಥೆಯನ್ನು ಹ್ಯಾಗೆ ಪಡೆಯುವದೆಂದು ನಮ್ಮಲ್ಲಿ ವಾಗ್ವಾದಗಳನ್ನು ನಡಿಸಿ ವಿಚಾರದಿಂದ ನಿರ್ಣಯಿಸಲ್ಪಟ್ಟಂತೆ ನಮ್ಮ ದೇಶಬಾಂಧವರೆಲ್ಲ ಉದ್ಯೋಗದಲ್ಲಿ ತೊಡಗೋಣವು. ಇದರಲ್ಲಿ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳು ಸಮಾವೇಶವಾಗುವವೆಂದು ಬೇರೆ ಹೇಳುವ ಕಾರಣವಿಲ್ಲ. ಈ ಎಲ್ಲ ಸುಧಾರಣೆಗಳಿಗೆ ಅಂಗಭೂತವಾದ ದೇಶಭಾಷೆಯ ಏಳಿಗೆಯ ವಿಷಯವಾದರೂ ನಮ್ಮ ಭಾಷಾಭಿಮಾನಿಗಳಿಂದ ಚರ್ಚಿಸಲ್ಪಡುವ ಸಂಗತಿಯು ಬಂಗಾಲೀ ಸಾಹಿತ್ಯ ಪರಿಷತ್ತು, ಗುಜರಾಥೀ ಸಾಹಿತ್ಯ ಸಭೆ ಮತ್ತು ಮರಾಠೀ ಸಾಹಿತ್ಯ ಸಮ್ಮೇಲನ ಇವೆಲ್ಲವುಗಳಿಂದ ವ್ಯಕ್ತವಾಗುವದು ಇದರಂತೆ ಮೈಸೂರ ಪ್ರಾಂತದಲ್ಲಿ ಕಳೆದ ೮ನೇ ತಾರೀಖಿನ ದಿವಸ ಕನ್ನಡ ಸಾಹಿತ್ಯ ಸಭೆಯು ಶ್ರೀಮತ್ ಯುವರಾಜ ಕಂಠೀರವನರಸರಾಜ ಬಾಹದ್ದೂರರವರ ಅಧ್ಯಕ್ಷತೆಯ ಕೈಕೆಳಗೆ ನೆರೆದಿತ್ತು ಇದೇ ನಮ್ಮ ಪ್ರಸ್ತುತ ವಿಷಯವಾಗಿರುವದು.

ಈ ಸಭೆಯಲ್ಲಿ ಕನ್ನಡ ಭಾಷಾಭಿಮಾನಿಗಳಾದ ಮೈಸೂರ ಯುನಿವ್ಹರ್ಸಿಟಿಯ ರಾ। ಉಪಾಧ್ಯಕ್ಷ ನಂಜುಂಡಯ್ಯ. ಸಿ ಆಯ್. ಈ ರಾ। ಮೈಸೂರ ಸರಕಾರದ ಶಿಕ್ಷಣಾಧಿಪತಿ ಎಮ್ ಶಾಮರಾವ ಎಮ್. ಎ. ರಾ। ಕರ್ಪೂರ ಶ್ರೀನಿವಾಸರಾವ, ರಾ। ವಿ. ರಾಮರಾವ, ಧಾರವಾಡದ ರಾ। ದೇಶಪಾಂಡೆ ಎಮ್. ಎ. ಮತ್ತು ಅನೇಕ ಕನ್ನಡ ಪಂಡಿತರೂ ಸಭಾಸ್ಥಾನವನ್ನು ಅಲಂಕರಿಸಿದ್ದರು. ಅಪರಲ್ಲಿ ಅಧ್ಯಕ್ಷರು ಮಾಡಿದ ಭಾಷಣವು ಬಹಳ ಮಹತ್ವದ್ದಿತ್ತು ಅವರು ಅಂದದ್ದೇನಂದರೆ– " ಈಗಿನ ಭೌತಿಕ ಶಾಸ್ತ್ರಗಳ ಜ್ಞಾನವನ್ನು ಪ್ರಜಾಸಮಾಜಕ್ಕೆ ಉಂಟುಮಾಡಬೇಕಾದರೆ ದೇಶಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ಅವರಿಗೆ ಅಭಿರುಚಿ ಹುಟ್ಟುವಂತೆ ಮಾಡುವದೇ ಸುಲಭೋಪಾಯವು ಯಾರೇ ಆಗಲಿ ಒಂದೇ ಜನಾಂಗದವರೆಂದೆನ್ನಿಸಿಕೊಳ್ಳಬೇಕಾದರೆ ಅವರ ದೇಶಭಾಷೆಯೇ ಅವರ ಮುಖ್ಯ ಕಾರಣವಾಗಿಯೂ ಚಿನ್ಹೆಯಾಗಿಯೂ ಇರುವದು" ಮುಂತಾದ ಅವರ ಅನೇಕ ವಿಚಾರಗಳು ಎಲ್ಲ ದೇಶಸುಧಾರಕರಿಗೆ ಮಾನ್ಯವಾಗದಿರವು ಮತ್ತು ಪರಿಷತ್ತಿನ ಮುಂದೆ ವ್ಯವಹಾರಿಕ ಕಾರ್ಯಕ್ರಮವನ್ನು ಇಡುವ ಬಗ್ಗೆ ಅವರು ಹೇಳಿದ್ದೇನಂದರೆ " ಸುಲಭವಾದ ಹೊಸ ಕನ್ನಡದ ಏಳಿಗೆಗೆ ಉತ್ತೇಜಕವಾಗುವಂತೆ ಹಳೆ ಗನ್ನಡದ ರೂಪಗಳನ್ನು ಎಷ್ಟರಮಟ್ಟಿಗೆ ಪುನಃ ಉಪಯೋಗಕ್ಕೆ ತರಬಹುದು, ಕನ್ನಡ ಭಾಷೆಯು ಪ್ರಚಾರದಲ್ಲಿರುವ ಬೇರೆ ಬೇರೆ ಪ್ರಾಂತಗಳಲ್ಲಿ ವಾಡಿಕೆಯಾಗಿರುವ ಮಾತುಗಳನ್ನು ಹೊಂದಿಕೆ ಮಾಡಿ ಏಕ ರೀತಿ ಯಾಗುವ ದಕ್ಕೋಸ್ಕರ ಏನು ಮಾಡಬೇಕು? ಗ್ರಂಥಗಳನ್ನು ಹ್ಯಾಗೆ ಅಭಿವೃದ್ಧಿಪಡಿಸಬಹುದು ನವೀನ ಅಭಿಪ್ರಾಯಗಳನ್ನು ತಿಳಿಯಪಡಿಸುವದಕ್ಕೆ ಈಗ ತಕ್ಕ ಪುಸ್ತಕಗಳಿಲ್ಲದೆ ಇರುವ ಕೊರತೆಯನ್ನು ಹ್ಯಾಗೆ ಹೋಗಲಾಡಿಸಬಹುದು? ಗ್ರಂಥಗಳನ್ನು ಓದುವವರಲ್ಲಿಯೂ ಬರೆಯುವವರಲ್ಲಿಯೂ ಜನರಲ್ಲಿ ಆಸಕ್ತಿಯನ್ನು ಹುಟ್ಟಿಸಿ ಅವನ್ನು ಹ್ಯಾಗೆ ಬೆಳಿಸಬಹುದು, ಗ್ರಂಥ ಪ್ರಸಾರವನ್ನು ಹ್ಯಾಗೆ ಮಾಡಬಹುದು? ಇವೇ ಮೊದಲಾದ ವಿಷಯಗಳಿಗೆ ಪರಿಷತ್ತಿನ ಚಾಲಕರು ವಿಶೇಷ ಗಮನ ಕೊಡತಕ್ಕದ್ದು" ಎಂತ ಅಧ್ಯಕ್ಷರು ಸೂಚಿಸಿರುವರು ಸಭೆಯ ಕಾರ್ಯವು ಇದೇ ವರುಷ ಉತ್ಸಾಹದಿಂದ ನಡೆಯಲು ದ್ರವ್ಯದ ಸಹಾಯವು ಬೇಕಾಗಿರುವದಲ್ಲದೆ ಸಾಹಿತ್ಯ ಸೇವಕರೂ ಬೇಕು ಸದ್ಯಕ್ಕೆ ಕನ್ನಡ ಭಾಷೆಯ ಅಭಿವೃದ್ಧಿಯು ಬೇಕಾದಷ್ಟು ಆಗಲಿಲ್ಲೆಂದು ಅಧೈರ್ಯ ಪಡದೆ ಬಂಗಾಲೀ, ಮರಾಠೀ ಭಾಷೆಗಳ ಸೇವಕರಂತೆ ಶ್ರದ್ಧೆಯಿಂದ ದುಡಿದರೆ ನಿಮ್ಮ ಉದ್ದೇಶವು ಸಿದ್ಧಿಸುವದರಲ್ಲಿ ಯಾವ ಸಂದೇಹವೂ ಇಲ್ಲವೆಂದು ತಮ್ಮ ವಿಚಾರ ಪರಿಪ್ಲುತ ಭಾಷಣವನ್ನು ಮುಗಿಸಿ ಯುವರಾಜರು ಸ್ಥಾನಾಪನ್ನರಾದರು. ಅನಂತರ ಮ। ರಾ। ಎಚ್ ನಂಜುಂಡಯ್ಯನವರ ಕೈಕೆಳಗೆ ಎರಡು ದಿವಸ ಮಹತ್ವಾದ ವಿಷಯಗಳ ಚರ್ಚೆ ನಡೆದು ಪರಿಷತ್ತಿನ ಕೆಲಸವು ಸಮಾಪ್ತವಾಯಿತು. ಮುಂದಿನಸಾರೆ ಸಮ್ಮೇಲನವು ಧಾರವಾಡದಲ್ಲಿ ಕೂಡುವದು ನಿಶ್ಚಯವಾದದ್ದನ್ನು ಕೇಳಿ ನಮ್ಮೆಲ್ಲರಿಗೆ ಅತ್ಯಾನಂದವಾಗದೆ ಇರದು. ಎಲ್ಲ ದೇಶದ ಸಾಹಿತ್ಯ ಭಕ್ತರಂತೆ ನಮ್ಮ ಕನ್ನಡ ಸಾಹಿತ್ಯ ಸೇವಕರಿಂದ ಸಹ ಕನ್ನಡ ಮಾತಿಯ ಸೇವೆಯು ಹೆಚ್ಚೆಚ್ಚು ಉತ್ಸಾಹದಿಂದ ಸಾಗಲಿ ಮತ್ತು ವಿದ್ಯಾಪ್ರಸಾರವು ಇನ್ನೂ ಹೆಚ್ಚು ಭರದಿಂದ ಸಾಗಲಿ ಎಂತ ನಾವು ಅನನ್ಯ ಭಾವದಿಂದ ಪ್ರಾರ್ಥಿಸುವೆವು

ಸ್ಫುಟ ಸೂಚನೆಗಳು.

೧. ೧೯೦೪ನೇ ಇಸವಿಯಲ್ಲಿ, ವಿದ್ಯಾರ್ಥಿಗಳಿಗೆ ಇರುವ ರಾಜಕೀಯ ವಿಷಯದ ಅತ್ಯಲ್ಪ ಸಂಬಂಧವನ್ನು ಭೇದಿಸುವರೆ ಮುಂಬಯಿ ಸರಕಾರವು ಪ್ರಾಥಮಿಕ ವಿದ್ಯಾರ್ಥಿಗಳಿಗೊಂದು ಉಚ್ಚಶಿಕ್ಷಣದವರಿಗೊಂದು ಹೀಗೆ ೨ ಸರ್ಕ್ಯುಲರಗಳನ್ನು ಜಾಹೀರಪಡಿಸಿತ್ತು ಈಗ ಪುನಃ ಅವುಗಳ ಪುನರಾವೃತ್ತಿಯನ್ನು ಪ್ರಕಟಿಸುವದು ಸರಕಾರಕ್ಕೆ ಯುಕ್ತವೆಂತ ಕಂಡುಬಂದದರಿಂದ ಪ್ರಸ್ತಾವನೆಯ ಸಹಿತ ಅವನ್ನೇ ಪುನಃ ಪ್ರಕಾಶಿಸಿದ್ದಾರೆ. ಪ್ರಥಮಾವೃತ್ತಿಯು ಹಳೇದಾದಮೇಲೆ ಮಾಡಬೇಕಾಗುವ ತಿದ್ದುಪಾಟೆಗಳೆಲ್ಲ ದ್ವಿತೀಯಾವೃತ್ತಿಯಲ್ಲಿ ನೋಡುವಂತೆ ಈ ಸರ್ಕ್ಯುಲರಗಳ ಹೊಸ ಪ್ರಸ್ತಾವನೆಯು ತಿದ್ದುಪಡಿಸಿದೆ ಕೆಲವರ ದೃಷ್ಟಿಯಿಂದ ಹೊಸ-ಹಳೆ ಆವೃತ್ತಿಗಳಲ್ಲಿ ಕಂಡುಬರುವ ಭೇದವು, ೯ ವರ್ಷಗಳಲ್ಲಿ ಆದ ರಾಜಕೀಯ ವಾತಾವರಣದ ಸ್ಥಿತ್ಯಂತರವನ್ನು ಕಾಣಿಸುತ್ತದೆ. ಔಪಮ್ಯದಿಂದ ಹೇಳಬೇಕಾದರೆ, ಮುಂಚಿನ ರಾಜಕೀಯ ಚಳವಳಿಗೆ, ಮರಾಠಿ ಭಾಷೆಯಲ್ಲಿ ಹೇಳುವಂತೆ ಮೆತ್ತನ್ನ ಶಿವಿಗಳು ಮಾತ್ರ ಬಂದಿದ್ದವು. ಆದರೆ ಈಗ ಅದಕ್ಕೆ ಹೋಮರೂಲಿನ ಮೊನೆಯ ಸಣ್ಣ ಸಣ್ಣ ಕೋಡುಗಳು ಬರಹತ್ತಿವೆ. ಕರುವಿದದ್ದು ಆಕಳಾಗಹತ್ತಿದಮೇಲೆ ಅದಕ್ಕೆ ಕೋಡುಗಳು ಬಾರದಿರುವದು ತೀರ ಅಪರೂಪವು ಇಂಗ್ರೇಜಿ ಶಿಕ್ಷಣದ ಸ್ವಾತಂತ್ರ್ಯ ವಿಚಾರಗಳ ಮೇವು ತಿಂದ ಗೋವು ಇಂಥ ಕೋಡಿಲ್ಲದೆಂದೂ ಇರದು; ಅದು ನೈಸರ್ಗಿಕ ಧರ್ಮವೇ ಸಣ್ಣ ದೊಡ್ಡ ಹುಡುಗರನ್ನು ಮಾತ್ರ ಇಂಥ ಚಳವಳಿಯ ಗೋವುಗಳಿಂದ ದೂರ ಇಡಬೇಕೆಂತ ವಿದ್ಯಾರ್ಥಿಗಳ ಹಿತಕ್ಕಾಗಿ ಪಾಲಕರಿಗೆ ಹೇಳಿದರೂ, ಬ್ರಿಟಿಶ ಪಾರ್ಲಮೆಂಟಿನ ಸೂಲಗಿತ್ತಿಯಿಂದ ಯುದ್ಧದ ನಂತರ ಸ್ವರಾಜ್ಯವು ಜನಿಸಲ್ಪಟ್ಟರೆ ಈ ಗೋವಿನ ಸ್ವಾತಂತ್ರ್ಯದ ಹಾಲನ್ನು ಯಾರೂ ಕುಡಿಯಬಾರದೆಂತ ಯಾರಿಂದಲೂ ವಿದ್ಯಾರ್ಥಿಗಳಿಗಾಗಲಿ ಪಾಲಕರಿಗಾಗಲಿ ಹೇಳಲಾಗದು. ಸದ್ಯಕ್ಕೆ ಮಾತ್ರ ಕಾಯಿದೆಯಂತೆ ನಡಿಯುವ ಶಿಕ್ಷಣಸಂಸ್ಥೆಗಳು ಮತ್ತು ಪಾಲಕರು ಈ ಕಟ್ಟಳೆಗಳನ್ನು ಪ್ರಜಾಧರ್ಮದಂತೆ ಪಾಲಿಸತಕ್ಕದ್ದು.

೨. " ಸತ್ಯಮೇವಜಯತೆ" ಎಂಬ ಗಾದೆಯನ್ನು ನಾವು ಬಹಳ ಸಾರೆ ಕೇಳುತ್ತೇವೆ. ಆದರೆ ವ್ಯವಹಾರದಲ್ಲಿ ಅದರ ಅನುಭವವು ದೊರಕಿದಾಗ ನಮಗಾಗುವ ಆನಂದವು ಪರಮಾನಂದಕ್ಕೆ ಹೋಲುತ್ತದೆ. ಮಹಾತ್ಮಾಗಾಂಧಿಯವರು ಬಿಹಾರದೊಳಗಿನ ಚಂಪರಣಪರಗಣಿಗೆ ಹೋಗಿ ಅಲ್ಲಿ ನೀಲಿ ತೋಟದೊಳಗೆ ದುಡಿಯುವ ಕೂಲಿಕಾರರ ದುರ್ಧರ ಸ್ಥಿತಿಯನ್ನು ಸ್ವತಃ ಅವಲೋಕಿಸಿ ಅದರ ಸತ್ಯತ್ವವನ್ನು ಪ್ರಕಾಶಿಸುತ್ತಾರೋ ಏನೋ ಎಂತ ತೋಟಿಗಳ ವಿಲಾಯತೀ ಒಡೆಯರು ಮತ್ತು ಅವರ ಬೆಂಬಲದ ಕೆಲವು ಆಂಗ್ಲೋಇಂಡಿಯನರು ಗಾಬರಿಯಾಗಿ ಅದ್ವಾ ತದ್ವಾ ಮ। ಗಾಂಧಿಯವರಿಗೆ ದೂರ ಹತ್ತಿದ್ದರು. " ಗಾಂಧಿಯವರೇ ದಂಗಲಮಾಡಿ ಅಲ್ಲಿಯ ರೈತರನ್ನು ದಂಗೆ ಎಬ್ಬಿಸುವರೆ ಕಲಿಸ್ಯಾರು" ಎಂದು ಒಬ್ಬ ಇರವಿನ್ನ ಸಾಹೇಬನು ಕಲ್ಲೋಲಮಾಡಿ ಅಲ್ಲಿಯ ವೃತ್ತಪತ್ರಗಳಲ್ಲಿ ಕೂಗಾಡುತ್ತಿದ್ದನು ಗಾಂಧಿಯವರಿಗೆ ಬೇಗನೆ ಅಲ್ಲಿಂದ ಹದ್ದುಪಾರ ಮಾಡಬೇಕೆಂದು ಸಹ ಈ ಬಹಾದ್ದೂರನು ಸೂಚಿಸಿದ್ದನು. ಆದರೆ ಬಿಹಾರ ಸರಕಾರಕ್ಕೆ ಗಾಂಧಿ

ಯವರ ಸೂಚನೆಯೇ ಮಾನ್ಯವಾಗಿ ಸರಕಾರವು ಈ ವಿಷಯು ಪೂರಾ ಚವಕಸಿ ಮಾಡಲಿಕ್ಕೆ ಒಂದು ಕಮಿಶನು ನೇಮಿಸಿರುವದು ಕಮೀಶನದ ಪಂಚರಲ್ಲಿ ಮ। ಗಾಂಧಿಯವರಿಗೂ ಸ್ಥಲದೊರೆದದೆ ಕಮಿಶನದ ಘಟನೆಯು ಹ್ಯಾಗೂ ಇರಲಿ, ಇದೊಂದು ದೊಡ್ಡ ಸತ್ಯವಿಜಯವು ಇದರ ಸಲುವಾಗಿ ದೀನೋದ್ಧಾರಕ ಗಾಂಧಿಯವರ ಸುದೈವವನ್ನು ಅಭಿನಂದಿಸುವಷ್ಟೇ ಕೃತಪೂರ್ವಕವಾಗಿ ಬಿಹಾರ ಸರಕಾರದ ಪ್ರಜಾವತ್ಸಲತೆಯನ್ನು ಸಹ ನಾವು ಹೊಗಳುತ್ತೇವೆ ಇನ್ನು ಮುಂದ ನೀಲಿ ಕೋಟೆಗಳಲ್ಲಿ ನಡಿಯುತ್ತವೆಂದು ಹೇಳುವ ಹುಳುಕು ಆಟಗಳೆಲ್ಲ ಹೊರಬೀಳುವವು

೩ ಕಟ್ಟಿಗೆಯು ಡೀಪೋಗಳನ್ನು ಸ್ಥಾಪಿಸುವ ಪೂರ್ವದಲ್ಲಿ ಜನರು ತಲೆಹೊರೆಗಳಿಂದ ಜಲಾವ ಕಟ್ಟಿಗೆಯನ್ನು ಪೂರೈಸಿಕೊಳ್ಳುತ್ತಿದ್ದರು ಆದರೆ ತಲೆಹೊರೆಗಳ ವ್ಯಾಪಾರದಿಂದ ಸರಕಾರಿ ಜಂಗಲವು ಕೆಟ್ಟುಹೋಗುತ್ತದೆ ಜನರಿಗೂ ಬೇಕಷ್ಟು ಕಟ್ಟಿಗೆ ಸಿಕ್ಕುವದಿಲ್ಲೆಂದು ಹೇಳಿ ಜಂಗಲಗಳ ಹಿತಕ್ಕೆ ಮತ್ತು ಜನರ ಅನುಕೂಲತೆಗೆಂತ ಅಲ್ಲಲ್ಲ ಡೀಪೋಗಳು ಸ್ಥಾಪಿಸಲ್ಪಟ್ಟವೆ ಇಂಥ ಡೀಪೋಗಳಲ್ಲಿ ಕಟ್ಟಿಗೆಯು ದರ್ಜೇನೂ ಇರಲಿ ಜನರ ಕಟ್ಟಿಗೆಯ ಕೊರತೆ ಪೂರೈಕೆಯನ್ನೂ ಅನುಕೂಲತೆಯನ್ನೂ ನೋಡಿರುವದು ಸರಕಾರದ ಪ್ರಧಾನ ಕರ್ತವ್ಯವು ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಜನರಿಗೆ ಎಷ್ಟು ಕಷ್ಟ ಸಹಿಸಬೇಕಾಗುತ್ತದೆಂದು ತಿಳುಕೊಳ್ಳಬೇಕಾದರೆ ಭಟ್ಕಳಕ್ಕೆ ಹೋಗಿ ನೋಡಿದರೆ ತಿಳಿಯುವದು ಅಲ್ಲಿ ಈ ವರ್ಷ ಕಟ್ಟಿಗೆ ಡಿಪೋ ಸರಕಾರವೇ ನಡಿಸುತ್ತದೆ ಪೇಟೆ ದುಕಾನು ಶಹರದಿಂದ ೪–೫ ಮೈಲು ದವಷ್ಟು ಅತ್ತಿತ್ತ ಜಂಗಲವು ದಾರಿಯಲ್ಲಿ ದೊಡ್ಡ ದೊಡ್ಡ ಏಕೆಗಳು ಇಷ್ಟೆಲ್ಲ ಸಮಾರಂಭದೊಳಗಿಂದ ಕಟ್ಟಿಗೆಯು ಮನೆಗೆ ಮುಟ್ಟಿತೆಂದರೆ ಮಾತ್ರ ಊಟದ ಮಾತು ಇಲ್ಲದಿದ್ದರೆ ಏಕಾದಶಿ ಹೀಗೆ ಯಾಕೆ ವ್ಯವಸ್ಥೆಯಾಗಿದೆಂದು ನಮಗೆ ತಿಳಿಯದು ಊರೊಳಗೆ ಹೆಸರಿಗೆ ಮಾತ್ರ ಒಂದು ಕಟ್ಟಿಗೆ ಅಂಗಡಿ ಅದೆ ಅದರೊಳಗಿನ ಕಟ್ಟಿಗೆಯು ೧೦–೪ ಮನೆಗಳಿಗೆ ೧–೨ ದಿವಸ ಸಾಕಾಗಲಿಕ್ಕಿಲ್ಲ, ಇಂಥ ಸಂದರ್ಭದಲ್ಲಿ ಶವಗಳನ್ನು ಸುಡುವಾಗ "ಸಾಯುವದಕ್ಕಿಂತ ಅಜರಾಮರವಾಗಿ ಇರುವದೇ ಲೇಸು" ಎಂಬ ಗಾದೆಯನ್ನು ಹೇಳಿ ಜನರು ವಿನೋದನೆ ಮಾಡಿಕೊಂಡರೆ ಆಶ್ಚರ್ಯವೇನು? ಈ ನಿಜ ಸ್ಥಿತಿಯನ್ನು ಮೇಲಧಿಕಾರಿಗಳಿಗೆ ತಿಳಿಸದಿರುವದೇ ಜನರ ದೊಡ್ಡ ತಪ್ಪೆಂತ ನಮಗೆ ಕಾಣುತ್ತದೆ ಇನ್ನಾದರೂ ಸರಕಾರವು ಇಂಥ ಅವ್ಯವಸ್ಥೆಯನ್ನು ಆದಷ್ಟು ಬೇಗನೇ ದೂರಪಡಿಸಬೇಕೆಂತ ನಾವು ಸೂಚಿಸುತ್ತೇವೆ.

೪ ನಮ್ಮ ಕುಮಟೆ ಶಹರದಲ್ಲಿ ಯುದ್ಧನಿಂದಿಗೆ ಹೆಂಗಸರಿಂದ ಹಣವನ್ನು ಕೂಡಿಸುವ ಕಮೀಟಿಯು ಸ್ಥಾಪಿಸಲ್ಪಟ್ಟಿತೆಂದು ಕೇಳಿ ಆನಂದವಾಗುತ್ತದೆ ಸಹಧರ್ಮಚಾರಿಣಿಗಳಿಗೆ ಆರ್ಯಧರ್ಮದಂತೆ ನಾವು ಮುಂಚಿತವಾಗಿಯೇ ಈ ಶುಭಕಾರ್ಯದಲ್ಲಿ ಪಾಲುಗಾರರಾಗಿ ಮಾಡಿಕೊಳ್ಳದಿದ್ದದ್ದು ನಮ್ಮ ಧಾರ್ಮಿಕ ಅಪರಾಧವು ಈಗಾದರೂ ಅವರ ಕ್ಷಾಲನೆಯನ್ನು ಮಾಡಿದ್ದು ನಮಗೆ ಶ್ರೇಯಸ್ಕರವೇ ಸೌಭಾಗ್ಯವತಿ ಸೀತಾಬಾಯಿ ಪೈ ಇವರ ಅಧ್ಯಕ್ಷತೆ ಕೆಳಗಿನ ಈ ಕಮಿಟಿಗೆ ಪುಣ್ಯಸ್ತ್ರೀಯರು ಕೈಲಾದಷ್ಟು ಮದ್ದತ್ತು ಇತ್ತು ಕೈಕೊಂಡ ಸತ್ಕಾರ್ಯವನ್ನು ಕೊನೆಗಾಣಿಸುವರಾಗಿ ನಾವು ನೆಚ್ಚುತ್ತೇವೆ ಮತ್ತು ಧರ್ಮನಿಷ್ಠ ಪುಣ್ಯಪತಿಗಳೆಲ್ಲ ಸ್ಮೃತಿವಾಕ್ಯದಿಂದ ನಾವು ಹೇಳುವದೇನಂದರೆ "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" ಇಂಥ ದೇವತೆಗಳ ಸಂತರ್ಪಣೆಯಿಂದ ವೈರಿಗಳ ನಾಶವು ಆಗುವದು ನಿಃಸಂದೇಹವು ಆದದರಿಂದ ಪುಣ್ಯಸ್ತ್ರೀಯರಿಗೆಲ್ಲ ದ್ರವ್ಯಾನುಕೂಲತೆಯನ್ನು ಮಾಡಿಕೊಡುವದು ಪತಿಗಳ ಧರ್ಮವೆಂತ ಹೇಳುವ ಬೇರೆ ಆವಶ್ಯಕತೆ ಇಲ್ಲ

ಯುದ್ಧವಾರ್ತೆಯು.

ಕಳೆದ ವಾರದಲ್ಲಿ ಲಂಡನದಮೇಲೆ ೧೫ ವಿಮಾನಗಳ ಅಭಿಯೋಗವಾಗಿ ಅಗ್ನಿವೃಷ್ಟಿಯಾಯಿತು ಜನರೇನೂ ಇವುಗಳಿಗೆ ಅಂಜುವದಿಲ್ಲ ಶಾಲೆಯೊಳಗಿನ ಬಡ ಬಾಲಕರಿಗೆ ಇದರಿಂದ ಸ್ವಲ್ಪ ಅನಿಷ್ಟ ಸಂಭವಿಸಿತು ಪಶ್ಚಿಮರಣರಂಗದಲ್ಲಿ ವ ಸೇನೆ ಕಾಳಗದಲ್ಲಿ ಬ್ರಿಟಿಷರು ಅದ್ಭುತ ಶೌರ್ಯವನ್ನು ಪ್ರಕಟಿಸಿದರು ಶತ್ರುಗಳು ಠಿಕಾಣದ ಮೇಲೆ ನೂರಾರು ಗುಂಡುಗಳನ್ನು ಹೊಡೆದು ಅನರ್ಥಗಳನ್ನು ಮಾಡುತ್ತಿರುವರು ಬ್ರಿಟಿಷರ ಪ್ರಗತಿಯಿಂದ ಶತ್ರುಗಳ ಕಾಳಗಗಳು ನಡಿಗೆಹತ್ತಿವೆ ರಶಿಯಾದೊಳಗಿನ ಅಂತಸ್ಥ ವ್ಯವಸ್ಥೆಯು ಇನ್ನೂ ಪೂರ್ಣ ಸುಧಾರಿಸಲಿಲ್ಲ ಸ್ವಿಝರ್ಲಂಡದ ಮಧ್ಯಾಂತರ ಒಪ್ಪಂದದ ಕಾರಸ್ಥಾನವು ಇನ್ನೂ ನಡೆದದೆ ರಶಿಯನರು ಮಾತ್ರ ಒಪ್ಪಂದದ ಮಾತನ್ನು ಆಗಿಂದಾಗ್ಗೆ ಧಿಃಕರಿಸುತ್ತಿರುವರು ಗ್ರೀಸದ ಕೋನಸಂಟೈನ ಅರಸನು ಗ್ರೀಸ ಬಿಟ್ಟು ಜರ್ಮನಿಗೆ ತೆರಳಿದನು ಅವನ ದ್ವಿತೀಯ ಚಿರಂಜೀವನಿಗೆ ಪಟ್ಟಗಟ್ಟಿರುವರು ಈಗೇನೂ ಗ್ರೀಸದೊಳಗಿನ ವಿಶ್ವಾಸಘಾತದ ಭೀತಿ ಇಲ್ಲ

ಇಹವೃತ್ತ.

ಕಾರವಾರ— ಆರ್ದ್ರಾನಕ್ಷತ್ರದ ಮಳೆ ಬೆಪರಿಸ ಹತ್ತಿತ್ತು. ಈಗ ತಿರುಗಿ ಮಳೆ ಸುರಿಯ ಹತ್ತಿದೆ ಇದುವರೆಗೆ ೪–೭೦ ಇಂಚು ಮಳೆ ಬಿತ್ತು ನೆಟ್ಟಿಯ ಕೆಲಸ ಪ್ರಾರಂಭಿಸಿದೆ

ಸ್ತ್ರೀಯರ ವಾರಲೋನ ಕಮಿಟಿಯನ್ನು ಸ್ಥಾಪಿಸುವದೆ ಕಳೆದ ಆದಿತ್ಯವಾರ ಸುಸ್ತ್ರೀಯರ ಸಭೆಗೂಡಿತ್ತು ಸ್ತ್ರೀಯರಲ್ಲಿ ಬಹಳೇ ಉತ್ಸಾಹ ಕಂಡು ಬಂತು ಸಾಲ ಕೂಡಿಸುವ ಕೆಲಸವು ನಡೆದದೆ

ಇಲ್ಲಿಯ ಗಿಬ್ಬ ಹೈಸ್ಕೂಲಿಗೆ ಮುನಿಸಿಪಾಲಿಟಿಯಿಂದ ಅನುಕೂಲತೆಯಾದರೆ ಇದೇ ವರ್ಷ ಗ್ರೇಟ ಕೊಡಬೇಕಾಗಿ ವಿಚಾರ ನಡೆದದ ಸ್ತುತ್ಯ ಮತ್ತು ಯೋಗ್ಯ ಕೆಲಸವಾಗಿದೆ

ಅಂಕೋಲಾ — ಎರಡು ದಿವಸಗಳಿಂದ ಮಳೆಯು ಕಡಿಮೆಯಾಗಿದೆ ರೋಗರಾಯಿಗಳು ವಿಶೇಷ ಹೇಳತಕ್ಕಂಥಾದ್ದೇನೂ ಇಲ್ಲ

ಕೆನರೀ ಕಂಪನಿಯವರ ಮಾವಿನ ಗಿಡ ತೆಗಿಯುವ ಕಾರಖಾನೆ ಕೆಲಸವು ಒಳ್ಳೇಭರದಿಂದ ನಡಿಯುತ್ತದೆ

ಇಲ್ಲಿಯ ಪೋಲೀಸ ಸಬ್ ಇನಸ್ಪೆಕ್ಟರ ಮಿ। ಇದ್ರೂಸ ಇವರಿಗೆ ಪೋಲೀಸ ಇನಸ್ಪೆಕ್ಟರಿ ಜಾಗೆಯ ಮೇಲೆ ಎಕ್ಟಿಂಗ ನೇಮಣೂಕಿ ಆದದರಿಂದ ಸದರಿ ಕೆಲಸದಮೇಲೆ ಹಾಜರಾಗಲಿಕ್ಕೆ ಹೊರಟುಹೋಗಿರುವರು

ಇಲ್ಲಿಯ ಎಡ್‌ವರ್ಡ ಇಂಗ್ಲಿಷ ಶಾಲೆಯಲ್ಲಿ ೪ ರೂಪಾಯಿ ಪಗಾರಿನ ಮೇಲೆ ಅನಾವಶ್ಯಕವಾಗಿ ಒಬ್ಬ ಕಾರಕೂನನನ್ನು ನೇಮಿಸಿರುವದು ಕುಮಟೆಯಲ್ಲಿ ಗಿಬ್ಬ ಹೈಸ್ಕೂಲದಂಥ ದೊಡ್ಡ ಶಿಕ್ಷಣ ಸಂಸ್ಥೆಯಲ್ಲಿ ಒಬ್ಬರೂ ಸಹ ಸ್ವತಂತ್ರ ಕಾರಕೂನರು ಇಲ್ಲದೇ ಕೆಲಸಗಳು ನಡಿಯುತ್ತಿದ್ದು, ಫಂಡದಲ್ಲಿ ಸಹ ಹಣದ ಕೊರತೆ ಇರುವ ಬಡಶಾಲೆಯಲ್ಲಿ ಕಾರಕೂನರು ಇಷ್ಟೆ ಶಿವಾಯ ಕೆಲಸಗಳು ನಡಿಯುವ ಹಾಗಿಲ್ಲವೇನು? ಸದರಿ ಶಾಲೆಯ ಫಂಡಿನೊಳಗಿಂದ ಪ್ರತಿ ವರ್ಷ ೧೦೦ ರೂಪಾಯಿಗಳು ವ್ಯರ್ಥವಾಗಿ ಹೋಗುವದು ಗೊತ್ತಿರುತ್ತಾ ಸ್ಕೂಲ ಕಮಿಟಿಯ ವೈಸ ಪ್ರೆಸಿಡೆಂಟ ಸಾಹೇಬರು ಸಮ್ಮತಿಕೊಟ್ಟದ್ದು ಆಶ್ಚರ್ಯಕರವು

ಶಿರ್ಸಿ— ವಾರಲೋನ ವಸೂಲಿ ಕೆಲಸ ಉಲ್ಲೋರಿತಿಯಿಂದ ನಡೆದದೆ ೧–೨ ದಿವಸದಿಂದ ಸ್ತ್ರೀಯರ ವಾರಲೋನ ಕೆಲಸ ಸಹ ನಡೆದಿದ್ದು ಕೆಲಕೆಲವು ದೊಡ್ಡ ಸಾವಕಾರ ವ ವಕೀಲ ಜನರು ೧೦೦ ರೂಪಾಯಿಯಂತೆ ಕೊಟ್ಟಿರುತ್ತಾರೆ

ಹಳಿಯಾಳ— ಮಳೆ ಚಲೋ ಬಿತ್ತು. ಹೊಲ ಬಿತ್ತುವ ಕೆಲಸ ನಡೆದದೆ ಬಿತ್ತೋಣವು ಈ ವರುಷ ಸ್ವಲ್ಪ ತಡವಾಗಿ ಆಯಿತು, ರೋಗಮಾನವು ಕಡಿಮೆಯಾಗಿ ಜನರು ಪುನಃ ಊರೊಳಗೆ ಬರಹತ್ತಿರುವರು ಇನಾಕ್ಯುಲೇಶನ ಮತ್ತು ಇನ್ಸೆಕ್ಷನ್ ಬೀಜದಿಂದ ಪ್ಲೇಗದ ಭೀತಿಯು ಕಡಿಮೆಯಾಯಿತು- ಎಲ್ಲ ಪ್ರಾಥಮಿಕ ಶಾಲೆಗಳ ಹುಡುಗ ಹುಡುಗಿಯರ ಆಟ ಗಾಯನ ಸಮಾರಂಭಗಳು ವಾರಲೋನಿಗೆ ಹಣಕೊಡಿಸುವದೆ ಉತ್ಸುಕತೆಯಿಂದ ಜರಗಿದವು. ಪಶುವೈದ್ಯರು ಒಂದು ಜಾನುವಾರಗಳ ತಪಾಸಣೆ ನಡೆಯಿತು ಬೇನೆಯ ದನಗಳಿಗೆ ಉಪಚಾರನಡೆದದೆ. ಜಂಗಲ ಕಂಪಾರ್ಟಮೆಂಟಗಳ ಲಿಲಾಂವು ಆಗಿ, ಸವಾಲು ೫೯,೫೦೦ ರೂಪಾಯಿ ಆಯಿತು ಕನ್ನಡ ಶಾಲೆಗೆ ನೇಮಿಸಲ್ಪಟ್ಟ ಹೊಸ ಹೆಡ್‌ಮಾಸ್ತರರು ಇತ್ತಕಡೆಗೆ ಬರುವಾಗ ದಾರಿಯಲ್ಲಿ ಬಂಡಿ ಮುರಿದು ಅಪಘಾತವಾದದರಿಂದ ಮರಣಹೊಂದಿದರೆಂತ ಕೇಳುತ್ತೇವೆ.

ಮ್ಯುನಿಸಿಪಾಲಿಟಿಯ ಜಕಾತು ದರ ಏರಿಸುವದರ ದ್ವಾರೆ ಆಕ್ಟ್ರಿಯ ಮೇಲೆ ಕರವು ಎರಬಾರದಂತೆ ಜನರು ತಿಳಿಸಬಹುದು ಕೈದಿನೊಳಗಿಂದ ಓಡಿಹೋದ ಜೋತಿಯಾ ಮತ್ತು ಇರ್ಯಾ ಇವರಿಬ್ಬರಿಗೆ ಹಿಡಿದು ತಂದು ಶಿಕ್ಷೆವಿಧಿಸಲ್ಪಟ್ಟಿತ್ತು.

ರಾ। ಬ। ಯಶವಂತರಾಯ ಜಠಾರ ಇವರ ನಿಧನ.

ಕಳೆದ ಸೋಮವಾರ ಕರ್ನಾಟಕದೊಳಗಿನ ಗುರುಶಿರೋಮಣಿಗಳಲ್ಲೊಬ್ಬರಾದ ರಾವಬಹಾದ್ದೂರ ಜಠಾರರವರು ಧಾರವಾಡದಲ್ಲಿ ಕಾಲಾಧೀನರಾದರೆಂದು ತಿಳಿಸಲಿಕ್ಕೆ ನಮಗೆ ಬಹಳ ವ್ಯಸನವಾಗುತ್ತದೆ ಸಂಪತ್ತಿದ್ದರೂ ಪ್ರತಿಕೂಲಸ್ಥಿತಿಯಲ್ಲಿಯೇ ಶಿಕ್ಷಣ ಹೊಂದಿ ಪದವಿಧರರಾದಕೂಡಲೆ ಧಾರವಾಡ ಹೈಸ್ಕೂಲಿನಲ್ಲಿ ಸಹಾಯಕ ಶಿಕ್ಷಕರಾಗಿ ವಿದ್ವತ್ತೆಯ ಬಲದಿಂದ ಅಲ್ಲಿಯೇ ಮುಖ್ಯಾಧ್ಯಾಪಕರ ಉಚ್ಚ ಪದವನ್ನು ಹೊಂದಿ ಕೆಲಕಾಲ ದಕ್ಷಿಣ ಭಾಗದ ಇನಸ್ಪೆಕ್ಟರೀ ಸ್ಥಾನವು ಸಹ ಅವರಿಗೆ ದೊರಕಿತ್ತು ಇವರಲ್ಲಿ ಪಾಂಡಿತ್ಯ, ಸಾಧುತ್ವ, ವಿನಯಶೀಲತೆ ಮುಂತಾದ ಗುಣಗಳು ಅಸಾಮಾನ್ಯವಾಗಿದ್ದವು ಅಧ್ಯಾಪಕರಲ್ಲಿ ಅವರಷ್ಟು ಖ್ಯಾತಿ ಹೊಂದಿದವರು ತೀರ ಅಪರೂಪ ಲಕ್ಷ್ಮೀ ಸರಸ್ವತೀಗಳ ಅಪೂರ್ವ ಸಂಯೋಗವು ಅವರಲ್ಲಾಗಿತ್ತು ಅವರ ನಾಲ್ವರು ತನುಜರು ತಂದೆಯಂತೆ ಶಾರದಾಭಕ್ತರೇ ಒಬ್ಬರ ಕರ್ನಾಟಕ ಕಾಲೇಜಿನ ಪ್ರೊಫೆಸರರಾಗಿದ್ದಾರೆ ಇದರಿಂದ ಅವರು ನಿಜವಾಗಿ ಯಶವಂತರು ನಾಮಮಾತ್ರದಿಂದಲೇ ಅಲ್ಲ ಅವರ ಪುಣ್ಯಾತ್ಮಗೆ ಮೋಕ್ಷ ದೊರೆಯಲಿ ಎಂದು ಪ್ರಾರ್ಥಿಸುತ್ತೇವೆ

Printed & Publishec by Krishnarao Keshav Shenvi at his Star of Kanara Press, Kumta.

THE
KANARA NEWS.
ಕಾನಡಾ ವೃತ್ತ.

ಪತ್ರದ ವರ್ಗಣಿ –
ಕುಮಟೆಯಲ್ಲಿ ಅಗಾವು ರೂಪಾಯಿ 1–0–0.
ಅಂಚೆವೆಚ್ಚ ಶೇರಿ ರೂಪಾಯಿ 1–6–6
ಒಂದು ಸಂಚಿಕೆಗೆ 0–0–9.

सत्यं ब्रूयात्प्रियं ब्रूयान्न ब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಜಾಹಿರಾತುಗಳ ದರ –
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್‌ಅಗಲ) ೮ ಸಾಲುಗಳ ವರೆಗೆ ರೂ 1 0-0
ಅನಂತರ ಪ್ರತಿ ಸಾಲಿಗೆ 0-2 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

Registered No. B. 1720

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೧೧ ಮಾಹೆ ಜುಲೈ, ಸನ್ ೧೯೧೭ ನೇ ಇಸವಿ. [ಸಂಚಿಕೆ ೨೦.

[illegible]

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳಿಗೆ ಕೈಕಂಡ ಔಷಧಿಯಾಗಿದೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಅಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0–6–0. ವಿ. ಪಿ ಬೇರೆ
ಡಜನ್ ಶೀಸೆಗಳಿಗೆ ರೂ 4–0–0 ವಿ. ಪಿ ಸಹಿತ
ವಿಳಾಸ – ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ, ಮಂಗಳೂರು.

ಟಿ ಜಿ ಮಹಾಸರೇ ಎಂಡ ಸನ್ಸ ಇವರ
ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ ಸ್ನಾಯುಗಳ ಸೆಗಡಿ, ನರಗಳ ಸೆಡತ, ಕೆಮ್ಮು, ಜ್ವರ, ಕಾಲರಾ, ಬೇಗು, ಬಾಣಂತೀರೋಗ, ಪ್ಲೇಗ, ಹೊಟ್ಟೆಕಡಿತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದೆ ಬಾಟ್ಲಿಕೆ ೧॥ ರೂ ಟಪಾಲ ಹಾಸಲು ೪ ಆಣೆ ಬೇರೆ. ಒಂದೇಸರ್ತಿ ೧೨ ಬಾಟ್ಲಗಳನ್ನು ತರಿಸಿಕೊಳ್ಳುವವರಿಗೆ ೩ ರೂ ಕಮಿಶನ್ ಹೊರತು ಅಂಚೇವೆಚ್ಚ ಬೇರೆ.

ದದ್ರುಘ್ನ ಜಾಲೀಮಬಾಮ— ಇದರಿಂದ ಶರೀರದೊಳಗೆ ಮನೆಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ತುಳಗಳು, ಉರಿ, ಬೆಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು

ಬಾ. ಕಿ ೧೨ ಆಣೆ ಅಂಚೆವೆಚ್ಚ ೩ ಬಾಟ್ಲ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ. ಪತ್ತೆ —

ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ.

ज्योतिषी.

जनार्दन दत्तात्रय साने. बुधवार न २३४, पुणें. ज्योतिषाची कामें सूक्ष्म तऱ्हेनें केली जातात. विशेष माहिती समक्ष अगर पत्रद्वारें

ಬೇಕು ! ಬೇಕು !!] ಕಾನಡಾವೃತ್ತ. [ಬಾತ್ಮೀದಾರರು !!!

ಪ್ರತಿ ತಾಲೂಕಿನಿಂದ ನಿಜವಾದ ಮಾಹಿತಿ ಆಗಿಂದಾಗ್ಗೆ ಪೂರೈಸುವ ಬಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿಹೊಂದುತ್ತದೆ ಅವಿಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಿಕ ಮತ್ತು ಮಾನಸಿಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಮಯವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ. ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ನಾಶಿಯಾಗುವವು ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು. ರಕ್ತ ಶ್ವೇತಸ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ. ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ತ್ವರ್ಯವಾಗಿ ದೂರವಾಗಿ ವೆಂಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ಸಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೩೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು ಅಂಚೆವೆಚ್ಚ ಬೇರೆ ಬೀಳುವದು ೩೫ ದಿವಸದ ೨ ಡಬ್ಬಿಗಳನ್ನು ಒಮ್ಮಿಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಸಿಕ್ಕಿರುವವು.

ವರ್ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ. ಜೀ. ಜವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ದೆಶೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು. ಇದಲ್ಲದೆ,

ಹೊಸ ಶಿಫಾರಸು ಪತ್ರವು.

ಸೆಂದುರ್ಜೆ ಪಟ್ಟಣದಿಂದ ನಾಗೋಬಾ ನೇವಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರಿಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು. ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು. ಆದರೂ ಈಗ ತಿರುಗಿ ೩೬ ರೂಪಾಯಿಯ ಔಷಧಿಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ ಪಿ ದ್ವಾರ ಕಳುಹಿಸಿ ಉಪಕರಿಸಿರಿ ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು ಡಬ್ಬಿಗಳು ಸಿಗುವ ಪತ್ತೆ —

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,
ಪ್ರೊಪ್ರೈಟರ್ಸ, ನಿಪಾಣಿ (ಬೆಳಗಾಂವ).

THE KANARA NEWS
11th July 1917

" Act—act in the living Present
Heart within, and God o'er head"

The Grand Old Man of India.

The news of the death of India's G O M at Bombay on June 30 last will be received with profound sorrow all over India The d... fame Dr Dadabhai has won by reason of his unselfish services rendered to the mother land for over half a century has hardly any parallel looking to the very trying circumstances under which he had to work His life is a life of service, selfless and hence ennobling Dr Naoroji began his public career at a time when most of the present day public workers of India were yet to be born Though born in a poor Parsi family he got the best possible education thanks to the kindness of his mother and the very low rates of fees in those days Mr. Dadabhai used to say that he would hardly have got any education, had the fee rates been so high as in present times After finishing his brilliant academical career in 1845, he was employed at 20 as an assistant teacher in the Elphinstone Institute where he subsequently rose to be the Professor of Mathematics In fact, Mr Dadabhai was the first Indian Professor During all the time he was in the Government service, he directed his youthful energies to associating himself with the public life of Bombay He helped to found many public institutions which still live to bear testimony to Mr Dadabhai's constructive ability which manifested itself markedly so early

In 1... Mr Dadabhai bade good bye to his Professorship and left for England to run a banking firm of the Camas opened in London. It was here that his activities took a new channel He decided to ... his energies in securing political rights to his country men for the realization of which patriotic end he struggled with ceaseless efforts and wonderful skill till 1906 He left no stone unturned to bring home to the British public the paramount necessity of improving the administration of India as the best means of rendering permanent and enduring the link which binds India to England" He wanted that England should recognise India as a real partner in the Empire and not treat her as a conquered land With a view to acquaint our rulers with the real grievances of India he lectured throughout England and wrote to the leading journals and even entered the British Parliament to appeal to the British conscience in the matter of Indian questions among which the growing poverty of masses was conspicuous.

When he found that the results of his strenuous efforts for the advancement of India did not come up to his expectations he had to declare from the Congress platform in 1906 that Self Government within the Empire was the goal of India & he hoped to see a beginning made at once towards that end. The first instalment towards that, we sincerely believe is the Morley Minto Reforms of 1909— whereby, according to Sir S P Sinha's opinion we have secured only influence & not power in the Government of India- and will be surely followed by a much more substantial allotment immediately after the close of the War In short Mr Dadabhai has not lived in vain His mortal remains have been consigned to the Towers of Silence but his spirit will continue to animate India for ever Let us all take a leaf out of Dadabhai's noble book and learn to work for the mother land, with a spirit of self-renunciation and unswerving loyalty, "to the total exclusion of all thought of a personal career"

Problems of Kanara III*

The peculiar features in the character of the people I have touched on in my last But there is one other subject which has an important bearing on it and which comes halfway between the people and the conditions under which they live, I mean the subject of education Education, as is well said, is the germ of all movements, the key to all progress. And though there is much to be wished for regarding the spread of education in our district, still I can emphatically say from what little I have studied of the question, that Kanara is not much behind the most progressive districts of our Presidency in educational progress But the education that we get, from the very condition of our mind, our absence of ideals in life and high aspirations, instead of engendering in us that spirit of responsible citizenship which ought to be its proper end only serves us as a means to maintain ourselves and our family Speaking of the occupations of one community alone in Kanara- the Saraswat Community- I include all sects- which fills more than 70% of the educated in Kanara the last census report says that the Saraswat is mostly a Government servant and this is also true of the educated portion of every community in Kanara

This drain on the public life of our district is intensified by the fact that our most intelligent youths, standing as they do high in their University examinations are easily attracted by the decent salary that they get at the outset in the Government service on account of the high qualifications that they hold and curtail to a large extent their scope of usefulness Want of high ideals love of ease and comfort

* This instructive series of articles comes from our kind friend Mr S C Warty M A The first two articles appeared in our issues Nos 9 & 10

a diffidence in their own industry & capacity, these tempt them to accept the proffered opportunity and to bid goodbye to all high personal endeavours "I get a decent 100 and I can rise to 800• without any hitch, as a matter of course, why then give up what comes in hand and hunt after uncertainties and accept possible failures?" This is the way of their logic

But does Government service really act as a deterrent? I believe not It may to a certain extent in public life But why should it, in individual progress? The real stumbling-block as I have said is their love of ease and their want of ideals They take no intelligent interest in life Why should not these, the best of our lot, cultivate a taste for scholarship or arts and hope to shine therein? Should there be a single Mangeshrao Telang in the whole district, who can lay claim to a proficiency in such? Or why should they not enrich their own vernacular literature? Those whose mother tongue is Kanarese have got the greater responsibility in this respect To others, I would say, Marathi is not a foreign tongue. Study it and you will attain mastery over it Cannot Mr D B. Nadkarni of Karwar be said to have done so? He can compare with any Marathi speaker in Maharastra Mr Hari Babu Kamat is another Mr Kamat of Kumta can compose beautiful poetry in Marathi & can speak and write too Above all these, our friend Mr Dubhashe whose excellent book on Marathi on "Hindu Holidays" most of us have read has earned a name amongst Marathi writers, & has set to us an example, and it will be ours to follow in his foot-steps Kanara is deplorably low in literary output and demands our earnest efforts in that direction, for after all, let our young men remember, literature is the life blood of a people and is the first expression of a corporate existence Will these remarks appeal to the hearts of our young men or will they fall flat on their ears?

RANDOM THOUGHTS

The War Loan

It is really admirable that the total War Loan figures including Post office section & cash certificates as known till 5th instant come to Rs 43,41,?8946. The Women's War Loan Total itself comes to 65 lacs All this is splendid work as publicly remarked by the Financial Minister of our Viceroy No efforts have been spared to make it a complete success, as seen from the figure estimated or expected & the figure actually subscribed India has played her part very well by aiding the parental Government to the best of her power with men and money. Her innate sense of loyalty to the throne was weighed in the balance and fortunately found not wanting

The Educational Conference

The Bombay Educational Conference presided over by Sir Narayan Chandavarkar was undoubtedly a great success. It was a movement set on foot by the Educationists of Bombay to voice the non-official view on several important educational questions of the day The discussion held & the resolutions arrived at amply testify to the keen interest taken in educational matters by our Bombay leaders and we may all rest assured that something of a tangible nature will be forthcoming in near future in the matter of advancing education and giving a new turn to educational problems of the day So far so good

Need of Feeding Conferences.

Now that the interest in matters educational has been created, it needs to be kept up, besides the wave of the new spirit in these matters must roll over all the parts of the Presidency The Bombay Committee must be something like the Central Body taking up educational questions and holding its sittings once a year Then there should be started District, Provincial or Divisional conferences throughout the length & breadth of the Presidency to discuss local educational matters & represent their local needs & disabilities and submit resolutions and suggestions to the Central Body for its consideration & for taking such steps as that Body may deem neccessary• This way of opening feeding branches and tackling them on to the main Body will surely go to sustain the newly created interest and well serve the object of the Conference. This suggestion we venture to make for the consideration of mofussil educationists

Our District & its Education

By the bye, will it not be advisable for our Kanarites interested in the education of our District, wherever they may be to consider in all seriousness the question of starting and conducting a District educational conference representing all Kanarites irrespective of caste, creed, or colour with the sole object of discussing purely educational matters of local interest and formulating their own views on the several momentous questions of the day concerning education? Its sittings may be held either at Karwar, Kumta, or some other place of the District This will go to oil the wheels of local educational working bodies and bring together the minds of educated Kanarites of all shades of opinion to discuss up-to-date educational questions and co-operate with one another in trying to raise the educational status of our District Our District is already labouring under the serious disadvantage of being isolated & not in touch with varied educational activities so much in evidence in other places This is really unfortunate. Let us see if something can be done to dispel this lethargy or apathy—yet to be eradicaded to a large extent and with one mind tread the most harmless and, for the matter of that, most useful path of org—

ing a body evidently on the lines of the Bombay Conference to place before our people educational ideals & to consider what steps can be taken to look to wider diffusion of education in our District itself. We trust our Kanarites having the interest of Kanara's education at heart will seriously think on the matter.

The Hon Mr Patel again

We can not but admire the persevering spirit of the Hon Mr Patel in bringing the question of "compulsory Primary education" to the fore front again. He has now drafted a bill providing extension of primary education in Municipal Districts & is shortly going to introduce the same in the next session of the Bombay Legislative Council. The full text published in the papers is worth a perusal. Should it be passed, a good length of the Himalaya in the way of primary education will have been crossed and an olturged principle adopted. It remains to be seen how this mild bill will be received in the council. Let us hope that it will be safely piloted through the council so that the Municipalities at any rate will have the credit of having taken the healthly initiative in the matter. God bless the bill.

ಹಿಂದೀ ರಾಜಧೋರಣ.

ಟ್ಯಾಮ್ಸ ಕರ್ತರ ಅಂಬೋಣ

ಬೀಝುಂಟಳ ಅಟಕುಬಂದಿಯ ವಿಷಯಕ ಮದ್ರಾಸ ಸರಕಾರದ ಧೋರಣವನ್ನು ಖುಷ್ಕೀಕರಿಸುವಾಗ ಟ್ಯಾಮ್ಸ್‌ಪತ್ರವು ಮಹತ್ವದ ವಿಚಾರಗಳನ್ನು ಪ್ರದರ್ಶಿಸಿರುವದು ಅವುಗಳ ಆಶಯವೇನಂದರೆ – ಬೀಝುಂಟಳಿಗೆ ಬಂದೋಬಸ ಮಾಡಿದ ಧೋರಣವು ಅಲ್ಲೇ ತಡೆದರೆ ಕೆಲಸ ಸಾಗಲಿಕ್ಕಿಲ್ಲ ಇದೇ ಧೋರಣದ ಇದೊಂದು ಅಂಗವೆಂತ ತಿಳಿದು ಇದರ ಸಂಗಡಲೇ ಸರಕಾರವು ನಿಜವಾದ ಸುಧಾರಣೆಗಳ ಪ್ರಗತಿಪರ ಮತ್ತು ಪಥ್ಯಕರ ಧೋರಣವನ್ನು ಸ್ವೀಕರಿಸಬೇಕು ಹೀಗೆ ಮಾಡದಿದ್ದರೆ ಈಗಿನ ಧೋರಣವು ಜಾಣತನದ್ದೂ ಪರಿಣಾಮಕ್ಕೆ ಹಿತಕರವಾದದ್ದೂ ನ್ಯಾಯ್ಯವೂ ಎಂತ ತಿಳಿಯಲ್ಪಡಲಿಕ್ಕಿಲ್ಲ ಹಿಂದುಸ್ಥಾನದ ಸದ್ಯದ ಪರಿಸ್ಥಿತಿಯಲ್ಲಿ ಒರೇ ನಕಾರಾರ್ಥಿ ಹುಕುಮುಗಳಿಂದ ಕೆಲಸವು ಸಾಗದು "ಶಿಕ್ಷಣವು ಬೆಳೆಯಲಿ, ನಿಮ್ಮೊಳಗಿನ ಸಾಮಾಜಿಕ ದ್ವೈತವು ಕುಗ್ಗಲಿ, ಮತ್ತು ನಿಮ್ಮ ರಾಜಕೀಯ ದರ್ಜೆಯ ಮತ್ತು ಹಕ್ಕುಗಳ ಆರಂಭವವು ವೃದ್ಧಿ ಹೊಂದಲಿ, ಹೀಗೆ ನಿಮ್ಮ ಹೆಜ್ಜೆಯು ಮುಂದೆ ಮುಂದೆ ಶೀಘ್ರ ನಡೆದಹಾಗೆ ಸ್ವರಾಜ್ಯದ ಬಿರುದುಗಳು ನಿಮ್ಮ ಕೈಗೆ ಕ್ರಮಶಃ ಬರುವವು" ಎಂಬಂತೆ ಸರಕಾರವು ಹೇಳುತ್ತದೆ ಆದರೆ ಈ ದಿಕ್ಕಿಗೆ ಮುಂದರಿಸುವದೆ ಸರಕಾರವು ಏನು ಮಾಡಿದೆ ಇಂಗ್ಲಂಡದೊಳಗೆ ಯುದ್ಧದ ಭರದಲ್ಲಿ ಸಹ ೬–೭ ಕೋಟಿ ರೂಪಾಯಿಗಳನ್ನು ಶಿಕ್ಷಣದ ದೆಶೆಯಿಂದ ಹೆಚ್ಚು ಖರ್ಚು ಮಾಡುವದು ನಿಶ್ಚಯಿಸಿದೆ ಇಲ್ಲಿ ಇಂಗ್ರಜೀ ಶಾಲಾ ಮಾಸ್ತರರ ವೇತನದ ಪಾಲಿಗೆ ಒಂದೆರಡು ರೂಪಾಯಿಯ ಬಿಳೇ ಕಾಸು ಒಂದರೆ ಅದರಿಂದ ಏನಾಗುವದು ಇಂಗ್ಲೀಷ ಮುತ್ಸದ್ದಿಗಳು ಆಯರ್ಲಂಡದೊಳಗಿನ ಅಸಂತೋಷವನ್ನು ನಿರ್ಮೂಲಿಸುವದೆ ಒಂದೇ ಮನಸ್ಸಿನಿಂದ ದುಡಿಯುತ್ತಿರುವರು ಇಲ್ಲ್ಯಾದರೂ ಜನರ ನ್ಯಾಯ್ಯ ಆಕಾಂಕ್ಷೆಗಳನ್ನು ವೃದ್ಧಿ ಪಡಿಸಿ ಪ್ರಮಾಣಿಕ ಅಸಂತೋಷವನ್ನು ದೂರಪಡಿಸಲಿಕ್ಕೆ ಸರಕಾರವು ಯಾಕೆ ಹವಣಿ ಬಾರದ ? ಅಧಿಕಾರಿಗಳ ಧೋರಣವೂ ರಾಜಕೀಯ ವಾತಾವರಣವೂ ಒಂದೇ ಪ್ರವಾಹದಿಂದ ಹರಿ[ಯುತ್ತ]ಕ್ಕದ್ದು ಕೇವಲ [ಯುದ್ಧ]ದ ಕಾರಭಾರದ [...]ಧಿಕಾರಿಗಳು ತೃಪ್ತಪಟ್ಟರೆ ಈಗ ಸಾಕಾಗುವದಿಲ್ಲ ಧಿಟ್ಟತನದಿಂದ ಸರಕಾರವು ಮುಂದೆಬಂದು ಅತ್ಯುತ್ತಮ ಮತ್ತು ಆರಿಸಿ ತೆಗೆದ ಮುಖಂಡರ ಅಂಬೋಣವನ್ನು ಕೇಳಿಕೊಂಡು ಜನರಿಗೆ ಹೇಳಬೇಕಲ್ಲ, ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಕೊಡುವದು ಇದು ನಮ್ಮ ರಾಜನೀತಿಯ ಧೋರಣವು ಎಂತ ಸ್ಪಷ್ಟ ಶಬ್ದಗಳಿಂದ ಜಾಹೀರ ಪಡಿಸಬೇಕು ಮತ್ತು ಇಂಥ ಧೋರಣವನ್ನು ಸ್ವೀಕರಿಸಿ ಮತ ಬೇಗನೆಯೇ ಶಿಕ್ಷಣವನ್ನು ಪ್ರಸಾರಿಸಲಿಕ್ಕೂ ಸ್ಥಾನಿಕ ಸ್ವರಾಜ್ಯವನ್ನು ಬೆಳಸಲಿಕ್ಕೂ ಪ್ರಾಂತಿಕ ಸ್ವಾಯತ್ತತೆ ಮತ್ತು ವರಿಷ್ಠ ನ್ಯಾಯಸಭೆ ಇವುಗಳ ಕಾರ್ಯಕ್ಷೇತ್ರವನ್ನು ಔದಾರ್ಯದಿಂದ ಬೆಳಸಿ ಸುಧಾರಿಸಲಿಕ್ಕೂ ಪ್ರಾರಂಭಿಸಬೇಕು ಒಮ್ಮೆ ಇಂಥ ರಾಜಧೋರಣವು ಧೈರ್ಯದಿಂದ ಜಾಹೀರ ಪಡಿಸಿ ಪ್ರಮಾಣಿಕತನದಿಂದ ಅಮಲಿನಲ್ಲಿ ಒರಹತ್ತಿದರೆ ದೇಶದಲ್ಲಿ ಅಸಂತೋಷವನ್ನು ಹೆಚ್ಚಿಸುವವರ ಕೂಗಾಟವನ್ನು ಯಾರೂ ಕೇಳಲಿಕ್ಕಿಲ್ಲ ಹೀಗಾಗಲು ಅಂಥವರನ್ನು ದಂಡಿಸುವ ಕೆಲಸದಲ್ಲಿ ಸರಕಾರಕ್ಕೆ ಎಲ್ಲ ರಾಜನಿಷ್ಠರ ಬೆಂಬಲವು ಸಿಕ್ಕೇ ಸಿಗುವದು

ಕಾನಡಾವೃತ್ತ.

ಬುಧವಾರ ತಾರೀಕು ೧೧ ಮಾಹೆ ಜುಲ್ಯಾ ೧೯೧೭

ಹಿಂದುಸ್ಥಾನವೂ ಸಾಮ್ರಾಜ್ಯ ಪರಿಷತ್ತೂ.

ಸರಸತ್ಯೇಂದ್ರರ ಮತವು

ಸಾಮ್ರಾಜ್ಯ ಪರಿಷತ್ತಿನ ಅಧಿವೇಶನವು ಮುಗಿದು ೩–೪ ತಿಂಗಳುಗಳಾದವು ಈ ಪರಿಷತ್ತಿನಲ್ಲಿ ಹಿಂದುಸ್ಥಾನದ ವಿಷಯವಾಗಿ ಏನು ಚರ್ಚೆಯಾಯಿತು ಎಂಬ ಮಹತ್ವದ ಸಂಗತಿಯು ಹಿಂದುಸ್ಥಾನದ ತರ್ಫಿನಿಂದ ಪ್ರತಿನಿಧಿಯಾಗಿ ಹೋದ ಬಹುಮಾನವಸ್ಥ ಸರ ಸತ್ಯಪ್ರಸಾನಸಿಂಹ ಇವರ ಬಾಯಿಯಿಂದಲೇ ಈಗ ತಿಳಿದು ಬಂದದೆ ಸೇಂಟ ನಿಹಾಲಸಿಂಗ ಹಿಸ್ಕ್ಯಾತ ದೇಶಭಕ್ತರು ವಿಲಾಯತಿಯಲ್ಲಿಯೇ ಸತ್ಯಪ್ರಸಂನರಿಗೆ ಭೆಟ್ಟಿಯಾಗಿ ಅವರಿಂದ ತಿಳದುಬಂದ ಸಂಗತಿಗಳನ್ನು ಈಗ ಜಾಹೀರ ಮಾಡಿರುವರು ಅವುಗಳನ್ನು ಸಾರಾಂಶತಃ ಹೇಳಬೇಕಾದರೆ ಸರ ಸಾಹೇಬರ ಮತದಿಂದ ಹಿಂದುಸ್ಥಾನದ ಭವಿತವ್ಯತೆಯ ಮೇಲೆ ಈ ಪರಿಷದೆಯ ಠರಾವುಗಳಿಂದ ಬಹಳೇ ಚಲೋ ಪರಿಣಾಮವಾಗುವದು ಇನ್ನು ಮುಂದೆ ಹಿಂದುಸ್ಥಾನ ಮತ್ತು ವಸಾಹತುಗಳೊಳಗ ಒಂದು ತರದ ಪ್ರೀತಿಯ ಸಂಬಂಧವೇ ಕೂಡಿ ಬಂದಿರುವದೆಂದು ಹೇಳಲಭ್ಯಂತರವಿಲ್ಲ ಏಸಿಯಾ ಖಂಡದೊಳಗಿನ ಇತರೇ ದೇಶದ ಜನರಂತೆಯೇ ಹಿಂದೀ ಜನರಿಗೆ ಸಹ ವಸಾಹತುಗಳು ಈಗ ನಡಿಸುವರೆಂದು ಕನಿಷ್ಠ ಪಕ್ಷದಿಂದ ತಿಳಿಯಬಹುದು ವಸಾಹತುಗಳ ಪ್ರತಿನಿಧಿಗಳು ಲೋಕಸತ್ತಾಪ್ರಿಯರಾಗಿದ್ದರಿಂದ ಹಿಂದುಸ್ಥಾನಕ್ಕೆ ಪ್ರಾತಿನಿಧಿಕ ಸಂಸ್ಥೆಗಳು ಸಿಗುವವೆಂದು ತರ್ಕಿಸುತ್ತಿರುವರು ಅವರ ಕೈಯೊಳಗೆ ಇಂಥ ಅಧಿಕಾರಗಳನ್ನು ನಮಗೆ ಕೊಡುವದಿದ್ದರೆ ಅವರೇನೂ ಹೆಚ್ಚು ಹೊತ್ತು ಹಿಂದುಮುಂದೆ ನೋಡುವಹಾಗಿಲ್ಲ ಗ್ರೇಟಬ್ರಿಟನ ಮತ್ತು ಅವುಗಳ ವಸಾಹತು ಇವುಗಳ ಸಂಗತಲೇ ಹಿಂದುಸ್ಥಾನಕ್ಕೂ ಸಹ ಸಾಮ್ರಾಜ್ಯದ ಕಾರಭಾರವನ್ನು ನಡಿಸುವದರಲ್ಲಿ ಪರಿಷತ್ತಿನೊಳಗೆ ಸಹಕಾರಿತೆಯಿಂದ ನಡಿಸುವದು ಮತ್ತು ಹಿಂದುಸ್ಥಾನಕ್ಕೆ ತನ್ನ ಸ್ವಂತ ಕಾರಭಾರವನ್ನು ಮಾತ್ರ ನಡಿಸಕೊಡದಿರುವದು ಸ್ವಲ್ಪ ವಿಸಂಗತ ಸಂಗತಿ ಎಂತ ನಿಹಾಲಸಿಂಗರಂತೆ ಸರ ಸಾಹೇಬರು ಸಹ ಒಪ್ಪಿಕೊಂಡರು ಹೊರಗಿನ ಕಾರಭಾರವಂತೆ ಅಂತಸ್ಥ ವ್ಯವಸ್ಥೆಯನ್ನು ಎಲ್ಲರೂ ಕೈಹಾಕಿ ನಡಿಸಬೇಕೆಂತ ಅವರು ಅಭಿಪ್ರಾಯಪಟ್ಟರು

ಯುದ್ಧೋತ್ತರ ಸುಧಾರಣೆಯಬಗ್ಗೆ ವಿಚಾರಿಸಲು ಅವರು ಅಂದದ್ದು — ಬರೇ ಬರೇ ಜನರ ಸಂಭಾಷಣಗಳಲ್ಲಿಯೂ ಪರಿಷತ್ತಿನ ಚರ್ಚೆಯಲ್ಲಿಯೂ ಜನರ ಅಂದಾಜಿನಂತೆ ವ್ಯಕ್ತವಾದ ಮತಗಳಿಂದಲೂ ನನಗೆ ತಿಳಿದಂತೆ ನಾನು ಹೇಳುತ್ತೇನಲ್ಲಾ – ಹಿಂದುಸ್ಥಾನದ ಒಳಗಿನಲ್ಲಿ ರಾಜಕೀಯ ಸುಧಾರಣೆಗಳ ಬಂದು ಮಹತ್ವದ ಗಂಟು ಬಿದ್ದಹೋರತು ಇರದು ಹಿಂದುಸ್ಥಾನದ ಪ್ರಗತಿಯ ಶತ್ರುಗಳಿಗೆ ಸಹ ಹಿಂದುಸ್ಥಾನಕ್ಕೆ ದೃಶ್ಯವಾದ ರಾಜಕೀಯ ಅಧಿಕಾರಗಳನ್ನು ಕೊಡುವ ಅವಶ್ಯಕತೆಯು ಕಾಣಹತ್ತಿದೆ ಕಾಯಿದ ಸಭೆಗಳ ಸತ್ತೆಯನ್ನು ಬೆಳಸಿ ಅಧಿಕಾರ ವಿಭಾಗಣೆಯನ್ನು ಮಾಡಿದರೆ ಈ ತರದ ಪ್ರಗತಿಯು ಆಗುವದೆಂತ ಸರಸಾಹೇಬರ ಮತವದೆ ಮೊರ್ಲೀಮಿಂಟೋ ಸುಧಾರಣೆಗಳಿಂದ ಕೌನ್ಸಿಲುಗಳ ಭಾರವು ಮಾತ್ರ ಏರಿದೆ ಅಧಿಕಾರವೇನೂ ಏರಲಿಲ್ಲ ನಮಗೆ ಬೇಕಾದದ್ದು ಸತ್ತೆಯು ಸತ್ತೆಯ ಪರಿಣಾಮವು ರಾಜಧೋರಣದಮೇಲೆ ಆಗದಿರ ವರೆಗೆ ನಮ್ಮ ಹೆಜ್ಜೆಯು ಮುಂದೆ ಬಿದ್ದೆಂದು ಹೇಳಲಾಗದು ಬರೇ ಸಾರ್ವಜನಿಕ ಅಧಿಕಾರ ವರ್ಗಗಳನ್ನು ನಮಗೆ ವಹಿಸಿ ಕೊಟ್ಟರೆ ಸಾಲದು

ಆರ್ಥಿಕ ಸ್ವಾತಂತ್ರ್ಯದ ವಿಷಯವಾಗಿ ಮಾತಾಡುವಾಗ ಸರ ಸಿಂಹರು ಹೇಳಿದ್ದೇನಂದರೆ — ದೇಶದೊಳಗಿನ ಉದ್ಯೋಗಗಳನ್ನು ಬೆಳೆಸುವದು ರಾಜಕೀಯ ಪ್ರಗತಿಯಷ್ಟೇ ಮಹತ್ವದ ಸಂಗತಿಯು ನಮ್ಮ ಉದ್ಯೋಗ ಧಂದೆಗಳನ್ನು ಅಭಿವೃದ್ಧಿಸುವದು ಶಕ್ಯವದೆ ಇದಕ್ಕಾಗಿ ನಾವು ಯತ್ನಿಸತಕ್ಕದ್ದು ಹಿಂದುಸ್ಥಾನದೊಳಗಿನ ಕಚ್ಚಾಮಾಲನ್ನು ದೇಶದಲ್ಲೇ ಉಪಯೋಗಿಸಿ ಪರದೇಶದಿಂದ ಬರುವ ಜಿನಸುಗಳ

ನ್ನು ಇಲ್ಲೇ ತಯಾರಿಸಬೇಕು ಉಪಯೋಗಿಸಲಿಕ್ಕಾಗದ ಮಾಲನ್ನು ಸಾಮ್ರಾಜ್ಯಕ್ಕೆ ಪೂರೈಸಬಹುದು ಲಿಂಕಾಶಾಯರವು ನಮಗೆ ಬಟ್ಟೆಗಳನ್ನು ಪೂರೈಸುವ ಬದಲಾಗಿ ಬಟ್ಟೆ ಮಾಡುವ ಯಂತ್ರಗಳನ್ನೇ ಪೂರೈಸಿದರೆ ಅದಕ್ಕೆ ಎಂಥ ಹಾನಿಯಾಗುವದು ? ಇವೆಲ್ಲ ಸಂಗತಿಗಳನ್ನು ಸಾಧಿಸಲಿಕ್ಕೆ ವಸಾಹತುಗಳಂತೆ ಹಿಂದುಸ್ಥಾನಕ್ಕೂ ಆರ್ಥಿಕ ಸ್ವಾತಂತ್ರ್ಯ ಸಿಗುವ ಅವಶ್ಯಕತೆಯುಂಟು ಕಟ್ಟಕಡೆಗೆ ಬ್ರಿಟನವು ಹಿಂದುಸ್ಥಾನದ ಬಗ್ಗೆ ಏನುಮಾಡಬೇಕು ಎಂತ ನೀವು ಹೇಳುವಿರಿ? ಎಂದು ನಿಹಾಲಸಿಂಗರು ಕೇಳಲು, ಸರಸತ್ಯೇಂದ್ರರು ಉತ್ತರಿಸಿದ್ದೇನಂದರೆ — “ ಇದರ ವಿಷಯವಾಗಿ ಒಂದು ಮುಖ್ಯ ಸಂಗತಿಯನ್ನು ಧ್ಯಾನದಲ್ಲಿಡತಕ್ಕದ್ದು ಅದೇನಂದರೆ, ಈಗೇನೂ ಶಬ್ದಗಳಿಂದ ಹಿಂದುಸ್ಥಾನದ ತೃಪ್ತಿಯಾಗಲಿಕ್ಕಿಲ್ಲ ಏನಾದರೂ ಪ್ರತ್ಯಕ್ಷವಾದ ಕೃತಿಯೇ ಜನರ ಕಣ್ಣಿಗೆ ಬೀಳಬೇಕು ಇದು ವರೆಗೆ ಸಂಭವಿಸಿದ ಸಂಗತಿಗಳೇನೂ ಇರಲಿ, ಹಳೇ ತಲೆಗಳಿಯ ನಮ್ಮಂಥ ಜನರಿಗೆ ಬ್ರಿಟಿಷರ ಪ್ರಮಾಣಿಕತನ ಮತ್ತು ನ್ಯಾಯಬುದ್ಧಿ ಇವುಗಳ ಮೇಲಿನ ಶ್ರದ್ಧೆಯು ಕಡಿಮೆಯಾಗಿಲ್ಲ ಆದರೂ ಹಿಂದುಸ್ಥಾನಕ್ಕೆ ಸ್ವಾಯತ್ತತೆಯನ್ನು ಕೊಡುವ ಬ್ರಿಟನದ ಆಶ್ವಾಸನಗಳ ಮೇಲೆ ನಾವು ಇಟ್ಟ ವಿಶ್ವಾಸವು ಸರಿಯಾಗಿದೆ, ಎಂತ ಹಿಂದುಸ್ಥಾನದೊಳಗಿನ ತರುಣರಿಗೆ ಖಾತ್ರಿಯಾಗಬೇಕು ಇಂಥ ಖಾತ್ರಿಯು ಹಿಂದುಸ್ಥಾನಕ್ಕೆ ಅಧಿಕ ಸತ್ತೆಯ ಲಾಭವಾದ ಪರಿಣಾಮದಿಂದಲೇ ಆಗಬೇಕು ” ತದಾಸ್ತು ಎಂತ ನಾವು ಹೇಳುವೆವು

ಪಿತಾಮಹ ದಾದಾಭಾಯಿ.

ಕಳೆದ ೩೦ ನೇ ಜೂನದ ದಿವಸ ಹಿಂದುಸ್ಥಾನದ ಪಿತಾಮಹ ದಾದಾಭಾಯಿ ನವರೋಜಿ ಮಹರ್ಷಿಗಳು ದೇಶಸೇವೆಯಲ್ಲಿ ಮುಪ್ಪಾದ ತಮ್ಮ ಭೌತಿಕ ಶರೀರವನ್ನು ತ್ಯಜಿಸಿ ಯೋಗ ನಿದ್ರೆಯನ್ನು ತಾಳಿದರು. ಉತ್ತರಾಯಣದ ಶುಕ್ಲ ಪಕ್ಷವು ಅದರೊಳಗೆ ಪುಣ್ಯಕಾದಶಿಯ ಶುಭಕಾಲವು ಈ ದಿವಸ ಹಗಲಿನ ಸಮಯ ಈ ಮಹಾಯೋಗಿಗಳು ಪುಣ್ಯಲೋಕಕ್ಕೆ ಪ್ರಯಾಣ ಮಾಡಿದ್ದು ಅವರ ಸತ್ವಸಂಚಯದ ಫಲವಲ್ಲೆಂದು ಯಾರು ಹೇಳುವರು ?

ಅವರ ಪುಣ್ಯಕಥೆಯೆಂದರೆ ಒಂದು ಸ್ತೋತ್ರವು ಅದನ್ನು ಹಾಡಿದಷ್ಟು ಕಡಿಮೆ ಅದರ ಪಾರಾಯಣದಿಂದ ನಮ್ಮ ಮಾನಸಿಕ ಕಾಲುಷ್ಯ, ಸ್ವಾರ್ಥಬುದ್ಧಿ, ದೇಶಭಕ್ತಿಯ ಅಭಾವ, ಮೈಗಳ್ಳತನ ಆತ್ಮವಿಶ್ವಾಸದ ಕೊರತೆ, ನಿರಾಶೆ ಮುಂತಾದ ಅನೇಕ ರಾಷ್ಟ್ರೀಯ ಕುಂದು ಕೊರತೆಗಳು ತೊಳೆದು ಹೋಗುವವು ಅದರ ಪಠಣದಿಂದ ನಮ್ಮಲ್ಲಿ ದೇಶಭಕ್ತಿಯ ದಿವ್ಯ ಸ್ಫೂರ್ತಿಯು ಜನಿಸುವದು ಆತ್ಮೋದ್ಧಾರದ ಮಾರ್ಗಗಳೆಲ್ಲ ಅದರ ತೇಜಸ್ಸಿನ ಬೆಳಕಿನಿಂದ ಹೊಳೆಯುವವು “ಸಂಭವಾಮಿ ಯುಗೇ ಯುಗೇ” ಎಂಬ ಭಗವದುಕ್ತಿಯ ಕೋಟಿಯೊಳಗಿನ ಪುಣ್ಯಾತ್ಮಗಳು ಇವೇ ಇವರ ಚರಿತ್ರೆಯಿಂದ ಒಂದು “ಲಘುಭಾರತ”ವನ್ನೇ ತಯಾರಿಸಬಹುದು ೯೨ ವರ್ಷದ ಚಾರಿತ್ರ್ಯವೆಂದರೆ ಹೆಚ್ಚು ಕಡಿಮೆ ಒಂದು ಶತಮಾನವು ಅಷ್ಟು ಅವಧಿಯು ಅವರ ಕರ್ಮಯೋಗೀ ಬಾಳಿಕೆಯು. ೭೦ ವರುಷ ಅವರು ಲೋಕ ಪಕ್ಷದ ಸಾತ್ವಿಕ ಕಾದಾಟವನ್ನು ನಡಿಸಿರುವರು ಆದುದರಿಂದ ಮಹಾಭಾರತದಂತೆ, ಅವರ ಜೀವನಕ್ರಮದ ಲಘು ಭಾರತವಾದರೂ ನಮ್ಮ ರಾಷ್ಟ್ರೀಯ ಧನವಾಗಿದೆ, ಅಷ್ಟೇ ಸ್ಫೂರ್ತಿದಾಯಕವೂ ಇದೆ ಅದನ್ನು ‘ಅಥ’ ಹಿಡಿದು ‘ಇತಿ’ ವರೆಗೆ ವರ್ಣಿಸಲು ಸ್ಥಲಾವಕಾಶವಿಲ್ಲದಿರುವದು ನಮ್ಮ ಭಾಗ್ಯಹೀನತೆಯು ದಾರ್ಶನಿಕವೃತ್ತಿಯ ಬಡ ಪಾರ್ಸಿ ಕುಲದೊಳಗಿನ ಮಹಾನುಭಾವರ ಜನ್ಮ ತಂದೆಯ ನಿಧನದನಂತರ ತಾಯಿಯು ಹೊತ್ತ ಶಿಕ್ಷಣದ ಹೊರೆ, ವಿದ್ಯಾಸಂಸ್ಕಾರದಿಂದ ಅವತರಿಸಿದ ಬಾಲಬೃಹಸ್ಪತಿಗಳು, ಗಣಿತಶಾಸ್ತ್ರದೊಳಗಿನ ಪಾಂಡಿತ್ಯ ಮತ್ತು ಅದರ ಪ್ರಾಧ್ಯಾಪಕತ್ವ, ದೇಶಭಕ್ತಿಯ ಕರ್ಮಯೋಗದ ಸಾಧನೆ, ವಿಲಾಯತಿಯೊಳಗಿನ ವೈಶ್ಯವೃತ್ತಿಯ ಸಾಹಸ, ಬಡೋದೆಯ ದಿವಾಣಗಿರಿ, ಮುಂಬಯಿ ಶಹರದ ಸ್ಥಾನಿಕ ಸ್ವರಾಜ್ಯ ಸೇವೆ, ವಿಲಾಯತಿಯೊಳಗಿನ ಜನರಲ್ಲೂ ಪಾರ್ಲಿಮೆಂಟಿನಲ್ಲಿಯೂ ನಡಿಸಿದ ಸ್ವದೇಶೋದ್ಧಾರದ ಕಠಿಣ ವ್ರತ, ರಾಷ್ಟ್ರೀಯ ಸಭೆಯ ಮೂರಾವರ್ತಿ ಹೊಂದಿದ ಅಧ್ಯಕ್ಷತೆಯ ಬಹುಮಾನ, ಕಲಕತ್ತೆಯ ರಾಷ್ಟ್ರೀಯ ಸಭೆಯಲ್ಲಿ ತಮ್ಮ ಅನುಯಾಯಿಗಳಿಗೆಲ್ಲ “ಕೊಟ್ಟ” ಸ್ವರಾಜ್ಯ”ದ ಮಂತ್ರೋಪದೇಶ, ಇವೆಲ್ಲ ಪ್ರಕರಣಗಳು ಈ ಲಘುಭಾರತದ ಪರ್ವಗಳಾಗಿವೆ ಈ ಭಾರತದೊಳಗಿನ ಇವರ ರಾಜಕೀಯ ತತ್ವಗಳನ್ನೆಲ್ಲ ಸಂಗ್ರಹಿಸಿದರೆ ಒಂದು ದಾದಾಭಾಯಿ ಗೀತೆಯನ್ನೇ ರಚಿಸಬಹುದು ಇವರ ಇಡೀ ಸೋಜ್ವಲ ಜೀವನಕ್ರಮದ ಬೋಧವನ್ನು “ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ” ಎಂಬ ಗೀತೆಯ ಶಬ್ದಗಳಿಂದ ಹೇಳಬಹುದು ಇಂಥ ಉದಾತ್ತ ಆಯುಷ್ಯಕ್ರಮದಿಂದ ಎಷ್ಟೋ ಜನರಿಗೆ ನಿಸ್ವಾರ್ಥ ಬುದ್ಧಿಯಿಂದ ದೇಶಕಾರ್ಯವನ್ನು ಮಾಡುವ ಸ್ಫೂರ್ತಿಯು ಸಿಗುವದು ಮತ್ತು ಕೈ। ಗೋಪಾಳರಾವ ಗೋಖಲೆಯಂಥವರಿಗೆ ಅದು ಸಿಕ್ಕಿತ್ತು ಎಂತ ಜಗತ್ತಿಗೆಲ್ಲ ತಿಳಿದದೆ ಸ್ವಾರ್ಥರಹಿತ ಸಾರ್ವಜನಿಕ ದೇಶಸೇವೆಯ ಭೂಮಿಕೆಯನ್ನು ಇಷ್ಟು ಉತ್ಕೃಷ್ಟ ರೀತಿಯಿಂದ ಅವರು ರಚಿಸಿಟ್ಟಿರುವರಲ್ಲ, ಈಗ ಕಳೆದ ೬೦ ವರ್ಷಗಳ ಅವಧಿಯಲ್ಲಿ ಎಷ್ಟೋ ಸ್ಥಿತ್ಯಂತರಗಳಾದರೂ ಅವರು ಹಾಕಿಕೊಟ್ಟ ದಾರಿಯಿಂದಲೇ ರಾಷ್ಟ್ರಹಿತದ ಚಳವಳಿಯು ಸಾಗುತ್ತಲಿದೆ ಮಹರ್ಷಿಗಳಿಗೆ ತಮ್ಮ ರಾಜಕೀಯ ತಪಸ್ಸಿನೊಳಗೆ ಎಷ್ಟಾವರ್ತಿ ಶಿರೋಭಂಗವಾಗಿತ್ತು ಎಷ್ಟೋ ನಿರಾಶೆಯ ಪ್ರಸಂಗಗಳು ಬಂದೊದಗಿದ್ದವು ಆದರೂ ಉತ್ಕಟ ದೇಶಭಕ್ತಿಯ ಮತ್ತು ಪ್ರಮಾಣಿಕ ರಾಜನಿಷ್ಠೆಯ ಸಾಹಚರ್ಯವನ್ನು ಅವರು ಅಂತ್ಯಕಾಲದವರೆಗೆ ಅಖಂಡ ಪಾಲಿಸಿದರು

ಕರ್ಮಯೋಗವೆಂದರೇನು, ಅದನ್ನು ಸಾಧಿಸುವದು ಹ್ಯಾಗೆ, ಅದರ ಮರ್ಮವೇನು? ನಮಗೆ ತಿಳಿಯುವದಿಲ್ಲ ಎಂತ ಕೆಲ ಅಜ್ಞಾನಿಗಳು ಹೇಳುತ್ತಿರುವರು ಅವರಿಗೆ ಕರ್ಮಯೋಗದ ಮೂರ್ತಿಯನ್ನೇ ನೋಡಬೇಕಾದರೆ ಅವರು ದಾದಾಭಾಯಿಯ ಭಾವಚಿತ್ರವನ್ನಾದರೂ ಈಗ ನೋಡಲಿ ಅವರ ಚರಿತ್ರಕ್ರಮವೇ ನಿರ್ಮಲ ಕರ್ಮಯೋಗವಾಗಿರುವದು ಇಂಥ ಉಜ್ವಲಕರವಾದ ಕರ್ಮಮಾರ್ಗವನ್ನು ನಮ್ಮ ಮುಂದಿಟ್ಟ ಮಹರ್ಷಿಗಳು ತೋರಿಸಿಕೊಟ್ಟ ಧ್ಯೇಯವನ್ನು ಸಾಧಿಸುವರೆ ದುಡಿಯುವದೊಂದೇ ಅವರ ಮಹದುಪಕಾರಗಳೊಳಗಿಂದ ಋಣಮುಕ್ತರಾಗುವ ಉಪಾಯವು ಅದರಂತೆ ದುಡಿಯುವವರು ಮಾತ್ರ ಕೃತಜ್ಞರು, ಉಳಿದವರೆಲ್ಲರು ಕೃತಘ್ನರು. ಇಂಥ ಕೃತಘ್ನತೆಯ ಪಾಪಕ್ಕೆ ಗುರಿಯಾಗದಂತೆ ವರ್ತಿಸುವದೇ ಆ ಪುಣ್ಯಾತ್ಮದ ಸಂತರ್ಪಣೆಯು ಎಂತ ಭಕ್ತಿಭಾವದಿಂದ ತಿಳಿಸಿ ಪುಣ್ಯವಂತರನ್ನು ಪುನಃ ಪುನಃ ಸ್ಮರಿಸಿ ಈ ಪುಣ್ಯಕಥೆಯನ್ನು ಮುಗಿಸುವೆವು

ಸ್ಫುಟ ಸೂಚನೆಗಳು.

೧ ಮುನಿಸಿಪಾಲಿಟಿಯೊಳಗಿನ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡಿಸುವರೆ ನಾಮದಾರ ಪಟೇಲರು ಒಂದು ಬೀಲನ್ನು ತಯಾರಿಸಿದ್ದು, ಬರುವ ಕೌನ್ಸಿಲದ ಅಧಿವೇಶನದಲ್ಲಿಯೇ ಅದನ್ನು ಚರ್ಚಿಸುವವರಿದ್ದಾರೆ ಘನವಂತ ಹಿಂದುಸ್ಥಾನ ಸರಕಾರವು ಈ ಮಹತ್ವದ ಪ್ರಶ್ನೆಯನ್ನು ಪ್ರಾಂತಿಕ ಕೌನ್ಸಿಲದಲ್ಲಿ ವಿವಾದಿಸುವರೆ ತಮ್ಮ ಅನುಜ್ಞೆಯನ್ನು ಕೊಟ್ಟಿರುವರು ಇದಕ್ಕಾಗಿ ಸರಕಾರಕ್ಕೆ ನಾವೂ ಕೃತಜ್ಞರಾಗಿರುವೆವು ಬೀಲಿನ ಟಿಪ್ಪಣಿಯು ವೃತ್ತಪತ್ರಗಳಲ್ಲಿ ಪ್ರಕಾಶಿಸಲ್ಪಟ್ಟದೆ ಅದರ ಮೇಲಿಂದ ಇಷ್ಟು ಹೇಳಬೇಕಾಗುತ್ತದಲ್ಲ, ಈ ಕಟ್ಟಳೆಯು ಸರಕಾರಕ್ಕೆ ಮಾನ್ಯವಾದರೆ ಮುನಿಸಿಪಾಲಿಟಿಯೊಳಗಿನ ನಿವಾಸಿಕರಿಗೆ ಮಹತ್ವಾದ ಲಾಭಗಳಾಗುವವು ಬಡವರ ಶಿಕ್ಷಣದ ಅಡಚಣಿಗಳು ದೂರವಾಗುವವು ಟಿಪ್ಪಣಿಯೊಳಗಿನ ಪ್ರಧಾನ ತತ್ವಗಳ್ಯಾವವೆಂದರೆ — (೧) ಸರಕಾರೀ ಜಾಹೀರನಾಮೆಯಿಂದ ಪಾತ್ರವಿಸುವ ಮುನಿಸಿಪಾಲಿಟಿಗಳಿಗೆ ಮಾತ್ರ ೩ ಮೆಂಬರರ ಬೇಡಿಕೆಯಿದ್ದರೆ ಈ ಕಾಯಿದೆಯು ಲಾಗೂ ಮಾಡಲ್ಪಡುವದು (೨) ಮ್ಯುನಿಸಿಪಾಲಿಟಿಯ ಸ್ಕೂಲ ಕಮಿಟಿಯ ವರದಿಯಂತೆ ಕಾಯಿದೆಯನ್ನು ಮುರಿಯುವ ಪಾಲಕರಿಗೆ ನ್ಯಾಯಾಧೀಶರು ತನಖೀ ನಡಿಸಿ ಶಿಕ್ಷೆಯನ್ನು ವಿಧಿಸುವರು. (೩) ಯೋಗ್ಯ ಕಾರಣಗಳಿಲ್ಲದೇ ಹುಡುಗರನ್ನು ಶಾಲೆಯಲ್ಲಿ ಕಲಿಸಲಿಕ್ಕೆ ಹಾಕದಿದ್ದರೆ, ಪಾಲಕರು ಗುನ್ಹೆ ಮಾಡಿದರೆಂತ ಎಣಿಸಲ್ಪಡುವದು (೪) ಮ್ಯುನಿಸಿಪಾಲಿಟಿಯು ಬೇಕಾದರೆ ಬಾಲೆ ಶಿಕ್ಷಣಕ್ಕಂತ ತೆರಿಗೆಯನ್ನು ಏರ್ಪಡಿಸಬಹುದು (೫) ಬಡ ಪಾಲಕರಿಗೆ ಫೀಸು ಕೊಡುವ ಶಕ್ತಿಯಿಲ್ಲದ ಸಂಗತಿಗಳಲ್ಲಿ ಅವರ ಹುಡುಗರನ್ನು ಮಾಫಿಯಾಗಿ ಶಾಲೆಯಲ್ಲಿ ಸೇರಿಸಿಕೊಳ್ಳಬೇಕು ಈ ಎಲ್ಲ ತತ್ವಗಳನ್ನು ಪರ್ಯಾಲೋಚಿಸಿದರೆ ಈ ಕಟ್ಟಳೆಯ ಸೌಮ್ಯ ಸ್ವರೂಪವನ್ನು ಎಲ್ಲರೂ ಒಪ್ಪಿಕೊಳ್ಳುವರು. ಆದದರಿಂದ ನಾ ವಿಲಿಂಗಡನ್ ಧೊರೆಗಳಂಥ ನೀತಿವಂತ ಮತ್ತು ಉದಾರ ಗವ್ಹರ್ನರರು ಈ ಕಾನೂನನ್ನು ಏರ್ಪಡಿಸಿ, ತಮ್ಮ ಆಳಿಕೆಯನ್ನು ಸ್ಮರಣೀಯ ಮಾಡುವರಾಗಿ ನೆರೆ ನಂಬುತ್ತೇವೆ.

೨ ಡಾ। ಲಿಂಗೇಶ ಮಹಾಭಾಗವತ ಕುರ್ತಕೋಟಿಯವರೆಂಬ ಮಹಾಪಂಡಿತರು ಕಳೆದ ತಿಂಗಳಲ್ಲಿ ಕರವೀರ ಮಠದ ಶಂಕರಾಚಾರ್ಯರ ಜಗದ್ಗುರು ಪದವನ್ನು ಧರಿಸಿದ ಸಂಗತಿಯನ್ನು ಜನರು ಕೇಳಿರುವರು ಈ ಜಗದ್ಗುರುಗಳು ಸಂಸ್ಕೃತ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರವೀಣರಾದ ವಿದ್ವಾಂಸರು ಇವರ ಸಂಸ್ಕೃತ ಪಾಂಡಿತ್ಯಕ್ಕೆ ಮೆಚ್ಚಿ ನ್ಯೂಯಾರ್ಕ ವಿದ್ಯಾಲಯವು ಇವರಿಗೆ Ph D (ವಿದ್ವತ್ ಶಿರೋಮಣಿ) ಎಂಬ ಬಹುಮಾನದ ಕಿತಾಬನ್ನು ಅರ್ಪಿಸಿತ್ತು ಆಧುನಿಕ ಮತ್ತು ಪುರಾಣ ಶಾಸ್ತ್ರಗಳೊಳಗೆ ಬಹಳೇ ವಿಖ್ಯಾತಿ ಹೊಂದಿದ ಪಂಡಿತರಿಗೆ ಶಂಕರಾಚಾರ್ಯರ ಕರವೀರ

ಮಠದ ಅಧಿಪತ್ಯವು ಪ್ರಾಪ್ತವಾದದ್ದು ಇದೊಂದು ಅಪೂರ್ವ ಯೋಗವು ಸನ್ಯಾಸ ದೀಕ್ಷೆಯನ್ನು ಧರಿಸಿ ಒಂದು ತಿಂಗಳಾಗುವ ಪೂರ್ವದಲ್ಲಿಯೇ ಈ ಜಗದ್ಗುರುಗಳು ಸಮಾಜ ಹಿತದ ಮತ್ತು ಧರ್ಮಪ್ರಸಾರದ ತಮ್ಮ ಉತ್ಸುಕತೆಯನ್ನು ವ್ಯಕ್ತಗೊಳಿಸುವಂತೆ ಮಹತ್ಕಾರ್ಯವನ್ನು ಕೈಕೊಂಡಿರುವರು ಅದೇನಂದರೆ ಕೊಲ್ಹಾಪುರ ಶಹರದಲ್ಲಿ ಮಹಾರಾಜರ ಸಮ್ಮತಿಯಿಂದ ಒಂದು ದೊಡ್ಡ ಸಂಸ್ಕೃತ ಶಿಕ್ಷಣದ ವಿದ್ಯಾಲಯವನ್ನು ಸ್ಥಾಪಿಸಿ ಅದನ್ನು ಮುಂಬಯಿ ಯುನಿವ್ಹರ್ಸಿಟಿಗೆ ಕೂಡಿಸುವರೆ ಯತ್ನಿಸುತ್ತಿರುವರು ಇದರ ವೆಚ್ಚಕ್ಕಾಗಿ ಸಂಸ್ಥಾನದಿಂದ ಪ್ರತಿವರ್ಷ ೭೦೦೦ ರೂಪಾಯಿಯ ವೇತನವನ್ನು ತೆಗೆದಿಡುವದು ಜಾಹೀರು ಮಾಡಲ್ಪಟ್ಟಿದೆ ಕೊಲ್ಹಾಪುರ ದರಬಾರದಿಂದ ಸಹ ವಾರ್ಷಿಕ ೩೦೦೦ ರೂಪಾಯಿಗಳು ಮಂಜೂರು ಮಾಡಲ್ಪಟ್ಟಿವೆ ಇದೆಲ್ಲ ಹೊಸ ಜಗದ್ಗುರುಗಳ ಪರಿಶ್ರಮದ ಫಲವು ಜನರೊಳಗೆ ಬೆಳೆಯುತ್ತ ಹೋದ ಅನಾಸ್ಥೆಯಿಂದ ಆದ ಸಂಸ್ಕೃತ ವಿದ್ಯೆಯ ಹಾನಿಯು ಬರೆದು ತೀರದು ಸೂರ್ಯ ಪ್ರಕಾಶದಂತೆ ಪ್ರಖರವಾಗಿ ನಮ್ಮ ಪುರಾಣ ಭಾರತೀಯ ಅಧೋಗತಿಯು ಜನರ ಕಣ್ಣಿನಲ್ಲಿ ಹೊಳೆಯುತ್ತಿದ್ದರೂ ಅದನ್ನು ಉದ್ಧರಿಸಲಿಕ್ಕೆ ಆಚಾರ ಧರ್ಮದಲ್ಲಿ ಮುಣುಗಿಹೋದ ಸ್ವಯಂ ತೃಪ್ತರಾದ ಯಾವ ಬ್ರಾಹ್ಮಣ ವರ್ಗಗಳು ಹವಣಿಸಿದ್ದಾರೆ? “ವಿದ್ಯಯಾ ಯಾತಿ ವಿಪ್ರತ್ವಂ” ಎಂಬ ಸ್ಮೃತಿ ವಾಕ್ಯವನ್ನೇ ನಾವು ಮರೆತಂತಾಗಿದೆ ಜಗದ್ಗುರುಗಳ ಪೂರ್ವಾಶ್ರಮದ ಸಹಕಾರಿ ಮಿತ್ರರು ಎಣಿಸಿದಂತೆ ಈ ಮಹತ್ಕಾರ್ಯವನ್ನು ಗುರುಗಳು ಸಾಧಿಸಿದ್ದು ಅವರ ಘನತೆಗೆ ಅನುರೂಪವಾದದ್ದು ಜಗದ್ಗುರುಗಳ ಆಶೀರ್ವಾದದಿಂದ ಜನ್ಮ ತಾಳಿದ ಈ ಸಂಸ್ಕೃತ ವಿದ್ಯಾಲಯವು ವೃದ್ಧಿ ಹೊಂದಲಿ ಮತ್ತು ಚಿರಕಾಲ ಬಾಳಲೆಂತ ಪ್ರಾರ್ಥಿಸುತ್ತೇವೆ ಮತ್ತು ಇದರ ಬೆಳವಣಿಗೆಯಿಂದ ಇತರೇ ಬ್ರಾಹ್ಮಣ ಸಮಾಜದವರಿಗೆ ಇಂಥ ಸಂಸ್ಥೆಗಳನ್ನು ಸ್ಥಾಪಿಸುವ ಸ್ಫೂರ್ತಿಯಾಗಲೆಂದು ಕೋರುತ್ತೇವೆ

೩. ಹಿಂದೀ ವಿದ್ಯಾರ್ಥಿಗಳಿಗೆ ಸಾಧನಮತ್ತು ಪರಿಸ್ಥಿತಿಗಳು ಅನುಕೂಲವಾದರೆ ಅವರು ಪಾಂಡಿತ್ಯದಲ್ಲಿ ಎಷ್ಟು ಎತ್ತರ ಹಾರಬಲ್ಲರು ಎಂಬದು ಅನೇಕ ಉದಾಹರಣೆಗಳಿಂದ ಬಹಳಾವರ್ತಿ ತಿಳಿದ ಬಂದದೆ ಮೊನ್ನೆಯೇ ಹೊಸದೊಂದು ದೃಷ್ಟಾಂತವು ವ್ಯಕ್ತವಾಗಿದ ರಾವಲ ಪಿಂಡಿಯೊಳಗಣ ಸಂಸ್ಕೃತ ಪ್ರೊಫೆಸರರಾದ ಶ್ರೀ ಹರಿಚಂದರೆಂಬ ಮಹಾನುಭಾವರು ಹಿಂದುಸ್ಥಾನ ಸರಕಾರದಿಂದ ೧೯೧೩ನೇ ಇಸವಿಯಲ್ಲಿ ಮಾಸಿಕ ಇನಾಮನ್ನು ಪಡೆದು ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯವನ್ನು ಸಂಪಾದಿಸಲಿಕ್ಕೆ ವಿಲಾಯತಿಗೆ ಹೋಗಿ ಅಲ್ಲಿಯ ಪರೀಕ್ಷೆಗಳಲ್ಲೆಲ್ಲ ಅಸಾಮಾನ್ಯ ಗೌರವದಿಂದ ಉತ್ತೀರ್ಣರಾದರು ಅಲ್ಲಿಂದ ಫ್ರಾನ್ಸದೇಶಕ್ಕೆ ಹೋಗಿ ಅಲ್ಲಿಯ ಜಗದ್ವಿಖ್ಯಾತ ವಿದ್ಯಾಲಯಗಳಲ್ಲೆಲ್ಲ ತಮ್ಮ ಅಲೌಕಿಕ ಪಾಂಡಿತ್ಯವನ್ನು ಮೆರಿಸಿ ಬಹಳೇ ಬಹುಮಾನದ ಕಿತಾಬುಗಳನ್ನು ಪಡೆದರು ‘ ಸಂಸ್ಕೃತ ಕಾವ್ಯ ಮತ್ತು ಕಾಳಿದಾಸ ಎಂಬ ವಿಷಯದ ಮೇಲೆ ನಾನೂರು ಪುಟಗಳ ನಿಬಂಧವನ್ನು ಬರೆದು ಪೌರ್ವಾತ್ಯ ಯಾವ ಪಂಡಿತರಿಗೂ ಇನ್ನುವರೆಗೆ ಸಿಗಲಿಲ್ಲದ ಪಾರೀಸ ವಿಶ್ವವಿದ್ಯಾಲಯದ D Litt ಎಂಬ ಬಹಳೇ ದೊಡ್ಡ ಬಿರುದನ್ನು ಗಳಿಸಿದರು ಈ ಅಸಾಮಾನ್ಯ ಪಂಡಿತರು ಈಗ ಮಾತೃದೇಶಕ್ಕೆ ಬರ ಮರಳುತ್ತಿದ್ದಾರೆಂತ ವರ್ತಮಾನ ಬಂದದೆ ಹಿಂದಮಾತೆಯ ಈ ಸುಪುತ್ರರಿಗೆ ದೀರ್ಘಾಯುಷ್ಯವೂ ಆರೋಗ್ಯವೂ ಪ್ರಾಪ್ತವಾಗಲೆಂದು ಬಯಸುವೆವು

೪ ಸ್ಥಾನಿಕ ಮುನಿಸಿಪಾಲಿಟಿಯ ತಿದ್ದುಪಡಿಸಿದ ಕ್ರಮದಂತೆ ತೆರಿಗೆಗಳು ಜುಲೈ ೧ನೇ ತಾರೀಕಿನಿಂದ ಅಮಲಿನಲ್ಲಿ ಬಂದಿವೆ ಹೊಸ ತೆರಿಗೆಯ ಕ್ರಮವು ಅವುಗಳನ್ನು ರಚಿಸಿದ ಪ್ರತಿನಿಧಿಗಳ ಪರಿಶ್ರಮದ ಮತ್ತು ನ್ಯಾಯಪ್ರಿಯತೆಯ ಸಾಕ್ಷಿಯಾಗಿರುವದೆ [illegible] ವು ಆನಂದದಿಂದ ಹೇಳುವೆವು ಇದರಲ್ಲಿ ಅಧಿಕ ಮನಸ್ತಾಪದ ಸಂಗತಿಯು [illegible] ತೆರಿಗೆಯ ಹೊಸ ನಿಯಮಗಳಲ್ಲಿ ಏನಾದರೂ [illegible] ಕನ್ಯೂನತೆಗಳು [illegible] ಬಂದಲ್ಲಿ ಅವುಗಳನ್ನು [illegible] ಮುನಿಸಿಪಾಲಿಟಿಯ ಕರ್ತವ್ಯವು [illegible] ತೆರಿಗೆಯ ಹೊಸ [illegible] ಪುಸ್ತಕದಲ್ಲಿ [illegible] ವರಿಯಲ್ಲಿ [illegible] ಆಕರಿಸಿದ್ದಾರೆ [illegible] ಮಾಡಿಸಿಕೊಂಡು [illegible] ತೆರಿಗೆಯನ್ನು [illegible] ಕೂಡಲೆ [illegible] ಅನ್ಯಾಯವಾದ [illegible] ಇಂಥ [illegible] ಅನುಭವಿಸಿ [illegible] ಹೋದಕಾಲಕ್ಕೆ [illegible] ಮುನಿಸಿಪಾಲಿಟಿಯ ಚಾಲಕರ [illegible] ಇತರೇ ಜಿನಸ [illegible] ವಸೂಲಾಗ [illegible] ತೆರಿಗೆಯನ್ನು ತಕ್ಕೊಳ್ಳುವ [illegible] ಕ್ರಮವನ್ನು [illegible] ಕಾಯಿದೆಯು [illegible] ಇದ್ದಿದೆ [illegible] ಅನುಕೂಲತೆಯನ್ನು ಮಾಡಿಕೊಟ್ಟ [illegible] ನಾವು ಬೇರೆ ಹೇಳುವ ಅವಶ್ಯಕತೆ ಇಲ್ಲ

ಗೋವೆಯ ವರ್ತಮಾನ.

(ಬಾತ್ಮೀದಾರರಿಂದ)

ಇಲ್ಲಿಯ [illegible] ಪ್ರಕೃತಿಯ ಅಸ್ವಸ್ಥತೆಯ ಮೂಲಕ ಸ್ವದೇಶಕ್ಕೆ ತರಳಿದರು ಇವರಷ್ಟು ದಯಾಳು ಧೊರೆಗಳು ನಮಗೆ [illegible] ಇವರ ವಿಯೋಗದಿಂದ ಜನರು ಹಳಹಳಿಸುವರು

ವಣಜಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆಯು ಬಹಳೇ ವರಿ ಈಗ ೩೦೦ಕ್ಕೆ ಮುಟ್ಟಿರುವದು ಇದರೊಳಗೆ ಹಿಂದು ಜನರ ಸಂಖ್ಯೆಯೇ ಹೆಚ್ಚು [illegible] ವಿದ್ಯಾಲಯದಲ್ಲಿ ಪೂರ್ಣ ಉಚಿತವಾಗಿ ಶಿಕ್ಷಣ ಕೊಡುವ ದೊಡ್ಡ ವೆಚ್ಚವು ಸರಕಾರವೇ ಸಹಿಸುತ್ತದೆ ಹಿಂದುಳಿದ ಗೋವೆಯ ಸರಕಾರದ ಈ ಔದಾರ್ಯವು ಅನುಕರಣೀಯವು ಗೋವೆಯೊಳಗಿನ ಕೆಲ ವಿದ್ಯಾರ್ಥಿಗಳು ಮುಂಬಯಿಯಲ್ಲಿ ಹೋಗಿ ಕಲಿತ ಅಲ್ಲಿಯ ಯುನಿವ್ಹರ್ಸಿಟಿಯ ಪರೀಕ್ಷೆಯಲ್ಲಿ ಬಹಳೇ ಹೆಸರು ಹೊಂದುತ್ತಿರುವರು ಈಗಿನ ೬ ವರ್ಷದಿಂದ ಪ್ರತಿವರ್ಷ ಬಿ ಎ ಪರೀಕ್ಷೆಯಲ್ಲಿ ಮೊದಲನೇ ಕ್ಲಾಸಿನಲ್ಲಿ ಒಬ್ಬನಾದರೂ ಗೋವಾನೀಜನು ತಪ್ಪದೆ ಪಾಸಾಗಿದ್ದಾನೆ ಇದು ನಮಗೆಷ್ಟು ಭೂಷಣಾಸ್ಪದವು

ಪೋರ್ತುಗಾಲವು ಗೋವಾ ಪ್ರಾಂತಕ್ಕೆ ಕೊಡಮಾಡಿದ ಸ್ವರಾಜ್ಯದ ಸನದ ಲಿಸಬನದಿಂದ ಹೊರಬಿದ್ದರೂ ಜನರು ವಾಡಿಕೆಯಂತೆ ನಿರುತ್ಸುಕರಿದ್ದಾರೆ ದುಡಿಯದೆ [illegible] ಳಿಸಿದ ಹಣದಂತ ಇದರ ಅವಸ್ಥೆಯಾಗುವದೇನು

ರೋಮ ಶಹರದಲ್ಲಿ ಕೂಡಿದ ಮಿತ್ರರಾಷ್ಟ್ರಗಳ ಪರಿಷತ್ತಿನಲ್ಲಿ ಪೋರ್ತುಗಾಲದ ತರ್ಫೆಯಿಂದ ಹೋದ ಪ್ರತಿನಿಧಿಗಳೊಳಗೆ ಒಬ್ಬ ಹಿಂದೀ ಗೃಹಸ್ಥರಿರುವರು ಅಲ್ಲಿಯ ಪ್ರಮುಖ ವೃತ್ತಪತ್ರದೊಳಗಿನ ಅವರ ಹೊಗಳಿಕೆಯನ್ನು ಕೇಳಿ ಗೋವೆ ಜನರಿಗೆಲ್ಲ ಅಭಿಮಾನವೂ ಆನಂದವೂ ಉಂಟಾಗಿದೆ

ಗೋವಾ ಪೋಸ್ಟ ಆಫೀಸನಲ್ಲಿ ಸ್ಟಾಂಪುಗಳಿಲ್ಲದೆ ಅಡಚಣಿಯಾಗಿದೆ ಇಂಗ್ರೇಜಿ ರೂಪಾಯಿಗಳಿಗೆ ಈಗ ಊರಲ್ಲಿ ಡ್ಯೂಟಿ ತಕ್ಕೊಳ್ಳುವದು ನಿಶ್ಚಯಿಸಿರುವದು

ಯುದ್ಧ ವರ್ತಮಾನ.

ಇತ್ತಲಾಗಿನ ಮಹತ್ವದ ಮತ್ತು ಆನಂದಕರ ವೃತ್ತವೇನಂದರೆ ರಶ್ಯವು ಪುನಃ ಎಚ್ಚತ್ತು ಗೆಲಿಸಿಯಾದಲ್ಲಿ ಅದ್ಭುತ ಶೌರ್ಯವನ್ನು ಪ್ರಕಟಿಸ ಹತ್ತಿರುವದು ಹಿಂದಿನ ಬಗೀನ ಆಟವನ್ನು ಬಿಸಲಾಸನು ತಗ್ಗಿಸಿಬಿಟ್ಟಿರುವನು ಗ್ರೀಸದಲ್ಲಿ ವ್ಹೆನಿಝುಲೋಸನ ಮಂತ್ರಿಮಂಡಳವು ಅಧಿಕಾರರೂಢವಾದದ್ದು ಶುಭಚಿನ್ಹೆಯು ಫ್ರಾನ್ಸದೊಳಗಿನ ಬ್ರಿಟಿಷರ ಮತ್ತು ಫ್ರೆಂಚರ ಪ್ರಗತಿಯು ಅವ್ಯಾಹತವಾಗಿದೆ ಇಂಗ್ಲಂಡದಲ್ಲಿ ಆರಳೆಯ ಕೊರತೆಯು ಉಂಟಾದ ಮೂಲಕ ಹಿಂದಿನ ೫೦ ರೂಪಾಯಿಯ ಧಾರಣೆಯು ಈಗ ೫೦ ವರ್ಷಗಳಿಂದ ಪುನಃ ತಲೆದೋರಿದೆ ಆಹಾರದ ಜಿನಸುಗಳ ಕೊರತೆಯು ಅಲ್ಪಸ್ವಲ್ಪ ಕಾಣಹತ್ತಿದೆ

ಸರಕಾರೀ ಗ್ಯಾಝೆಟ.

ನಮ್ಮ ಜಿಲ್ಹೆಯ ಡೆಪ್ಯುಟಿ ಸುಪರಿಂಟೆಂಡೆಂಟ ಒಫ್ ಪೋಲಿಸರಾದ ರಾಜಾರಾಮ ರಘುನಾಥ ಶಿರಗಾಂವಕರರು ವರ್ಗವಾಗಿ ಅವರ ಜಾಗಕ್ಕೆ ಮೊರಾಂಜಿ ರತನಶಾ ಖಾರಖರೆಂಬುವರು ನೇಮಿಸಲ್ಪಟ್ಟಿರುವರು.

ಶ್ರೀನಿವಾಸ ಶೇಷೊ ಕೋಯಿಮತ್ತೂರರವರು ೫ನೇ ಗ್ರೇಡ ಡೇಪ್ಯುಟಿ ಕಲ್ಲೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಇಹವೃತ್ತ.

ಕುಮಟಾ — ಇಷ್ಟರವರೆಗೆ ಮಳೆಯು ೩೪—೩೫ ಇಂಚು ಆಗಿದೆ. ಕಳೆದ ೮—೧೦ ದಿವಸ ಮಳೆ ಇಲ್ಲದೆ ಒಕ್ಕಲಿಗರಿಗೆ ಚಿಂತೆಯಾಗಿದೆ ಈಗ ಪುನಃ ಸ್ವಲ್ಪ ಮಳೆಯ ಚಿನ್ಹೆಗಳಾಗಿವೆ

ರಾವ ಸಾಹೇಬ ರಾಮಚಂದ್ರ ಅಣ್ಣಾಪ್ಪಯ್ಯನವರು ಹುಬ್ಬಳ್ಳಿಯಿಂದ ಇಲ್ಲಿ ಬಂದು ಮುನಿಸಿಪಾಲಿಟಿಯ ವ್ಹಾಯಿಸ ಪ್ರಸಿಡೆಂಟ ಜಾಗದಮೇಲೆ ಹಾಜರಾದರು.

ಕುಮಟಾ ಹೊನ್ನಾವರ ರೇಂಜಿನ ಅಬಕಾರಿ ಇನಸ್ಪೆಕ್ಟರ ಮಿ ಎಮ್ ಕೆ ಗಾಯಕವಾಡರವರು ಇಲ್ಲಿಗೆ ಬಂದು ತಮ್ಮ ಕೆಲಸದ ಚಾರ್ಜ ತೆಗೆದುಕೊಂಡರು

ಇಲ್ಲಿ ಕಳೆದ ತಾ ೩ನೆ ದಿವಸ ಒಂದು ಜೀವವಿಲ್ಲದ ಸಣ್ಣ ಬಾಲೆಯು ಜನರು ತಿರುಗಾಡುವ ಹೊಂಡದಲ್ಲಿ ಬಿದ್ದದ್ದು ಪೋಲಿಸರಿಗೆ ತಿಳಿದು ಪಂಚನಾಮೆಯಾಗಿ ತಪಾಸ ನಡೆದು ಫರ್ಸ್ಟಕ್ಲಾಸ ಮ್ಯಾಜಿಸ್ಟ್ರೇಟ ಆರೋಪದಮೇಲೆ ಒಬ್ಬ ಶೂದ್ರ ಜಾತಿಯ ವಿಧವೆ ಹೆಂಗಸನ್ನು ಹಿಡಿದಿರುವರು ಆರೋಪದ ತನಿಖೆಯು ನಡೆದದೆ

ಶಿರಸಿ — ಇತ್ತಲಾಗೆ ೬—೮ ದಿವಸದಿಂದ ಮಳೆಯು ಬಿಲ್ಕುಲ ಇಲ್ಲದ್ದರಿಂದ [illegible] ಬೇರೆ ಯಾವ ಮಹದುಪದ್ರವ [illegible] ಇದ್ದಾನೆ [illegible] ತಿಳಿಯದೆ ಜನರು ಚಿಂತಾಕ್ರಾಂತರಾಗಿರುತ್ತಾರೆ

ಇಲ್ಲಿಯ ವಾರದ [illegible] ಲಾಟರಿ [illegible] ಬಾಗಿ ರೂಪಾಯಿ ೪೦೦೦ ಇಲ್ಲಿಯ ಹೆಗ್ಗಡೆ ವರ ಪಾಲಾಗಿ ಒಬ್ಬ [illegible] ಅಯ್ಯನವರಿಗೆ ಅನುಕ್ರಮವಾಗಿ ೩೦೦೦ ಮತ್ತು ೧೦೦೦ ರ ಇನಾಮ [illegible] ಇವರಿಬ್ಬರೇ ಭಾಗ್ಯವಂತರ

Printed & Publ[illegible] by K[illegible] [illegible]nario Keshav Shenvi at his Star of Kanara Press Kumta

THE

KANARA NEWS.

ಕಾನಡಾ ವೃತ್ತ.

ಸತ್ಯಂ ब्रूयात्प्रिय ब्रूयान्नब्रूयात्सत्यमप्रिय ।
प्रिय च नानृत ब्रूयादेष धर्म: सनातन: ॥

ಪತ್ರದ ವರ್ಗಣಿ -
ಕುಮಟೆಯಲ್ಲಿ ಅಗಾವು
ರೂಪಾಯಿ 1-0-0
ಅಂಚೆವೆಚ್ಚ ಶೇರಿ •
ರೂಪಾಯಿ 1-6-6
ಒಂದು ಸಂಚಿಕೆಗೆ 0-0-9

ಜಾಹಿರಾತುಗಳ ದರ -
ಕನ್ನಡ, ಇಂಗ್ಲಿಷ ಪ್ರಾಕಾಶ್ಯಾಪಿನ (೧೫ ಎಮ್‌ಉದ್ದ) ೮ ಸಾಲುಗಳ ವರೆಗೆ ರೂ 100
ಅನಂತ್ರ ಪ್ರತಿ ಸಾಲಿಗೆ ೦-2 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

Registered No. B. 1720

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೨೫ ಮಾಹೆ ಜುಲೈ, ಸನ್ ೧೯೧೭ ನೇ ಇಸವಿ. [ಸಂಚಿಕೆ ೨೧.

→ ಇಕ್ಲಿಪ್ಸ ದ್ರಾಪ್ಸ ←

ಈ ಔಷಧವು ನರಸಂಸಾರವನ್ನು ಕಾಯುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ ಮೂತ್ರಗೊಳ್ಳು, ಮೂತ್ರಕೋಶ, ಅನ್ನಕೋಶ, ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ ತಲೆನೋವು ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0-6-0 ವಿ. ಪಿ ಬೇರೆ
ಡಜನ್ ಶೀಸೆಗಳಿಗೆ ರೂ 4-0-0 ವಿ ಪಿ ಸಹಿತ
ವಿಳಾಸ – ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ,
ಮಂಗಳೂರು.

☞ ಟಿ ಜಿ ಮೆಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ ಸಂಧಿವಾತ ಸ್ನಾಯುಗಳ ನೆಗಡಿ, ನರಗಳ ಸೆಳತ, ಕೆಮ್ಮು, ಜ್ವರ, ಕಾಲರಾ, ಬೇಗು, ಬಾಣಂತೀರೋಗ, ಪ್ಲೇಗ ಹೊಟ್ಟೆಕಶತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ದಾಮುಖೀ ಉಪಾಯವದೆ ಬಾಟ್ಲಿ ಕಿ ೧॥ ರೂ ಟಪಾಲ ಹಾಸಲು ೪ ಆಣೆ ಬೇರೆ ಒಂದೇಸತೀ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ ಕಮಿಶನ್ ಹೊರತು ಅಂಚೇವೆಚ್ಚ ಬೇರೆ

ದದ್ರುಘ್ನ ಜಾಲೀಮುಬಾಮ — ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ಹುಳಗಳು, ಉರಿ ಬೆಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು

ಬಾ ಕಿ ೧೨ ಆಣೆ ಅಂಚೆವೆಚ್ಚ ೩ ಬಾಟ್ಲಿ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ ಪತ್ತೆ —

ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ

ज्योतिषी.

जनार्दन दत्तात्रय माने. बुधवार नं २३४, पुणे ज्योतिषाची कामें सूक्ष्म तऱ्हेने केली जातात विशेष माहिती समक्ष अगर पत्रद्वारे

ಬೇಕು ! ಬೇಕು !!] • ಕಾನಡಾವೃತ್ತ. [ಬಾತ್ಮೀದಾರರು !!!

ಪ್ರತಿ ತಾಲೂಕಿನಿಂದ ನಿಜವಾದ ಮಾಹಿತಿ ಆಗಿಂದಾಗ್ಗೆ ಪೂರೈಸುವ ಬಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೩೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿ ಹೊಂದುತ್ತದೆ. ಅವಿಚಾರದಿಂದ ಮಾಡಿದ ದುಷ್ಕೃತ್ಯದ ಮೂಲಕ ಬೆಳೆದ ಶಾರೀರಕ ಮತ್ತು ಮಾನಸೀಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿದಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಮಯವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ವಾಸಿಯಾಗುವವು ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು ರಕ್ತ ಶ್ವೇತಸ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ತ್ವರ್ಯವಾಗಿ ದೂರವಾಗಿ ವ್ಯಂಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ನಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೨೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು ಅಂಚೆವೆಚ್ಚ ಬೇರೆ ಬೀಳುವದು ೨೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗುತ್ತಿದೆ

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಶಿಕ್ಕಿರುವವು.

ವರ್‍ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ ಜೀ ಚವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ದೆಶೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು ಇದಲ್ಲದೆ,

ಹೊಸ ಶಿಫಾರಸು ಪತ್ರವು.

ಸಂಮಜೇ ಪಟ್ಟಣದಿಂದ ನಾಗೋಬಾ ನೇವಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರೆಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು, ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು ಆದರೂ ಈಗ ತಿರುಗಿ ೩೭ ರೂಪಾಯಿಯ ಔಷಧೀಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ ಪಿ ದ್ವಾರ ಕಳುಹಿಸಿ ಉಪಕರಿಸಿರಿ ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಶಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು ಡಬ್ಬಿಗಳು ಶಿಗುವ ಪತ್ತೆ —

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,
ಫೋರ್ಟ್ಸ, ನಿಪಾಣಿ (ಬೆಳಗಾಂ:

ಮರದ ಅಧಿಪತ್ಯವು ಪ್ರಾಪ್ತವಾದದ್ದು ಇದೊಂದು ಅಪೂರ್ವ ಯೋಗವು ಸನ್ಯಾಸ ದೀಕ್ಷೆಯನ್ನು ಧರಿಸಿ ಒಂದು ತಿಂಗಳಾಗುವ ಪೂರ್ವದಲ್ಲಿಯೇ ಈ ಜಗದ್ಗುರುಗಳು ಸಮಾಜ ಹಿತದ ಮತ್ತು ಧರ್ಮಪ್ರಸಾರದ ತಮ್ಮ ಉತ್ಸುಕತೆಯನ್ನು ವ್ಯಕ್ತಗೊಳಿಸುವಂತೆ ಮಹತ್ಕಾರ್ಯವನ್ನು ಕೈಕೊಂಡಿರುವರು ಅದೇನಂದರೆ ಕೊಲ್ಹಾಪುರ ಶಹರದಲ್ಲಿ ಮಹಾರಾಜರ ಸಮ್ಮತಿಯಿಂದ ಒಂದು ದೊಡ್ಡ ಸಂಸ್ಕೃತ ಶಿಕ್ಷಣದ ವಿದ್ಯಾಲಯವನ್ನು ಸ್ಥಾಪಿಸಿ ಅದನ್ನು ಮುಂಬಯಿ ಯುನಿವ್ಹರ್ಸಿಟಿಗೆ ಕೂಡಿಸುವರೆ ಯತ್ನಿಸುತ್ತಿರುವರು ಇದರ ವೆಚ್ಚಕ್ಕಾಗಿ ಸಂಸ್ಥಾನದಿಂದ ಪ್ರತಿವರ್ಷ ೭೦೦೦ ರೂಪಾಯಿಯ ವೇತನವನ್ನು ತೆಗದಿಡುವದು ಜಾಹೀರು ಮಾಡಲ್ಪಟ್ಟದೆ. ಕೊಲ್ಹಾಪುರ ದರಬಾರದಿಂದ ಸಹ ವಾರ್ಷಿಕ ೩೦೦೦ ರೂಪಾಯಿಗಳು ಮಂಜೂರು ಮಾಡಲ್ಪಟ್ಟವೆ ಇದೆಲ್ಲ ಹೊಸ ಜಗದ್ಗುರುಗಳ ಪರಿಶ್ರಮದ ಫಲವು ಜನರೊಳಗೆ ಬೆಳೆಯುತ್ತ ಹೋದ ಅನಾಸ್ಥೆಯಿಂದ ಆದ ಸಂಸ್ಕೃತ ವಿದ್ಯೆಯ ಹಾನಿಯು ಬರೆದು ತೀರದು ಸೂರ್ಯ ಪ್ರಕಾಶದಂತೆ ಪ್ರಖರವಾಗಿ ನಮ್ಮ ಪುರಾಣ ಭಾರತೀಯ ಅಧೋಗತಿಯು ಜನರ ಕಣ್ಣಿನಲ್ಲಿ ಹೊಳೆಯುತ್ತಿದ್ದರೂ ಅದನ್ನು ಉದ್ಧರಿಸಲಿಕ್ಕೆ ಆಚಾರ ಧರ್ಮದಲ್ಲಿ ಮುಣುಗಿಹೋದ ಸ್ವಯಂ ತೃಪ್ತರಾದ ಯಾವ ಬ್ರಾಹ್ಮಣ ವರ್ಗಗಳು ಹವಣಿಸಿದ್ದಾರೆ? "ವಿದ್ಯಯಾ ಯಾತಿ ವಿಪ್ರತ್ವಂ" ಎಂಬ ಸ್ಮೃತಿ ವಾಕ್ಯವನ್ನೇ ನಾವು ಮರೆತಂತಾಗಿದೆ ಜಗದ್ಗುರುಗಳ ಪೂರ್ವಾಶ್ರಮದ ಸಹಕಾರಿ ಮಿತ್ರರು ಎಣಿಸಿದಂತೆ ಈ ಮಹತ್ಕಾರ್ಯವನ್ನು ಗುರುಗಳು ಸಾಧಿಸಿದ್ದು ಅವರ ಘನತೆಗೆ ಅನುರೂಪವಾದದ್ದು ಜಗದ್ಗುರುಗಳ ಆಶೀರ್ವಾದದಿಂದ ಜನ್ಮ ತಾಳಿದ ಈ ಸಂಸ್ಕೃತ ವಿದ್ಯಾಲಯವು ವೃದ್ಧಿ ಹೊಂದಲಿ ಮತ್ತು ಚಿರಕಾಲ ಬಾಳಲೆಂತ ಪ್ರಾರ್ಥಿಸುತ್ತೇವೆ ಮತ್ತು ಇದರ ಬೆಳವಣಿಗೆಯಿಂದ ಇತರೇ ಬ್ರಾಹ್ಮಣ ಸಮಾಜದವರಿಗೆ ಇಂಥ ಸಂಸ್ಥೆಗಳನ್ನು ಸ್ಥಾಪಿಸುವ ಸ್ಫೂರ್ತಿಯಾಗಲೆಂದು ಕೋರುತ್ತೇವೆ

೩. ಹಿಂದೀ ವಿದ್ಯಾರ್ಥಿಗಳಿಗೆ ಸಾಧನೆಮತ್ತು ಪರಿಸ್ಥಿತಿಗಳು ಅನುಕೂಲವಾದರೆ ಅವರು ಪಾಂಡಿತ್ಯದಲ್ಲಿ ಎಷ್ಟು ಎತ್ತರ ಹಾರಬಲ್ಲರು ಎಂಬದು ಅನೇಕ ಉದಾಹರಣೆಗಳಿಂದ ಬಹಳಾವರ್ತಿ ತಿಳಿದುಬಂದದೆ ಮೊನ್ನೆಯೇ ಹೊಸದೊಂದು ದೃಷ್ಟಾಂತವು ವ್ಯಕ್ತವಾಗಿದ. ರಾವಲ ಪಿಂಡಿಯೊಳಗಣ ಸಂಸ್ಕೃತ ಪ್ರೊಫೆಸರರಾದ ಶ್ರೀ. ಹರಿಚಂದರೆಂಬ ಮಹಾನುಭಾವರು ಹಿಂದುಸ್ಥಾನ ಸರಕಾರದಿಂದ ೧೯೧೩ನೇ ಇಸವಿಯಲ್ಲಿ ಮಾಸಿಕ ಇನಾಮನ್ನು ಪಡೆದು ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯವನ್ನು ಸಂಪಾದಿಸಲಿಕ್ಕೆ ವಿಲಾಯತಿಗೆ ಹೋಗಿ ಅಲ್ಲಿಯ ಪರೀಕ್ಷೆಗಳಲ್ಲೆಲ್ಲ ಅಸಾಮಾನ್ಯ ಗೌರವದಿಂದ ಉತ್ತೀರ್ಣರಾದರು ಅಲ್ಲಿಂದ ಫ್ರಾನ್ಸದೇಶಕ್ಕೆ ಹೋಗಿ ಅಲ್ಲಿಯ ಜಗದ್ವಿಖ್ಯಾತ ವಿದ್ಯಾಲಯಗಳಲ್ಲೆಲ್ಲ ತಮ್ಮ ಅಲೌಕಿಕ ಪಾಂಡಿತ್ಯವನ್ನು ಮೆರಿಸಿ ಬಹಳೇ ಬಹುಮಾನದ ಕಿತಾಬುಗಳನ್ನು ಪಡೆದರು 'ಸಂಸ್ಕೃತ ಕಾವ್ಯ ಮತ್ತು ಕಾಳಿದಾಸ ಎಂಬ ವಿಷಯದ ಮೇಲ ನಾನೂರು ಪುಟಗಳ ನಿಬಂಧವನ್ನು ಬರೆದು ಪೌರ್ವಾತ್ಯ ಯಾವ ಪಂಡಿತರಿಗೂ ಇನ್ನುವರೆಗೆ ಸಿಗಲಿಲ್ಲಾದ ಪಾರೀಸ ವಿಶ್ವವಿದ್ಯಾಲಯದ D Litt ಎಂಬ ಬಹಳೇ ದೊಡ್ಡ ಬಿರುದನ್ನು ಗಳಿಸಿದರು. ಈ ಅಸಾಮಾನ್ಯ ಪಂಡಿತರು ಈಗ ಮಾತೃದೇಶಕ್ಕೆ ಬರುವ[illegible] ತೆರಳಿಬಿಟ್ಟರೆಂತ ವರ್ತಮಾನ ಬಂದದೆ. ಹಿಂದಮಾತೆಯು ಈ ಸುಪುತ್ರರಿಗೆ ದೀರ್ಘಾಯುಷ್ಯವೂ, ಆರೋಗ್ಯವೂ ಪ್ರಾಪ್ತವಾಗಲೆಂದು ಬಯಸುವೆವು

೪ ಸ್ಥಾನಿಕ ಮುನಿಸಿಪಾಲಿಟಿಯು ತಿದ್ದುಪಡಿಸಿದ ಕ್ರಮದಂತೆ ತೆರಿಗಗಳು ಜುಲ್ಯಾ ೧ನೇ ತಾರೀಕಿನಿಂದ ಅಮಲಿನಲ್ಲಿ ಬಂದಿವೆ ಹೊಸ ತೆರಿಗೆಯ ಕ್ರಮವು ಅವುಗಳನ್ನು ರಚಿಸಿದ ಪ್ರತಿನಿಧಿಗಳ ಪರಿಶ್ರಮದ ಮತ್ತು ನ್ಯಾಯಪ್ರೀತಿಯ ಸಾಕ್ಷಿಯಾಗಿರುವದೆಂದು ನಾವು ಆನಂದದಿಂದ ಹೇಳುವೆವು ಇದೆಲ್ಲ ಅಭಿನಂದನಾಸ್ಪದ ಸಂಗತಿಯು ಆದರೆ ತೆರಿಗೆಯ ಹೊಸ ನಿಯಮಗಳಲ್ಲಿ ಏನಾದರೂ ಸ್ವಾಭಾವಿಕ ನ್ಯೂನತೆಗಳು ಕಂಡು ಬಂದಲ್ಲಿ ಅವುಗಳನ್ನು ದೂರಪಡಿಸುವದು ಮುನಿಸಿಪಾಲಿಟಿಯ ಕರ್ತವ್ಯವಾಗಿದೆ ತೆರಿಗೆಯ ಹೊಸ ಕೋಷ್ಟಕದಲ್ಲಿ " ಕಾಯಿಸ್ತೆ ವಾಳೆಯ ಪತಿ " ಎಂಬ ಸದರಿನಲ್ಲಿ ತಗೆದುಕೊಳ್ಳುವ ತೆರಿಗೆಯನ್ನು ಆಕರಿಸಿದ್ದಾರೆ [illegible] ಮ ನಿರ್ಣಯಿಸಿದ್ದಲ್ಲಿ ನಾಕ್ಕೈದು ವಾಳೆ ಎರಗಳನ್ನು ಕಂಕುಳೊಳಗ ಹಾಕಿ ತಲೆ ಮೇಲಿಂದ ಸಹ ತಪ್ಪ ತೆರಿಗೆಯನ್ನು ಕೊಡತಕ್ಕವರಿಗೆ ಅನ್ಯಾಯವಾಗುವದು ಇಂಥ ಸ್ವಾಭಾವಿಕ ನ್ಯೂನತೆಗಳನ್ನು ಅನುಭವದಿಂದ ಕಂಡು ಬಂದತ್ತೆ ದೂರಪಡಿಸಿ ಸ್ಪಷ್ಟೀಕರಿಸುವದೆ ಮುನಿಸಿಪಾಲಿಟಿಯ ಚಾಲಕರು ಮಾಡತಕ್ಕದ್ದು ಇರುವದು ಇತರೇ ಬಿನಸಗಳಿಗೆ ತೂಕದ ಆಕಾರ ತೆರಿಗೆಯು ವಸೂಲಾಗುವಾಗ ಈ [illegible]ಕ್ಕಳಿಗೆ ಸಹ ಅಂಶತಃ ತೆರಿಗೆಯನ್ನು ತಕ್ಕೊಳ್ಳುವ ನಿಯಮವನ್ನು ಪಾಲಿಸಿದರೆ ಕಾಯಿದೆಯ ಬಾಧೆ ಇಲ್ಲದೆ ಜನರಿಗೆ ಅನುಕೂಲತೆಯನ್ನು ಮಾಡಿಕೊಟ್ಟಂತಾಗುವದು ಇಂತ ನಾವು ಬೇರೆ ಹೇಳುವ ಅವಶ್ಯಕತೆ ಇಲ್ಲ

ಗೋವೆಯ ವರ್ತಮಾನ.

(ಬಾತ್ಮೀದಾರರಿಂದ)

ಇಲ್ಲಿಯ ಲೋಕಪ್ರಿಯ ಗವ್ಹರ್ನರ ಧೊರೆಗಳು ಪ್ರಕೃತಿಯ ಅಸ್ವಸ್ಥತೆಯ ಮೂಲಕ ಸ್ವದೇಶಕ್ಕೆ ತೆರಳಿದರು ಇವರಷ್ಟು ದಯಾಳು ಧೊರೆಗಳು ನಮಗೆ ಎಂದೂ ಸಿಕ್ಕಿದ್ದಿಲ್ಲ ಇವರ ವಿಯೋಗದಿಂದ ಜನರು ಹಳಹಳಿಸುವರು

ಪಣಜಿ ಕಾಲೇಜದ ವಿದ್ಯಾರ್ಥಿಗಳ ಸಂಖ್ಯೆಯು ಬಹಳೇ ಏರಿ ಈಗ ೩೦೦ಕ್ಕೆ ಮುಟ್ಟಿರುವದು ಇದರೊಳಗ ಹಿಂದು ಜನರ ಸಂಖ್ಯೆಯೇ ಹೆಚ್ಚು ಇಷ್ಟುದೊಡ್ಡ ವಿದ್ಯಾಲಯದಲ್ಲಿ ಪೂರ್ಣ ಉಚಿತವಾಗಿ ಶಿಕ್ಷಣ ಕೊಡುವ ದೊಡ್ಡ ವೆಚ್ಚವು ಸರಕಾರವೇ ಸಹಿಸುತ್ತದೆ ಹಿಂದುಳಿದ ಗೋವೆಯ ಸರಕಾರದ ಈ ಔದಾರ್ಯವು ಅನುಕರಣೀಯವು ಗೋವೆಯೊಳಗಿನ ಕೆಲ ವಿದ್ಯಾರ್ಥಿಗಳು ಮುಂಬಯಿಯಲ್ಲಿ ಹೋಗಿ ಕಲಿತು ಅಲ್ಲಿಯ ಯುನಿವ್ಹರ್ಸಿಟಿಯ ಪರೀಕ್ಷೆಯಲ್ಲಿ ಬಹಳೇ ಹೆಸರು ಹೊಂದುತ್ತಿರುವರು ಈಗಿನ ೪ ವರ್ಷದಿಂದ ಪ್ರತಿವರ್ಷ ಬಿ ಎ ಪರೀಕ್ಷೆಯಲ್ಲಿ ಮೊದಲನೇ ಕ್ಲಾಸಿನಲ್ಲಿ ಒಬ್ಬನಾದರೂ ಗೋವಾನೀಜನು ತಪ್ಪದೆ ಪಾಸಾಗಿದ್ದಾನೆ ಇದು ನಮಗೆಷ್ಟು ಭೂಷಣಾಸ್ಪದವು

ಪೋರ್ತುಗಾಲವು ಗೋವಾ ಪ್ರಾಂತಕ್ಕೆ ಕೊಡಮಾಡಿದ ಸ್ವರಾಜ್ಯದ ಸನದು ಲಿಸಬನದಿಂದ ಹೊರಬಿದ್ದರೂ ಜನರು ವಾಡಿಕೆಯಂತೆ ನಿರುತ್ಸಾಹಕರಿದ್ದಾರೆ ದುಡಿಯದೆ ಗಳಿಸಿದ ಹಣದಂತೆ ಇದರ ಅವಸ್ಥೆಯಾಗುವದೇನು.

ರೋಮ ಶಹರದಲ್ಲಿ ಕೂಡಿದ ಮಿತ್ರರಾಷ್ಟ್ರಗಳ ಪರಿಷತ್ತಿನಲ್ಲಿ ಪೋರ್ತುಗಾಲದ ತರ್ಫೆನಿಂದ ಹೋದ ಪ್ರತಿನಿಧಿಗಳೊಳಗೆ ಒಬ್ಬ ಹಿಂದೀ ಗೃಹಸ್ಥರಿರುವರು ಅಲ್ಲಿಯ ಪ್ರಮುಖ ವೃತ್ತಪತ್ರದೊಳಗಿನ ಅವರ ಹೊಗಳಿಕೆಯನ್ನು ಕೇಳಿ ಗೋವೆ ಜನರಿಗೆಲ್ಲ ಅಭಿಮಾನವೂ ಆನಂದವೂ ಉಂಟಾಗಿದೆ

ಗೋವಾ ಪೋಸ್ಟು ಆಫೀಸನಲ್ಲಿ ಸ್ಟ್ಯಾಂಪುಗಳಿಲ್ಲದೆ ಅಡಚಣೆಯಾಗಿದೆ. ಇಂಗ್ರೇಜಿ ರೂಪಾಯಿಗಳಿಗೆ ಈಗ ಊರಲ್ಲಿ ಡ್ಯೂಟಿ ತಕ್ಕೊಳ್ಳುವದು ನಿಲ್ಲಿಸಿರುವದು.

ಯುದ್ಧ ವರ್ತಮಾನ.

ಇತ್ತಲಾಗಿನ ಮಹತ್ವದ ಮತ್ತು ಆನಂದಕರ ವೃತ್ತವೇನಂದರೆ ರಶ್ಯವು ಪುನಃ ಎಚ್ಚತ್ತು ಗೆಲಿಸಿಯಾದಲ್ಲಿ ಅದ್ಭುತ ಶೌರ್ಯವನ್ನು ಪ್ರಕಟಿಸ ಹತ್ತಿರುವದು. ಹಿಂದಿನ ಬಗೆಯ ಆಟವನ್ನು ಬಿಸಲಾಘನು ತಗ್ಗಿಸಿಬಿಟ್ಟಿರುವನು ಗ್ರೀಸದಲ್ಲಿ ವ್ಹೆನಿಜುಲೋಸನ ಮಂತ್ರಿಮಂಡಳವು ಅಧಿಕಾರರೂಢವಾದದ್ದು ಶುಭಚಿನ್ಹೆಯು. ಫ್ರಾನ್ಸದೊಳಗಿನ ಬ್ರಿಟಿಷರ ಮತ್ತು ಫ್ರೆಂಚರ ಪ್ರಗತಿಯು ಅವ್ಯಾಹತವಾಗಿದೆ ಇಂಗ್ಲಂಡದಲ್ಲಿ ಆರಳೆಯ ಕೊರತೆಯು ಉಂಟಾದ ಮೂಲಕ ಹಿಂದಿನ ೫೦೦ ರೂಪಾಯಿಯ ಧಾರಣೆಯು ಈಗ ೫೦ ವರ್ಷಗಳಿಂದ ಪುನಃ ತಲೆದೋರಿದೆ. ಆಹಾರದ ಜಿನಸುಗಳ ಕೊರತೆಯು ಅಲ್ಪಸ್ವಲ್ಪ ಕಾಣುತ್ತಿದೆ,

ಸರಕಾರೀ ಗ್ಯಾಝೆಟ.

ನಮ್ಮ ಜಿಲ್ಹೆಯ ಡೆಪ್ಯುಟಿ ಸುಪರಿಂಟೆಂಡೆಂಟ ಆಫ್ ಪೋಲಿಸರಾದ ರಾಜಾರಾಮ ರಘುನಾಥ ಶಿರಗಾಂವಕರರು ವರ್ಗವಾಗಿ ಅವರ ಜಾಗಕ್ಕೆ ಮೊರಮಾಂಜಿ ರತನಶಾ ಪಾರಖರೆಂಬುವರು ನೇಮಿಸಲ್ಪಟ್ಟಿರುವರು.

ಶ್ರೀನಿವಾಸ ಶೇಷೊ ಕೋಯಿಮತ್ತೂರರವರು ೫ನೇ ಗ್ರೇಡ ಡೆಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಇಹವೃತ್ತ.

ಕುಮಟಾ — ಇಷ್ಟರಿಂದಿಗೆ ಮಳೆಯು ೩೪–೩೫ ಇಂಚು ಆಗಿತು. ಕಳೆದ ೮–೧೦ ದಿವಸ ಮಳೆ ಇಲ್ಲದೆ ಒಕ್ಕಲಿಗರಿಗೆ ಚಿಂತೆಯಾಗಿದೆ. ಈಗ ಪುನಃ ಸ್ವಲ್ಪ ಮಳೆಯ ಜಿಟ್ಟಿಗಳಾಗಿವೆ.

ರಾವ ಸಾಹೇಬ ರಾಮಚಂದ್ರ ಅಣ್ಣಾಪ್ಪಯ್ಯನವರು ಹುಬ್ಬಳ್ಳಿಯಿಂದ ಇಲ್ಲಿ ಬಂದು ಮುನಿಸಿಪಾಲಿಟಿಯ ವ್ಹಾಯಿಸ ಪ್ರೆಸಿಡೆಂಟ ಕೆಲಸದಮೇಲೆ ಹಾಜರಾದರು.

ಕುಮಟಾ ಹೊನ್ನಾವರ ರೇಂಜಿನ ಅಬಕಾರಿ ಇನಸ್ಪೆಕ್ಟರ ಮಿ॥ ಎಮ್ ಕೆ ಗಾಯಕವಾಡರವರು ಇಲ್ಲಿಗೆ ಬಂದು ತಮ್ಮ ಕೆಲಸದ ಚಾರ್ಜ ತೆಗೆದುಕೊಂಡರು

ಇಲ್ಲಿ ಕಳೆದ ತಾ ೩ನೇ ದಿವಸ ಒಂದು ಜೀವವಿಲ್ಲದ ಸಣ್ಣ ಬಾಲೆಯು ಜನರು ತಿರುಗಾಡುವ ಹಿತ್ತಲಲ್ಲಿ ಬಿದ್ದದ್ದು ಪೋಲಿಸರಿಗೆ ತಿಳಿದು ಪಂಚನಾಮೆಯಾಗಿ ತಪಾಸ ನಡದು ಕೆಲಹಳ್ಳ ಮಾಜಿಸ್ಟ್ರೇಟ ಆರೋಪದಮೇಲೆ ಒಬ್ಬ ಶೂದ್ರ ಜಾತಿಯ ವಿಧವೆ ಹೆಂಗಸನ್ನು ಹಿಡಿದಿರುವರು. ಆರೋಪದ ತನಿಖೆಯು ನಡೆದದೆ

ಶಿರಸಿ — ಇತ್ತಲಾಗ ೩–೪ ದಿವಸದಿಂದ ಮಳೆಯು ಬಿಲ್ಕುಲ ಇಲ್ಲ. ಹರಿಂದ [illegible] ಬೀಜ ಯಾವ ಮಹಾ[illegible] ಎಂದು [illegible] ಜನರು ಚಿಂತಾಗ್ರಸ್ತರಾಗಿರುತ್ತಾರೆ

ಇಲ್ಲಿಯ ವಾರಜೋಸ ಲಾಟರಿ ಟಿಕೇಟು [illegible] ನಂಬರಿಗೆ ರೂಪಾಯಿ ೪೦೦೦ ಇಲ್ಲಿಯ ಹೋನವರ ಪಿಪಲಾಗಿ ಒಬ್ಬ ಲಿಂಗಾಯತ ಹೆಂಗಸಿಗೆ ಒಬ್ಬ ಅಯ್ಯನವರಿಗೆ ಅನುಕ್ರಮವಾಗಿ ೩೬೪೫ ಮತ್ತು ೧೮೨೫ ರ ಇನಾಮು ಬಂದಿರುತ್ತದೆ ಇವರಿಬ್ಬರೇ ಭಾಗ್ಯವಂತರು.

Printed & Publi[illegible] by K[illegible]marao Keshav Shenvi at his Star of Kanara Press, Kumta.

ಪತ್ರದ ವರ್ಗಣಿ –
ಕುಮಟೆಯಲ್ಲಿ ಅಗಾವು
ರೂಪಾಯಿ 1-0-0.
ಅಂಚೆವೆಚ್ಚ ಕೂಡಿ
ರೂಪಾಯಿ 1-6-6
ಒಂದು ಸಂಚಿಕೆಗೆ 0-0-9.

THE

KANARA NEWS.

ಕಾನಡಾ ವೃತ್ತ.

सत्यं ब्रूयात्प्रियं ब्रूयान्न ब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಜಾಹಿರಾತುಗಳ ದರ:–
ಕನ್ನಡ, ಇಂಗ್ಲಿಷ ಪ್ರಾಕಾಶ್ಯಾದ (೧೫ ಎಮ್ ಉದ್ದ) ೮ ಸಾಲುಗಳ ವರೆಗೆ ರೂ. 1 0 0.
ಅನಂತರ ಪ್ರತಿ ಸಾಲಿಗೆ 0-2 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

Registered No. B. 1720

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೨೫ ಮಾಹೆ ಜುಲೈ, ಸನ್ ೧೯೧೭ ನೇ ಇಸವಿ. [ಸಂಚಿಕೆ ೨೧.

→ ಇಕ್ಸಿಪ್ಸ ಡ್ರಾಪ್ಸ ←

ಈ ಔಷಧವು ನರಸಂಸಾರವನ್ನು ಕಾಯುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳಿಗೆ ತ್ವರಿತಗುಣ ಕೊಡುವ ಔಷಧಿಯಾಗಿದೆ ಮೂತ್ರಗೋಷ್ಟ, ಮೂತ್ರಕೋಶ, ಅನ್ನಕೋಶ, ಕಲಿಜ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ. ನೆಗಡಿ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು ಕಿವಿನೋವು, ಸೂತಕದ ಅಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ, ಶೀಸೆ 1 ಕ್ಕೆ 0-6-0 ವಿ. ಪಿ ಬೇರೆ.
ಡಜನ್ ಶೀಸೆಗಳಿಗೆ ರೂ 4-0-0. ವಿ. ಪಿ ಸಹಿತ.
ವಿಳಾಸ– ದಿ ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ, ಮಂಗಳೂರು.

☞ ಟಿ ಜಿ ಮಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ ಸ್ನಾಯುಗಳ ನೆಗಡಿ, ನರಗಳ ಸೆಳತ, ಕೆಮ್ಮು, ಜ್ವರ, ಕಾಲರಾ, ಬೇಗು, ಬಾಣಂತೀರೋಗ, ಪ್ಲೇಗ, ಹೊಟ್ಟೆಕಡತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ. ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದೆ ಬಾಟ್ಲ ಕಿ. ೧॥ ರೂ. ಟಪಾಲ ಹಾಸಲು ೪ ಆಣೆ ಬೇರೆ. ಒಂದೇಸತಿಗೆ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ. ಕಮಿಶನ್ ಹೊರತು ಅಂಚೆವೆಚ್ಚ ಬೇರೆ.

ವದ್ರುಪ್ಪ ಜಾಲೀಮಬಾಮ:— ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ಹುಳಗಳು, ಉರಿ, ಬೆಂಕಿ ಮುಂತಾ ದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು.

ಬಾ. ಕಿ. ೧೨ ಆಣೆ. ಅಂಚೆವೆಚ್ಚ ೩ ಬಾಟ್ಲ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ ಪತ್ತೆ —
ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ.

ज्योतिषी.

जनार्दन दत्तात्रय माने. बुधवार नं. २३४, पुणें. ज्योतिषाची कामें सूक्ष्म तऱ्हेनें केलीं जातात. विशेष माहिती समक्ष अगर पत्रद्वारें.

ಬೇಕು ! ಬೇಕು !!] • ಕಾನಡಾವೃತ್ತ, [ಬಾತ್ಮೀದಾರರು !!!

ಪ್ರತಿ ತಾಲೂಕಿನಿಂದ ನಿಜವಾದ ಮಾಹಿತಿ ಆಗಿಂದಾಗ್ಗೆ ಪೂರೈಸುವ ಬಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು.

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

ಇದನ್ನು ಸೇವನ ಮಾಡಿದ ಕೂಡಲೆ ಜಠರಾಗ್ನಿಯು ಪ್ರದೀಪ್ತವಾಗಿ ಪಚನ ಶಕ್ತಿಯು ವೃದ್ಧಿ ಹೊಂದುತ್ತದೆ. ಅವಿಚಾರದಿಂದ ಮಾಡಿದ ಶುಕ್ರನಾಶವೂ ಅದರ ಮೂಲಕ ಬೆಳೆದ ಶಾರೀರಿಕ ಮತ್ತು ಮಾನಸಿಕ ದುರ್ಬಲತೆಯೂ ಜ್ಞಾನತಂತುಗಳ ಕ್ಷೀಣತೆಯೂ ಸ್ವಪ್ನೇಂದ್ರಿಯದ ಶಿಥಿಲತೆಯೂ ಮುಂತಾದ ರೋಗ ಭಾವನೆಗಳೆಲ್ಲ ನಷ್ಟವಾಗಿ ದೇಹವು ಕಾಂತಿಮಯವಾಗಿ ರಕ್ತ ವೃದ್ಧಿಯೂ ವೀರ್ಯಸಂಚಯವೂ ಆಗುತ್ತದೆ. ರಕ್ತ ದೋಷದಿಂದ ಆಗುವ ಎಲ್ಲ ರೋಗಗಳು ತಪ್ಪದೆ ವಾಸಿಯಾಗುವವು. ಹೆಂಗಸರ ಗುಪ್ತ ರೋಗಗಳೆಲ್ಲ ಈ ಪಾಕಸೇವನೆಯಿಂದ ಬೇಗನೇ ಶಮನವಾಗುವವು ರಕ್ತ ಶ್ವೇತಸ್ರಾವಗಳೆಲ್ಲ ತತ್ಕಾಲ ನಾಶಹೊಂದುತ್ತವೆ. ವಿಶೇಷವಾಗಿ ಗರ್ಭಕೋಶದ ವಿಕಾರಗಳೂ ಅಶಕ್ತತೆಯೂ ತ್ವರ್ಯವಾಗಿ ದೂರವಾಗಿ ವ್ಯಂಗರಹಿತ ಪ್ರಜೋತ್ಪತ್ತಿಗೆ ಇದರಿಂದ ಬಹಳೇ ಎಡೆಯಾಗುವದು. ತಾತ್ಕಾಲಿಕ ರೋಗಗಳಿಗೆ ೨ ರೂಪಾಯಿಯ ಬೆಲೆ ಬಾಳುವ ೧೪ ದಿವಸ ನಾಕಾಗುವ ಮದ್ದಿನಿಂದ ಉತ್ತಮ ಗುಣವು ಕಂಡುಬರುವದು. ಹಳೇ ರೋಗಿಗಳಿಗೆ ೪॥ ರೂಪಾಯಿ ಬೆಲೆಯ ೩೫ ದಿವಸ ತಕ್ಕೊಳ್ಳಬೇಕಾಗುವ ಡಬ್ಬಿಗಳಿಂದ ರೋಗವು ನಿರ್ಮೂಲವಾಗುವದು. ಅಂಚೆವೆಚ್ಚ ಬೇರೆ ಬೀಳುವದು. ೩೫ ದಿವಸದ ೨ ಡಬ್ಬಿಗಳನ್ನು ಒಮ್ಮೆಗಲೇ ತಕ್ಕೊಳ್ಳುವವರಿಗೆ ಅಂಚೆವೆಚ್ಚ ಬೀಳಲಿಕ್ಕಿಲ್ಲ. ಯಾವ ಋತುಮಾನದಲ್ಲಿಯೂ ಈ ಔಷಧಿಯನ್ನು ಸೇವಿಸಿದರೆ ತಪ್ಪದೆ ಗುಣವಾಗುವದರಿಂದ ವಜ್ರಾಂಗ ಭೈರವವು ಈಗ ಅವ್ಯಾಹತ ವಿಕ್ರಯವಾಗಹತ್ತಿದೆ.

ಇದರ ಅಪ್ರತಿಮ ಗುಣದ ಅನುಭವವನ್ನು ಕುರಿತು ಬಹಳೇ ಶಿಫಾರಸು ಪತ್ರಗಳು ಸಿಕ್ಕಿರುವವು.

ವರ್‍ಹಾಡ ಪ್ರಾಂತದೊಳಗಿನ ಕಾರಂಜಾ ಶಹರದ ನಿವಾಸಿ ಹೆಸರುಗೊಂಡ ಶ್ರೀಮಂತ ಶೇಟ ಡೀ. ಜೀ. ದವರೆ ಇವರು ವಜ್ರಾಂಗ ಭೈರವವನ್ನು ಅನೇಕ ಸಲ ತರಿಸಿಕೊಂಡು ಸ್ವಾನುಭವದಿಂದ ಖಾತ್ರಿಮಾಡಿಕೊಂಡು ಅದರ ಉತ್ತಮ ಗುಣಗಳ ದೆಶೆಯಿಂದ ೨೦೦ ರೂಪಾಯಿಯ ಬಹುಮಾನವನ್ನು ಕಳುಹಿಸಿರುವರು. ಇದಲ್ಲದೆ,

ಹೊಸ ಶಿಫಾರಸು ಪತ್ರವು.

ಸೆಂಡುರ್ಜೆ ಪಟ್ಟಣದಿಂದ ನಾಗೋಬಾ ನೇವಾಜಿ ಭಾಗವತಕಾರ ಇವರು ತಿಳಿಸುವದೇನಂದರೆ— ಈ ಹೊತ್ತಿನವರಿಗೆ ನಾವು ನೂರಾರು ರೂಪಾಯಿಯ ವಜ್ರಾಂಗ ಭೈರವವನ್ನು ತರಿಸಿ ಬಹಳ ರೋಗಿಗಳಿಗೆ ಕೊಟ್ಟು ನೋಡಲು ಅವರೆಲ್ಲರು ಪೂರ್ಣ ಗುಣಹೊಂದಿ ಈಗ ತಮ್ಮ ತಮ್ಮ ವ್ಯಾಪಾರ ವ್ಯವಸಾಯಗಳಲ್ಲಿ ಆನಂದದಿಂದ ತೊಡಗಿರುವರು. ಇದನ್ನು ನೋಡಿ ತಮ್ಮ ವಜ್ರಾಂಗಭೈರವವನ್ನು ಎಲ್ಲರೂ ಸಾನಂದ ಹೊಗಳಹತ್ತಿರುವರು. ಆದರೂ ಈಗ ತಿರುಗಿ ೩೬ ರೂಪಾಯಿಯ ಔಷಧಿಯನ್ನು ಈ ಪತ್ರ ಮುಟ್ಟಿದ ಕೂಡಲೇ ವ್ಹಿ. ಪಿ. ದ್ವಾರ ಕಳುಹಿಸಿ ಉಪಕರಿಸಿರಿ. ಅದರ ಅರ್ಧ ಬೆಲೆಯನ್ನು ಮನಿಯಾರ್ಡರಮೂಲಕ ಕಳುಹಿಸಿರುವೆನು.

ಇಂಥ ಬಹಳೇ ಗ್ರಾಹಕ ಬಂಧುಗಳಿಂದ ಸಿಕ್ಕಿದ ಶಿಫಾರಸ ಪತ್ರಗಳನ್ನೂ ಸಾಭಾರ, ಸಾನಂದ, ಕಳುಹಿಸಿದ ನಗದಿ ಇನಾಮುಗಳನ್ನೂ ನಾವು ಸಂಗ್ರಹಿಸಿರುವೆವು. ಡಬ್ಬಿಗಳು ಸಿಗುವ ಪತ್ತೆ —

ಮೆಸರ್ಸ ಎಲ್. ಕೆ. ಆರ್., ಶ್ರೀ ಅರಿಹಂತ ಪ್ರಾಸಾದಿಕ ಕಂಪನಿ,
ಫ್ಯಾಕ್ಟರಿ, ನಿಪಾಣಿ (ಬೆಳಗಾಂವ).

King's Message

to British Armies in Field

The King has issued a special order on the conclusion of his fourth visit to the British armies in the field —

"I leave with feelings of admiration and gratitude for your past achievements and confidence in your future efforts. I witnessed on all sides scenes of your triumphs The battle fields of Somme, Ancre Arras Vimy and Messines were shown to me & what great results are attainable by the courage and devotion of all arms and services under efficient commanders and staffs Nor do I forget the valuable work done by the various departments behind the fighting line, including those directing and manning highly developed railway systems and other communications Your comrades, men and women at home, the industrial army claim your remembrance for their untiring service in helping you to meet the enemy on terms not merely equal but daily improving

It was a great pleasure to the Queen to accompany me and become personally acquainted with the excellent arrangements for the sick and the wounded, whose welfare is ever close to her heart

The Empire's armies and workers in the homelands during the past three years have risen superior to every difficulty and trial and the splended successes already gained in co operation with our gallant Allies have advanced us well towards the completion of the task we undertook There are doubtless fierce struggles to come and heavy strains on our endurance to be borne, but whether the road before us be long or short, the spirit and pluck which have brought you so far will never fail and under God's guidance final and complete victory of our just cause is assured '

THE KANARA NEWS

25th July 1917

' Act— act in the living Present Heart within and God o'er head

Wise words

OF A GREAT LEADER

Sir Narayan Chandavarkar in his valuable contributions to the Times of India, the other day wrote among other things the following -

If in England responsible authorities of the Crown associate with political agitations for controlling & guiding them and taking the people into their confidence so as to minimise the chances of the agitations going beyond the proper bounds how much more is it necessary that in India where the administration is not, as in other countries continuous with the everyday social life of the people and causes for misunderstanding are apt to arise more frequently the officials should give up their policy of aloofness and reserve and take steps to win their way into the hearts of the people and the political leaders? It is not suggested that towards that end the official powers here should go about stumping the country and "platforming as ministers of the Crown do in Great Britain and Indian political leaders do and are expected to do in India What is expected is that the officials in India should take steps to be in close touch with the leaders of these agitations and try by every means to understand their point of view If a constitutional agitation becomes unconstitutional in India the responsibility may fairly be held to lie partly at least with the authorities even more than with the agitators and that for this reason"

The above pregnant words are worthy to be noted by all officials who have to deal with public speakers and newspaper writers in India The latter by their very profession are required to do the work of honest criticism We do not say they are heaven born and for the matter of that infallible creatures It is possible they may form erroneous views or use strong language or express them wrongly Their views may need modification or correction They may misunderstand things, get insufficient information and use expressions not liked by others All this may be due to their want of experience, hastiness in the choice of language or their over-zeal in certain matters And in such cases, the officials concerned would be doing immense good by pointing out to them their mistakes if any and bringing them to their senses In the interest of that smooth relationship and that spirit of co operation and reconciliation which must exist between the officials and the publicists the latter must be encouraged and not damped. They must be approached in the most educative and sympathetic spirit The same relation must exist between them as we see between the teacher and the taught It is no use on the part of a teacher to fret and fume, speak disparagingly and condemn everything, but like a true well wisher he must show his pupils their mistakes and guide them aright He is a bad teacher who rules with a rod & damps the spirit of his pupils often without making them understand their own foibles

The same must be the course to be followed by officials in their conduct with publicists If the latter have erred, the former must step in and show them in plain terms where they have erred No method of repression or distrust or no policy of passive discouragement can mend matters It may succeed in muzzling the mouth for a time but after all this method defeats its own end. The story is told of a good housewife who, when her daughters novices in the culinary art, brought before her unsavoury dishes newly prepared by them, remarked that the dishes were all good but that, with a little more salt in one and a little less in another, they would taste better

That is how young & inexperienced writers & speakers must be told and brought round "Here a less strong word and there a change of expression" That should be the form of advice to be given to an erring publicist

In fact, he must be improved and better guided and not condemned & slighted He may be scolded & even reprimanded but not damned and ostracised This is doubly true when dealing with backward places where public speakers & newspaper writers are very few and the necessity of public organs and institutions to voice the public opinion is keenly felt Such attempts do not at all deserve to be nipped in the bud The people must have a voice—a free voice to make themselves heard It is wrong on principle to damn public writers By this method one may suffer but many more will take his place & show by their example that they disapprove of the method Besides, the sensible public will take from such incidents a lesson that what is bad for one is bad for all & that, therefore, they must disapprove of the method on principle, regardless of the consideration as to who the sufferers are On the whole, in the long run, not "might" but "sensible view" or "states manship" must prove "right"

"*Nobleness enkindleth nobleness*"

This is how we interpret & apply the wise words of our great leader

RANDOM THOUGHTS

A useful Body

The Saraswat Vidyarthi Sahayak Mandali of Bombay has been doing the most useful work of helping poor but deserving students from among all the sections & sub-sections of the Saraswat community from a long time But for that help, we would hardly have been able to see many a graduate who is an ornament to the community By their silent and unassuming work the Mandali have shown to the world in a practical manner that, given the opportunities 'many a flower' is destined to bloom & give the benefit of its fragrance to others rather than waste its sweetness on the desert air.' We know a number of Kanara Saraswat students who owe their education to the Mandali's support. But we must not lose sight of the painful fact that the Mandali have on their rolls a miserably small number of subscribers from Kanara Hence we feel it our duty to make a strong appeal to the Kanara Saraswats of all sub-sects to support the Body with liberal subscriptions and donations and thus enable them to pursue the philanthropic work on a wider scale

India's great Viceroy

The censure cast at Lord Hardinge, India's great and popular Viceroy, by the Mesopotamia Report has given rise to a wave of indignation all throughout India It is certainly an irony of fate that Lord Hardinge who, to quote his own words, 'bled India white' with the full consent of the Indian people should be held partly responsible for the failure at Kut in Mesopotamia for no fault of his His historical statement in the House of Lords explaining his real position is unique, in that it gives one more vivid proof of his complete trust in the loyalty of the Indian people He rightly looked to India for sympathies which she too has ungrudgingly and readily offered It should not surprise any one that the Prime Minister has been flooded with cablegrams expressive of India's complete confidence in her great Viceroy.

Mr Montagu

We welcome Mr Montagu, the new Secretary of state for India He is a man of broad and liberal views and has the rare advantage of knowing India and her aspirations personally India loves sympathy the full measure of which she will undoubtedly get from Mr Montagu

THE LATE

Dr. Dadabhai Naoroji.

Condolence Meetings in KANARA

The leading inhabitants of Sadashivgad, assembled in a meeting under the presidency of Mr Bhawanishankar Sadashivrao Wagh, a local landlord & placed on record their profound sorrow on the death of Dr. Dadabhai Naoroji, the Grand Old Man of India, who, by his untiring, selfless, and devoted work for the uplift of India extending over 60 years, was a constant source of inspiration to those who worked for India's welfare

They further resolved that India had lost the noblest and the best of her sons by the death of the Great Rishi whose like would not be seen for a long time to come And they offered their heartfelt condolences to the members of his family at the great loss they suffered

At a special meeting of the members of the Mitra Samaj and the citizens of Karwar held in the Empress Alexandra Hall under the Presidency of Rao Bahadur R. R Gangolli, on Sunday the 15th of July 1917, the following resolutions were unanimously passed

1 That this meeting records its sense of deep grief at the irreparable loss caused to India by the death of Dadabhoy Nauroji- the G O M of India- who selflessly devoted his whole life to the service of Mother India and set a noble example to us all and expresses its deep sympathy with the family of the deceased in their heavy affliction

2. That the meeting empowers the President to forward the resolution to the relations of the deceased

[In giving publicity to the above, w regret to note that other parts o Kanara including Kumta have no as yet come forward to join in th universal expression of sorrow at th death of the revered Grand Old Ma of India — Editor]

ಹೊಲೆಯರ ಹೊಸ ದಂಡು.

ಕಮಿಶನರ ಸಾಹೇಬರ ಪ್ರಯತ್ನದ ಫಲ

ಮುಂಬಯಿ ಇಲಾಖೆಯೊಳಗಿನ ಹೊಲೆಯರು ತಮ್ಮನ್ನು ದಂಡಿನೊಳಗೆ ಸೇರಿಸಿಕೊಳ್ಳುವರೆ ಸರಕಾರವು ಅಪ್ಪಣೆ ಕೊಟ್ಟಿದ್ದರಿಂದ ಆಭಾರ ಮನ್ನಿಸುವರೆ ಮುಂಬಯಿಯಲ್ಲಿ ದೊಡ್ಡ ಸಭೆಯನ್ನು ಕೂಡಿಸಿದ್ದರು ಸಭೆಗೆ ನಾಮದಾರ ಮಿ॥ ಕ್ಯಾಡೆಲ, ಮಿ॥ ಮೌಂಟಫರ್ಡ, ಮಿ॥ ಕೆಂಬೆಲ, ಸರ್ ನಾರಾಯಣರಾವ ಚಂದಾವರಕರ, ನಾಮದಾರ ರಾ॥ ಬ॥ ನಾಯಕ, ರಾಜಶ್ರೀ ಶಿಂಧೆ, ರಾಜಶ್ರೀ ಲಿಂಗಯ್ಯಾ ನಾಯ್ಡು ಪ್ರಭೃತಿ ಪ್ರಮುಖ ಜನರು ಸಭೆ ಕೂಡಿದ್ದರು. ನಾಮದಾರ ಕ್ಯಾಡೆಲ ಸಾಹೇಬರು ಸಭಾಧಿಪತಿಯಾಗಿ ಆರಿಸಲ್ಪಟ್ಟರು ಕೂಡಲೆ ಹೊಲೆಯರ ದಂಡಿನ ಪೂರ್ವೇತಿಹಾಸವನ್ನೆಲ್ಲ ಅವರು ನಿವೇದನೆ ಮಾಡಿದರು ೧೮೯೨ನೇ ಇಸವಿಯಿಂದ ಹೊಲೆಯರಿಗೆ ದಂಡಿನಲ್ಲಿ ಸೇರಲಿಕ್ಕೆ ಪ್ರತಿಬಂಧ ಮಾಡಲ್ಪಟ್ಟಿತ್ತು. ಅದರ ಪೂರ್ವದಲ್ಲಿ ಅವರು ಅನ್ಯಜಾತಿಗಳಂತೆ, ಬಾಧಕರಹಿತ ದಂಡಾಳುಗಳಾಗಿ ಅನೇಕ ರಣಭೂಮಿಗಳಲ್ಲಿ ತಮ್ಮ ಶೌರ್ಯವನ್ನು ಪ್ರಕಟಿಸಿದ್ದರು. ಜಾತಿವಿಷಯಕ ಪೂರ್ವಗ್ರಹಗಳಿದ್ದರೂ ಹೊಲೆಯರಲ್ಲಿ ೧೧೩ ಜನರಿಗೆ ಸೈನ್ಯದೊಳಗಿನ ಕಮಿಶನ ಹುದ್ದೆಗಳು ಸಹ ದೊರಕಿದ್ದವು ಇಷ್ಟಾಗಿದ್ದರೂ ಕೆಲ ಧಾರ್ಮಿಕ ಕಾರಣಗಳ ಮೇಲಿಂದ ಅವರನ್ನು ದಂಡಿನಲ್ಲಿ ಸೇರಿಸಿ ಕೊಳ್ಳಲಿಕ್ಕಾಗದೆಂದು ಹಿಂದುಸ್ಥಾನ ಸರಕಾರದಿಂದ ವಿಧಿಸಲ್ಪಟ್ಟಿತು. ನಂತರ ಹೊಲೆಯರು ತಮ್ಮ ಹಕ್ಕುಗಳನ್ನು ಪುನಃ ಸಂಪಾದಿಸಲಿಕ್ಕೆಂತ ಎಂಟಾವರ್ತಿ ಅರ್ಜಿಗಳ ಮುಖಾಂತರ ಯತ್ನಿಸಿದರು ಇತ್ತಲಾಗಿನ ೩-೪ ಗವರ್ನರ ದೊರೆಗಳು ಸಹ ಇವರ ವಿನಂತಿಗಳನ್ನು ಸ್ವೀಕರಿಸಿದರು. ಆದರೂ ಹಿಂದುಸ್ಥಾನ ಸರಕಾರವು ಅವುಗಳನ್ನು ಮನ್ನಿಸಲಿಲ್ಲ ಆದರೆ ದಕ್ಷಿಣ ಭಾಗದ ನಮ್ಮ ಲೋಕಪ್ರಿಯ ಕಮಿಶನರರು ಹೊಲೆಯರ ಪಕ್ಷವನ್ನು ಮತ್ತೊಮ್ಮೆ ಸರಕಾರದ ಮುಂದಿಟ್ಟು ಹಿಂದುಸ್ಥಾನ ಸರಕಾರದ ಪ್ರತಿಬಂಧವನ್ನು ದೂರ ಮಾಡಿಸಿಕೊಂಡಿರುತ್ತಾರೆ ಸದ್ಯದ ಮಹಾಯುದ್ಧಕ್ಕೆ ಇಷ್ಟು ದಂಡಾಳುಗಳ ಅವಶ್ಯಕತೆ ಇರುವದರಿಂದ ಹೊಲೆಯರು ತಮ್ಮ ಇತಿಹಾಸಪ್ರಸಿದ್ಧ ಶೌರ್ಯವನ್ನು ಪ್ರಕಟಿಸುವ ಈ ಸುಪ್ರಸಂಗವನ್ನು ದೊರಕಿಸಿಕೊಟ್ಟಿದ್ದಕ್ಕೆ ಕೃತಜ್ಞತೆಯನ್ನು ತೋರಿಸಿ ಹೊಲೆಯರ ಸ್ವತಂತ್ರ ದಂಡಾಳುಗಳ ಒಂದು ತುಕಡಿಯನ್ನು ಕೂಡಿಸುವ ಈ ಸತ್ಕಾರ್ಯಕ್ಕೆ ಸರಕಾರದ ಪೂರ್ಣ ಸಹಾನುಭೂತಿಯುಂಟೆಂದು ನಾಮದಾರ ಕ್ಯಾಡೆಲ ಸಾಹೇಬರು ಆಶ್ವಾಸಿಸಿದರು. ನಂತರ ನಮ್ಮ ಕಮಿಶನರ ದೊರೆಗಳು ಹೊಲೆಯರನ್ನು ಹೊಗಳಿ ಮುಂದೆ ಹೀಗೆ ಹೇಳಿದ್ದೇನಂದರೆ:- "ಸರಕಾರದವರು ನಿಮ್ಮ ಪುರಾತನ ಹಕ್ಕನ್ನು ಈಗ ಪುನಃ ನಿಮಗೆ ಕೊಟ್ಟದ್ದು, ಯಾಕೆಂದು ಬೇರೆ ಹೇಳುವ ಅವಶ್ಯಕತೆ ಇಲ್ಲ. ನಿಮ್ಮ ಹಿರಿಯರು ಕೋರೇಗಾಂವ ಕಾಳಗದಲ್ಲಿ ಪೇಶ್ವೆಯವರ ೩೦೦೦೦ ಪಠಾಣರುಗಳನ್ನು ಹಿಂದಟ್ಟಿದ್ದು ನೀವು ಮರೆತಿರಲಿಕ್ಕಿಲ್ಲ. ನಿಮ್ಮ ಹಿಂದಿನ ಶೌರ್ಯವನ್ನು ನೆನೆದು ಮರಾಠಾ, ಅರಬ್ಬಿ, ಸೀಕ, ದಂಡಾಳುಗಳ ಸಂಗಡ ನಿಮ್ಮ ಭುಜಬಲವನ್ನು ತೋರಿಸಿ ನಮ್ಮೆಲ್ಲರ ವೈರಿಯಾದ ಜರ್ಮನರನ್ನು ತಗ್ಗಿಸಿ ಬಿಡಿರಿ.

[illegible]

ದಾಖಲ ಆಗಿದ್ದು ಮತ್ತೂ ೩೦೦ ಜನರು ಬೇಗನೆ ಸೇರಿಕೊಳ್ಳುವರೆಂಬ ನನಗೇನೂ ಸಂಶಯವಿಲ್ಲ" ಆ ಮೇಲೆ ಕಮಿಶನರ ದೊರೆಗಳ ಆಭಾರವನ್ನು ಮನ್ನಿಸುವ ಸ್ವತಂತ್ರ ಠರಾವುಗಳನ್ನು ಹೊಲೆಯರ ಮುಂದಾಳುಗಳು ಸೂಚಿಸಿ ನಿರ್ಧರಿಸಿದ ನಂತರ, ಸರ್ ನಾರಾಯಣ ಚಂದಾವರಕರರವರು ಉತ್ಸಾಹಜನಕ ಭಾಷಣವನ್ನು ಮಾಡಿದರು. ಅವರು ಅಂದದ್ದೇನಂದರೆ— ಹೊಲೆಯ ಬಾಂಧವರೇ, ನೀವು ಈ ಸಭೆಯಲ್ಲಿ ನೆರೆದು ದೇಶಸೇವೆಯ ಕೆಲಸ ಕೈಕೊಳ್ಳುವದನ್ನು ಕಂಡು ನನಗೆ ಅತ್ಯಾನಂದವಾಗಿದೆ ನಿಮ್ಮ ಉತ್ಸಾಹವನ್ನು ನೋಡಿ ನಾನ ಸಹ ಹೊಲೆಯನಾಗಿ ಹುಟ್ಟಿದರೆ ಚಲೋದಾಗುತ್ತಿತ್ತೆಂತ ನನಗೆ ಕಾಣುತ್ತದೆ ನಾವೆಲ್ಲರೂ ಒಬ್ಬಳೇ ಭಾರತಮಾತೆಯ ಪುತ್ರರಾದದರಿಂದ ನಾನು ಈಗ ನಿಮ್ಮ ಸಹೋದರನು ಕಾನಡಾ ಜಿಲ್ಲೆಯೊಳಗೆ ಜನರು ಒಂದು ಪುರಾತನ ಕಥೆಯನ್ನು ಹೇಳುತ್ತಾರೆ ಉಚ್ಚವರ್ಣದ ಜನರು ಊರಲ್ಲಿ ಹುಲಿ ಬಂದಾಗ ಹೆದರಿ ಹೊಲೆಯರ ಕೇರಿಗೆ ಓಡಿಹೋಗಿ "ಹೊಲೆಯರೇ ಓಡಿರಿ, ನಮ್ಮ ಹಳ್ಳಿಗೆ ಹುಲಿ ಬಂದದೆ ನಮ್ಮನ್ನು ಕಾಪಾಡಿರಿ" ಎಂತ ಹೇಳುವಂತೆಯೇ ಸರಕಾರವು ಈಗ ಹೇಳುವದೇನಂದರೆ" ಹೊಲೆಯರೇ ಶಸ್ತ್ರಗಳನ್ನು ಹಿಡಿರಿ " ಸರಕಾರದ ಈ ಕರೆಯನ್ನು ನಿಮ್ಮ ಪೂರ್ವಜರಂತೆ ನೀವು ಮನ್ನಿಸುವಿರಾಗಿ ನಾನು ನಂಬುತ್ತೇನೆ, ಆರು ಲಕ್ಷ ಹೊಲೆಯರು ಬೇಕಾದರೆ ದಂಡಿನೊಳಗೆ ಸೇರಿ ತಮ್ಮ ಅದ್ಭುತ ಶೌರ್ಯದಿಂದ ವಿಜಯಧ್ವನಿಯನ್ನು ಏಳಿಸುವರಾಗಿ ನಾನು ಕೋರುತ್ತೇನೆ

ಸಭೆಯು ಮುಗಿದ ಕೂಡಲೆ, ಉತ್ಸಾಹಭರದಲ್ಲಿ ೧೦೦ ಜನ ಹೊಲೆಯರು ದಂಡಿನಲ್ಲಿ ಅಲ್ಲಿಂದಲ್ಲೇ ದಾಖಲಾದರು

ಕಾನಡಾವೃತ್ತ.

ಬುಧವಾರ, ತಾ ೨೫ ಮಾಹೆ ಜುಲೈ, ೧೯೧೭

ಸರಸ್ವತೀ ಮಹೋತ್ಸವ.

ಶನಿವಾರ ತಾ ೨೧ ಜುಲೈ, ಮತ್ತು ಸೋಮವಾರ ತಾ ೨೩ ಜುಲೈ ಈ ದಿವಸಗಳಲ್ಲಿ ಮುಂಬಯಿ ಶಹರದೊಳಗಿನ ಮತ್ತೂ ಇಲಾಖೆಯೊಳಗಿನ ಸರಸ್ವತೀ ಭಕ್ತರು ಏಕತ್ರ ಕೂಡಿ ಮುಂಬಯಿ ವಿಶ್ವವಿದ್ಯಾಲಯದ ಪ್ರಶಸ್ತ ದಿವಾಣಖಾನೆಯಲ್ಲಿ ಸರಸ್ವತೀ ಮಹೋತ್ಸವವನ್ನು ನೆರೆಯಿಸಿದರು ಮತ್ತು ನಮ್ಮ ದೇಶದಲ್ಲಿ ಎಲ್ಲ ಕಡೆಗೂ ದೇವೀ ಸರಸ್ವತಿಯ ಉಪಾಸನೆಯು ಹ್ಯಾಗಾದೀತೆಂಬ ಬಗ್ಗೆ ಚಿಂತನ ಮಾಡಿದರು. ಆ ಪ್ರಸಂಗದಲ್ಲಿ ಸರ್ ನಾರಾಯಣರಾವ ಚಂದಾವರಕರರವರು ಸಭಾಪತಿಯ ಸ್ಥಾನವನ್ನು ಸುಶೋಭಿತಗೊಳಿಸಿದರು ಮತ್ತು ಅವರ ಭಾಷಣವು ಪ್ರಸಂಗಕ್ಕನುಸಾರವಾಗಿ ಬೋಧಪ್ರದ ಮತ್ತೂ ವಿಸ್ತೃತವಾಗಿದ್ದಿತ್ತು. ಶ್ರೀ ಮತ್ತಾ ಯುನಿವರ್ಸಿಟಿಯ ಅಧ್ಯಾಪಕರ ಸಂಬಂಧದಿಂತು ಸ್ವಾರಸ್ಯವಾದ. ಅವರ ಭಾಷಣವು ಅಭಿನಂದನೀಯವಾದದ್ದೂ, ತಾತ್ವಿಕ ಮತ್ತೂ ವ್ಯಾವಹಾರಿಕ ದೃಷ್ಟಿಯಿಂದ ಉತ್ಕೃಷ್ಟವಾದದ್ದೂ ಇತ್ತು ಆದಾಗ್ಯೂ ನಮ್ಮ ಇಲಾಖೆಯಲ್ಲಿ ರೂಢಿಯಲ್ಲಿರುವ ಮತ್ತೂ ಮುಂದೆ ಉತ್ಪನ್ನವಾಗುವ ಶಿಕ್ಷಣ ಸಂಬಂಧದ ಪ್ರಶ್ನೆಯ ದಿಗ್ದರ್ಶನವೂ ಅಂಶತಃ ವಿವೇಚನವೂ ಮತ್ತು ಪರಿಷತ್ತು ಯಾವ ಧೋರಣದಮೇಲೆ ಮತ್ತು ತತ್ವದ ಮೇಲೆ ಚರ್ಚೆ ನಡಿಸಬೇಕೆಂಬ ಉಲ್ಲೇಖವೂ ಅಧ್ಯಕ್ಷರ ಭಾಷಣದಲ್ಲಿ ಹೆಚ್ಚು ಇದ್ದೀತೆಂಬ ಅಪೇಕ್ಷೆಯನ್ನು ಶಿಕ್ಷಣ ಹಿತೇಚ್ಛುಗಳು ಮಾಡಿದ್ದಾದರೆ ಅದರಲ್ಲಿ ಆಶ್ಚರ್ಯವೇನು?

ಇನ್ನು ನಾವು ಪರಿಷತ್ತಿನ ಕಡೆಗೆ ತಿರುಗುವಾ. ಪರಿಷತ್ತು ಠರಾವಿನ ಯಾವ ಕಚ್ಚಾ ಪ್ರತಿಯನ್ನು ಪ್ರಸಿದ್ಧ ಮಾಡಿತ್ತೋ ಅದರಲ್ಲಿ ಒಟ್ಟು ಇಪ್ಪತ್ತು ಠರಾವುಗಳಿದ್ದವು ವಿಶೇಷ ಲಕ್ಷದಲ್ಲಿಡತಕ್ಕ ಮಾತೇನೆಂದರೆ ಅದರಲ್ಲಿ ದೇಶಭಾಷಾವಿಷಯದ ಠರಾವಿನ ಹೆಸರು ಕೂಡಾ ಇದ್ದಿದ್ದಿಲ್ಲ ಆದರೆ ವಿಷಯನಿಯಾಮಕ ಸಭೆಯಲ್ಲಿ ಈ ವಿಷಯದ ಮೇಲೆ ಜೋರಿನ ವಾಗ್ವಾದಗಳಾಗಿ ಸದರೀ ಠರಾವಿನಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿ ಸ್ವೀಕರಿಸಲ್ಪಟ್ಟಿತು ಪುನಃ ಸೋಮವಾರದ ಜಾಹೀರ ಸಭೆಯಲ್ಲಿ ಮತ್ತು ಈಷಾಟ್ಯನಕ ವಾಗ್ವಾದಗಳಾದನಂತರ ಸದರೀ ಠರಾವು ಮಂಜೂರ ಮಾಡಲ್ಪಟ್ಟಿತು ಮೊದಲು ವಿರುದ್ಧಪಕ್ಷದವರೂ ತುದಿಗೆ ಸರಾಸರಾಯಿತೆಂಬ ಗಾದೆಯಂತೆ ಆಯಾಯ ಪರಿಷತ್ತಿನಲ್ಲಿ ದೇಶಭಾಷೆಯ ಪ್ರವೇಶವಾದ್ದರಿಂದ ಸ್ವತಂತ್ರವಾಗಿ ಉತ್ಸಾಹ ಶೂನ್ಯವಾಗಿ ತೋರುವ ಪರಿಷತ್ತು ಉತ್ಸಾಹ ಜನಕವಾದದ್ದೂ ಆಶಾಉತ್ಪನ್ನಮಾಡುವಂಥಾದ್ದೂ ಆದದ್ದನ್ನು ನೋಡಿ ಯಾವ ಶಾರದಾಸೇವಕನಿಗೆ ತಾನೆ ಆನಂದವಾಗಲಿಕ್ಕಿಲ್ಲ? ಮುಂದಿನ ವರುಷ ಶಿಕ್ಷಾ ವಿಚಾರ ಮಂಡಲದ ವತಿಯಿಂದ ಈ ಪರಿಷತ್ತು ಪುಣೆ ನಗರಿಯಲ್ಲಿ ನಡೆಯತಕ್ಕದ್ದದೆ ಸದರೀ ಪರಿಷತ್ತಿನ ಮೊದಲಿನ ಸಭೆಯು ಪುಣೆಯಲ್ಲಿಯೇ ಆಗಿದ್ದರೆ, ಮೊದಲಿನಿಂದಲೇ ಅದಕ್ಕೆ ಯೋಗ್ಯವಾದ ದಿಕ್ಕು ದೊರೆಯುತ್ತಿತ್ತು ಮತ್ತು ಆದದ್ದಾಯಿತು. ಮುಂದಿನ ವರ್ಷವಾದರೂ ನಮ್ಮ ಶಿಕ್ಷಣ ಹಿತೇಚ್ಛು ಸದ್ಗೃಹಸ್ಥರು, ಮಹತ್ವವಾದ ಶಿಕ್ಷಣ ಸಂಬಂಧದ ವಿಚಾರ ಮಾಡುವವರಲ್ಲಿಯೇ ಸಂತೋಷಹೊಂದದೆ ಪರಿಷತ್ತಿನಲ್ಲಿ ಪ್ರತ್ಯಕ್ಷಕಾರ್ಯವು ಪ್ರಗೋಚರವಾಗುವಂತೆ ಮೊದಲಿನಿಂದಲೇ ದಿಕ್ಕು ನಿಶ್ಚಯಿಸಬೇಕು ಮತ್ತು ಯಾರಿಗೆ ಸ್ವದೇಶ, ಸ್ವಭಾಷಾ ಇವುಗಳ ಬಗ್ಗೆ ಅಂತಃಕರಣಪೂರ್ವಕ ಪ್ರೇಮಾದರವು ತೋರಿತು, ಅವರು ಸದರಿ ಸಂಸ್ಥೆಯ ಕಡೆಯಿಂದ ಮುಂಬಯಿ ಇಲಾಖೆಯೊಳಗಿನ ಜನರಿಗೆ ಪ್ರತ್ಯಕ್ಷ ಪ್ರಾಪ್ತವಾಗುವಂತೆ ಪರಿಶ್ರಮಮಾಡಿ ತೋರಿಸಬೇಕು.

ಈಗ, ಪರಿಷತ್ತು ಯಾವ ಕಾರಣದಿಂದ ನಮಗೆ ಹೆಚ್ಚು ಯಶಸ್ವಿಯಾಗಿ ತೋರುತ್ತದೆಯೋ ಆ ದೇಶಭಾಷೆಯ ಪ್ರಶ್ನದ ಕಡೆಗೆ ಹೊರಳುವಾ ಇದರಲ್ಲಿ ಮೊದಲಿನ ಪ್ರಶ್ನೆಯು ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಗಳಲ್ಲಿ ದೇಶಭಾಷೆಯ ಪ್ರವೇಶವಾಗಬೇಕೆಂತ ಹೇಳುವದಿತ್ತು. ಇಂದಿನ ಸ್ಥಿತಿಯು ಹೀಗಿರುವದು ಇಂಗ್ರಜಿ, ಪ್ರವೇಶ ಪರೀಕ್ಷೆಯಲ್ಲಿ ದೇಶಭಾಷೆಯು ಐಚ್ಛಿಕವಿದ್ದರೂ ಶಾಲಾಧಿಕಾರಿಗಳ ವಶವರ್ತಿ ಇದ್ದ ಕಾರಣದಿಂದ, ವಿಶ್ವವಿದ್ಯಾಲಯವು ಅವರಲ್ಲಿ ನಮ್ಮನ್ನು ಪರೀಕ್ಷಿಸುವದಿಲ್ಲ ಮೆಟ್ರಿಕ ಬಿ. ಎ. ಆಗತಕ್ಕವರಿಗೆ ಯಾವ ಪರೀಕ್ಷೆಯಲ್ಲಿಯೂ ಮಾ

ತ್ರ ಭಾಷೆಗೆ ಸ್ಥಳವೇ ಇಲ್ಲವು. ಒಮ್ಮೆಗಲೇ ಎಮ್. ಎ ಯಲ್ಲಿ ಮಾತ್ರ ಸ್ಥಳದೊರೆಯುವದು. ಇದರ ಪರಿಣಾಮವೇನಂದರೆ, ಒಮ್ಮೆ ನಾಲ್ಕನೇ ಇಯತ್ತೆಯ ವರೆಗೆ ಶಿಕ್ಷಣಹೊಂದಿದನಂತರ ವಿದ್ಯಾರ್ಥಿಗಳು ಮಾತೃಭಾಷೆಗೆ ಕಾಯಂ ರಜೆಯನ್ನು ಕೊಡುವರು ಯಾವನಾದರೊಬ್ಬನು ಎಮ್ ಎ ಯಲ್ಲಿ ದೇಶಭಾಷೆಯ ಅಧ್ಯಯನಮಾಡುವಂಥ ಶೋಚನೀಯ ಸ್ಥಿತಿಯು ತೊಲಗುವ ಉದ್ದಿಶ್ಯ ರಾ। ಪಾಧ್ಯೆಯವರು ಬಿ ಎ ಯಲ್ಲಿ ಐಚ್ಛಿಕ ವಿಷಯವಿರಬೇಕೆಂಬ ಠರಾವನ್ನು ಪರಿಷತ್ತಿನ ಮುಂದೆ ತಂದರು. ಅದಕ್ಕೆ ರಾ। ಜಿರೆಯವರು ಪ್ರೀವಿಯಸ್ ಮತ್ತು ಇಂಟರಮಿಜಿಯೇಟ್‌ದಲ್ಲಿ ದೇಶಭಾಷೆಯು ಅವಶ್ಯವಿರತಕ್ಕದ್ದು. ಆದರೆ ಸದರಿ ಪರೀಕ್ಷೆಗಳಲ್ಲಿ ನಿರ್ದಿಷ್ಟವಾದ ಪುಸ್ತಕಗಳನ್ನು ನೇಮಿಸಬಾರದೆಂದು ಮಾಡಿದ ಸೂಚನೆಗೆ— ಪುಸ್ತಕಗಳನ್ನು ನೇಮಿಸಬಾರದೆಂಬ ಭಾಗವನ್ನು ಬೇರೆ ಮಾಡಿ ಸದರಿ ಠರಾವಿಗೆ ರಾ। ಪಾಧ್ಯೆಯವರ ಅನುಮೋದನವು ದೊರೆಯಿತು. ಮತ್ತು ಈ ವಿಷಯದಬಗ್ಗೆ ಬಹಳ ಚರ್ಚೆಗಳಾಗಿ ಮಿ। ಬರ್ಡಾರಂಥ ಜನರು ವಿದ್ಯಾರ್ಥಿಗಳಮೇಲೆ ಹೆಚ್ಚು ಒಜ್ಜೆಯನ್ನು ಹಾಕಬಾರದಾಗಿ ಒದರಾಡಿದರು ಆದರೆ ಸುದೈವದಿಂದ ಬಹುಮತಗಳಿಂದ ಸದರಿ ಠರಾವು ಮಂಜೂರಾಯಿತು. ಇದರಮೇಲಿಂದ ಸಭಾಸದರ ಕಲವು ಯಾವ ಕಡೆಗೆ ಎಳೆಯುವದೆಂಬದು, ಎಲ್ಲರಿಗೂ ಸ್ಪಷ್ಟವಾಗಿ ಕಂಡುಬಂತು

ಈ ಪ್ರಕಾರ ದೇಶಭಾಷೆಯನ್ನು ಮೇಲಕ್ಕೆತ್ತಿ ಹಿಡಿದ ರಾ। ಪಾಧ್ಯೆಯವರ ಹಲ್ಲೆಯು ಯಶಸ್ವಿಯಾದನಂತರ ಪುಣೆಯ ಮರಾಠೀ ಇತಿಹಾಸ ಭಕ್ತ ಪ್ರೊ. ಲಿಮಯೆಯವರ ಮತ್ತೊಂದು ಹಲ್ಲೆಗೆ ಪ್ರಾರಂಭವಾಯಿತು ಅದಕ್ಕೆ ಪ್ರೊ. ನಾಯಕರವರಂಥ ವೀರರ ಸಹಾಯವು ದೊರಕಿತು. ಪ್ರೊ ಲಿಮಯೆಯವರು ತರ್ಕಶಾಸ್ತ್ರಕ್ಕನುಸರಿಸಿ ವ್ಯವಹಾರಕ್ಕೆ ಹೊಂದಿಕೆಯಾಗಿ ಕೇವಲ ವಿದ್ಯಾರ್ಥಿಗಳ ಹಿತಕ್ಕಾಗಿ ಪ್ರವೇಶ ಪರೀಕ್ಷೆಯಲ್ಲಿ ಇಂಗ್ರಜಿಯ ಹೊರತು ಉಳಿದ ಯಾವತ್ತು ವಿಷಯಗಳ ಉತ್ತರಗಳನ್ನು ಸ್ವಭಾಷೆಯಲ್ಲಿ ಕೊಡುವದಕ್ಕೆ ವಿದ್ಯಾರ್ಥಿಗಳಿಗೆ ನಿರಾಶಂಕವಿರಬೇಕೆಂದು ಸರಸ ಮತ್ತು ಸಪ್ರಮಾಣವಾಗಿ ತೋರಿಸಿ ಸದರೀ ಠರಾವನ್ನು ಪರಿಷತ್ತಿನ ಮುಂದೆ ಇಟ್ಟರು. ಈ ಬಗ್ಗೆ ಅನುಕೂಲ ಪ್ರತಿಕೂಲಗಳ ಭಾಷಣಗಳಾದ ನಂತರ ಪ್ರೋ. ಲಿಮಯೆಯವರು ಉಚ್ಚಸ್ವರದೊಡನೆ ಯೋಗ್ಯ ಶಬ್ದಗಳಿಂದ ವಿರೋಧವುಳ್ಳ ಟೀಕೆಗಳ ಖಂಡನಮಾಡಿದ್ದರಿಂದ ಪ್ರಚಂಡವಾದ ಬಹುಮತಗಳ ಗಲಿಬಲಿಯೊಡನೆ ಸದರಿ ಠರಾವು ಮಂಜೂರಾಯಿತು.

ಈ ಎರಡು ಠರಾವುಗಳಿಂದ ತೃಪ್ತರಾಗದೆ ಪ್ರೊ ಕರ್ವೆಯವರು ಮಾತೃಭಾಷೆಯಲ್ಲಿ ಶಿಕ್ಷಣಕೊಡುವ ವಿಶ್ವವಿದ್ಯಾಲಯದ ಪತಾಕೆಯನ್ನು ಹೆಗಲಮೇಲೆ ತೆಗೆದುಕೊಂಡು ಮುಂದೆ ಬಂದರು ಮತ್ತು ಅವರ ಹಿಂದಿಂದೇ ರಾ। ಪೋತದಾರರಂಥ ಸರಸ್ವತೀ ಭಕ್ತರು ಮಾತೃದೇವತೆಯ ಪೂಜೆಯ ಬಗ್ಗೆ ಪ್ರೊ ಕರ್ವೆಯವರಿಗೆ ಸಹಾಯಕರಾದರು! ವಿಶ್ವವಿದ್ಯಾಲಯದಲ್ಲಿ ದೇಶೀಭಾಷೆಯ ಪ್ರವೇಶವು ಆಗಬೇಕಲ್ಲವೆ? ನಮ್ಮತವು ಮಾತೃಭಾಷೆಯಿಂದ ವಿಕಲ್ಪವಾಗಿ ಪ್ರವೇಶ ಪರೀಕ್ಷೆಯಲ್ಲಿ ಉತ್ತರಕೊಡಲಿಕ್ಕೆ ಬರಬೇಕೆಂಬದೇ ...ನ್ನು ಹೇಳಿಕೆಯಲ್ಲವೇ? ಒಳ್ಳೇದು. ಈ ದೇಶಭಾಷೆಯ ವಿಶ್ವವಿದ್ಯಾಲಯವನ್ನು ಸ್ಥಾಪನಮಾಡುವ ಹಾಳು ರಗಳೆ ಯಾತಕ್ಕೆ? ಇದು ಕ್ರಾಂತಿಕಾರಕವಿದ್ದು ವ್ಯವಹಾರಕ್ಕೆ ಅಯೋಗ್ಯವದೆ. ನಮಗೆ ಇದರ ವಿಚಾರಮಾಡುವ ಪುರಸತ್ತು ಸಿಗಲಿಲ್ಲ. ಸರಕಾರವು ಈ ವ್ಯವಹಾರ ಶೂನ್ಯತೆಯ ಬಗ್ಗೆ ಏನು ಅಂದೀತು? ರಾಷ್ಟ್ರೀಯ ಭಾವನೆಗೆ ಇದರಿಂದ ಅಡ್ಡಿಯಾದೀತು, ಸದರೀ ಠರಾವನ್ನೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ಒಂದಲ್ಲ, ಎರಡಲ್ಲ, ಅನೇಕ ಚರ್ಚೆಗಳು ಈ ಠರಾವಿನಮೇಲೆ ಶುರುವಾದವು ಅಂತ್ಯದಲ್ಲಿ ಪರಿಷತ್ತು ಸ್ವತಃ ಕಮಿಟಿಯನ್ನು ನೇಮಿಸಬೇಕು. ಅದರಲ್ಲಿ ಡಾ. ಭಾಂಡಾರಕರ ಅಧ್ಯಕ್ಷ, ಪ್ರೊ ನಾಯಿಕ ಜಿಸ್ಟೀಸ, ಪ್ರಿ ಪರಾಂಜಪೆ, ಪ್ರೊ. ಲಿಮಯೆ, ಪಿ॥ ಭಾ. ಬಾ, ಮಿ॥ ಬರ್ಡಾ ಇವರೂ ಬೇರೆ ಕೆಲವು ಸಭಾಸದರೂ ಇರಬೇಕು. ಅವರು ಈ ಪ್ರಶ್ನೆಯ ವಿಚಾರಮಾಡಿ ತಮ್ಮ ಅಭಿಪ್ರಾಯ ತಿಳಿಸಬೇಕು ಸರ್ ನಾರಾಯಣರಾವ ಇವರು ಹೀಗೆ ದುರುಸ್ತಿಯಾಗುವದಕ್ಕೆ ಸೂಚಿಸಿದ್ದರಿಂದ ಅದಕ್ಕೆ ಪ್ರೊ ಕರ್ವೆಯವರ ಒಪ್ಪಿಗೆಯಾಗಿ ಸದರಿ ಠರಾವು ಬಹುಮತದಿಂದ ಮಂಜೂರುಮಾಡಲ್ಪಟ್ಟಿತು.

ಮುಂಬಯಿಯಲ್ಲಿ ನಡೆದ ಸರಸ್ವತೀ ಮಹೋತ್ಸವದ ವೃತ್ತಾಂತವನ್ನು ಮುಗಿಸುವ ಮೊದಲು ಒಂದೆರಡು ಮಾತುಗಳನ್ನು ವಾಚಕರ ಮುಂದೆ ಇಡತಕ್ಕದ್ದದೆ. ಈಗಿನ ಪರಿಸ್ಥಿತಿಯು ಕೆಲವು ರಾಜಕೀಯ ಕಾರಣಗಳ ದೆಸೆಯಿಂದ ಬಹಳ ಚಿಂತಾಜನಕವಾಗಿದೆ. ಯುರೋಪದ ಯುದ್ಧದಿಂದ ನಮ್ಮ ವ್ಯಾಪಾರದಮೇಲೆ ಬಹಳೇ ಪರಿಣಾಮವಾಗಿದ್ದು, ಉದ್ಯೋಗವಿಲ್ಲದೇ ಇದ್ದ ನಮ್ಮ ಜನರು ದಿನೇದಿನೇ ದಾರಿದ್ರ್ಯವೆಂಬ ಕೆಸರಿನಲ್ಲಿ ಹೆಚ್ಚು ಹೆಚ್ಚು ಮುಳುಗುತ್ತನಡೆದಿದ್ದಾರೆ ಅದರೊಳಗೆ ಸ್ವಸ್ಥಿತಿಯ ಬಗ್ಗೆ ದೇಶದಲ್ಲಿ ಅಜ್ಞಾನವೆಂಬ ಕಗ್ಗತ್ತಲೆಯು ಪಸರಿಸಿದೆಂಬ ವಿಚಾರವು ಮುಂದೆ ಬಂತೆಂದರೆ ಎದೆಯೊಡೆಯುತ್ತದೆ ಈ ಯಾವತ್ತು ಸಂಕಟಮಯ ಪರಿಸ್ಥಿತಿಯೊಳಗಿಂದ ಮುಕ್ತರಾಗುವದಿದ್ದರೆ, ನಮ್ಮ ಜನರಿಗೆ ಒಳ್ಳೇ ದಿನಗಳನ್ನು ತಂದುಕೊಡುವದಿದ್ದರೆ, ಜಗತ್ತಿನೊಳಗಿನ ರಾಷ್ಟ್ರದಲ್ಲಿ ಹಿಂದ ಮಾತೆಗೆ ಯೋಗ್ಯಸ್ಥಾನವನ್ನು ಪ್ರಾಪ್ತಮಾಡಿಕೊಡುವದಿದ್ದರೆ, ಅದಕ್ಕಾ ಒಂದೇ ಉಪಾಯವದೆ ನಮಗೆ ಇಂಥಾದ್ದು ಕೊಡಿರೆಂದು ಹೇಳಿದರೆ ನಮಗೆ ಯಾರೂ ಏನೂ ಕೊಡುವಂತೆ ಇಲ್ಲ ಈ ಕೆಲಸದ ದೆಸೆಯಿಂದ ಸ್ವಾವಲಂಬನ ಮತ್ತು ಸ್ವಾರ್ಥತ್ಯಾಗ ಯುಕ್ತರಾಗಿ ಲೋಕಶಿಕ್ಷಣದ ಮಾರ್ಗವನ್ನೇ ಸ್ವೀಕರಿಸಬೇಕು. ತಪಶ್ಚರ್ಯದ ಹೊರತು ಏನೂ ಪ್ರಾಪ್ತವಾಗುವಂತೆ ಇಲ್ಲ. ಈ ಕಾಲಕ್ಕೆ ಸರಸ್ವತೀ ದೇವಿಯ ತಪಶ್ಚರ್ಯವನ್ನೇ ಮಾಡುತ್ತಿರಲಿಕ್ಕೆ ಬೇಕು ಮತ್ತು ಹಿಂದುಸ್ಥಾನದಲ್ಲಿರುವ ಕೋಟ್ಯಾವಧಿ ಸ್ತ್ರೀಪುರುಷರಿಗೆ ಸರಸ್ವತೀ ಉಪಾಸನೆಯ ದೀಕ್ಷಾ ಕೊಡಲಿಕ್ಕೆ ಬೇಕು. ಸರಕಾರವು ಸಕ್ತಿಯ ಪ್ರಾಥಮಿಕ ಶಿಕ್ಷಣವನ್ನು ಕೊಟ್ಟಾಗಕೊಡಲಿ! ಹೆಚ್ಚು ಶಾಲೆಗಳನ್ನೂ ವಿದ್ಯಾಪೀಠಗಳನ್ನೂ ತೆರೆಯುವಾಗ ತೆರೆಯಲಿ! ಈಗ ನಾವು ಪ್ರಾಥಮಿಕ, ಮಧ್ಯಮ, ಉಚ್ಚ ತರಗತಿಗಳ ಶಾಲೆಗಳನ್ನು ಸ್ಥಾಪನಮಾಡುವ ಬಗ್ಗೆ ಟೊಂಕ ಕಟ್ಟುವದು ಬೇಡವೇನು? ಸುಶಿಕ್ಷಿತ ಸಮಾಜವು ತಮ್ಮ ಬಂಧು ಭಗಿನಿಗಳಿಗೆ ಶಿಕ್ಷಣಾಮೃತವನ್ನು ಕುಡಿಸುವದಕ್ಕೆ ಸರ್ವಸ್ವತ್ಯಾಗಮಾಡಿ ಮುಂದೆ ಬರಲಿಕ್ಕೆ ಧೈರ್ಯಮಾಡದಿದ್ದರೆ ಆರ್ಯಮಾತೆಯ ದುರ್ದೈವವಿನ್ನೂ ತೀರಲಿಲ್ಲವೆಂದೆನ್ನಬೇಕು ಸ್ವಾಮಿ ರಾಮತೀರ್ಥರ ಭಾಷೆಯಲ್ಲಿ ಹೇಳುವದಾದರೆ ನಮ್ಮ ಈಗಿನ ವಿಪನ್ನಾವಸ್ಥೆಯು ಹಿಂದಿನ ಕರ್ಮದ ಫಲವಾಗಿರುವದು. ನಾವು ನಮ್ಮ ಮುಂದಿನ ಸಂತಾನಕ್ಕೆ ಲಾಭವಾಗುವಂತೆಯೂ ಅವರ ದೇಶ ಸೇವೆಯ ಕೆಲಸವು ಹೆಚ್ಚು ಸುಖಕರವಾಗುವಂತೆಯೂ ಹಿಂದ ಮಾತೆಗೆ ವಂದನಮಾಡಿ ನಿಶ್ಚಲವಾದ ಮನಸ್ಸಿನಿಂದ ಸರಸ್ವತೀದೇವಿಯ ಉಪಾಸನೆಗೆ ಆರಂಭಮಾಡಲು ಇನ್ನು ಮುಂದಾದರೂ ಟೊಂಕ ಕಟ್ಟಬಾರದೇನು?

ಶಿರ್ಶಿ—ಹುಬ್ಬಳ್ಳಿ ರೇಲ್ವೆ ಲ್ಯಾನು.

ಕಾರವಾರ ಜಿಲ್ಹೆಯಿಂದ ಒಂದು ಹೊಗೆಬಂಡಿಯ ಮಾರ್ಗವನ್ನು ತಯಾರಿಸಿ ಸದರ್ನಮರಾಠಾ ರೇಲ್ವೆಗೆ ಕೂಡಿಸುವರೆ ೨ ವರ್ಷಗಳ ಹಿಂದೆ ನಮ್ಮ ಜಿಲ್ಹೆಯ ಮುಂದಾಳುಗಳು ಪ್ರಯತ್ನಿಸುತ್ತಿದ್ದರು. ಅದಕ್ಕೂ ಬಹಳ ಹಿಂದಿನ ಕಾಲದಲ್ಲಿ ಮಾಡಿದ ಪ್ರಯತ್ನಗಳಿಗಿಂತ ಈ ಪ್ರಯತ್ನವು ಕೈಗೂಡುವ ಶಕ್ಯತೆಯು ಹೆಚ್ಚಾಗಿತ್ತೆಂದು ಸಹ ಜನರು ನಂಬಿದ್ದರು ಲೋರ್ಡಸಿಡನಹೆಮ್ ಮತ್ತು ಲೋರ್ಡವಿಲ್ಲಿಂಗಡನಂಥ ದಯಾಳು ಗವರ್ನರರ ಸಹಾನುಭೂತಿಯು ಈ ರೇಲವೆಯ ಕಲ್ಪನೆಗೆ ಕುಂಬಾ ಆಗಿತ್ತೆಂತ ಜನರಿಗೆ ತಿಳಿದಿತ್ತು. ಆದರೆ ರೇಲವೆ ಬೋರ್ಡಿನವರು ಸಾಂಪತ್ತಿಕ ದೃಷ್ಟಿಯಿಂದ ಈ ಕಲ್ಪನೆಯು ಸಾಕಷ್ಟು ವ್ಯಾವಹಾರಿಕವಲ್ಲೆಂದು ಅಭಿಪ್ರಾಯ ಪಡಲು ಜನರಿಗೆಲ್ಲ ನಿರಾಶೆಯಾಗಿತ್ತು ಆದರೆ ಈಗ ಪುನಃ ಶಿರ್ಶಿಯಿಂದ ಹುಬ್ಬಳ್ಳಿಯ ವರೆಗೆ ೬೨ ಮೈಲು ರೇಲವೆ ಮಾರ್ಗವನ್ನು ಮಾಡುವ ವಿಚಾರ ನಡದದೆಂತ ಕೇಳಬರುತ್ತದೆ ಕಳೆದ ಸರಕಾರಿ ಗ್ಯಾಝೇಟಿನಲ್ಲಿ ಸದರಿ ರೇಲವೆಯ ಸರ್ವೆ ಕೆಲಸವನ್ನು ನಡಿಸುವರೆ ಸರಕಾರಿ ಹುಕುಂ ಆಗಿಯದೆ ಈ ರೇಲವೆಯು ಶಿರ್ಶಿ, ಮುಂಡುಗೋಡ, ಕಲಘಟಗಿ ಮಾರ್ಗವಾಗಿ ಹುಬ್ಬಳ್ಳಿಗೆ ಸಾಗುವದು ಯುದ್ಧ ಮುಗಿದನಂತರ ಸರಕಾರಿ ಮಂಜೂರಿ ಸಿಕ್ಕಿದ ಕೂಡಲೆ ಬೇಗನೇ ಕೆಲಸವನ್ನು ಕೈಕೊಳ್ಳುವರಾಗಿ ಕಾಣುತ್ತದೆ ಈ ಕಲ್ಪನೆಯು ದೃಢವಾದರೆ ಕಾನಡಾ ಜಿಲ್ಹೆಗೆ ಒಂದು ಬದಿಯಿಂದಾದರೂ ಇಲಾಖೆಯೊಳಗಿನ ಇತರೇ ಪ್ರಾಂತಗಳಿಗೆ ಸಂಬಂಧವು ಕೂಡಿಬಂದಂತಾಗುವದು. ಜಿಲ್ಲೆಯ ವ್ಯಾಪಾರವು ಬೆಳೆಯುವದಲ್ಲದೆ ಜಂಗಲ ಖಾತೆಯವರಿಗೆ ಸಹ ಈ ರೇಲವೆಯಿಂದ ವಿಶೇಷ ಅನುಕೂಲತೆಗಳಾಗುವವು ಜಂಗಲಗಳಿಂದ ಸಣ್ಣ ಸಣ್ಣ ದಾರಿಗಳು ಮಾಡಿ ಚಕ್ಕಡಿಗಳಿಂದ ರೇಲವೆ ಸ್ಟೇಶನಗಳಿಗೆ ಕಟ್ಟಿಗೆಯನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿದರೆ ಜಂಗಲ ಖಾತೆಯ ಉತ್ಪನ್ನವು ಸಹ ಏರುವದು. ಕಾವರಗೇರಿ ಡಿಪೋದಿಂದ ತಮ್ಮ ಸ್ವತಂತ್ರ ಒಂದು ಸಣ್ಣ ರೇಲವೆ ಶಾಖೆಯನ್ನು ನಡಿಸಬೇಕೆಂತ ಜಂಗಲ ಖಾತೆಯವರು ವರಿಷ್ಠ ಅಧಿಕಾರಿಗಳ ಮಂಜೂರಿಯನ್ನು ಸಹ ಪಡದಿದ್ದರಂತೆ. ಇಂಥ ಲ್ಯಾಟ ರೇಲವೆಗಳು ನಮಗೆ ಬೇಕಾಗಿವೆ. ಜಿಲ್ಲೆಯೊಳಗಿನ ವ್ಯವಹಾರಕ್ಕೆ ಇಂಥ ಸಾಧನಗಳ ಕೊರತೆಯಿಂದ ಎಷ್ಟು ತೊಂದರೆಗಳಾಗುತ್ತವೆಂಬುದು ಕಾನಡಾಜಿಲ್ಲೆಯೊಳಗಿನ ಜನರಿಗೇ ಗೊತ್ತು ಸದ್ಯದ ಸ್ಥಿತಿಯಲ್ಲಿ ನಮ್ಮ ಜಿಲ್ಲೆಯೆಂದರೆ ಒಂದು ದ್ವೀಪಕಲ್ಪವಾದಂತಾಗಿದೆ. ಬೇರೆ ಜಿಲ್ಲೆಯೊಳಗಿನ ಕೆಲ ಅಧಿಕಾರಿಗಳು ಇಲ್ಲಿಗೆ ವರ್ಗವಾಗಿ ಬಂದರೆ ತಮಗೆ ಕಾಳಾಪಾಣಿ

ಶಿಕ್ಷೆಯಾಗಿ ಅಂದಾಮಾನದಲ್ಲಿ ಹಾಕಿದಂತಾಗಿದೆಂತ ಹೇಳುತ್ತಾರೆ ಇದರ ಮುಖ್ಯ ಕಾರಣವೇನಂದರೆ ಇಲ್ಲಿಂದ ಪರ ಜಿಲ್ಹೆಗೆ ಒರಹೋಗುವ ಸಾಧನಗಳ ಅಭಾವವು ಹ್ಯಾಗೂ ಇರಲಿ ಶಿರ್ಶಿ–ಹುಬ್ಬಳ್ಳಿಯು ರೇಲವೆಯು ಕಲ್ಪನೆಯು ಪೂರ್ತ ಸ್ವರೂಪವನ್ನು ಹೊಂದಿದರೆ ಇಂಥ ಕೊರತೆಗಳು ಕೆಲವು ಅಂಶದಿಂದ ಪ ತೊ ದೂರವಾಗುವವು

ಸರಕಾರಿ ಗ್ಯಾಝಿಟ.

ಇಲ್ಲಿಯ ಮತ್ತು ಶಿರ್ಶಿಯ ಈ ಕೆಳಗೆ ನಮೂದಿಸಿದ ಗ್ರಹಸ್ಥರಿಗೆ ಬೆಂಚು ಕೋರ್ಟಿನ ಮೆಂಬರರ[illegible] ನೇಮಿಸಿರುವರು ಮತ್ತು ಇಲ್ಲಿಯ ಕೋರ್ಟಿಗ II ನೇ ಕ್ಲಾಸ ಮತ್ತು ಶಿರ್ಶಿ ಕೋರ್ಟಿಗೆ III ನೇ ಕ್ಲಾಸ ಮಾಜಿಸ್ತ್ರೇಟ ಅಧಿಕಾರ ಕೊಡಲ್ಪಟ್ಟದೆ

—೨ನೆಯ ವರ್ಗದ ಮಾಜಿಸ್ಟ್ರೇಟ —

ರಾ ಸಾ ಗಣಪತರಾವ ರಾಮರಾವ ಮಾಸೂರ
ಮಿ ಪೀ ಸೀ ಫರ್ನಾಂಡಿಸು
ಸಮ್ಯದ ಮೊಹಮ್ಮದ್ದೀನ ಸಮ್ಯದಹುಸನ [illegible]
" ವೆಂಕಟೇಶ ಮಂಜುನಾಥ ಕುಲಕರಣಿ
" ಶುಂಭು ಹೆಗಡೆ ಕುಪ್ಪಹೆಗಡೆ

—೩ನೆಯ ವರ್ಗದವರು —

ಮಿ ಅನಂತ ಪುಟ್ಟಯ್ಯಾ ನಾಡಿಗ
,, ಪೀ ಎಪ್ ಎಕ್ಸ ಪರ್ನಾಂಡಿಸು
, ಶೇಷಗಿರಿ ನಾರಾಯಣ ಕೇಶವಯ್ಯನ
,, ವೆಂಕಟರಾವ ವೆಂಕಟದಾಸಪ್ಪಾ ನಿಲೆ[illegible]
, ಅನಂತ ಗೋಪಾಳ ಜಾಂಭೇಕರ
ಶೇಕ ಹಮಿದ ಶೇಕ ಅಬದುಲ್ಲಾ

ಸರಕಾರೀ ಅಮಲದಾರರು ಮಾಜಿಸ್ತ್ರೇಟರಾಗಿರುವವರನ್ನು ಹೊರತುಪಡಿಸಿ ಉಳಿದ ಖಾಸಗೀ ಜನರ ಅಧಿಕಾರಗಳನ್ನು ಸರಕಾರದವರು ಮರಳಿ ತಕ್ಕೊಂಡ ಮೇಲೆ ಬರೆದ ಜನರಿಗೆ ಅಧಿಕಾರ ಕೊಟ್ಟಿದ್ದಾರೆ

ಸದರಿ ಗ್ರಹಸ್ಥರಿಗೆ ಸರಕಾರದಿಂದ ಮ್ಯಾಜಿಸ್ಟ್ರೇಟ ಅಧಿಕಾರವು ಸಿಕ್ಕಿದ ಕುರಿತು ಅವರನ್ನು ಅಭಿನಂದನ ಮಾಡುವೆವು ಮತ್ತು ಅವರು ತಮ್ಮ ಅಧಿಕಾರದ ಜವಾಬದಾರಿಗನುಸರಿಸಿ ಕಾನಡಾ ಜಿಲ್ಹೆಗೆ ಭೂಷಣವಾಗಿ ನಡಿಯುವರಾಗಿ ನಾವು ಹಂಬಾ ನಂಬುತ್ತೇವೆ

ನಮ್ಮ ಶಿರ್ಶಿ ಡಿವ್ಹಿಜನದ ಅಸಿಸ್ಟಂಟ ಕಲೆಕ್ಟರ ಮಿ॥ ಜೆ ಟಿ ಲೋರೆನ್ಸರವರಿಗೆ ಸಮರಿ ಮತ್ತು ೨ ೩ ನೇ ವರ್ಗದ ಮಾಜಿಸ್ಟ್ರೇಟರ ಹುಕುಮಿನ ಮೇಲೆ ಅಪೀಲು ವಿಚಾರದ ಅಧಿಕಾರ ಕೊಟ್ಟಿರುತ್ತದೆ

ಕುಮಟಾ ಕಟ್ಟಿಗೆ ಡಿಪ್ಪೊ.

ನಾವು ನಮ್ಮ ೧೫ನೇ ಸಂಚಿಕೆಯ ಕನ್ನತ ೩ನೇ ಸ್ಥಳ ಸೂಚನೆಯಲ್ಲಿ ಪ್ರಕಟಿಸಿದ ಮಜಕೂರಿನ ಸಂಬಂಧವಾಗಿ ಡಿಪ್ಪೋ ಕಂಟ್ರ್ಯಾಕ್ಟರರು ನಮ್ಮ ಹತ್ತರ ನಡಿಸಿದ ಚರ್ಚೆಯಲ್ಲಿ ಅವರಿಂದ ನಮಗ ತಿಳಿದುಬಂದಿರುತ್ತದ ನ್ನ ಡಿಪ್ಪೋದಲ್ಲಿ ಜಲಾವ ಕಟ್ಟಿಗೆ ಮಾರಾಟವು ಕರಾರ ಶರ್ತಪ್ರಕಾರ ಕಾಯ ಮಶೀರ ನಡಿಸಿದ್ದು, ಕಟ್ಟಿಗೆಯ ದರ, ತೂಕದ ಮಜೂರಿ ವಗ್ಯೆರೆ ಕುರಿತು ಜನರ ತಿಳುವಳಿಕೆಗಳ ನಾವು ಮೊದಲ್ಯ ಊಹಿಸಿದಂತೆ ಶೀರ ತಪ್ಪಾಗಿಬ್ಬಾವ ಕಂಟ್ರ್ಯಾಕ್ಟರರು ಅನುಭವಿಕ ಮತ್ತು ಪ್ರಮಾಣಿಕ ಸದ್ಗೃಹಸ್ಥರಿದ್ದು, ಡಿಪ್ಪೋ ಸಿಥಯಿಕ ವಸ್ತುಸ್ಥಿತಿಯನ್ನು ತಿಳಿಸಿದರ್ದಿಗೆ ನಾವು ಅವರಿಗೆ ಬಹು ಅಭಾರಿಯಾಗಿದ್ದೇವೆ ಮತ್ತ [illegible] ತಪ್ಪು ತಿಳ [illegible] ನ ಸದ [illegible] ವ ಪ್ರಕಟಿಸಿದ್ದೇವೆ

ಇಹವೃತ್ತ.

[illegible] ಮಗಿಯುತ್ತ ಬಂತು ಈ [illegible] ನದಲ್ಲಿ [illegible] ಕ್ಕಲಿಗರು [illegible] ಸುತ್ತಿರುವರು

[illegible] ಜನರಮೇಲೆ [illegible] ಹೊತಡೆಂಬ ಫಿಯಾರ್ [illegible] ಎಂಬವನಿಗೆ [illegible]

[illegible] ಯಲ್ಲಿ ಹೊಗಿ [illegible] ನದಲ್ಲಿ [illegible] ಅವರ [illegible] ಸ್ಪಷ್ಟೀಕರಿಸ [illegible]

[illegible]

[illegible] ಫೆಯ್ಯಾಗ [illegible] ತ ಕಸಿದು [illegible] ಶಿಕ್ಷೆ ಈ ರೀತಿ [illegible]

[illegible] ಫೋಜೆಸ್ಟ್ [illegible] ನಲ್ಲಿ [illegible]

ಹಳಿಯಾಳದ [illegible] ಆಪೀಲು ಮಂಜೂರು ಆಗಿ [illegible] ಕ್ಕೆ [illegible] ರವರು ಕೆಲಸ ನಡಿಸುವರು.

[illegible]ಯಾಳ — ಪ್ಲೇಗಿನ [illegible] ಮರಣಗಳಾಗುತ್ತಿವೆ [illegible] ಕೆಲಸ ಸರಿಯಾಗಿ ನಡಿಯುವದಿಲ್ಲ

ಇಲ್ಲಿಯ ಗೌರಿ ಮಿರವಣಿಗೆಯಲ್ಲಿ [illegible] ಪ್ರತಿಬಂಧ ಮಾಡಿದ್ದಕ್ಕಾಗಿ ೧೧ ಮ ಸಲ್ಮಾನರಮೇಲೆ ಸರಕಾರಿ ಫಿರ್ಯಾದಿಯು [illegible] ಆರೋಪಿಗೆ [illegible] ಸಕ್ತವ ಜೂರಿ ಶಿಕ್ಷೆ, ೪೦ ರೂಪಾಯಿ ದಂಡ ಮತ್ತು ಉಳಿದ ೭ ಜನರಿಗೆ [illegible] ಶಿಕ್ಷೆ ಮತ್ತು ೧೦ ರೂಪಾಯಿ ದಂಡ ವಿಧಿಸಲ್ಪಟ್ಟಿದೆ [illegible] ಅಪೀಲು ಆಗುವದುಂಟು

ಇಲ್ಲಿ [illegible] ೨೦೦ [illegible] ಬಿಟ್ಟರಿಗೂ ಏನೂ ದೊರೆಯಲಿಲ್ಲ

ಕನ್ನತ ಶಾಲೆಯಲ್ಲಿ ಇನಾಮು ಕೊಡುವ ಸಮಾರಂಭವು ಮೆ॥ ಡಾತ್ಸನ, ಡಿವ್ಹಿಜನಲ ಫೊರೆಸ್ಟ ಆಫಿಸರರ ಕೈಯಿಂದ ನೆರವೇರಿತು

ವರ್ತಮಾನಸಾರ.

ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಾದ ಮಿ॥ ಚೆಂಬರ್ಲೆನ ಧೊರೆಗಳು ರಾಜೀನಾಮೆ ಕೊಟ್ಟು ಅವರ ಬದಲಿಗೆ ಮಿ॥ ಮೊಂಟೆಗ್ಯೂ ಧೊರೆಗಳು ನೇಮಿಸಲ್ಪಟ್ಟಿರುವರು ಇವರನ್ನು ನೇಮಿಸಿದಬಗ್ಗೆ ಹಿಂದುಸ್ಥಾನದಲ್ಲಿ ಆನಂದವಾಗಿಯದೆ.

ಜರ್ಮನಿಯ ಮುಖ್ಯ ಪ್ರಧಾನರಾದ ಡಾಕ್ಟರ ಫಾನ್ ಬೆಥಮನ್ ಹಾಲ್ವೆಗ್ಗರವರು ತಮ್ಮ ಅಧಿಕಾರದ ಭಾರವನ್ನೊಗೆದು ರಾಜಿನಾಮೆ ಕೊಟ್ಟಿರುವರು ಕೇಸರರವರು ಅಧಿಕಾರದಿಂದ ನಿವೃತ್ತರಾದ ತಮ್ಮ ಪ್ರಧಾನರ ಮಾಡಿದ ಮಹತ್ತರವಾದ ರಾಜಸೇವೆಯನ್ನು ಬಹು ಪರಿಯಾಗಿ ಕೊಂಡಾಡಿರುವರು ಬೆಥಮನ್ ಹಾಲ್ವೆಗ್ಗರವರ ಸ್ಥಳದಲ್ಲಿ ಡಾಕ್ಟರ ಮಾಯಿಕಲ್ಲಿಸರೆಂಬವರು ನೇಮಿಸಲ್ಪಟ್ಟಿರುವರು

ಪರದೇಶದಿಂದ ಹಿಂದುಸ್ಥಾನದಲ್ಲಿ ೩೮ ಪೌಂಡಿಗೆ ಮಿಕ್ಕಿದ ಮೌಲ್ಯದ ಚಿನ್ನದ ನಾಣ್ಯಗಳನ್ನು ಯಾ ಚಿನ್ನವನ್ನು ತಂದರೆ ಸರಕಾರದಿಂದ ನಿಶ್ಚೈಸಿದ ದರದಂತೆ ಕ್ರಯಕ್ಕೆ ಕೊಳ್ಳುವ ಹಕ್ಕು ರಾಜ್ಯರಕ್ಷಣ ಕಾನೂನುದಂತೆ ಸರಕಾರವು ಕೊಂಡದ್ದರಿಂದ ಈ ದೇಶದಲ್ಲಿ ಸರಕಾರಿ ಚಿನ್ನದ ನಾಣ್ಯಗಳು ಕರಗಿಸಿದವನ ಮೇಲೆ ಫಿರ್ಯಾದು ಮಾಡುವದರಲ್ಲಿ ಬಂದೀತೆಂತ ಹುಕುಂ ಆಗಿಯದೆ

ಈವರ್ಷ್ಕ ತಾ ೨೫ರಲ್ಲು ಮುಂಬಯಿ ಕ್ಯಾದೆ ಕೌನ್ಸಿಲದ ಸಭೆಯು ಪುಣೆಯಲ್ಲಿ ಕೂಡುವದದೆ

ತಾ ೫ರಿಂದ ೧೧ನೇ ನವಂಬರದವರೆಗೆ ದಿಲ್ಲಿಯಲ್ಲಿ ಹಿಂದೀ ಸಂಸ್ಥಾನಿಕರ ಪರಿಷತ್ತು ಜರಗುವದುಂಟು

ಲೋ ಬಾಳಗಂಗಾಧರ ಟಿಳಕ ವಿರುದ್ಧ ಚಿರೋಲ ಸಾಹೇಬರ ಖಟ್ಲೆಯಲ್ಲ ಮುಂಬಯಿಯಲ್ಲಿ ಕಮಿಶನದ ಮುಂದೆ ಆಗುವ ಸಾಕ್ಷಿಗಳನ್ನು ತೆಗೆದುಕೊಳ್ಳುವ ಕುರಿತು ಮುಂಬಯಿ ಹ್ಯಾಕೋರ್ಟಿನ ಡೆ. ರಜಿಸ್ಟ್ರಾರ ಮಿ॥ ದೊರಾಬಜಿ ಖಂಡಾಳವಾಲಾ ಇವರನ್ನು ಕಮಿಶನರರಾಗಿ ನೇಮಿಸಿದ್ದು ಇದೇ ಕೆಳು ೧೧ನೇ ತಾರೀಕಿನಿಂದ ಕೆಲಸವು ಪ್ರಾರಂಭವಾಗಿದೆ

ಮದ್ರಾಸ ಸರಕಾರದವರು ಈಗ ಮಿಶೋಂಟ್ಬಾ ಯಿಯವರಿಗೆ ಧಾರ್ಮಿಕ ಪುಸ್ತಕಗಳನ್ನು ಬರೆಯಲಿಕ್ಕೂ ಮುದ್ರಿಸಲಿಕ್ಕೂ ಅಡ್ಡಿ ಇಟ್ಟಿಂದು ತಿಳಿಸಿದ್ದಾರೆ ಆದರೆ ಇದೆಲ್ಲ [illegible] ಬಂದಿದೆ [illegible] ಇದಕ್ಕೆ ಸಮ್ಮತಿಸಲಿಲ್ಲವೆಂಬ [illegible]

ದೇಶಿಯ ಕೈಗಾರಿಕೆಯ ವಸ್ತುಗಳ ಅತ್ಯದ್ಭುತವಾದದ್ದೊಂದು ಪ್ರದರ್ಶನವು ಮುಂಬಯಿ [illegible] ಲಿನಲ್ಲಿ ಆಗತಕ್ಕದ್ದಿರುತ್ತದೆ

[illegible] ಹತ್ತಿಯ [illegible] ಹೊಸ ಪಾತ್ರವೆ ಹತ್ತಿ [illegible] ಕೆಲಸ [illegible] ಲಕ್ಷ ಕೂಲಿಯವಾಳ [illegible]

THE

KANARA NEWS.

ಕಾನಡಾ ವೃತ್ತ.

सत्यं ब्रूयात्प्रिय ब्रूयान्नब्रूयात्सत्यमप्रिय ।
प्रिय च नानृत ब्रूयादेष धर्म सनातन ॥

ANGLO-VERNACULAR FORTNIGHTLY.

Registered No. B. 1720

ಪತ್ರದ ವರ್ಗಣಿ -
ಕ ಮುಚೆಯಲ್ಲಿ ಅ್ಾವ
ರೂಪಾಯ್ 1-0-0
ಅಂಚೆವೆಚ್ಚ ಶಿರಿ
ರೂಪಾಯಿ 1-6-6
ಒ ಮ ಸಂಚಿಕೆ 0 0-3

ಜಾಹಿರಾತುಗಳ ದರ -
ಕನ್ನಡ, ಇಂಗ್ಲಿಷ ಪ್ಯಾಕಾ
ಟ್ಯಾಪಿನ (೧೫ ಏಮ್‌ಉದ್ದ) ೮
ಸಾಲುಗಳ ವರೆಗೆ ರೂ 1 0 0
ಅನಂತ್ರ ಪ್ರತಿ ಸಾಲಿಗೆ 0-2 0
ಹೆಡ್ಡಿಂಗದ ಸಾಲು ಎಷ್ಟು
ದೊಡ್ಡದಿದ ವರೂ ಆ ಮಾನ
ದಿಂದ ಸಾಲುಗಳು ಹಿಡಿಯಲ್ಪ
ಡುವವು
ಬಾಕಿ ಜಾಹಿರಾತ ಗಳ ಬ
ಗ್ಗೆ ಪತ್ರದ್ವಾರ ಯಾ ಸಮಕ್ಷ
ತಿಳಿಸಲ್ಪಡುವದು

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೮ ಮಾಹೆ ಅಗೋಷ್ಟ ಸನ್ ೧೯೧೭ ನೇ ಇಸವಿ. [ಸಂಚಿಕೆ ೨೨.

ಇಕ್ಲಿಪ್ಸ ಪೊಪ

ಈ ಔಷದವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧಿಯಾಗಿದೆ ಮೂತ್ರಗುಚ್ಛ ಮೂತ್ರಕೋಶ, ಅನ್ನಕೋಶ ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕಪಫ, ಅಗ್ನಿಮಾಂದ್ಯ, ಹೊಟ್ಟೆನೋವು ಹೊಟ್ಟೆಯೊಳಗಿನ ಕ್ರಿಮಿಬಾಧೆ ತಲೆನೋವು ಕಿವಿನೋವು, ಸೂತಕದ ಅಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0-6-0 ವಿ. ಪಿ ಬೇರೆ
ಡಜನ್ ಶೀಸೆಗಳಿಗೆ ರೂ 4-0-0 ವಿ ಪಿ ಸಹಿತ
ವಿಳಾಸ- ದಿ ಇಕ್ಲಿಪ್ಸ ಏಜನ್ಸಿ, ಕಂಕನಾಡಿ,
ಮಂಗಳೂರು.

☞ ಟಿ ಜಿ ಮಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ ಸ್ನಾಯುಗಳ ಸೆಗಡಿ, ನರಗಳ ಸೆಳತ, ಕೆಮ್ಮು, ಜ್ವರ, ಕಾಲೆರಾ, ಬೀಗು, ಬಾಣಂತೀರೋಗ ಪ್ಲೇಗ ಹೊಟ್ಟೆಕಡಿತ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ. ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದೆ ಬಾಟ್ಲಿ ಕಿ ೧॥ ರೂ ಟಪಾಲ ಹಾಸಿಲು ೪ ಆಣೆ ಬೇರೆ ಒಂದೇಸಲಕ್ಕೆ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ ಕಮಿಶನ್ ಹೊರತು ಅಂಚೇವೆಚ್ಚ ಬೇರೆ

ವದ್ರುಘ್ನ ಜಾಲೀಮುಬಾಮು — ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ತುರಿಗಳು, ಉರಿ, ಚಿಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು

ಬಾ ಕಿ ೧೨ ಆಣೆ ಅಂಚೆವೆಚ್ಚ ೩ ಬಾಟ್ಲ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ ಪತ್ತೆ —

ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ,

ज्योतिषी.

जनार्दन दत्तात्रय साने. बुधवार न २३४, पुणे ज्योतिषाची कामें सूक्ष्म तऱ्हेने केली जातात. विशेष माहिती समक्ष अगर पत्रद्वारें

ಬೇಕು ! ಬೇಕು !!] ಕಾನಡಾವೃತ್ತ. [ಬಾತ್ಮೀದಾರರು !!!

ಪ್ರತಿ ತಾಲೂಕಿನಿಂದ ಜವಾಬ ಮಾಹಿತಿ ಅಗಿ ವಾರ್ತೆ ಪೂರೈಸುವ ಬಾತ್ಮೀದಾರರು ಬೇಕು. ವೇತನದ ಬಗ್ಗೆ ಪತ್ರವ್ಯವಹಾರ ಮಾಡಬಹುದು

ಕಾನಡಾವೃತ್ತ ಆಫೀಸ, ಕುಮಟಾ.

ಈಗ ೨೦ ವರ್ಷಗಳಿಂದ ಅವ್ಯಾಹತ ಮಾರಾಟವಾಗುತ್ತಿರುವ ಮತ್ತು ಗುಣಾತಿಶಯದ ಬಗ್ಗೆ ಅಸಂಖ್ಯ ಗ್ರಾಹಕ ಬಂಧುಗಳ ಕಡೆಯಿಂದ ದೊಡ್ಡ ದೊಡ್ಡ ರಕಮಿನ ನಗದಿ ಇನಾಮುಗಳನ್ನೂ ಶಿಫಾರಸಪತ್ರಗಳನ್ನೂ ಸಂಪಾದಿಸಿದ

❋ ವಜ್ರಾಂಗ ಭೈರವ ❋

೧ ಕಾರವಾರದಲ್ಲಿ ಡಿಸ್ಟ್ರಿಕ್ಟ ಎಗ್ರಿಕಲ್ಚರಲ ಎಸೋಶಿಯೆಶನ್ ಯಾನೆ ಜಿಲ್ಹಾ ಶೇತಕಿ ಸಂಘವು ಸ್ಥಾಪಿಸಲ್ಪಡುವದೆಂದು ತಿಳಿಸಲಿಕ್ಕೆ ನಾವು ಸಂತೋಷಪಡುತ್ತೇವೆ ಸಾರ್ವಜನಿಕ ಕಾರ್ಯವನ್ನು ಮಾಡುವಷ್ಟು ಸಜೀವತೆಯು ನಮ್ಮಲ್ಲಿ ಇಲ್ಲೆಂದು ಹೇಳುವವರಿಗೆ ನಾವು ಎದೆತಟ್ಟಿ ಈಗ ಹೇಳುವೆವಲ್ಲ— 'ಇಕೋ ನೋಡಿರಿ ಇದು ನಮ್ಮ ದೇಶಾಭಿಮಾನದ ಮಿಣಿಯ ವು" ಶಿಕ್ಕಶಿಕ್ಕಂತೆ ರಾಷ್ಟ್ರೀಯ ಸಂಘಗಳನ್ನು ಸ್ಥಾಪಿಸಿ ನಮ್ಮ ಕರ್ತೃತ್ವಶಕ್ತಿಯ ದುರುಪಯೋಗವನ್ನು ನಾವು ಇನ್ನುವರೆಗೆ ಮಾಡಿಲ್ಲೆಂಬುವದು ನಿಜವು

ಸ್ವಹಿತ, ಬಡಬಗ್ಗರ ಹಿತ ಮತ್ತು ನಮ್ಮ ದಯಾಳು ಸರಕಾರದ ಹಿತ ಇಂಥ ಶ್ರೇಯತ್ರಯವನ್ನು ಒಂದೇ ಸಂಸ್ಥೆಯಿಂದ ಸಾಧಿಸುವಂಥ ಕೆಲಸವನ್ನು ಕೈಕೊಳ್ಳುವದು ಶ್ರೇಯಸ್ಕರವಲ್ಲೆಂದು ಯಾರು ಹೇಳುವರು? ಈಗಿನ ದಿವಸಗಳಲ್ಲಿಂತೂ ಇದೇ ಬಾಣಕನವು ನಮ್ಮ ಬೇನಾಯತನದ ಏಳಿಗೆಯಾದರೆ ನಮಗೆ ಸರ್ವಸ್ವದ ಲಾಭವಾಯಿತೆಂದು ಹೇಳಬಹುದು ನಮ್ಮ ಜಿಲ್ಹೆಗೆ ಬೇನಾಯತನದ ಅಷ್ಟು ಮಹತ್ವವದೆ ಸಂಘದ ಪ್ರತಿನಿಧಿಗಳು ಕಾರ್ಯದಕ್ಷರಾಗಿರುವದರಿಂದ ಈ ಹೊಸ ಸಂಸ್ಥೆಯಿಂದ ನಮಗೆ ಮಹತ್ತಾದ ಲಾಭಗಳಾಗುವವೆಂತ ನಾವು ಕೋರುತ್ತೇವೆ ಆದರೆ "ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ" ಎಂಬದೊಂದು ಬಿರುದು ನಮಗುಂಟು ಅದನ್ನಷ್ಟು ತೊಳೆಯುವ ನಿಶ್ಚಯವನ್ನು ಮಾತ್ರ ನಾವು ಮಾಡಬೇಕು ಇಲ್ಲದಿದ್ದರೆ ಕೆಲವು ತಾಲುಕಾ ಸಂಘಗಳಂತೆ ಈ ಜಿಲ್ಹಾ ಸಂಘವು ಸಹ ಹೆಸರಿನಿಂದ ಮಾತ್ರ ವಿಖ್ಯಾತವಾಗುವದು ಅಲ್ಲಲ್ಲಿ ಹೊಗಳುತ್ತಿರುವ ನಿಮ್ಮ ಕುಮಟೆಯ ಕೇಶಕೀ ಸಂಘವು ಈಗ ಎಲ್ಲಿ ಅದೆ ಎಂದು ಕೇಳಿದರೆ ನಮ್ಮಿಂದೇನೂ ಉತ್ತರ ಕೊಡಲಿಕ್ಕಾಗಲಿಕ್ಕಿಲ್ಲ ಇಷ್ಟು ಅಜ್ಞಾತವಾಸದೊಳ್ ಅದು ಮಣಗಿದೆ ನಮ್ಮ ಆರಂಭಶೂರತೆಯಲ್ಲದೆ ಮತ್ತೇನು? ಇದರಿಂದ ಯಾರ್ಯಾರಿಗೆ ಎಷ್ಟೆಷ್ಟು ಲಾಭಗಳಾದವೆಂಬದು ಅದರ ಚಾಲಕರೇ ಬಲ್ಲರು ಕಾರವಾರದ ಸಂಘವು ಇಂಥ ಗತಿಗೆ ಈಡಾಗದೆ ಚಿರಸ್ಥಾಯಿಯಾಗುವಂತೆ ತನ್ನ ಕೆಲಸವನ್ನು ನಾಗಿಸಲೆಂದು ನಾವು ಬಯಸುವೆವು

೨ ಇಲ್ಲಿಯ ಡಾಕುತೆಗೆಯುವ ವೈದ್ಯರಾದ ಶಿವರಾಮ ಬಾಳಾಜಿ ಡಾಫುಳಕರ ವೆಕ್ಸನೇಟರರು ವಿಷಮಜ್ವರದಿಂದ ಅಕಾಲಿಕ ತೀರಿಕೊಂಡರು ಪರಸ್ಥಳದಲ್ಲಿ ಆಪ್ತಬಾಂಧವರ್ಯಾರೂ ಇಲ್ಲದಾಗ ದೈವಾಧೀನವಾಗುವದೆಂಬುದು ಎಷ್ಟು ಕಠಿಣ ತರದ ಪ್ರಸಂಗವೆಂತ ಎಲ್ಲರೂ ಬಲ್ಲರು ಇವರು ಕುಡಾಳದೇಶಸ್ಥಬ್ರಾಹ್ಮಣರಾಗಿದ್ದು ಇವರ ಜ್ಯಾತಿಯ ಜನರು ಈ ಊರಲ್ಲಿ ಒಬ್ಬಿಬ್ಬರೂ ಸಹ ಇಲ್ಲ ಹೀಗಾಗಿ ಇವರ ಶವವನ್ನು ಸುಡುವದು ಹ್ಯಾಗೆ ಎಂಬದೊಂದು ಕಷ್ಟಕರ ಪ್ರಸಂಗವು ಬಂದೊದಗಿತ್ತು ಅಷ್ಟರಲ್ಲಿ ಔದಾರ್ಯವಂತ ಜನರು ಮುಂದೆ ಬಂದು ಅನಾಥ ಶವದಹನದ ಪುಣ್ಯಕೆಲಸವನ್ನು ಸಾಗಿಸಿದರು ಈ ಸಾಹಸದ ಬಗ್ಗೆ ಈ ಕೆಲಸವನ್ನು ಮಾಡಿದ ಪುಣ್ಯವಂತರಿಗೆ ನಾವು ಹೊಗಳುವೆವು ಐಕ್ಯಸಭೆಯ ಸಹಭೋಜನದ ಲಡ್ಡುಗಳನ್ನು ಹೊಡೆಯುವ ಧುರೀಣರಿಗಿಂತ ಇವರೇ ನಿಜವಾದ ಐಕ್ಯಭಕ್ತರು ೧೫ ೨೦ ವರ್ಷಗಳ ಹಿಂದೆ ಇಲ್ಲಿ ಇಂಥಾದೊಂದು ಪ್ರಸಂಗ ಬಂದಾಗ ಹೆಂಡತಿಗೆ ಗಂಡನ ಶವವನ್ನು ಗಾಡಿಯಲ್ಲಿ ಹಾಕಿ ಸ್ಮಶಾನಕ್ಕೆ ಒಯ್ದು ಸುಡುವ ಪ್ರಸಂಗವು ಬಂದಿತ್ತು ಅದಕ್ಕೂ ಈಗಿನ ಸ್ಥಿತಿಗೂ ಇದ್ದ ಅಂತರವನ್ನು ನೋಡಿದರೆ ನಮ್ಮ ಪ್ರಗತಿಯಾಗಲಿಲ್ಲೆಂದು ಯಾರು ಹೇಳುವರು?

೩ ದಿ ಗೌಡ ಸಾರಸ್ವತ ಸ್ಕೊಲರಶಿಪ ಲೀಗ ಈ ಸಂಸ್ಥೆಯ ಕಳೆದ ಸಾಲಿನ ರಿಪೋರ್ಟು ಸಾಭಾರ ಸ್ವೀಕರಿಸುವೆವು ಬಡ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಗಳನ್ನು ಕೊಟ್ಟು ಶಿಕ್ಷಣವನ್ನು ಬೆಳಿಸುವ ಈ ಸಂಸ್ಥೆಯ ಉದ್ದೇಶವು ಬಹಳೇ ಸ್ತುತ್ಯವದೆ ಸಂಸ್ಥೆಯ ಕಾರ್ಯಕ್ಷೇತ್ರವು ಬೆಳೆಯಲಿಕ್ಕೆ ಬಹಳೇ ಅವಕಾಶವಿದ್ದರೂ ಅಲ್ಪಕಾಲದಲ್ಲಿ ಸಂಸ್ಥೆಯನ್ನು ತಕ್ಕ ಮಟ್ಟಿಗೆ ಊರ್ಜಿತ ಸ್ಥಿತಿಗೆ ತಂದ ಬಗ್ಗೆ ಚಾಲಕರಿಗೆ ನಾವು ಅಭಿನಂದಿಸುವೆವು ಇಂಥ ಶಿಷ್ಯವೃತ್ತಿಕೊಡುವ ಸಂಸ್ಥೆಗಳು ದಿನೇ ದಿನೇ ವೃದ್ಧಿಹೊಂದುತ್ತವೆಂಬುವದು ದೇಶಾಭಿವೃದ್ಧಿಯ ಶುಭಸೂಚಕವಿದುವಷ್ಟೇ ಜನರ ಔದಾರ್ಯದ ಚಿನ್ಹೆಯಾಗಿದೆಂದು ನಾವು ತಿಳಿಯುವೆವು ಈ ಸಂಸ್ಥೆಯ ಚಾಲಕರಿಗೆ ನಾವು ಈಗ ಸೂಚಿಸುವದೇನಂದರೆ (೧) ಶ್ರೀಮಂತರ ಕಡೆಯಿಂದ ದೊಡ್ಡ ದೊಡ್ಡ ರಕಮುಗಳನ್ನು ಕೂಡಿಸಿ ಅವುಗಳ ಕಾಯಂ ರೇವುಗಳ ಬಡ್ಡಿಯ ರೂಪದಿಂದ ವಾರ್ಷಿಕ ಉತ್ಪನ್ನವನ್ನು ಏರಿಸುವದು (೨) ವೆಚ್ಚಮಾಡಿದ ಹಣದ ಸದ್ವ್ಯಯವಾಗುತ್ತದೋ ಇಲ್ಲವೋ ಎಂಬ ಮಹತ್ವದ ವಿಷಯದ ಬಗ್ಗೆ ಇತರೇ ಸಂಸ್ಥೆಗಳು ತಕ್ಕೊಳ್ಳುವಂತೆ ಜಾಗ್ರತೆಯನ್ನು ತಕ್ಕೊಳ್ಳುವದು ಬರೇ ನಾಮಧಾರಿ ಸಲ್ಲಾಗಾರರ ಶಿಫಾರಸುಗಳ ಮೇಲೆ ಅವಲಂಬಿಸಿರದೆ ವಿದ್ಯಾರ್ಥಿಗಳ ಶಿಕ್ಷಣಾಭಿವೃದ್ಧಿಯ ಮಾಸಿಕ ವರದಿಯನ್ನು ಲಕ್ಷಪೂರ್ವಕ ತಪಾಸಿಸುವದು (೩) ಶಿಕ್ಷಣವು ಮುಗಿದು ಧಂದೆಗಾರರಾದ ಕೂಡಲೇ ಶಿಷ್ಯವೃತ್ತಿಯ ಹಣವನ್ನು ಕಂತಿನಿಂದ ವಿದ್ಯಾರ್ಥಿಗಳಿಂದ ವಸೂಲಮಾಡುವ ವ್ಯವಸ್ಥೆಮಾಡುವದು (೪) ವರಿಷ್ಠ ಶಿಕ್ಷಣದ ದೆಶೆಯಿಂದ ಹೆಚ್ಚ ಶಿಷ್ಯವೃತ್ತಿಗಳನ್ನು ಇಡುವದೋ ಹೈಸ್ಕೂಲ ಶಿಕ್ಷಣಕ್ಕೆ ಹೆಚ್ಚಿಡುವದೋ ಎಂಬ ಪ್ರಶ್ನೆಯನ್ನು ಚರ್ಚಿಸುವದು ಈ ಸೂಚನೆಗಳನ್ನು ಯಥಾವಕಾಶ ಸಂಸ್ಥೆಯು ಚರ್ಚಿಸುವದೆಂತ ನಾವು ಕೋರುತ್ತೇವೆ ಇಂಥ ಸಂಸ್ಥೆಗಳಿಗೆ ಮುಟ್ಟವೊದಲು ಬೇಕಾದಷ್ಟು ದ್ರವ್ಯಸಹಾಯವು ಅದನ್ನು ಕೈಲಾದಷ್ಟು ಮಾಡುವರೆ ಸಂಸ್ಥೆಯ ಹಿತಚಿಂತಕರಿಗೂ ಮಿತ್ರರಿಗೂ ನಾವು ಪುನಃ ಪೂರ್ವಕ ಸೂಚಿಸುವೆವು

ಪೋಪ ಧರ್ಮಗುರುಗಳ ಒಪ್ಪಂದದ ಸೂಚನೆಗಳು.

ಕ್ರಿಸ್ತರ ಕೆಥೊಲಿಕ ಪಂಥದ ಧರ್ಮಗುರುಗಳು ಯುರೋಪದೊಳಗಿನ ಮಹಾಯುದ್ಧವನ್ನು ಮುಗಿಸುವರೆ ಯುಧ್ಯಮಾನ ಎಲ್ಲ ರಾಷ್ಟ್ರಗಳಿಗೆ ಕಮ್ಮದೊಂದು ಕಹನಾಮೆಯು ಮಸೂದೆಯನ್ನು ಕಳುಹಿಸಿರುವರು ಮಸೂದೆಯ ಒಂದು ಪ್ರತಿಯನ್ನು ಚಕ್ರವರ್ತಿ ಜಾರ್ಜ ಬಾದಶಹರವರಿಗೆ ಸಹ ಅರ್ಪಿಸಿರುವರು ಪೋಪರು ಸೂಚಿಸಿದ ಒಪ್ಪಂದದ ಮುಖ್ಯ ಶರ್ತಗಳ್ಯಾವವೆಂದರೆ—

೧ ಸರ್ವರಾಷ್ಟ್ರೀಯವಾದ ಒಂದು ಎರಿಷ್ಠ ನ್ಯಾಯ ಕೋರ್ಟನ್ನು ಸ್ಥಾಪಿಸಿ ಆಗಾಮಿ ರಾಷ್ಟ್ರೀಯ ದೂರುಗಳನ್ನೂ ತಕ್ರಾರುಗಳನ್ನೂ ಈ ಕೋರ್ಟಿನಿಂದ ನಿರ್ಣಯಿಸಿಕೊಳ್ಳತಕ್ಕದ್ದು

೨ ಯುದ್ಧ ನಡೆಸುವ ಒಂದು ಜನಾಂಗದವರು ಮತ್ತೊಂದು ಜನಾಂಗದವರ ಪ್ರಾಂತವನ್ನು ಅಪಹರಿಸದೆ ಒಬ್ಬರು ಮತ್ತೊಬ್ಬರ ಹತ್ತರ ಲುಕಸಾನಿನ ದಂಡವನ್ನು ಬೇಡದೆ ಯುದ್ಧವನ್ನು ಮುಗಿಸಬೇಕು ಆದರೆ ಬೆಲ್ಜಿಯಮ, ಸರ್ವಿಯಾ, ಫ್ರಾನ್ಸದ ಕೆಲಭಾಗ ಇವುಗಳಿಗೆ ಬಹಳೇ ಹಾನಿಯಾಗಿರುವದರಿಂದ ಇವುಗಳಷ್ಟು ಲುಕಸಾನಿ ತುಂಬಿಕೊಡಬೇಕು ಇಟಲಿ ಮತ್ತು ಆಸ್ಟ್ರಿಯಾದ ತಕ್ರಾರುಗಳಿಗೆ ಕಾರಣವಾದ ಪ್ರಾಂತಗಳನ್ನು ಅಲ್ಲಿಯ ಪ್ರಜೆಗಳ ಸಮ್ಮತಿಯಂತೆ ಆಯಾಯ ರಾಷ್ಟ್ರಗಳು ಸೇರಿಸಿಕೊಳ್ಳಬೇಕು. ಜರ್ಮನ ವಸಾಹತುಗಳನ್ನೆಲ್ಲ ಜರ್ಮನರಿಗೆ ಬಿಟ್ಟುಕೊಡಬೇಕು

೩ ಎಲ್ಲ ಜನಾಂಗದವರು ಒಮ್ಮಿಗಲೇ ತಮ್ಮ ಸೇನಾಬಲವನ್ನು ನಿಶ್ಚಿತ ನೇಮಗಳಂತೆ ಕಡಿಮೆ ಮಾಡತಕ್ಕದ್ದು ರಾಜ್ಯದೊಳಗಿನ ಸುವ್ಯವಸ್ಥೆ ಮತ್ತು ಸುರಕ್ಷಿತತೆಗೆ ಅವಶ್ಯಕವಿರುವಷ್ಟು ಸೇನೆಯನ್ನು ಮಾತ್ರ ಇಟ್ಟುಕೊಳ್ಳಬಹುದು

೪ ಶಸ್ತ್ರಾಸ್ತ್ರಗಳ ಶಕ್ತಿಗಿಂತ ನೈತಿಕ ಶಕ್ತಿಯೇ ಬಲಿಷ್ಠವೆಂತ ಒಂದಾವರ್ತಿ ನಿಶ್ಚಿತವಾದಕೂಡಲೇ ಎಲ್ಲ ಜನಾಂಗಗಳಿಗೆ ಜಲಮಾರ್ಗ ಸ್ವಾತಂತ್ರ್ಯವು ಮುಕ್ತದ್ವಾರವಾಗಿರಬೇಕು. ಇಂದರೆ ಭವಿಷ್ಯ ಕಾಲದಲ್ಲಿ ಉಂಟಾಗುವ ಯುದ್ಧಕಾರಣಗಳೇ ನಿಃಶ್ಶೇಷವಾಗುವವು ತ್ರಯಸ್ಥರಾಷ್ಟ್ರಗಳಿಗೆ ಈ ಕಹನಾಮೆಯು ಮಸೂದೆಯು ಮಾನ್ಯವಾಗಿದೆಯೆಂದು ತಿಳಿಯುತ್ತದೆ. ಆದರೆ ಯುದ್ಧ ನಡೆಸುವ ಜನಾಂಗದವರಿಗೆ ಇದು ಎಷ್ಟು ಸೇರುವದೆಂಬುದು ಹೇಳಲಾಗದು. ಪೋಪ ಗುರುಗಳು ತಮ್ಮ ಸೂಚನೆಗಳನ್ನು ಎಲ್ಲ ಪಕ್ಷದವರು ಲಕ್ಷಪೂರ್ವಕ ವಿಚಾರಮಾಡುವರೆಂತ ಹಾರೈಸುವರು

ಯುದ್ಧ ವಾರ್ತೆಯು.

ಪಶ್ಚಿಮ ರಣರಂಗದಲ್ಲಿ ರಣದೇವತೆಯು ಮತ್ತೂ ಭೀಷಣ ಸ್ವರೂಪವನ್ನು ತಾಳಿರುವದು ಬ್ರಿಟಿಷರ ಸೇನಾಬಲದ ಮುಂದೆ ಜರ್ಮನರ ಕಾಟವೇನೂ ಸಾಗುವದಿಲ್ಲ ಬ್ರಿಟಿಷರು ಮತ್ತು ಫ್ರೆಂಚರು ಒಂದೇ ಹೊಡತಕ್ಕೆ ೪-೫ ಹಳ್ಳಿಗಳನ್ನು ಕೈವಶಮಾಡಿಕೊಂಡರು ಶತ್ರುಗಳು ಪ್ರತಿಹಲ್ಲೆಯನ್ನು ಮಾಡಲು ಬ್ರಿಟಿಷರ ತೋಫುಗಳ ಬೆಂಕಿಯ ಮಳೆಯಿಂದ ಜರ್ಮನ ಸೇನೆಯ ಸಾಲುಗಳೇ ಸುಟ್ಟುಹೋದವು ಒಂದು ವರ್ಷದವರೆಗೆ ಜರ್ಮನರು ಕಾಪಾಡಿಕೊಂಡ ಲಿಂಸೇ ದಿನ್ನೆಯ ಮಹತ್ವದ ಸ್ಥಳವು ಸ್ವಾಧೀನವಾಯಿತು ಬಹಳೇ ಶತ್ರುಗಳು ಸೆರೆಬಿದ್ದರು ಯುಸರ ಕಾಲುವೆ ಲೂಸ ಪ್ರಾಂತದ ಬದಿಗೆ ಮಿತ್ರಪಕ್ಷದವರ ಪ್ರಗತಿಯು ಭರದಿಂದಸಾಗಿದೆ ಶತ್ರುಗಳು ಇದರಿಂದ ಗಾಬರಿಯಾಗಿ ಹೋಗಿರುವರು ಈ ಮೂರು ವರ್ಷದ ಯುದ್ಧದಲ್ಲಿ ಇಷ್ಟು ಭೀಷಣ ಕದನವಾಗಲಿಲ್ಲವೆಂದೆಷ್ಟು ಹೇಳುತ್ತಾರೆ ಈ ಕಾಳಗದಲ್ಲಿ ಶತ್ರುಗಳಿಗೆ ಅಪರಿಮಿತ ಹಾನಿಯುಂಟಾಗಿದೆ

ರಶಿಯಾ—ರುಮಾನಿಯಾ ರುಮಾನಿಯನರು ಯುಕ್ತಿಯಿಂದಲೇ ಮತ್ತೂ ಹಿಂಜರಿದರು, ಫೋಕ್ಸಾನಿ ಕಾಳಗದಲ್ಲಿ ರುಮಾನಿಯನರು ರಶಿಯನರು ಅಲ್ಪಸ್ವಲ್ಪ ಹಿಂದಕ್ಕೆ ಸರಿದರು ಮೆಕೆನ್ಸನ ಸೇನಾಪತಿಯು ರುಮೆನಿಯಾದ ಇಡಿ ಸೇನೆಯನ್ನು ಮುತ್ತಿ ಸೇನಾ ಶಕಟವನ್ನೇ ಮುರಿದು ಬಿಡುವ ಪ್ರಯತ್ನದಲ್ಲಿದ್ದಂತೆ ಕಾಣುತ್ತದೆ ರಶಿಯನರ ಹೊಸ ಸೇನೆಯ ಪ್ರತಾಪವು ಇವರಿಗೆ ಬೇಗನೇ ಕಂಡುಬರುವದೆ.

ಕರ್ನಾಟಕ ಬ್ರೆಂಚ ಹೋಮರೂಲ ಲೀಗ, ಶಿರ್ಶಿ.

ಅಯ್ಯಾ, ಕಾನಡಾವೃತ್ತ ಕರ್ತರೇ,

ಈ ಕೆಳಗಿನ ಸಂಗತಿಯು 'ಕೆನರಾವೃತ್ತ" ದಲ್ಲಿ ದಯಮಾಡಿ ಪ್ರಕಟಿಸುವಿರಾಗಿ ಕೋರುತ್ತೇವೆ

ನಿನ್ನೆ ದಿವಸ ಇಲ್ಲಿ ಆಜಮಾನ ೫೦-೬೦ ಸ್ವರಾಜ್ಯ ಸಂಘದ ಮೆಂಬರರ ಸಭೆ ರಾ| ವಕೀಲ ಮಾಡಗಿರಿಯವರ ಅಧ್ಯಕ್ಷತೆ ಕೆಳಗೆ ಜರಗಿ "ಕರ್ನಾಟಕ ಬ್ರೆಂಚ ಹೋಮರೂಲ ಲೀಗ ಶಿರ್ಶಿ" ಸಂಘವು ಸ್ಥಾಪಿಸಲ್ಪಟ್ಟು ಇಲ್ಲಿಯ ಪ್ರಸಿದ್ಧ ವಕೀಲರಾದ ಮ| ರಾ| ವಾಸುದೇವರಾವ ಕೊಪ್ಪಾಳಿ ಇವರನ್ನು ಸರ್ವಾನುಮತದಿಂದ ಅಧ್ಯಕ್ಷನನ್ನಾಗಿರಿಸಿರುತ್ತಾರೆ ಇದಲ್ಲದೆ ಬಾಕಿ ಬೇರೆ ಬೇರೆ ಕೆಲಸಕ್ಕೆ ಆಯಾಯ ಯೋಗ್ಯ ಜನರನ್ನು ನೇಮಿಸಿದ್ದಾಗಿದೆ ಸಭೆಯಲ್ಲಿ ಆಗಿಂದಾಗ ೮-೧೦ ಹೊಸ ಮೆಂಬರರು ಆದರು *S S Hudlamane*

Secretary H R League, Sirsi

ಧಾರೇಶ್ವರದ ತಿಮಿಂಗಿಲು ಮೀನು.

(ಖಾಸಾ ಬಾತ್ಮೀದಾರರಿಂದ.)

ಧಾರೇಶ್ವರದ ಸಮುದ್ರದ ದಂಡೆಯಮೇಲೆ ಅದ್ಭುತ ಆಕಾರದ ಒಂದು ರಾಕ್ಷಸೀ ಮೀನು ಸತ್ತು ಬಿಟ್ಟಿರುವದು ಇಷ್ಟು ಭಯಂಕರ ಸ್ವರೂಪದ ಜಲಚರವನ್ನು ಇಲ್ಲಿಯ ಜನರು ಎಂದೂ ನೋಡಿದ್ದಿಲ್ಲ ಆಕಸ್ಮಾತ ಕಾರಣದಿಂದ ಸಮುದ್ರದಲ್ಲಿ ಸತ್ತು ಬಿದ್ದು ದಂಡೆಗೆ ಬಂದು ಅಪ್ಪಳಿಸಿದ ಇದೊಂದು ತಿಮಿಂಗಲ ಮೀನಾಗಿರುವದು. ಇದು ೭೮ ಫೂಟು ಉದ್ದವಾಗಿದ್ದು ಇದರ ವ್ಯಾಸವು ೪೦ ಫೂಟಗಿಂತ ಕಡಿಮೆ ಇಲ್ಲ ಇದರ ಒಂದು ಬದಿಗೆ ನಿಂತವರಿಗೆ ಮತ್ತೊಂದು ಬದಿಯ ಜನರೇನೂ ಕಾಣುವದಿಲ್ಲ ಇದು ಕೊಳೆತು ಹೋಗಿ ಇದರ ಶ್ವಾಸಕೋಶಗಳೂ, ಕರಳೆಗಳೂ ನೀರಿನ ಮೇಲೆ ತೇಲಾಡುತ್ತವೆ ದೂರಿನಿಂದ ನೋಡಿದರೆ ಇವು ದೊಡ್ಡ ಭಂಡೆಗಳ್ಲಿನಂತೆ ಕಾಣುತ್ತವೆ ಕಾಲು ಮೈಲು ಅಂತರದಮೇಲೆ ಇದರ ದುರ್ವಾಸನೆ ಹಬ್ಬಿದೆ ಜನರ ಆರೋಗ್ಯರಕ್ಷಣೆಗಾಗಿ ಇದನ್ನು ಹುಗಿದು ಬಿಡುವದು ಉತ್ತಮವು ಹುಗಿಯಲಿಕ್ಕೆ ೮-೧೦ ದಿವಸಗಳಾದರೂ ತಾಗುವವು ಶಕ್ಯವಿದ್ದರೆ ಎಲುಬುಗಳನ್ನು ತೆಗೆದುಕೊಂಡು ಕೈಗಾರಿಕೆಯ ಕೆಲಸಕ್ಕೆ ಕಾರಖಾನೆಗಳಿದ್ದಲ್ಲಿ ಕಳುಹಿಸಬಹುದು ಅನ್ಯ ದೇಶಗಳಲ್ಲಾದರೆ ಇದರ ಸ್ನಿಗ್ಧ ಭಾಗದೊಳಗಿಂದ ನೂರಾರು ಮಣ ಎಣ್ಣೆಯನ್ನು ತೆಗೆದು ಉಪಯೋಗಿಸದೆ ಇರುತ್ತಿದ್ದಿಲ್ಲ ಈ ಅದ್ಭುತ ಪ್ರಾಣಿಯನ್ನು ನೋಡಲಿಕ್ಕೆ ಕುಮಟೆಯಿಂದಲೂ ಹೊನ್ನಾವರದಿಂದಲೂ ನಾವಿರಾರು ಜನರು ಬಂದು ಹೋದರು ಅಸಹ್ಯಕರವಾದ ದುರ್ವಾಸನೆಯನ್ನು ಈ ಮೀನು ಬಿಡುತ್ತಿದ್ದರೂ ಮೀನ ಜಾತ್ರೆಗೆ ಇನ್ನೂ ಜನರು ಹೋಗುತ್ತಲಿದ್ದಾರೆ

ಇಹ ವೃತ್ತ.

ಕುಮಟಾ — ಮಳೆಯು ೧೨೮ ೭೬ ಇಂಚು ಆಗಿತು ಬೆಳೆಯು ಸ್ಥಿತಿಯು ನೆಟ್ಟಗಿದೆ ಮಘಾ ನಕ್ಷತ್ರದ ಮಳೆಯು ಚಲೋ ಬೀಳಹತ್ತಿದೆ ಅಕ್ಕಿಯು ಬಾರಣೆಯು ಮಾತ್ರ ಇಳಿಯಲಿಲ್ಲ ಊರೊಳಗೆ ಜ್ವರ, ಕೆಮ್ಮು ಆಮಾಂಶ, ಅತಿಸಾರ ಮುಂತಾದ ಬೇನೆಗಳಿಂದ ರೋಗಮಾನವು ಸ್ವಲ್ಪ ಏರಿದೆ

ಮ್ಯುನಿಸಿಪಲ್ ಆಸ್ಪತ್ರೆಯೊಳಗಿನ ಔಷದಗಳು ತೀರುತ್ತ ಬಂದದರಿಂದ ಇಲ್ಲಿಯ ಶೇಟ ಸಾವಕಾರ ಜನರು ವಂತಿಗೆ ಮಾಡಿ ಅವಶ್ಯಕ ಔಷದಗಳನ್ನು ತರಿಸುವ ವಿಚಾರದಲ್ಲಿದ್ದಾರೆ ಬಹಳೇ ಸ್ತುತ್ಯ ಕೆಲಸವು

ಡಿ। ಇನಸ್ಪೆಕ್ಟರ ಮಿ। ಫರ್ನಾಂಡಿಸ ಸಾಹೇಬರ ಹಣ ವಂತಿಗೆ ಮಾಡಿ ವಾರಲೋನಿನಲ್ಲಿಟ್ಟು ಅದರ ಬಡ್ಡಿಯಿಂದ ಹಳ್ಳಿಯೊಳಗಿನ ಬಡ ವಿದ್ಯಾರ್ಥಿಗಳಿಗೆ ಪಾಟ ಪುಸ್ತಕಗಳನ್ನು ಪೂರೈಸುವ ಸ್ತುತ್ಯ ಉದ್ದೇಶದಿಂದ ಇಲ್ಲಿ ಬಂದ ಉದ್ದೇಶವನ್ನು ಸೂಚಿಸಿ ಮುಂದೆ ಸಾಗಿದರು ವಾರಲೋನು ಕೂಡಿಸುವ ಸಂದರ್ಭದಲ್ಲಿ ಬಡ ಹುಡುಗರ ಸ್ಥಿತಿಯು ಕಣ್ಣರಿಕೆಗೆ ಬಿದ್ದು ಸುದೈವವು

ಕಾರವಾರ — ವ್ಯವಸ್ಥಿತ ರೀತಿಯಿಂದ ಇಲ್ಲಿ ಕೆಲಕಾಲ ನಡೆದ ಸ್ಟೂಡಂಟ್ಸ ಬ್ರದರ ಹುಡ ಸಂಸ್ಥೆಯು ಬಂದ ಮಾಡಲ್ಪಟ್ಟಿತು ಅದರ ಪುಸ್ತಕಾಲಯ ಮತ್ತು ನಂಡು ಕಾರವಾರ ಹೈಸ್ಕೂಲಿಗ ಅರ್ಪಿಸಲಾಯಿತು ಕಾರಣವೇನೂ ತಿಳಿಯುವದಿಲ್ಲ ಮುಂಬಯಿಯ ಇಂಥ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿದ್ದು ಈ ಸಂಸ್ಥೆಗೆ ಮಾತ್ರ ಖಗ್ರಾಸ ಗ್ರಹಣದ ಬಾಧೆಯಾಗಗೊಟ್ಟದ್ದು ನಮಗೇನೂ ಭೂಷಣಾವಹವಲ್ಲ

ಪೆಸೊಫೋಟಾಮಿ ಯಾದಿಂದ ಒಂದ ಲೇ। ಕ್ಯಾಕಿಣಿ I. M. S ಯವರ ಸನ್ಮಾನಾರ್ಥವಾಗಿ ಮಿತ್ರ ಸಭಾದಲ್ಲಿ ಉಪಹಾರ ಸಮಾರಂಭವು ಜರಗಿತು ಅಧ್ಯಕ್ಷರಾ। ನಾ। ವಾಘ ಮುನಸೀಫರು ಉಚ್ಚವರ್ಣದ ಜನರಿಗೆ ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರಲಿಕ್ಕೆ ಉಪದೇಶಿಸಿದರು

ರಾಮಾ ಬಿಂನ ದೇಸು ಎಂಬವನು ತನ್ನ ಹೆಂಡತಿಗೆ ಹೊಡದು ಕೊಂದನೆಂಬ ಆರೋಪದ ಮೇಲೆ ಯಲ್ಲಾಪುರ ಮೆಜಿಸ್ಟ್ರೇಟರ ಖಟ್ಲೆ ನಡಿಸಿ ಅವನನ್ನು ಸೆಶನ್ಸಿಗೆ ಕಮಿಟ ಮಾಡಿರುವರು

ಹಳಿಯಾಳ — ಹವೆಯು ಶೀತವದ ಮಳೆಯಿಲ್ಲದ ಬೆಳೆಯು ಕೆಡಹತ್ತಿದೆ ಹೋದವರ್ಷ ಮಳೆ ೩೩ ಇಂಚು ಇದ್ದು ಈ ವರ್ಷ ೨೧ ಇಂಚು ಈವರೆಗೆ ಆಗಿದೆ ದಾರಣೆಯು ತೇಜಿ ಆಗಿದೆ ಜನರು ಚಿಂತಾಕುಲರಾಗಿರುವರು ಪ್ಲೇಗವು ಒಹಳೇ ಜಡ ಮಹಾಮಾರಿಯ ಸಹ ಚಾಲು ಅದೆ

ಸ್ಥಾನಿಕ ಪರಿಷದಗೆ ಇಲ್ಲಿಂದ ಯಾರೂ ಹೋಗದಿರುವದರಿಂದ ಜನರಿಗೆ ವಿಷಾದವಾಗಿದೆ ಪ್ಲೇಗದ ದೆಸೆಯಿಂದ ಶಾಲೆಗಳು ಬಂದ ಆಗಿ ಮುಲ್ಕಿ ಕ್ಲಾಸು ಮಾತ್ರ ನಡೆದದೆ ರಾಮಮಂದಿರದಲ್ಲಿ ಜೊಬ್ಬಾಪುರದ ಸದಾನಂದಮಹಾರಾಜರು ಪಾಸಬೋಧದಮೇಲೆ ಪುರಾಣ ಮತ್ತು ಭಜನೆಯನ್ನು ನಡಿಸಿದ್ದು ಪಿಶಾಚ ಬಾದೆ ರೋಗ ನಿವಾರಣೆಗಳನ್ನು ರಾಮದಾಸಿ ಶಕ್ತಿಯಿಂದ ದೂರ ಪಡಿಸುತ್ತಾರೆ

ಪ್ಲೇಗ ಈವರೆಗೆ ೧೨೫ ಜನರಿಗೆ ಸೋಂಕಿ ೬೦ ಜನರು ಸತ್ತರು ಕೊಲೆರಾ ೧೨೦ ಜನರಿಗೆ ಆಗಿ ೬೯ ಜನರು ತೀರಿದರು

ಭಟ್ಕಳ — ಶಿರಾಲಿ ಚಿತ್ರಾಪುರ ಮಠದ ಸಮೀಪದ ಕುಂಬಾರ ಕೇರಿಯಲ್ಲಿ ತಾ ೧೨ ರಲ್ಲು ಬೆಳಗಿನ ೧೧ ಘಂಟೆಗೆ ಒಡ್ಡಿಯಲ್ಲಿ ಕೆಲವರು ಕಳೆತೆಗೆಯುತ್ತಿರುವಾಗ ಅಲ್ಲಿ ಮಲಗಿದ ಒಂದು ಹುಲಿಯು ಇಬ್ಬರ ಮೈಮೇಲೆ ಹಾರಿ ವ ತ್ತೊಬ್ಬನನ್ನು ಜಖಮ ಮಾಡಿದದರಿಂದ ಅವನನ್ನು ಆಸ್ಪತ್ರೆಯಲ್ಲಿಟ್ಟಿರುವರು ಎರಡನೆ ದಿವಸ ಅದು ಒಂದು ಆಕಳನ್ನು ಮುರಿದು ಕೊಂದಿತು ಹೀಗೆ ಬಹಳೇ ಘಾಂವಟಿಗಳು ನಡಿಯುತ್ತಿರುವವು ಇದು ರಹಿತರಿಗೆ ಶಸ್ತ್ರಗಳನ್ನು ಉಪಯೋಗಿಸಲಿಕ್ಕೆ ಕೊಡದ ಪರಿಣಾಮವು ಇಂಥ ಸಂಕಟಗಳಿಂದ ಪ್ರಜೆಗಳನ್ನು ರಕ್ಷಿಸುವದು ನಮ್ಮ ದಯಾಳು ಸರಕಾರದ ಕರ್ತವ್ಯವಾಗಿದೆ

ವಿವಿಧ ವರ್ತಮಾನ.

ಕೊಂಗ್ರೆಸ ಕಮಿಟಿಯು ಸೂಚಿಸಿದಂತೆ ಸತ್ಯಾಗ್ರಹದ ವ್ರತವನ್ನು ಸ್ವೀಕರಿಸುವರೆ ಮದ್ರಾಸ, ಕರಾಚಿ, ಸಿಂಧ, ಹೈದ್ರಾಬಾದ, ಪ್ರಾಂತಗಳು ಸಮ್ಮತಿಯನ್ನು ಕೊಟ್ಟಿರುವರು ಮುಂಬಯಿಯಲ್ಲಿ ಪ್ರಾಂತಿಕ ಕಮಿಟಿಯ ಸಭೆಗೂಡಿ ಬಹಳೇ ವಾಗ್ವಾದ ನಡೆದು ಇದರ ವಿಷಯವಾಗಿ ಒಂದು ಕಮಿಟಿಯು ನೇಮಿಸಲ್ಪಟ್ಟಿದೆ ಇತರೇ ಪ್ರಾಂತಗಳು ಈ ಮಹತ್ವದ ವಿಷಯವಾಗಿ ತಮ್ಮ ಮತಗಳನ್ನು ಬೇಗನೇ ಪ್ರಕಟಿಸುವವರಿದ್ದಾರೆ

ಕಳೆದ ೧೬ ನೇ ತಾರೀಕಿನ ದಿವಸ ಹೋಮರೂಲ ಸಂಘಗಳು ಅಲ್ಲಲ್ಲಿ ಬೀರ್ಭುಂಟ ಬಾಯಿಯವರ ಬಿಡುಗಡೆಯ ದಿವಸವೆಂತ ಸಭೆಗೂಡಿಸಿ ಮತ್ತೊಮ್ಮೆ ನಿಷೇಧವನ್ನು ಪ್ರಕಟಿಸಿರುವವು

ಭಾರತ ಮಂತ್ರಿಯ ಸಭೆಯಲ್ಲಿ ಉಪಮಂತ್ರಿಯಾಗಿ ನೇಮಿಸಲ್ಪಟ್ಟ ನಾಮದಾರ ಭೂಪೇಂದ್ರನಾಥ ಬಸರವರ ಸನ್ಮಾನಾರ್ಥವಾಗಿ ಕಲಕತ್ತೆಯಲ್ಲಿ ೨ ಸಮಾರಂಭಗಳಾದವು ಅಧಿಕಾರ ಪದವನ್ನು ಸ್ವೀಕರಿಸುವ ಮುಂಚೆಯೇ ಅಧಿಕಾರಿಗಳ ಭಾಷೆಯಿಂದ ನಾಮದಾರ ಬಸುರವರು ಜನರಿಗೆ ಹೇಳುತ್ತಾರಲ್ಲ — "ನಿಮ್ಮ ನ್ಯಾಯ್ಯ ಆಕಾಂಕ್ಷೆಗಳನ್ನು ಕೇಳಿಕೊಳ್ಳಲಿಕ್ಕೆ ಸರಕಾರವು ಉತ್ಸುಕವಾಗಿದೆ ಆದರೆ ನಿಮ್ಮ ಹಕ್ಕುಗಳ ಆರ್ಭಟದಿಂದ ಸರಕಾರದ ಕಿವಿಗಳನ್ನು ಅಪ್ಪಳಿಸಬೇಡಿರಿ ಅಧಿಕಾರಿ ಬಾಷೆಯು ಇದೊಂದು ಮಾದರಿಯು.

ಮದ್ರಾಸದ ನ್ಯೂ ಇಂಡಿಯಾ' ಪತ್ರದ ಜಾಮೀನ ರಕಮು ರೂಪಾಯಿ ೨೦೦೦ನ್ನು ಸರಕಾರವು ಜಪ್ತ ಮಾಡಿದೆ ಈ ಪತ್ರದ ಮೇಲೆ ಇದು ಪ್ರೆಸ್ ಆಕ್ಟಿನ ಎರಡನೇ ಪ್ರಯೋಗವು ಪ್ರಕಾಶಕರು ಪತ್ರವನ್ನು ಮುಂದೆ ನಡಿಸುವ ನಿಶ್ಚಯವನ್ನು ಪ್ರಕಟಿಸಿರುವರು

ಮುಂಬಯಿ ಮಧ್ಯಪ್ರಾಂತ ಮದ್ರಾಸ ಮತ್ತು ಬ್ರಹ್ಮದೇಶ ಈ ನಾಲ್ಕು ಪ್ರಾಂತಗಳ ಕೊಂಗ್ರೆಸ ಕಮಿಟಿಗಳಿಂದ ಆನಿಬೆಸೆಂಟ ಬಾಯಿಯವರು ಬರುವ ಕಲಕತ್ತಾ ಕೊಂಗ್ರೆಸದ ಅಧ್ಯಕ್ಷರಾಗಿ ಆರಿಸಲ್ಪಟ್ಟರವರು ಮತ್ತೊಂದು ಮತವು ಸಿಕ್ಕಿದರೆ ಅವಳಿಗೆ ಬಹುಮತದಿಂದ ಆರಿಸಿದಂತಾಗುವದು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಸುವಾಸಿಕ ಹುರುಕಿನ ಔಷಧ

ಕೆಂಪುಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ಭಯಂಕರ ತ್ವಚೆರೋಗಗಳು ಬಲುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವದ

೧ ಬೀಟಿಗ ೧ ಆಣೆ ೧೦೦ಕ್ಕೆ ೫ ರೂ

ಬೆಲೆ] ಕಣ್ಣುಬೇನೆಗೆ ಔಷಧ. [೧ ಮತ್ತು

ಕಣ್ಣು ಕೆಂಪಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸದಲ್ಲಿ ಪೂರ್ಣ ಗುಣವಾಗುವವು ಔಷದವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕಾಣುವದು ೧ ಬೀಟಿಗೆ ಮೂರುಕಾಸು ೧೦೦ಕ್ಕೆ ೧೦೮

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಜಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗ ದೊರಕುವವು ೫೦ ಕಿ ಪೋಸ್ಟ್ ಕ್ಯಾಗಿ ಅರ್ಧ ಆಣೆ ಟಿಕೇಟು ಕಳುಹಿಸಿದಲ್ಲಿ ಆಯುರ್ವೇದ ಮಾರ್ಗದರ್ಶವೆಂಬ ಬುಕ್ಕ ಉಚಿತವಾಗಿ ಕಳುಹಿಸುವೆವು

ಸೂಚನಾ— ಒಂದು ರೂಪಾಯಿಯೊಳಗಿನ ಆರ್ಡರು ಸ್ವೀಕರಿಸಲಾಗದು ಕಿಮ್ಮತ್ತಿನ ಹೊರತು ಪ್ಯಾಕಿಂಗ ಅಂಚೆವೆಚ್ಚ ಬೇರೆ ವ್ಯಾಪಾರಸ್ಥರಿಗೆ ಭರಪೂರ ಕಮಿಶನು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.
ಕಿತ್ತೂರು, ಬೆಳಗಾಂವ ಡಿಸ್ಟ್ರಿಕ್ಟ

Printed & Published by Krishnarao Keshav Shenvi at his Star of Kanara Press, Kumta

ಪತ್ರದ ವರ್ಗಣಿ -

ಊರ ಚೇರುಲ್ಲಿ ಅಗಾವು

ರೂಪಾಯಿ 0

ಅಂಚೆವೆಚ್ಚ ಕೂಡಿ

ರೂಪಾಯಿ 1-6-6

ಒಂದು ಸಂಚಿಕೆಗೆ 0-0-7

THE

KANARA NEWS.

ಕಾನಡಾ ವೃತ್ತ.

सत्यं ब्रूयात्प्रियं ब्रूयान्नब्रूयात्सत्यमप्रियं ।
प्रियं च नानृतं ब्रूयादेष धर्मः सनातनः ॥

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳ ವರೆಗೆ ರೂ 1 0 0

ಅನಂತ್ರ ಪ್ರತಿ ಸಾಲಿಗೆ 0-2 0

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

Registered No. R. 1720

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೫ ಮಾಹೆ ಸಪ್ಟಂಬರ ಸನ್ ೧೯೧೭ ನೇ ಇಸವಿ. [ಸಂಚಿಕೆ ೨೪.

ಮನೋಲ್ಲಾಸಿನಿ ತೈಲ.

ತಲೆನೋವು ವರ ತಿರುಗುವದು ಅರ್ಧ ತಲೆನೋವು ತಲೆವುರಿ, ಕಣ್ಣುವುರಿ, ಕಿವಿಯಿಂದ ಕೀವು ಸೋರುವದು, ಹಲ್ಲುಗಳಿಂದ ರಕ್ತಬರುವದು, ಹಲ್ಲಿನ ನೋವು ಕಿವುಡುತನ, ಕಣ್ಣು ನೋವು ಅಪಸ್ಮಾರ ನಿದ್ರೆ ಬಾರದಿರುವದು ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲಿ ಖಂಡಿತವಾಗಿಯೂ ಗುಣಮಾಡುತ್ತದೆ ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸಕೂದಲವನ್ನು ಹುಟ್ಟಿಸುತ್ತದೆ ಎಂದು ಈ ತೈಲವನ್ನು ಉಪಯೋಗಿಸಿದವರೆಲ್ಲರು ಹೇಳುತ್ತಾರೆ

ಬೆಲೆ ೩ ಔಂಸಿನ ಸೀಸೆ 1ಕ್ಕೆ	0 12 0	ಟ ಖ 0 4 0
„ „ 3ಕ್ಕೆ	2-0 0	„ 0-8-0
೬ ಔಂಸಿನ ಸೀಸೆಗೆ	1-6-0	„ 0 6 0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರಕೋಶದವುರಿ, ಮೂತ್ರ ಹೊಯ್ಯುವಾಗ್ಗವುರಿ, ಮೂತ್ರ ನಾಳದಲ್ಲಿ ಹುಣ್ಣಾಗುದು ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದವು ಮೇಹ ರೋಗವನ್ನು ಗುಣ ಮಾಡುತ್ತದೆ

ಬಾಟ್ಲೆ 1ರ ಕ್ರಯ	1-8-0	ಟ ಖ 0-6-0
ಬಾಟ್ಲೆ 3ರ ಕ್ರಯ	4-0-0	„ 1-0-0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಖವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ಕಂಪ, ಬಿಳಿಪ್ರದರ (ಬಿಳಿ ಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ

ಬಾಟ್ಲೆ 1ರ ಕ್ರಯ	2-0-0	ಟ ಖ 0-4-0

ಚಿನ್ ಚಿನ್ ಬಾಮು.

ಸ್ವಲ್ಪ ಮಲಾಮನ್ನು ನೋವಿದ್ದ ಭಾಗಕ್ಕೆ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲಾ ತರದ ನೋವು, ತಲೆನೋವು ಚಳಕು, ಘಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ಕ್ಕೆ ಬೆಲೆ ೦-೧-೦ ೧೨ ಡಬ್ಬಿಗಳಿಗೆ ಬೆಲೆ ೦-೧೧-೦

ದೊಡ್ಡ ಡಬ್ಬಿ ೧ಕ್ಕೆ ೬ ಆಣೆ ೧೨ಕ್ಕೆ ರೂ. ೪

೧ ಡಜನ ಡಬ್ಬಿಗಳಿಗೆ ೭-೪-೦ ಟ ಖ ಬೇರೆ ಇನ್ನು ಅನೇಕ ಔಷಧಿಗಳಿಗೆ ಕೆಟಲಾಗಿಗೆ ಬರೆಯಿರಿ

ವಿಳಾಸ —

ಮನೋಲ್ಲಾಸಿನಿ ಕಂಪನಿ,

(ನಂಬರ 7) ಕಂಕನಾಡಿ, ದಕ್ಷಿಣ ಕಾನಡಾ

Manollasini Co.

(No 7) Kankanady South Canara.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಸುವಾಸಿಕ್ ಹುರುಕಿನ ಔಷಧ

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ಮುಂತಾದ ತ್ವಚೆರೋಗಗಳು ಬಲುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವದು

೧ ಪೇಟಿಗೆ ೧ ಆಣೆ ೧೦ಕ್ಕೆ ೫ ರೂ

ಬೆಲೆ! ಕಣ್ಣುಬೇನೆಗೆ ಔಷಧ [೧ ಡುಡ್ಡು.

ಕಣ್ಣು ಕೆಂಪಗಾಗೋಣ, ಪಿಚ್ಚುಬರೋಣ, ಬಾವು ಇಂಥ ಈ ಕಣ್ಣು ರೋಗಗಳು ಮೂರೇ ದಿವಸದಲ್ಲಿ ಪೂರ್ಣ ಗುಣವಾಗುವವು ಔಷಧವನ್ನು ಕಣ್ಣಿಗೆ ಹಾಕಿದ ಕೂಡಲೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವದು ೧ ಪೇಟಿಗೆ ಮೂರುಆಣೆ ೧೦ಕ್ಕೆ ೧ರೂ

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೇಟು ಕಳುಹಿಸಿದಲ್ಲಿ ಆಯುರ್ವೇದ ಔಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು

ಸೂಚನಾ— ಒಂದು ರೂಪಾಯಿಯೊಳಗಿನ ಆರ್ಡರ ಸ್ವೀಕರಿಸಲಾಗದು ಕಿಮ್ಮತ್ತಿನ ಜೊತೆಗೆ ಪ್ಯಾಕಿಂಗ ಅಂಚೆ ವೆಚ್ಚ ಬೇರೆ ವ್ಯಾಪಾರಸ್ಥರಿಗೆ ಭರಪೂರ ಕಮೀಶನು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಕಿತ್ತೂರು, ಬೆಳಗಾಂವ ಡಿಸ್ಟ್ರಿಕ್ಟ

[illegible]

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ತ್ವರಿತದ ಬಿಡಿಯಾಗಿದೆ ಮೂತ್ರಗುಡ್ಡು, ಮೂತ್ರಕೋಶ ಪಿತ್ತಕೋಶ ಕಲಿಜೆ, ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ಸೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಆಕ್ರಮಗಳು ಈ ಔಷಧಿಯಿಂದ ಬೇಗನೇ ಉಪಶಮನವಾಗುವವು

ಕ್ರಯ ಶೀಸೆ 1 ಕ್ಕೆ 0-6-0. ವಿ ಪಿ ಬೇರೆ ಡಜನ್ ಶೀಸೆಗಳಿಗೆ ರೂ 4-0-0 ವಿ. ಪಿ. ಸಹಿತ.

ವಿಳಾಸ— ದಿ ಇಕ್ಲೆಕ್ಟಿಕ್ಸ್ ಏಜನ್ಸಿ, ಕಂಕನಾಡಿ ಮಂಗಳೂರು.

☞ ಟಿ ಜಿ ಮಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ ಸಂಧಿವಾತ ಸ್ನಾಯುಗಳ ಸೆಳವು, ನರಗಳ ಸೆಡತ, ಕೆಮ್ಮು, ಜ್ವರ, ಕೊಲೆರಾ ಬೇನೆ, ಬಾಣಂತೀರೋಗ ಪ್ಲೇಗ, ಹೊಟ್ಟೆಶೂಲೆ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದೆ ಬಾಟ್ಲಿ ೧ಕ್ಕೆ ೧॥ ರೂ ಟಪಾಲ ಹಾಸಲು ೪ ಆಣೆ ಬೇರೆ ಒಂದೇಸರ್ತಿ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವವರಿಗೆ ೩ ರೂ ಕಮಿಶನ್ ಹೊರತು ಅಂಚೇವೆಚ್ಚ ಬೇರೆ.

ದದ್ರುಘ್ನ ಜಾಲೀಮಬಾಮು — ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಹೊಸ, ಹಳೇ ಗಜಕರ್ಣ ಮತ್ತು ಇಸಬು ರೋಗಗಳ ಹುಳಗಳು, ಉರಿ, ಬೆಂಕಿ ಮುಂತಾದವುಗಳ ವ್ಯಥೆಯಿಲ್ಲದೆ ನಿರ್ಮೂಲವಾಗುವವು ಬಾ ೬ ೧೨ ಆಣೆ ಅಂಚೆವೆಚ್ಚ ೩ ಬಾಟ್ಲಿ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ ಪತ್ತೆ —

ಸಂಜೀವನಾರ್ಕ ಆಫೀಸ, ಕುರ್ಲಾ ಮು. ಒಯಿ

ಪ್ರಸಿದ್ಧ ಜ್ಯೋತಿಷಿ.

ಜನಾರ್ದನ ದತ್ತಾತ್ರಯ ಸಾನೆ,

ಬುಧವಾರ, ನಂ. ೩೩೪, ಪುಣೆ. ಜ್ಯೋತಿಷ್ಯದ ಕೆಲಸಗಳು ಉತ್ತಮ ತರದಿಂದ ಮಾಡಲ್ಪಡುವವು

ವಿಶೇಷ ಮಾಹಿತಿ ಖುದ್ದ ಅಥವಾ ಪತ್ರಮುಖಾಂತರ.

ಉತ್ಕೃಷ್ಟ ಹುಳದ ಪ್ರೋಮು.

... ಯುದ್ಧದ ಪ್ರಾರಂಭದಲ್ಲಿ ಜರ್ಮನಿಯಿಂದ ಬಿತ್ತಿತ್ತು ಈಗ ಅದು ಎಲ್ಲಿಯೂ ಸಿಗದೇ ಇದ್ದ ರೂ ನಾವು ಮಹತ್ಪ್ರಯಾಸದಿಂದ ಜನರ ಸೋಯಿ ಗೋಸ್ಕರ ರಾತ್ತ್ಲದ ಮುಖಾಂತರ ದೊರಕಿಸಿದ್ದೇವೆ

ದರ ರಾತ್ತ್ಲದ ಬೆಲೆ 8-0-0

½ ರಾತ್ತ್ಲದ ಬೆಲೆ 4-8-0

¼ ರಾತ್ತ್ಲದ ಬೆಲೆ 2-8-0

ಶಿವ್ಯಾ ಟಪಾಲ ಹಾಸಲು ಬೇರೆ ಬಿದ್ದೀತು

ಕಾಮತ ಬ್ರದರ್ಸ ಹೊನ್ನಾವರ,

ಜಿಲ್ಲಾ ಕಾನಡಾ

Free Education.

(EXTRACT)

The Hon Sir Dinshaw Wacha in his fine speech at the meeting in memory of the late Mr Dadabhai Naoroji at the Town Hall last week observed that Mr Dadabhai had dwelt on the question of free education at some length in his address in 1893 to the students of the Gokuldas Tejpal Sanskrit College This is harking back a long way but the point is so interesting that it seems worth ... to quote the actual words which Mr Dadabhai Naoroji used The following is the salient part of his address I say that everything of a nation's investment must be in national education which will be returned a thousand and a million fold in the peace and harmony and the general advancement and progress of the people If any country needs free education at all it is India It should be supplied by the State from the revenue of the country and the best purpose for which the revenue could be applied was for the education of the people for it is on education that our future and further progress depends" This was said a quarter of a century ago and yet the question is in its academic stage *pace* the Resolution of the Hon ble Mr Sarma adopted at the session of the Imperial Legislative Council in March last

---

THE KANARA NEWS

5th September 191

Act—act in the living ... Heart within and God o'erhead

The Language Problem of Kanara II

BY

(G V Chandavarkar Hyderabad ...)

continued from the last issue

Now let us come to our th m H ... do all these activities affect the language problem of our Kanara District? Advocates of the Kanarese language might at ... tult fv ... by saying here is an excellent ... ary lan uage t ... honour this District in the linguistic ... a ... nation of th ... reveal th ... tion Kanarese ... graphically the language of the District & in the absence of any other rival claimant it has naturally assumed the position of the official language of the district The ... that Kanarese is the ... We are ... dethrone Kanarese ... hand we are in full sympathy with those who are earnestly endeavouring to enrich the language ... here more concerned with the state of the *Konkani* dialect and the future of the different communities in Kanara who ... it is to ... as their mother tongue Strange as it may seem to many the fact is there and none can deny it Many an educated Goud Saraswat a large number of traders and even the *Navayates*—(the Mohamedans)-speak I believe *Konkani*— I am open to correction I write from my experience as a lad Having left Kanara some 20 years back I am not in a position to say whether the former Konkani speaking people have adopted any other language now In any case I start with the presumption that *Konkani* is still the language of the majority in Kanara For the sake of brevity let me forthwith raise the following issues—

(to be continued)

Kanara District Association

Dear Sir

Like Mr Delane of immortal fame of the London Times you appear to be cooking things for them of your own accord with remarkable intrepidity For in your Kanarese leader of the last issue you speak of things like one ill informed The fact is that we have not yet found it convenient to call a meeting to consider the proposal of a Kanara People's Association Only Sir Narayen Chandavarkar had questioned the propriety of having such an association in Bombay in ... of in Kanara in his interviews with me and Mr Murdeshwar He has not said his final word on the matter He is going to consult Dr ... as to which climate ... suit the Association best Under the peculiar circumstances in Kanara propriety should give way to expediency nay the logical necessity of having the association in Bombay and I am hopeful that Sir Narayen after a thoughtful consideration will have nothing to say against it

The slackness of our people is proverbial and a Kanarese ... even ... I ... Bombay ... Kanarese man if he is not essentially unpatriotic I have ... matter for some time past and what do you think is my experience? One says My communal work above all I can have nothing to do with your proposals Another says Oh these are the days of Home Rule we have no patience with your insufficient programmes And a third one says What can the people of Kanara achieve? therefore never ... Still hopeful signs are not wanting and wisdom is justified of her children and ... the assistance that we have we hope to soon launch the association into existence and with it also the practical work that is expected of it

Poona, 31st Aug 1917

I remain, yours faithfully

S. G. Warty

We thankfully publish Mr Warty's letter as the only first hand communication we have yet received on the subject Indirect information led us to misunderstand the informal" discussion, for the proceedings of the meeting that was to be held on the 4th of August We are, however, glad to learn that the meeting is to come off soon and hope that the loyal and patriotic movement will earn hearty support from all Kanarites

Editor K N.

KANARA STUDENTS ASSOCIATION, POONA

Mr N V Nayak B A, Poona writes –

In view of the fact that Students from Kanara coming for study in the educational institutions of Poona are daily growing in number as resolved in a meeting of the Kanara Students held on the 30th ultimo an Association has been started under the Presidency of Sir Narayen Chandavarkar to promote the welfare of students of Kanara staying in Poona and to develop a feeling of co-operation mutual good will and mutual help. The association is called "Kanara Students Association Poona" and under the rules passed in the meeting all past & present Kanara Students of the Poona educational institutions are eligible for the membership of the association The fees for membership have been fixed to the nominal amount of As 12 per term Those that contribute Rs 5 or more are recognised as Sympathisers and those that contribute Rs 25 or more as Patrons of the said association We hope the past students from Kanara will help us in the matter of making the new institution a complete success and the public will heartily respond to the call for help in such a noble cause Poor students from Kanara will get all possible help from the institution

---

एकीचा मोपळा.

आमच्या कारवारच्या एका बातमीदारा कडून इकडे एका कुडाळदेशस्थ गौडसारस्त ब्राह्मणाच्या प्रेत दहनाच्या वेळीं जो प्रकार झाला त्या सारखाच किंवा त्याहूनहि निराशा जनक एक प्रकार तिकडे झाला, त्याची इत्थं भूत हकीगत आलेली आहे ते पत्र जरा क्षण क्षणीत असल्यामुळे सबंब प्रसिद्ध करणें इष्ट दिसत नाहीं. परंतु ते काय लिहितात ते सारांश रूपानें आमच्या वाचक वर्गास कळविणें जरूर आहे कारण त्यापासून बराच बोध घेता येईल ती हकीगत अशी – कारवार येथील एक रहिवाशी रामकृष्णराव (डॉ राव याचे बंधु) यास काहीं दिवसामागे देवाज्ञा झाली हे मृत गृहस्थ जातीनें सारस्वत (ब्राह्मण) असून त्या ज्ञातीच्या गुरुमठाकडून बहिष्कृत झालेल्या मंडळींपैकीं एक असल्यामुळे त्या ज्ञातीचे कोणीही त्याच्या प्रेत दहनाला गेले नाहींत इतकेच केवळ नव्हे तर त्याचे ज्ञाती- च्या इतर बहिष्कृत मंडळींपैकीं अथवा एकी परिषदेच्या कारवार येथील पुरस्कर्त्यांमधूनहि कोणीच या अडचणीच्या प्रसंगीं गेले नाहींत "अखेरीस तेथील एका प्रतिष्ठित वयोवृद्ध सद् गृहस्थानीं—संयुक्त परिषदेच्या मागील एका बैठकीच्या व तेथील स्थानिक संस्थेच्या अध्य- क्षानीं आपल्या वजनाचा व अधिकाराचा उप योग करून आपल्या अधिकारातील काहीं उपकारी लोकाना धरून आणून सदर प्रेत दहनाचें कार्य कसेंबसें उरकून घेतलें आमचे बातमीदार लिहितात, या रीतीनें त्या लोका ची खुषी नसताना त्याना एका परज्ञातीय बहिष्कृत गृहस्थाच्या प्रेत दहनाला पाठवि ण्यात एकीच्या स्तुत्य तत्त्वाचा, सर्कीने का होईना, प्रसार करण्याचा उच्च हेतु कारणीभूत झाला असेल तर तोहि अनुकरणीयच होय पण एकींत सामील झालेल्याना आपली कर्तव्य पराङ्मुखता शास्त्रविण्यास सोन्या सारखी संधि प्राप्त झाली असता त्यानीं ती दवडीली व त्या या धुरीणानीं त्याच्यावर आपलें काहींच वर्चस्व सचूंनये हे कोडें मात्र उकलता येत नाहीं ए कंदरीत एकीची परिसमाप्ती सव्वगोलकारात- म्हणजे वर्तुळाकारात– याचाच अर्थ लाडूत होते असे का म्हणनये ? "

यानंतर सुधारक म्हणविणाऱ्याची दिशा- भूल होऊंनये म्हणून त्याच्यासाठीं क. आगर- कराच्या लेखातील एक अवतरण आमचा बातमीदाराने पाठविले आहे ते असें —

"स्वैर वर्तन अथवा उच्छृंखलपणा म्हणजे सामाजिक सुधारणा नव्हे स्वभूमीत, स्वलो कात, स्वधर्मात, आणि स्वाचारात राहून अवि चारी व अज्ञान देशबांधवाच्या निंदेस किंवा छळास न भिता, त्याच्याशीं कधीं भांडून, कधीं युक्तिवाद करून, कधीं लाडीगोडी लावून, अथवा सामर्थ्य असल्यास कधीं त्याना दरावून, त्याची सुधारणा करणें यातच खरी देशप्रीति, खरी बंधुता, खरा देशाभिमान, खरें शहाणपण व खरा पुरुषार्थ आहे, याच्या उलट जे वर्तन करतात ते सुधारणा करीत नाहींत तर फक्त शृंखलांतर करतात !" आपला

'चित्रगुप्त"

ಬರುವ ಕಾಳಯುಕ್ತಿ

ಸಂವತ್ಸರದ ಪಂಚಾಂಗ.

ಪ್ರತಿವರ್ಷ ತಯಾರಿಸಲ್ಪಡುವಂತೆ ಕಾಳಯುಕ್ತಿ ಸಂ॥ ದ ಪಂಚಾಂಗವು ತಯಾರಾಗುತ್ತಲಿದೆ ಕಾಗದ ತುಟ್ಟಿಯಾದರೂ ವ್ಯಾಪಾರಸ್ಥರಿಗೆ ಸೋಯಿ ಆಗಬೇಕೆಂದು ಇದೇ ಬರುವ ಸಪ್ಟಂಬರ ೩೦ ರೊಳಗೆ ಮುಂಗಡ ಹಣ ಕಳುಹಿಸಿದವರಿಗೆ ಶೇಕಡಾ ೮ ರೂಪಾಯಿಗಳಂತೆ ಆಮೇಲೆ ರೂಪಾಯಿ ೧೦ ಬೇಳೆ ವಷ್ಟ

ಅವಶ್ಯವಿದ್ದವರು ತಮ್ಮ ಹೆಸರು ನೋಂದಿಸಿ ಹಣ ಕಳುಹಿಸ ಬಹುದು

ಮಾಂಕೆಸ್ಟ್ರತ ಬಿಪಾ ಶೆಣೈ ಪ್ರೆಸ ಕುಮುಟಾ

ವಿಚಾರ ತರಂಗಗಳು.

ಸಾರ್ವತ್ರಿಕ ಶಿಕ್ಷಣದಿಂದ ವಿಗೆ ಸಾರಾಯಿ ಕುಡಿಯುವ ವ್ಯಸನವು ಕಡಿಮೆಯಾಗುವದೆಂಬ ಅನುಭವವು ಇಂಗ್ಲಂಡ ಫ್ರಾನ್ಸ ವ ರಶಿಯಾ ದೇಶಗಳಲ್ಲಿ ಬರುತ್ತಿದೆ ಆದರೆ ನಮ್ಮ ದೇಶದಲ್ಲಿ ಹೆಂಡಗುಡುಕತನ ದಾರೂ-ಬಾಜೀವು ಬೆಳೆಯುತ್ತಿದೆ ಸರ ಕಾರದವರು ಈ ವಿಷಯದಲ್ಲಿ ಲಕ್ಷ್ಯ ಪೂರೈಸುವದಿಲ್ಲ ಇದು ನಮ್ಮ ದುರ್ದೈವದ ಸಂಗತಿ ಆದರೆ ಈ ವಿಷಯದ ಮೇಲ್ತ್ತಿ ಜವಾಬದಾರಿ ನಮ್ಮಲ್ಲಿಯ ಸುಶಿಕ್ಷಿತರೆಂಬುವರ ತಲೆಯಮೇಲೆ ಬಿದ್ದಿರುವದೆಂಬ ಸಂಗತಿ ಅವರ ಪರಿಶೀಲನಾರ್ಹವಾದದು ಅವರು ಹೊಂದಿದ ಶಿಕ್ಷಣಕ್ಕೆ ಅವಶ್ಯವಾದ ಶಿಕ್ಷಣ ವಿಷಯಕ ಖರ್ಚ ಸರಕಾರದವರು ಎಲ್ಲಿಂದ ಮಾಡಿದರು! ಅದು ನಮ್ಮ ರೈತಜನರ ಕಂದಾಯ ಮತ್ತು ಉತ್ಪನ್ನದಿಂದಲೇ ಅಂದಮೇಲೆ ಎಲ್ಲಿ ... ವರ್ಗದವರಮೇಲೆ ನಿರ್ಭ... ರೈತಜನರ ಉಪಕಾರವು ಪ್ರತ್ಯಕ್ಷವಾಗಿ ... ದೂ ಆಗಿರುವದರಿಂದ ಸಂಗತಿ ಸ್ವಯಸಿದ್ಧವದೆ ಅಂದ ಮೇಲೆ ಅವರ ಋಣದಿಂದ ಮುಕ್ತರಾಗುವದೆ ಸುಶಿಕ್ಷಿತ ಬಂಧುಗಳು ಶಿಕ್ಷಣತಸ್ಸ ಕೂಪ್ಟ ಅವರಿಗೆ ಸು

कानडावृत्त बुधवार, तारीख २१ माहे [illegible], सन १९१७ इसवी.

ದಾರಿಸುವ ಯತ್ನವನ್ನೂ ತಮ್ಮ ಉಪಾಯಬುದ್ಧಿ ಯನ್ನು ಅರಿತು ಪ್ರಶ್ನಕ್ಷಕಾರ್ಯಕ್ಕೆ ತೊಡಗುವ ರೋ, ಅದೇ ಸುದಿನವು. ಈ ಋಣವನ್ನು ಅವರು ತೀರಿಸದಿದ್ದಲ್ಲಿ ಅವರು ನಾಚಿಕೆಯಿಂದ ತಮ್ಮ ತಲ ಯನ್ನು ಬಗ್ಗಿಸುವದೇ ಅವರಿಗೆ ಉಚಿತವಾದೀತು!

ಸದ್ಯದಲ್ಲಿಯೇ ಪಾಲಯಾಂದ ಮಸೀದಿಯ ಸಂ ಬಂಧದ ಪ್ರಕರಣದಲ್ಲಿ ಹಿಂದು ಮುಸಲ್ಮಾನರ ನಡು ವಿನ ತಂಟೆಯವಿಷಯ ನೋಡಿ ವ ಸದರೀ ವ್ಯಾಜ್ಯ ವು ಹ್ಯಾಕೋರ್ಟಿನ ತನಕ ಹೋದದ್ದು ಕೇಳಿ, ಹಿಂದೂ ಮುಸಲ್ಮಾನರು ಒಟ್ಟಾಗಿ ಏಕಮತದಿಂದ ರಾಷ್ಟ್ರೋನ್ನತಿಗಾಗಿ ಪ್ರಯತ್ನ ಪಡುವ ಸಮಯದಲ್ಲಿ ಮನಸ್ಸಿಗೆ ಏನೋ ಎಣಿಸುತ್ತದೆ. ಇದಕ್ಕೆ ಮುಖ್ಯ ಥಃ ಒಂದೇ ಕಾರಣ, ನಮ್ಮ ಮುಸಲ್ಮಾನ ಬಂಧು ಗಳಲ್ಲಿಯು ಶಿಕ್ಷಣಾಭಾವವು ಎಂದಲ್ಲಿ ಅವರಿಗೆ ತಿಟ್ಟು ಒಡುವರೆ ಕಾರಣವಿಲ್ಲ, ಯಾಕಂದರೆ ಮಿ। ಸಯ್ಯದ ಹುಸೇನ (ಬೊಂಬೈ ಕ್ರೊನಿಕಲ್ ಪತ್ರದ ದುಯ್ಯ ಮ ಸಂಪಾದಕ) ರವರು ಒಮ್ಮೆ ಒಂದು ಭಾಷಣದಲ್ಲಿ ಈ ಸಂಗತಿಯನ್ನು ಒಪ್ಪಿಕೊಂಡಿರುವರು. ಸದ್ಯದ ಕಾ ಲವು ಹೀಗೆ ಒದಗಿರುವದೇನಂದರೆ, ನಾವು "ಹಿಂದು ಗಳು" ನಾವು "ಮುಸಲ್ಮಾನರು" ಎಂಬ ಸಂಕುಚಿತ ಭಾವನೆಯನ್ನು ಒತ್ತಟ್ಟಿಗಿಟ್ಟು ಒಂದೇ ಮತದಿಂದ ತಾವು "ಹಿಂದಿ" (ಒಂದೇ ಹಿಂದಮಾತೆಯ ಮಕ್ಕ ಳು) ಎಂಬ ಉದಾರ ಭಾವನೆಯನ್ನು ಕೈಕೊಂಡು ಒದಗಿದ ಸುಸಂಧಿಗಳನ್ನು ಕಳೆಯದೇ ದೇಶಹಿತವ ನ್ನೂ ಪರ್ಯಾಯವಾಗಿ ಸ್ವಹಿತವನ್ನೂ ಸಾಧಿಸಿಕೊಳ್ಳ ತಕ್ಕದ್ದು. ಈ ಕುರಿತು ವಿಚಾರಮಾಡಿ ನಮ್ಮ ಮುಸ ಲ್ಮಾನ ಬಾಂಧವರು ಈ ತಂಟೆಯನ್ನು ಸಾಮೋಪಚಾ ರದಿಂದ ತಮ್ಮ ತಮ್ಮಲ್ಲಿಯೇ ನಿಕಾಲೆ ಮಾಡಿಕೊಳ್ಳ [illegible]

"ತಾಸೂ ಪಾದಲಾರ ಪರರು ಮಾಡಿದ್ದೂ ನೋ ಡಬಾರೆ" ಎಂಬ ಗಾದೆಯಂತೆ ಕೆಲವರು ಸದ್ಯಕ್ಕೆ ಪದ್ಧತಶೀರ ವ ಸನದಶೀರ ರೀತಿಯಿಂದ ನಡೆದಿ ರುವ ಹಿಂದೀ ರಾಜಕೀಯ ವಿಷಯಕ ಚಳವಳಿಗೆ (movement) ಯಾವದೇತರದಿಂದ ಅನುಕೂಲ ತೆಯನ್ನು ತೋರಿಸದೇ ಹೋದಾಗ್ಯೂ ಅದರ ವಿರು ದ್ಧ ಒಂದು ಸಭೆ ನೆರೆಯಿಸಿ ರಾಜನಿಷ್ಠೆಯ ಠರಾವ ಪಾಸಮಾಡಬೇಕೆಂಬ ಮತದವರಾಗಿದ್ದಾರೆ. ಸದರೀ ಯವರು ಒಳ್ಳೇ ಸುಶಿಕ್ಷಿತರೆಂಬುವರ ಪೈಕಿ ಯಾ ನ ಮ್ಮಲ್ಲಿಯ ಮುಖಂಡರ ಪೈಕಿ ಯಾರೂ ಅಲ್ಲವೆಂಬ ಸಂಗತಿ ಇಲ್ಲಿ ನಮೂದ ಮಾಡುವದು ಅವಶ್ಯವದೆ. ರಾಜನಿಷ್ಠೆಗೂ ವ ಹೋಮರೂಲ ಬೇಡುವದಕ್ಕೂ ಒಂದಕ್ಕೊಂದು ವಿರೋಧವು ಎಳ್ಳಷ್ಟಾದರೂ ಇರ ದೆ ಈ "ಅವ್ಯಾಪಾರೇಷು ವ್ಯಾಪಾರಃ" ಮಾಡುವ ವ ರ ಕುತೂಹಲ ಮಾಡಿದಷ್ಟು ಕಡಿಮೆ ಎಂತ ತೋರು ತ್ತದೆ. ಹೋಮರೂಲ ಬೇಡುವಿಕೆಯು ರಾಜದ್ರೋ ಹವೆಂದು ನಿಮಗೆ ಹೇಳಿದವರ್ಯಾರು? ಹೀಗಿದ್ದಲ್ಲಿ ಈಕುರಿತು ವಿಚಾರ ಮಾಡುವರೆ ಖುದ್ದ ಸ್ಟೇಟ ಸೆಕ್ರೇ ಟರಿ ಸಾಹೇಬರು ಹಿಂದುಸ್ಥಾನದ ಮುಂದಾಳುಗಳ ಮ ತ ಅರಿತುಕೊಳ್ಳುವರೆ ಇಂಗ್ಲಂಡದಿಂದ ಇಲ್ಲಿಗೆ ಬ ರುವರು ಸಿದ್ಧರಾಗಿರುವ ಪಟಾಟೋಪವಾದರೂ ಯಾಕೆ ಮಾಡ್ಯಾರು? ಇಲ್ಲ ಬಂಧ ಗಳೇ, ಇಲ್ಲ, ಇಂ ಥ ತಪ್ಪು ಸಮಜೂತಿಗೆ ನಿಮ್ಮ ಮನಸ್ಸಿನಲ್ಲಿ ಜಾಗ ಕೊಡಬೇಡಿರಿ ನಾವು ಮೇಲೆ ಬರೆದಂತೆ ಈ ವಿಷಯ ದಲ್ಲಿ ತಮ್ಮ ವಿರೋಧವನ್ನು ತೋರಿಸಿದಲ್ಲಿ ಸ್ವಾತಂ ತ್ರ್ಯದ ಪೂರ್ಣ ಅಭಿಮಾನಿಗಳಾದ ಆಂಗ್ಲ ಜನ ನಮ್ಮ ಸ್ವಾಭಿಮಾನಶೂನ್ಯತೆಗೆ ಮನಸ್ಸಿನಲ್ಲಿ ನ ಕ್ಕಾರು ಕಾರಣ ಹೋಗುವ ರಥಕ್ಕೆ ಗತಿಯನ್ನು ಕೊಡುವರೆ ನಮ್ಮ ಕೈಯಿಂದಾಗದ ಪಕ್ಷಕ್ಕೂ ಅದ ಕ್ಕೆ ಕೀಲುಹಾಕಿ ಅದರ ಗತಿಯನ್ನು ತಗ್ಗಿಸದಿರುವಾ'

M. V. H.

ಕಾನಡಾವೃತ್ತ.

ಬುಧವಾರ ತಾರೀಕು ೫ ಮಾಹೆ ಸಪ್ಟಂಬರ ೧೯೧೭

ಸ್ವರಾಜ್ಯವಾದವೂ, ಕಾನಡಾ ಜಿಲ್ಲೆಯೂ.

ಒಹಳೇ ಕಾರಣಗಳಿಂದ [illegible] ಸಾಲ ಗ ಪ ಹಿಂದುಸ್ಥಾನದ ರಾಜಕೀಯ [illegible] ವು ಸ್ವಲ್ಪ ಬಿರುಸಾಗಿ [illegible] ಈಗಿನ ಮಹತ್ವದ ರಾಜಕೀಯ ಪ್ರಶ್ನೆ [illegible] ಸ್ವ ರಾಜ್ಯವಾದವು [illegible] ಅವಶ್ಯಕತೆಯಿಲ್ಲ ಈ ವಿಷಯವ [illegible] ಜಕೀಯ [illegible] ಸ್ಥವೃತ್ತಿಯನ್ನು ಈವರೆಗೆ [illegible] ಮೂಕತನವನ್ನು [illegible] ಸ್ವರಾಜ್ಯದ ವಿಷಯವಾಗಿ ನಮ್ಮ ಸ್ಪಷ್ಟ ಮತವನ್ನು ವಾಚಕ [illegible] ವೆ ಇರುವ ಅವಶ್ಯಕತೆಯು ಈಗ ನಮಗೆ [illegible] ಒಂಬಿದೆ.

ಸ್ವರಾಜ್ಯದ ವಿಷಯವಾಗಿ [illegible] ಭಿನ್ನ ಭಿನ್ನ ಮತಗಳನ್ನೆಲ್ಲ ವಿಚಾರಿಸುವದನ್ನು ನಾವು ಕೈಕೊಳ್ಳ ವದಿಲ್ಲ. ಅವರೊಳಗಿನ ಮುಖ್ಯವೆಂದರೆ ರಾಷ್ಟ್ರೀಯ ಸಭೆ ಮತ್ತು ಮುಸಲ್ಮಾನೀ ಸಂಘ [illegible] ಸಂ ಯುಕ್ತಯೋಜನೆಯು ಮತ್ತು ಈ ವಿಷಯದ ಅಧಿ ಕಾರಿಗಳ ವಿಚಾರಗಳು ಮಾತ್ರ ಮುದ್ದೆಯ ಸಂಗತಿಗ ಳಾಗಿರುವದರಿಂದ ಸ್ಥೂಲದೃಷ್ಟಿಯಿಂದ ಲೋಕಪಕ್ಷ ಮತ್ತು ಸರಕಾರಪಕ್ಷ ಇವುಗಳ ಅಂಬೋಣವನ್ನು ಮಾತ್ರ ನಾವು ತಿಳುಕೊಳ್ಳಬೇಕಾಗಿದೆ. ಲೋಕಪಕ್ಷ ದ ಹೇಳಿಕೆಯೇನಂದರೆ ನಾವು ಸ್ವರಾಜ್ಯಕ್ಕೆ ಪಾತ್ರ ರಾಗಿರುವೆವು. ಸರ್ವಸಾಧಾರಣ ಮಹಾಹತಿಯೊಳಗಿ ನಂಥ ಸ್ವಯಂ ಶಾಸಿತ ರಾಜ್ಯಪದ್ಧತಿಯನ್ನು ಯು ದ್ಧಮುಗಿದ ಕೂಡಲೇ ನಾವು ದೊರಕಿಸಬೇಕು. ಸರ ಸತ್ಯೇಂದ್ರ ಪ್ರಸನ್ನ ಸಿಂಹರು ಹೇಳುವಂತೆ ಬರೇ ವಚ ನಗಳು ನಮಗೆ ಈಗ ಬೇಡ. ಕೃತಿಯೇ ನಮ್ಮ ದೃಷ್ಟಿ ಗೆ ಬೀಳಬೇಕು ಅದಕಾರಣ ಈ ವಿಷಯದ ಯೋಜ ನೆಯನ್ನು ಸರಕಾರವು ಸ್ಪಷ್ಟವಾಗಿ ಬೇಗನೇ ಜಾಹೀ ರ ಪಡಿಸಬೇಕು ಇದಕ್ಕೆ ಪ್ರತ್ಯುತ್ತರವಾಗಿ ಸರಕಾರ ವು ಹೇಳುತ್ತದಲ್ಲ— ನಿಮ್ಮ ಸ್ವರಾಜ್ಯಧ್ಯೇಯವು ನ ಮಗೂ ಮಾನ್ಯವದೆ. ಪರಂತು ನೀವು ಸ್ವರಾಜ್ಯಕ್ಕೆ ಇನ್ನು ಪಾತ್ರರಾಗಿಲ್ಲ. ನಿಮ್ಮ ಪಾತ್ರತೆಯನ್ನು ನೀವು ತೋರಿಸುತ್ತ ಹೋದಹಾಗೆ ಹಸ್ತಹಸ್ತೆಯಿಂದ ಸ್ವರಾಜ್ಯವು ನಿಮ್ಮ ಕೈಗೆ ಬರುತ್ತ ಹೋಗುವದು. ಬ್ರಿಟಿಷ ಸರಕಾರದ ರಾಜಕೀಯ ಧೋರಣವೇ ಹೀಗದ ಲ್ಲಿ— ಸಾಮ್ರಾಜ್ಯದೊಳಗಿನ ಘಟಕಾವಯವಗಳಿ ಗೆ ಸ್ವರಾಜ್ಯವು ಸಿಗಲೇ ಬೇಕು. ಮತ್ತು ಅದೇ ಧೋರ ಣದ [illegible] ಸಹ ನಾವು ಹಿಂದುಸ್ಥಾನದಲ್ಲಿ ನಮ್ಮ ಮುಂ ದಿಟ್ಟಿರುವೆವು ಆದದರಿಂದ ಶಂಕೆ-ಕುಶಂಕೆಗಳನ್ನು ಬಿಟ್ಟುಬಿಡಿರಿ ಕಾಲಾಂತರದಿಂದ ಸ್ವರಾಜ್ಯವು ನಿಮಗೆ ಸಿಕ್ಕೇ ಸಿಗುವದು. ನಿಮ್ಮಲ್ಲಿಯ ಪಾತ್ರತೆಯನ್ನು ಮಾ ತ್ರ ಬೆಳಿಸಿರಿ ಈ ಎರಡೂ ಪಕ್ಷಗಳ ಅಂಬೋಣವನ್ನು ನೋಡಿದರೆ " ಸ್ವರಾಜ್ಯವನ್ನು ಯಾವಾಗ ಎಷ್ಟು ಹಸ್ತೆಯಿಂದ ಕೊಡಬೇಕೆಂಬುವದೇ " ಮತಭೇದದ ಪ್ರಶ್ನೆಯಾಗಿದೆಂದು ಹೇಳಬಹುದು ಜನರು ಬೇಡು ವ ಬೇಡುವಿಕೆಯು ಸರಕಾರದ ಆಶ್ವಾಸನೆಯ ವಚನ [illegible] ಇವುಗಳಲ್ಲಿ ವಿಸಂಗತವೇನೂ ಇಲ್ಲ. ಸಾರಾಂಶ [illegible] "ಇಂದಿಗೇನೇ ಕೊಡಿರಿ" ಎಂಬಂತೆ ಹೇ [illegible] "ಇಂದಲ್ಲ ನಾಳೆಗಾದರೂ ಕೊಟ್ಟೇಕೊ ಟ್ಟೇವು" ಎಂಬಂತೆ ಸರಕಾರವು ತಿಳಿಸುತ್ತದೆ, ಜನ ರ ಬೇಡುವಿಕೆಯು ನ್ಯಾಯ್ಯಕ್ಕಾದೇಶಿರವದೆ ಕಾಲಾಂ ತರದಿ [illegible] ಅದು ಪರಿಪೂರ್ಣವಾಗುವದು, ಎಂಬುವ ದೇ ಸರಕಾರದ ಧ್ವನಿತಾರ್ಥವು. ಈ ದಾರಿಯಲ್ಲಿ ಸ [illegible] ದೃಷ್ಟಿಯಿಂದ ನೋಡಿದರೆ ಬೇಕ್ಕಾದೆಶಿದತನವಾ ಗಲಿ ರಾಜದ್ರೋಹವಾಗಲಿ ಏನೂ ಇಲ್ಲ, ಇಷ್ಟೇ ಅಲ್ಲ [illegible] ಮಾರ್ಗಗಳಿಂದ ಸ್ವಯತ್ನಾತ್ಮಕ ರಾಜ್ಯಪ [illegible] ತಿಯನ್ನು ಗಳಿಸುವರೆ ದುಡಿಯುವವರು ನಿಜವಾದ ದೇಶಭಕ್ತರೆಂದು ಕೆಲ ದಯಾಳು ವರಿಷ್ಠ ಅಧಿಕಾರಿ ಗಳು ಸಹ [illegible] ಉದ್ಗರಿಸಿರುವರು

ಮೇಲಿನ ಎರಡು ಪಕ್ಷಗಳ ವಾದವನ್ನು [illegible] ರ ದೃಷ್ಟಿಯಿಂದ ವಿಚಾರಿಸಿದರೆ ಇಬ್ಬರೂ ಅಂಶತಃ ತಪ್ಪಿರುವರು, ಅಂಶತಃ ತಪ್ಪಿಲ್ಲವೆಂತ ಹೇಳಬಹುದು. ಇದರ ವಿಷಯವಾಗಿ ಸಮರ್ಪಕವಾದ ಒಂದು ದಂತ ಕಥೆಯನ್ನು ಇಲ್ಲಿ ನಾವು ಹೇಳಲಿಚ್ಛಿಸುವೆವು ವಿಶಾಲ ವಾದದ್ದೊಂದು ರಹದಾರಿಯಮೇಲೆ ಒಂದು ದೇವತೆ ಯ ಸುರಸವಾದ ಪ್ರತಿಮೆಯಿತ್ತು. ಅದರ ಕೈಯೊಳ ಗೆ ಢಾಲು ಇದ್ದು ಅದರ ಒಂದು ಬದಿ ಚಿನ್ನದು, ಮ ತ್ತೊಂದು ಬದಿ ಬೆಳ್ಳಿಯದು ಕಾಣುತ್ತಿತ್ತು. ಈ ಪ್ರತಿ ಮೆಯ ಎರಡು ಕಡೆಯಿಂದ ಇಬ್ಬರು ಶೂರ ಸರದಾ ದರು ಬಂದು ಅದರ ಢಾಲನ್ನು ನೋಡಹತ್ತಿದರು. ಒ ಬ್ಬನು ಅಂದದ್ದು ಎಷ್ಟು ಸುಂದರವಾದ ಚಿನ್ನದ ಆಯು ಧವಿದು! ಮತ್ತೊಬ್ಬನು ಪ್ರತ್ಯುತ್ತರಕೊಟ್ಟದ್ದು "ಇದು ಚಿನ್ನವೇನು, ಮೂರ್ಖನೇ ಬೆಳ್ಳಿಯದು." ಇಷ್ಟೇ ಕಾ ರಣದ ಮೇಲಿಂದ ಅವರಿಬ್ಬರಲ್ಲಿ ಭಯಂಕರ ಕಾದಾ ಟವಾಗಿ ರಕ್ತಪ್ರವಾಹವು ಹರಿಯಿತು. ಅಷ್ಟರೊಳಗೆ ಅಲ್ಲಿ ಒಬ್ಬ ಧನ್ವಂತರಿಯು ಅದರ ಗಾಯಗಳನ್ನು ಕಟ್ಟಿ ಅವರ ಜಗಳದ ಕಾರಣವನ್ನು ತಿಳಕೊಂಡು ಸ ತ್ಯಸ್ಥಿತಿಯನ್ನು ಅವರಿಗೆ ತಿಳಿಸಿ ಹೇಳಿದನು ಇಬ್ಬ ರೂ ಅಂಶತಃ ತಪ್ಪಿದ್ದರು; ಅಂಶತಃ ತಪ್ಪಿದ್ದಿಲ್ಲ. ಈಗ ಲೋಕಪಕ್ಷದ ಮತ್ತು ಸರಕಾರಪಕ್ಷದ ಗತಿಯು ಇ ದರಂತೇ ಆಗಿದೆ. ಜಿನ್ನದ ಪಕ್ಷದವರು ಹೇಳು ವಂತೆ ನಾವು ಯುನಿವ್ಹರ್ಸಿಟಿ, ಕೊರ್ಪೋರೇಶನ, ಮುಂ ತಾದ ದೊಡ್ಡ ದೊಡ್ಡ ಸಂಸ್ಥೆಗಳನ್ನು ಉತ್ತಮ ರೀ ತಿಯಿಂದ ನಡಿಸುತ್ತಿರುವೆವು. ಅಂದಮೇಲೆ ನಮ್ಮಲ್ಲಿ ಅಪಾತ್ರತೆಯಂಬ ದೋಷವೆಲ್ಲಿದೆ? ನಮ್ಮ ಧುರೀಣ ರು ದಿವಾಣಗಿರಿಯನ್ನು ನಡಿಸುತ್ತಾರೆ; ನ್ಯಾಯಾಧೀ ಶರಾಗುತ್ತಾರೆ; ಕಾರ್ಯಕಾರೀ ಮೆಂಬರರಾಗಿ ಗ ವ್ಹರ್ನರರಿಗೆ ಸಲ್ಲೆಕೊಡುತ್ತಾರೆ. ವಿಲಾಯತಿಯಲ್ಲಿ ಸಹ ಮೆಂಬರರಾಗುತ್ತಾರೆ. ಇಷ್ಟಾದ ಮೇಲೆ ಇನ್ನೇನು ಉಳಿದದೆ? ಆದರೆ ಇದು ಬರೇ ವ್ಯಕ್ತಿವಿಷಯಕ ವಿ ಚಾರವಲ್ಲ ಸ್ಥಾನವಿಷಯಕವೂ ಅಲ್ಲ. ಮುಂಬಯಿ,

ಮದ್ರಾಸ, ಅತ್ತಕಡೆಯ ದೊಡ್ಡ ದೊಡ್ಡ ಶಹರದೊಳಗಿನ ಸ್ಥಿತಿಗೆ ಮತ್ತು ಹಳ್ಳಿ ಪಳ್ಳಿಗಳೊಳಗಿನ ಸ್ಥಿತಿಗೆ ಮಹದಂತರವದೆ. ಸರ. ನಾರಾಯಣ ಚಂದಾವರಕರ ಇಲ್ಲವೇ ಸರ ಗೋಪಾಳರಾವ ಚೌಬಳ ಇವರಂಥವರು ಪ್ರತಿ ಒಂದು ಸಣ್ಣ ಸಣ್ಣ ಶಹರುಗಳಲ್ಲಿ ಒಬ್ಬಿಬ್ಬರಾದರೂ ಇದ್ದರೆ ನಿಮ್ಮ ಮುನಿಸಿಪಾಲಿಟಿಗಳೂ ಲೋಕಲಬೋರ್ಡುಗಳೂ ಕೇವಲ ಕಪಿಯಾಟಿಗಳೂ ಇಷ್ಟು ಮಂದ ಸ್ಥಿತಿಯಲ್ಲಿರುತ್ತಿದ್ದಿಲ್ಲ. ಸಾರ್ವಜನಿಕ ಕೆಲಸದಲ್ಲಿ ಹಳ್ಳಿಯ ಜನರು ಎಷ್ಟು ಹಿಂದುಳಿದಿದ್ದಾರೆ? ಅವರೊಳಗೆ ಜ್ಯಾತಿಮತ್ಸರ, ಪರಮತಅಸಹಿಷ್ಣುತೆ, ಟೀಕಾಕಾರರ ದ್ವೇಷ, ಸ್ವಾರ್ಥದೃಷ್ಟಿ ಮುಂತಾದ ದೋಷಗಳನ್ನೆಲ್ಲ ನೋಡಲು ಸ್ವರಾಜ್ಯಕ್ಕೆ ಇವರು ಅಪಾತ್ರರಿದ್ದಾರೆಂತ ಯಾರಾದರು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾಗರಿಕತನದ ಉಜ್ವಲ ಗುಣಗಳ ಕೊರತೆಯು ಸಣ್ಣ ಸಣ್ಣ ಶಹರುಗಳಲ್ಲಿಯೂ ಹಳ್ಳಿಗಳಲ್ಲಿಯೂ ತೀವ್ರವಾಗಿ ತೋರುತ್ತದೆ. ಹಳ್ಳಿಯೊಳಗಿನ ಸಣ್ಣ ಸಣ್ಣ ಸಂಸ್ಥೆಗಳು ಉತ್ತಮವಾಗಿ ನಿಮಗೆ ನಡಿಸಲಿಕ್ಕೆ ಬಂತೆಂದರೆ ಸ್ವರಾಜ್ಯಕ್ಕೆ ನೀವು ಪಾತ್ರರಾಗುವಿರಿ ಇಂಥ ಶಿಕ್ಷಣವನ್ನು ನೀವು ಹೊಂದಿರಿ, ಅಂದರೆ ಸಹಜವಾಗಿ ನೀವು ಸ್ವರಾಜ್ಯವನ್ನು ಹೊಂದುವಿರಿ. ಇದು ಬೆಳ್ಳಿಯ ಪಕ್ಷವು. ಈ ಚಿನ್ನ ಬೆಳ್ಳಿಯ ಪಕ್ಷಗಳ ವಾಗ್ಯುದ್ಧವು ಎಂದು ಮುಗಿಯುವದು ಎಂದು ಜನರು ಈಗೇನೂ ಚಿಂತಾಕುಲರಾಗುವ ಕಾರಣವಿಲ್ಲ. ಭಾರತಮಂತ್ರಿ ಮೊಂಟೆಗ್ಯೂ ಧೊರೆಗಳು ಬೇಗನೇ ಇಲ್ಲಿಗೆ ಬಂದು ಧನ್ವಂತರಿಗಳಾಗಿ ಇವರ ತೀರ್ಪುಮಾಡಿ ಜನರ ಆಕಾಂಕ್ಷೆಗಳನ್ನು ತೃಪ್ತಿಪಡಿಸುವರೆಂದು ನಮ್ಮ ದೃಢಭಾವನೆಯಿದೆ.

ಪ್ರಕೃತ ನಮ್ಮ ಕಾನಡಾಜಿಲ್ಲೆಯ ಸ್ಥಿತಿಯನ್ನು ಅವಲೋಕಿಸಿದರೆ ಇದು ಚಿನ್ನದ ಪಕ್ಷದ್ದೇ ಎಂದು ನಮ್ಮಿಂದೇನು ಹೇಳಲಾಗದು ನಮ್ಮಲ್ಲಿ ಎಷ್ಟು ಪಾತ್ರತೆಯದೆ ಎಂತ ಪ್ರತಿಒಬ್ಬನು ತನ್ನ ಅಂತಃಕರಣಕ್ಕೆ ಪ್ರಮಾಣಿಕತನದಿಂದ ಕೇಳಿ ನೋಡಿದರೆ, ಬೆಳ್ಳಿಯೋ ಚಿನ್ನವೋ ಎಂತ ಅವರಿಗೇ ತಿಳಿದುಬರುವದು. ಸ್ವರಾಜ್ಯವನ್ನು ಹೊಂದುವ ನಿಜವಾದ ಪಾತ್ರತೆಯು ನಮ್ಮಲ್ಲಿ ಬರಬೇಕಾದರೆ ಉದಾತ್ತವಿಚಾರ, ಒಕ್ಕಟ್ಟು, ನೀತಿಮತ್ತೆ, ಜ್ಯಾತಿದ್ವೇಷದ ಅಭಾವ, ಅಂಗೀಕೃತಕಾರ್ಯವನ್ನು ಕೊನೆಗಾಣಿಸುವ ಕರ್ತೃತ್ವಶಕ್ತಿ, ಪರಮತಸಹಿಷ್ಣುತೆ, ಜಬಾಬದಾರಿಯ ತಿಳವು, ನಿಃಸ್ವಾರ್ಥ ಬುದ್ಧಿ, ಸಾಮ್ರಾಜ್ಯನಿಷ್ಠೆ, ಉತ್ಕಟದೇಶ ಭಕ್ತಿ ಮುಂತಾದ ಉಜ್ವಲ ಗುಣಗಳ ಬೆಳಕಿಯಾಗಬೇಕು. ನಮ್ಮ ಲೋಕಲ ಸಂಸ್ಥೆಗಳೂ, ಶೇತಕಿಔದ್ಯೋಗಿಕ ಸಂಸ್ಥೆಗಳೂ ದೇವಾಲಯಗಳೂ ಪುಸ್ತಕಾಲಯಗಳೂ ವಿದ್ಯಾಲಯಗಳೂ ಯಾವರೀತಿಯಿಂದ ನಡೆಯುತ್ತವೆ? ಅದರ ಅಂತರ್ವ್ಯವಸ್ಥೆಯನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿರಿ ಅಂದರೆ ನಮ್ಮ ಚರ್ಚೆಯ ಸತ್ಯತೆಯನ್ನು ನೀವೇ ಒಪ್ಪಿಕೊಳ್ಳುವಿರಿ. ಎಲ್ಲಿ ಸಾರ್ವಜನಿಕ ಸಂಸ್ಥೆಗಳ ವ್ಯವಸ್ಥೆಯು ನಿರ್ದೋಷವದೆಯಂತ ನಮ್ಮ ಹೇಳಿಕೆಯಲ್ಲ. ಆದರೆ ಸಾಮಾನ್ಯತಃ ಕಾನಡದ ಸ್ಥಿತಿಯನ್ನು ನಾವು ಮುಂದಿಟ್ಟಿರುವೆವು. ಆದದರಿಂದ ನಮ್ಮ ಮುಖಂಡರಿಗೂ ಇತರೇ ಭಾಂಧವರಿಗೂ ನಾವು ವಿಜ್ಞಾಪಿಸುವದೇನಂದರೆ ನಿಮ್ಮ [illegible]ತನವನ್ನೂ ಸ್ವಾರ್ಥಬುದ್ಧಿಯನ್ನೂ ಹೇ[illegible]ನ್ನು ದೃಢನಿಶ್ಚಯದಿಂದ ದೂರಸಾರಿರಿ. ಮತ್ತು ಸ್ವರಾಜ್ಯಕ್ಕೆ ಪಾತ್ರರಾಗಿರಿ.

ಸದ್ಯಕ್ಕೆ ನಮ್ಮ ಜಿಲ್ಲೆಯಲ್ಲಿಯೇ ಯಾರು ಹೋಮರೂಲರರಾಗಿದ್ದಾರೆಂತ ಹೇಳುತ್ತಾರೆ, ಅವರ ವಿಷಯವಾಗಿ ಇಲ್ಲಿ ಎರಡು ಮಾತುಗಳನ್ನು ಬರೆಯುವದು ನಮ್ಮ ಕರ್ತವ್ಯವದೆ. ನಮಗಂತೂ ಕಾಣುತ್ತದಿಲ್ಲ — ಇಂಥ ಕೆಲ ಜನರಿಗೆ ಹೋಮರೂಲವೆಂದರೇನು? ಇದರ ಅರಿವು ಅದೆಯೋ ಇಲ್ಲವೋ ಎಂತ ದೊಡ್ಡ ಸಂಶಯ ಉಂಟು. ಅಂಥ ಅನುಯಾಯಿಗಳಿರುವದಕ್ಕಿಂತ ಅವರು ಇಲ್ಲದ್ದು ಒಳ್ಳೇದು. ಅವರ ಚಾಲಕರ ಸ್ವಪ್ನದಲ್ಲಿ ಸಹ ಇಲ್ಲಾದ ತಪ್ಪುಗಳು ಈ ಕುರುಡರ ಕೈಯಿಂದಾದರೆ ಮುಂದಾಳುಗಳ ತಲೆಯಮೇಲೆ ಅವುಗಳ ಹೊರೆಬೀಳುವದು ಒಂದು ರೂಪಾಯನ್ನು ದೇಣಿಗಿ ಕೊಡಲೇ ನಾನು ಹೋಮರೂಲರನಾದೆನು ಎಂತ ಯಾರಾದರೂ ತಿಳಿದರೆ ಅದು ಬರೇ ಮರುಳುತನವು. ಅಂಧಾನುಯಾಯಿಗಳೇ ದೇಶದ ಪ್ರಗತಿಯ ಶತ್ರುಗಳೆಂತ ನಮ್ಮ ಸ್ಪಷ್ಟ ಮತವದೆ. ಯಾರಲ್ಲಿ ನಾವು ಮೇಲೆ ವಿವರಿಸಿದ ಗುಣಗಳ ವಿಕಾಸವು ಆಗಿದೆಯೋ ಅವರೇ ಹೋಮರೂಲಿಗೆ ಪಾತ್ರರು. ಹೋಮರೂಲರರು, ಎಂತ ನಾವು ಹೇಳುವೆವು ಅಲ್ಲಿಲ್ಲಿಯ ಬಹಳೇ ಹೋಮರೂಲರರು ಕೆಲ ಉಪದ್ವ್ಯಾಪಿ ಜನರ ಚೋದನೆಯಿಂದ ಆಗಿರಲಿಕ್ಕೆ ಸಾಕೆಂದು ನಮಗೆ ಸಂಶಯವದೆ ಮತ್ತು ಕೆಲವರು ಹೋಮರೂಲರರಾಗುವ ವಿಚಾರದಲ್ಲಿರಲಿಕ್ಕೆ ಸಾಕು. ಆದರೆ ಇವರೆಲ್ಲವರು ತಮಗೆ ಹುಲಿಬಾಯಿಯಲ್ಲಿ ಹಾಕ[illegible] ಎರಡು ಮೂರು ತರದ ಜನರು ತತ್ಪರರಿದ್ದಾರೆಂತ ಧ್ಯಾನದಲ್ಲಿಡತಕ್ಕದ್ದು ಕೆಲವು ಪುಕ್ಕರಂತೂ ಪರರ ಹೆಗಲಿನಮೇಲೆ ತುಬಾಕಿಯನ್ನಿಟ್ಟು ಗುಂಡು ಹೊಡೆಯಲಿಕ್ಕೆ ಕುಳಿತಿದ್ದಾರೆ ಈ ಬಹಾದ್ದೂರರು ಹೊಡೆದ ಗುಂಡು ಸಫಲವಾದರೆ "ನಾವು ನಾವು" ಎಂದು ಮುಂದೆ ಬರುವರು ಗುರಿ ತಪ್ಪಿದರೆ ಹೆಗಲಿನ ಮಾಲಿಕರಿಗೆ ದೇಹಾಂತ ಶಿಕ್ಷೆಯನ್ನು ಕೊಡುವಾಗ ಕೈ ಚಪ್ಪಳಿಹೊಡೆಯುವರು. ಇಂಥವರು ದುಷ್ಟಬುದ್ಧಿಯಿಂದ ವ್ಯಕ್ತಿಗಳಮೇಲೆ, ಸಂಸ್ಥೆಗಳಮೇಲೆ, ಜ್ಯಾತಿ ಇಲ್ಲವೆ ಸಮಾಜದ ಮೇಲೆ ಗಂಡಾಂತರಗಳನ್ನು ತರಿಸಿ ತಾಂವು ನೇತ್ರ ಸುಖವನ್ನು ಪಡೆಯುವರು ಇಂಥ ಘಾತಕಿ ಜನರ ಬಲೆಯಲ್ಲಿ ಬೀಳದೆ ತಮ್ಮ ಮೇಲೆ ಯಾ ತಮ್ಮ ಜ್ಞಾತಿಯ ಜನರ ಮೇಲೆ ಸಂಕಟಗಳು ವೃಥಾ ಬಂದು ಬೀಳದ ಹಾಗೆ ಜನರು ಕಣ್ಣು ತೆರೆದು ನಡಿಯಬೇಕು, ಎಂದು ನಮ್ಮ ಆಗ್ರಹದ ವಿನಂತಿಯದೆ

ಈಗ ನೀವು ಇಷ್ಟೆಲ್ಲ ವಿವರಣೆಯನ್ನು ಮಾಡಿದಿರಿ. ನಿಮ್ಮ ಸ್ಪಷ್ಟ ಮತವನ್ನು ಸಾರಾಂಶತಃ ನಮಗೆ ಹೇಳಿಬಿಡಿರಿ, ಎಂತ ಯಾರಾದರೂ ಕೇಳಿದರೆ ನಾವು ಪ್ರಾಂಜಲ ಬುದ್ಧಿಯಿಂದ ಹೇಳುವೆವಲ್ಲ— ಕೊಂಗ್ರೆಸದ ಸ್ವರಾಜ್ಯವಾಗಲಿ ಬೇರೆ ಯಾವ ರಾಜಕೀಯ ಸುಧಾರಣೆಯಾಗಲಿ ಅವುಗಳ ಚಳವಳಿಯು ಕ್ಯಾದೆಗೆ ಸಮ್ಮತವಾದ ಮಾರ್ಗಗಳಿಂದಲೂ ಸಾತ್ವಿಕ ಉಪಾಯಗಳಿಂದಲೂ ನಡೆದರೆ ಅವುಗಳನ್ನು ನಾವು ಸಮರ್ಥಿಸುವೆವು. ಅವುಗಳನ್ನು ತಿರಸ್ಕರಿಸುವದು ಕರ್ತವ್ಯ ಪರಾಙ್ಮುಖತೆಯು. ಆದರೆ ಕಾನಡಾ ಜಿಲ್ಲೆಯ ಪರಿಸ್ಥಿತಿಯನ್ನು ಕಣ್ಣಿನಿಂದ ನೋಡುತ್ತಿರುವಾಗ ನಮಗೆ ಹೇಳಲೇ ಬೇಕಾಗಿದಲ್ಲ— ಇಡೀ ಹಿಂದುಸ್ಥಾನಕ್ಕೆ ಪಾರ್ಲಮೆಂಟಿನಿಂದ ಸ್ವರಾಜ್ಯದ ಸನದು ಸಿಕ್ಕಿ, ಸ್ವಾಯತ್ತಾತ್ಮಕ ರಾಜ್ಯಪದ್ಧತಿಯು ಅಮಲಿನಲ್ಲಿ ಬಂದರೆ, ನಮ್ಮ ಕಾನಡಾ ಜಿಲ್ಲೆಗೆ ಮಾತ್ರ ಆಯ[illegible]ಂದದ[illegible] ಅ[illegible]ಲಸ್ವರ ಪ್ರಾಂತದಂತೆ, ಪಾತ್ರರಾಗುವ ತನಕಾದರ? ಸ್ವರಾಜ್ಯದಿಂದ ಹೊರಗೇ ಇಡಬೇಕಾದೀತು, [illegible] ಅಪ್ರಿಯವಾದರೂ ಸತ್ಯ ಸಂಗತಿಯನ್ನು ತಿಳಿಸಬೇಕಾಗಿದೆ. ಆದದರಿಂದ ನಾವು ದೇವರ ಹತ್ತರ ಬೇಡುವದೇನಂದರೆ— ಸತ್ಪಾತ್ರತೆಯು ನಮ್ಮಲ್ಲಿ ಬೇಗ ಬರಲಿ ಮತ್ತು ನಮ್ಮ ನಾಗರಿಕತನದ ಕುಂದುಗಳು ಬೇಗನೇ ದೂರವಾಗಲಿ. [illegible]ದು ಅಶಕ್ಯವೆಂತ ಯಾರಾದರೂ ನಿರಾಶಾವಾದಿಗಳು ನಮಗೆ ತಿಳಿಸಿದರೆ ನಾವು ಸಹ ಕೂಡಲೇ "ವಿಚಾರಿ" ಅಂಗ್ಲೈಯನವರ ೫೪ ವರ್ಷಗಳ ಸಮಾಧಿಯನ್ನು ತಾಳುವೆವು.

Editor's Special Note.

It is painful to see that the times have grown so delicate and peculiar that every criticism and every statement of fact– however honest & well-phrased, are sadly misunderstood and that, as a consequence, boycotting-social & otherwise, is the order of the day. Well, we hope better counsels will prevail and everything will be assessed at its worth when considered in calmer moments Now, as to our policy regarding the burning question of the day i.e., Self-Government within the Empire and other kindred questions, we have been, so to say, silent except when we were required to make passing remarks as a matter of news. [illegible] however, we have, in our Kanarese columns, spoken our mind on the subject more by way of explaining ourselves and representing the true situation of our District, so far as that question is concerned. We know the exposition and the line of argument will not be liked by pronounced Home Rulers, but we must make bold to speak "the truth, the whole truth, and nothing but the truth," keeping at the same time the principle intact. We hope our position will now at least be rightly understood & there will be no more " cold-water pouring" on our work We hope also that those naughty twin sisters– Mis(s)understanding & Mis(s)representation will cease their pranks.

ತಾಜಾಬಾತ್ಮಿ— ಆಗೋಸ್ತ ೩೦ನೇ ತಾರೀಕಿನ ದಿವಸ ಬೆಳಿಗ್ಗೆ ದಿಲ್ಲಿ ಶಹರದಮೇಲೆ ಒಂದು ಸಣ್ಣ ವಾಯುನೌಕೆಯು ಹಾರ್‍ಯಾಡುತ್ತಿರುವದನ್ನು ಕಂಡು ಶಹರದಲ್ಲಿ ದೊಡ್ಡ ಗೊಂದಲಹುಟ್ಟಿತು. "ಹವೇಕಿ ಜಹಾಜ" ಎಂತ ಅಲ್ಲಲ್ಲಿ ಬೊಬ್ಬೆಯಾಯಿತು. ಇದು ಮಿತ್ರ ಪಕ್ಷದವರದೇ ಆಗಿರಬೇಕು

ಅಯ್ಯಾ, ಪತ್ರಾಧಿಪರೇ, ತಮ್ಮ ಪತ್ರದಲ್ಲಿ ಈ ಕೆಳಗಿನ ಮಜಕೂರಿಗೆ ಇಷ್ಟು ಸ್ಥಲ ಕೊಡುವಿರಾ?

ಹೊನಮಾಂವ ಇದು ಕುಮಟಾ ಮುನಿಸಿಪಾಲಿಟಿಯ ಹದ್ದಿನಲ್ಲಿದ್ದು ಅಲ್ಲಿ ಕ್ರಿಶ್ಚನ್ನ ವ ಹಿಂದುಜನರ ಸಮೂಹ ದೊಡ್ಡದಿದ್ದು ಅವರಿಂದ ಮುನಿಸಿಪಾಲಿಟಿಯವರು ಮನೆತೆರಿಗೆ ವಗ್ಯೆರೆ ವಸೂಲಿ ಮಾಡುತ್ತಿದ್ದು ಕ್ರಿಶ್ಚನ್ನ ಜನರ ಚೆರ್ಚ್ ವ, ಮುನಿಸಿಪಲ ನಾಕೆಯು, ಪ್ರಾಯ್ಮರಿ ಶಾಲೆ ಸಹ ಇದ್ದು ಅಲ್ಲಿಯ ನಿವಾಸಿಕರ ಹಿತದ ಕೆಲಸಗಳು ಆಗಬೇಕಾಗಿ ಮುನಿಸಿಪಾಲಿಟಿಯವರ ನಜರಿಗೆ ಅನೇಕ ಸಾರೆ ತಂದಾಗ್ಯೂ ಅದರ ವಿಚಾರವು ಇನ್ನೂ ಆಗದೆ ಆ ಸಂಬಂಧದ ಏನೊಂದು ಸುಧಾರಣೆ ಸಹ ಮಾಡದೆ ಇದ್ದದ್ದು ನೋಡಿ ಆಶ್ಚರ್ಯ ಕಾಣುತ್ತದೆ ಅಲ್ಲಿ ಅನೇಕ ದೊಡ್ಡ ವ್ಯಾಪಾರಿಗಳು ಇದ್ದು ಆ ವ್ಯಾಪಾರಿಯರು ಕುಮಟೆ ಪೇಟೆಯಲ್ಲಿ ವ್ಯಾಪಾರ ಮಾಡುತ್ತಿರುವದರಿಂದಲೂ ಆ ದಾರಿಯಲ್ಲಿ ಜನರ ರಹದಾರಿಯೂ ವಿಶೇಷವಿರುತ್ತದೆಂಬ ಸಂಗ್ತಿಯು ವಿದಿತವಾದದ್ದೇಸರಿ ಈತರದ ರಹದಾರಿಯಿದ್ದು ಜನರಿಗೆ ಕುಮಟೆ ತುಳಸೀಕಟ್ಟೆಯಿಂದ ಹೊನಮಾಂವಿಗೆ ಹೋಗುವರೆ ಸಾರ್ವಜನಿಕ ರಾಜರಸ್ತೆ ಇಲ್ಲಾದದ್ದು ವ ಅಲ್ಲಿಯ ಜನರು ಸಹಿಸುವ ತ್ರಾಸು ನೋಡುವಾಗ್ಯೆ ಮುನಿಸಿಪಾಲಿಟಿಯವರು ಆ ಸಂಬಂಧದ ಈ ಕೊರತೆಗಳು ಯಾಕೆ ದೂರಪಡಿಸಲಿಲ್ಲವೆಂಬುವದು ತಿಳಿಯುವದಿಲ್ಲ. ರಾಜರಸ್ತೆ ಇಲ್ಲದೆ ಹೊಂಯಿಗೆ ಕಾದು ಕುಮಟೆ ಶಾಲೆಗೆ ಬರುವ ಸಣ್ಣ ಸಣ್ಣ ಹುಡುಗರು ಅನುಭವಿಸುವ ಕಷ್ಟವನ್ನು ನೋಡಲಾರದೇ ಅಲ್ಲಿಯ ನಿವಾಸಿಕರ ಪೈಕಿ ರಾ॥ ಕಲ್ಲಬಾಗ ವಾಮನ ರಾಮ ಶ್ಯಾನಭಾಗರು ಆ ತಿರುಗಾಡುವ ಹಾದಿಯ್ಮೇಲೆ ಬೇಸಿಗೆಯಲ್ಲಿ ತಮ್ಮ ಖರ್ಚಿನಿಂದ ಸಂಕಮ ... ಜನರಿಗೆ ಸೋಯಿ ಮಾಡುತ್ತಾರೆಂಬುವದು ನೋಡಿ ಅವರ ಧರ್ಮದ ಕೆಲಸಗಳಬಗ್ಗೆ ಅವರನ್ನು ಹೊ... ಸಿವಷ್ಟು ಕಡಿಮೆಯೇ ಮಳೆಗಾಲದಲ್ಲಿ ಗದ್ದೆಗಳ ಬಿತ್ತಿ ಜನರಿಗೆ ತಿರುಗಾಡುವರೆ ಒಂದು ಒಡ್ಡಿನ ... ಸ ಹಾಳೆಮಾತ್ರ ಬಿಡುತ್ತಾರೆ ಹಾಳೆಯ ಅಗಲ ಕಡಿಮೆ ಇರುವದರಿಂದ ಉಭಯ ದಿಕ್ಕಿನಿಂದ ಬರುವ ಜನರಪೈಕಿ ಯಾರಾದರೂ ಒಬ್ಬರು ನೀರು ತುಂಬಿದ ಗದ್ದೆಯೊಳಗೆ ಇಳಿಯಬೇಕಾಗುತ್ತದ ಮಳೆಗಾಲದ ಆ ಕೆಟ್ಟ ನೀರಿನಲ್ಲಿ ಜೀವಜಂತುಗಳು ವಾಸಿಸುವದರಿಂದ ತಿರುಗಾಡುವ ಜನರಿಗೆ ಅಪಾಯ ಸಂಭವಿಸುತ್ತದೆ ಅಂಥಾ ದಾರಿಯಲ್ಲಿ ಮುನಿಸಿಪಾಲಿಟಿಯ ದೀಪದ ಖಂಭವಿತ್ತು ಅದು ಸಹಾ ಈಗ ಕೆಲಕಾಲದಿಂದ ಕಂಡುಬರುವದಿಲ್ಲ ಮುನಿಸಿಪಾಲಿಟಿಯ ಕೆಲಸಗಳು ಒಳ್ಳೇರೀತಿಯಿಂದ ಆಗಬೇಕೆಂತ ಇತ್ತಲಾಗಿ ಎಲ್ಲಾತರದ ಮುನಿಸಿಪಲ್ ಆಕ್ಟುಗಳು ಏರಿಸಿದ್ದು ... ವ ಅವಶ್ಯವಾದ ಕೆಲಸಗಳಿಗೆ ದುರ್ಲಕ್ಷ್ಯ ... ನೋಡಿ ಆ ಜನರ ದುರ್ದೈವವೇ ಎಂತ ತಿಳಿಯಬೇಕಾಗಿದೆ ಈ ಸಂಗತಿ ... ದ ಮುನಿಸಿಪಾಲಿಟಿಯವರು ರಸ್ತೆಗೆ ತಗಲುವ ಜಾಗವನ್ನು ಪಡಕೊಂಡು ರಾಜರಸ್ತೆಯನ್ನು ಮಾಡಿ ಜನರಿಗೆ ಆಗುವ ತೊಂದರೆಗಳನ್ನು ದೂರಪಡಿಸುವರಾಗಿ ನಂಬುತ್ತೇನೆ *L. A. Pai*

... ನು

ಸಾಭಾರ ಸ್ವೀಕಾರ.

ಮುಂಬಯಿಯಿಂದ "ಹಿತೇಚ್ಛು" ಎಂಬುವರಿಂದ ಕಾರವಾರ ಸ್ಟುಡಂಟ್ಸ ಬ್ರದರ್‌ಹುಡ ಸಂಬಂಧ ಬಂದ ಪತ್ರವು ವಹಾರ ವ ಸ್ಥಳಸಂಕೋಚದನೋಸ್ಕರ ಮುಂದಿನ ಪ್ರಕಟಿಸುವೆವು

ದುರುಸ್ತಿ.

ಕಳೆದ ಜುಲ್ಯಾ ತಾ ೨೫ ನೆ ಸಂಚಿಕೆಯ ... ತ್ತಿರ್ಯ ಬೆಂಚು ಕೋರ್ಟಿಗೆ IIIನೇ ಕ್ಲಾಸ ಎಂತ ಬರದದ್ದು IIನೇ ಕ್ಲಾಸ ಎಂತ ತಿಳಿಯ ತಕ್ಕದ್ದು

ಇಹವೃತ್ತ.

ಕುಮಟಾ — ಮಳೆಯ ... ಇಂಬು ಆಗಿದೆ ಬೆಳೆಯ ಸ್ಥಿತಿ ...

ಕುಮಟಾ ತಾಲೂಕ ಲೋಕಲಬೋರ್ಡಿ ... ಸಾ॥ ಮಾಸೂರಕರರವರನ್ನು ... ಆರಿಸಲ್ಪಟ್ಟದ್ದರ ತಮ್ಮ ಕೆಲಸದ ಚಾರ್ಜ ... ಕೊಂಡಿರುವರ ... ನಿಮಿಸಿ ಸರಕಾರದ ಆಭಾರವನ್ನು ...

ವಿ ... ಗೋಖಲೆ ... ಇಲ್ಲಿ ... ಕೀರ್ತಕೆ ... ತಿ ಕಾರವಾರಕ್ಕೆ ಹೋದರು.

ಡಿ। ಪ್ರೊ। ... ಸ್ನಾನವರದ ... ಹೋಗಿರುವರು ...

ಮ। ಮ। ... ಬಿ ... ಕರಾಸವಾಟ ತಿರುಗಿ ... ಕೀಲಿ ... ರೂಪಾಯಿ ... ಕ್ರೊಡೀಕ್ ... ಕುಮಟೆಗೆ ... ವಾರ ... ರಾಗಿ ... ಕೋರ್ಟಿನಲ್ಲಿ ಆಕಟೆ ... ಚಾರವು ಬಾಕಿ ಆಗುವದು

ಕಾರವಾರ — ಈ ವರ್ಷದ ವರ್ನ್ಯಾಕ್ಯುಲರ ... ಫಾಯನಲ ಪರೀಕ್ಷೆಯು ... ಸೋಮವಾರ ತಾ ೩ನೇ ಸಪ್ಟಂಬರ ... ಶುರುವಾಗಿಯದೆ ... ಇದುವರದು

ಸದ್ಯ ಇಲ್ಲ ಬಂದಿರುವ ಶ್ರೀಯುತ ... ಪಿ ಎಕ್ಸ್ಟ್ರಾ ಡೆಪ್ಯುಟಿ ಡ್ಯರೆಕ್ಟರ ಆಫ್ ಎಗ್ರಿಕಲ್ಚರ ಇವರು ಸೋಮವಾರ ತಾ ೩ನೇ ದಿವಸ ಆಲ್ಕೋ... ಡಿತ್ರಿ ಸಭಾಮಂದಿರದಲ್ಲಿ ಕಾನಡಾ ಜಿಲ್ಹೆಯ ಶೇತ್ ... ವಿಷಯವನ್ನು ಕುರಿತು ಉಪಯುಕ್ತ ಮಾಹಿತಿ ಪೂರ್ಣವಾದ ಉಪನ್ಯಾಸವನ್ನು ಕೊಟ್ಟರು ಅಧ್ಯಕ್ಷಸ್ಥಾನದಲ್ಲಿ ರಾ ಸಾ ಜೋಶಿಕರರು ವಿರಾಜಮಾನರಾಗಿದ್ದರು. ವ್ಯಾಖ್ಯಾನಕಾರರು ಹಲವು ಉಪಯುಕ್ತ ವಿಷಯಗಳನ್ನು ಚರ್ಚಿಸಿ, ಈ ನಮ್ಮ ಜಿಲ್ಹೆಯಲ್ಲಿ ಹುಲ್ಲಿಗಡ್ಡೆ ನೆಲಗಡ್ಲೆ, ಒಂದುತರದ ವಿಲಾಯತಿ ಹುಲ್ಲು, ಮುಂತಾದವುಗಳನ್ನು ಬೆಳಸ ಬಹುದಾಗಿ ಹೇಳಿದರು ಉಪನ್ಯಾಸ ತೀರಿದಮೇಲೆ " ಐಂದ್ರ ಜಾಲಿಕ ಕಂದೀಲ " (Magic Lantern) ನ್ನು ತೋರಿಸಿ ನೇತ್ರಾನಂದವನ್ನೆ ಪ್ರತ್ಯಕ್ಷ ಜ್ಞಾನವನ್ನೂ ಉಂಟು ಮಾಡಿದರು. ಸಭೆಯಲ್ಲಿ ಬೇರೆ ಕೆಲವು ಸಹ ಮಾತಾಡಿ ಪ್ರಶ್ನೋತ್ತರಗಳನ್ನು ನಡಿಸಿದರು.

ಸಿರಸಿ ಕೋರ್ಟ — ಯಲ್ಲಾಪುರ ತಾಲೂಕಿನ ಬೆಂದಿಗ ... ಯಲ್ಲಿ ಪ್ರತಿಕಾಲಕರ ಮೂಲಕ ದುರ್ಗ್ಯಾ ಎಂಬುವನು ಇತ್ತಿ... ಆಗಿದೆ ಖೂನಿಮಾಡಿದ ಬಗ್ಗೆ ನಾರ್ಗ್ಯಾ ಎಂ

ಬವನಿಗೆ ಫಾಸೀ ಶಿಕ್ಷೆ ವಿಧಿಸಿ ... ಬಿಟ್ಟರು. ಆವನ ಸಾಕ್ಷಿದಾರ ಬೊಮ್ಮ್ಯಾನಂದನ ಇವನು ಮೆಜಿಸ್ಟ್ರೇಟರ ಮುಂದೆ ಮಾಫಿ ಸಾಕ್ಷಿಯಾಗಿ ಕಬೂಲಿ ಕೊಟ್ಟರೂ ಸೆಶನದಲ್ಲಿ ಅನ್ಯಥಾ ... ನಿ ಕೊಟ್ಟನೆಂಬ ಆರೋಪದ ಮೇಲೆ ತನಿಕಿ ನಡೆದು ಮುಂದೆ ವಿಚಾರಣೆಗೆ ಬರುವ ೧೪ ನೇ ತಾರೀಕಿಗೆ ಇಟ್ಟಿ ನಡಿ... ವದು

ನೀರ ತರಲಿಲ್ಲೆಂದು ಸಿಟ್ಟಾಗಿ ತನ್ನ ೧೦ ವರ್ಷದ ಹೆಂಡತಿಗೆ ಗುದ್ದು ಹೊಡದು ಕೊಂದನೆಂಬ ಆರೋಪದ ಮೇಲೆ ರಾಮಾದಾಸ ಎಂಬವನಮೇಲೆ ನಡೆದ ಖಟ್ಲೆ ವಿಚಾರವು ೧೦ನೇ ತಾರೀಕಿಗೆ ಆದೆ

ಅಪುನಾತಿಸಿ ಹರಕಂತ್ರರ ಜಂಗ್ಲಿ ಗಾರ್ಡನಿಗೆ ಹೊಡದ ಸಂಬಂಧದ ಶಿಕ್ಷೆಯಾದ ಆರೋಪಿ ಶೀವ್ರ ಈತನು ಮಾಡಿದ ಅಪೀಲು ತಾ ೬ನೇಗೆ ವಿಚಾರಕ್ಕಂಟು

ಇಷ್ಟರವರಿಗೆ ಇದೇ ಜಿಲ್ಹೆಯ ವಾರ ಲೋನು ... ವಸೂಲ ಆಗಿದೆ ಬಾಕಿ ವಸೂಲಿಯು ಕೆಲವ ಭರದಿಂದ ಸಾಗಿದೆಂಬುದು ಆನಂದಕರವು

ಇಲ್ಲಿಂದ ಅಧಿಕಾರ ಸ್ಥಾನಾಂತರವಾದ್ದರಿಂದ ಸದ್ಯಕ್ಕೆ ತೆರಳ ಮರಿರುವ ಶ್ರೀ ಶಿರಗಾಂವಕರರಿಗೆ ಇಲ್ಲಿಯ ನಿಕ್ರಸಮಾಜದವರು ರವಿವಾರ ತಾ ೩ನೇ ಸಪ್ಟಂಬರ ದಿವಸ ' ಟೀ ಪಾರ್ಟಿ " ಕೊಟ್ಟು ಸನ್ಮಾನಿಸಿದರು ... ಹೋಗುವರೆಂಬ ವಿಚಾರದಿಂದ ಇಲ್ಲಿಯ ನಾಗರಿಕರಿಗೆ ... ಖಿನ್ನತೆಯೇ ಅವರ ಲೋಕಪ್ರಿಯತೆಯ ದ್ಯೋತಕವು

... ಕಲೆಕ್ಟರ ... ಲೋಕಲ ಸಾಹೇಬರು ಬಂದು ತಿಂಗಳ ರಜೆಯ ಮೇಲೆ ಹೋದರಿಂದ ಪಾಕ ಸಾಹೇಬರು ಕಡೆಗೆ ... ಇರುವರು

ಹಳಿಯಾಳ — ಮಳೆಯು ೨೪-೬೦ ಇಂಚಾಯಿತು ಹೋದವರ್ಷ ಇಷ್ಟರಲ್ಲಿಗೆ ೩೬-೦೬ ಬಿದ್ದಿತ್ತು ಕೊಲೆರಾ ಬರದ ಪಟ್ಟ ಪಿಸ್ಲೆ ಪ್ಲೇಗವು ಮಾತ್ರ ಸುಳಿದಾಡುತ್ತದೆ ಜನಸ್ತಗಳ ಧಾರಣೆ ಅಲ್ಪಸ್ವಲ್ಪ ತಗ್ಗಿದರೂ ಮಂಗಾಯಿ ಮಾತ್ರ ... ದಾರಿ ಹಿಡಿಯಾನಂದ ಮಹಾರಾಜ ಸ್ವಾಮಿಗಳವರ ಸ್ವಾರಿಯು ಇಲ್ಲಿದ ಡಿಗ್ರಜಕರ ತಾತ್ಯಾ ಮುತಾಲಿಕರ ದೇರಂಜೇವರು ಬೆಳಗಾವಿಗೆ ಸಾಗಿದರು ಮಕ್ರೆಪ್ಲಾನ ಮೇಲೆ ಖಟ್ಲೆಯಾಗಿ ಗಾಂಜಾದುಕಾನ ಮುಚ್ಚಲ್ಪಟ್ಟದರಿಂದ ಅಮಲಿ ಜನರ ಗೋಳಾಟವಾಗಿದೆ ಶಹಾಪುರಕರ ಸರಾಫ ವಿಠೋಬಾ ದಂಶ ಇವರಿಗೆ ವಿಷಮ ಜ್ವರದಿಂದ ದೇವಾಜ್ಞೆಯಾದದ್ದು ಕೇಳಿ ವಿಷಾದವಾಗುತ್ತದೆ ಆವರ ವೃದ್ಧ ತಂದೆ ಶಂಕರರಾವ ಗುಂಜೀಕರ ಇವರಿಗೆ ಆ ಸದ್ಯ ಪುತ್ರ ಶೋಕವಾಗಿದೆ ಈರೆಡ್ಡಿಗೆ ಉಪಾಯವಿಲ್ಲ ವಿಲ್ಲಿಯಾಯ ಮಾಸ್ತರ ಈತನು ಲಷ್ಕರಿನಲ್ಲಿ ದಾಖಲಾಗಿ ಪದಃ ವಿಧರಿಂ ಇಲ್ಲಿಂದ ನೌಕರಿ ಹಿಡಿದದರಿಂದ ಅವನಿಗೆ ಕೈದು ಮಾಡಿ ಬೆಳಗಾವಿಗೆ ಒಯ್ದಿರುವರು ಕಸರ ಮುನ್ಸಿಪಾಲಿಟಿಯ ಮಾರ್ಗದ ಗಟಾರುಗಳಲ್ಲಿ ಅಜುಬಾಜು ರಹಿವಾಸಿಗಳ ಕೊಳಕು ನೀರು ಬಿದ್ದದರಿಂದ ಬಲ್ಲಿ ದುರ್ಗಂಧಿಯಾಗಿದೆ ಮುನ್ಸಿಪಾಲಿಟಿಯವರು ಇತ್ತಕಡೆಗೆ ಲಕ್ಷಕೊಡಬಹುದು ದನಗಳ ರೋಗ ಹಾಲು ಇದು ... ನಾ ಉಪಾಯಯೋಜನೆಯಾಗಿಲ್ಲ ದವಾಖಾನೆಯಲ್ಲಿ ಔಷಧ ಸಂಗ್ರಹವಿಲ್ಲದೆ ಡಾ। ಛಾವೆಯವರಿಗೆ ತೊಂದರೆಯಾಗಿದೆ ಇದರಿಂದ ಬಡ ಜನರ ಅನಾನುಕೂಲತೆಯೇ ಸರಿ

फोंडकेयांचे खजूर, गजकर्ण, नायटे यावर उत्तम मलम डबी ०। ६ बरणी आ ४ व ६, वेनवली (बाम) डबी आ १, बरणी आ ६, इतर मालाचा कॅटलाग मागवा व्यापाऱ्यास भरपूर कमिशन मिळेल
पत्ता- फोंडके ब्रदर्स मुंबई, नं० २.

Printed & Published by Krishnarao Keshav Shenvi at his Star of Kanara Press Kumta

THE
KANARA NEWS
ಕಾನಡಾ ವೃತ್ತ.

ಪತ್ರದ ವರ್ಗಣಿ -
ಕುಂದಾಪುರಯಲ್ಲಿ ಅಗಾವು
ರೂಪಾಯಿ 1-0-0
ಅಂಚೆವೆಚ್ಚ ಸಹ
ರೂಪಾಯಿ 1-6-6
ಒಂದು ಸಂಚಿಕೆಗೆ 0-0-7

ಸತ್ಯಂ ಬ್ರೂಯಾತ್ಪ್ರಿಯಂ ಬ್ರೂಯಾನ್ನಬ್ರೂಯಾತ್ಸತ್ಯಮಪ್ರಿಯಂ ।
ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥

ಜಾಹಿರಾತುಗಳ ದರ -
ಕನ್ನಡ, ಇಂಗ್ಲಿಷ ಪ್ರಾಕಾಶ್ಯ ಪಿಸನ (೧೫ ಎಮ್ ಅಗಲದ) ೮ ಸಾಲುಗಳ ವರೆಗೆ ರೂ. 1-0-0.
ಅನಂತರ ಪ್ರತಿ ಸಾಲಿಗೆ 0-2-0
ಪಿಕ್ಕಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

Registered No. B. 1770

ANGLO-VERNACULAR FORTNIGHTLY.

ವರ್ಷ ೧.] ಕಾನಡಾವೃತ್ತ— ಬುಧವಾರ, ತಾರೀಕು ೧೯ ನೇ ಮಾಹೆ ಸಪ್ಟಂಬರ ಸನ್ ೧೯೧೭ ನೇ ಇಸವಿ. [ಸಂಚಿಕೆ ೨೫.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವದ, ಉದ್ರೇಕ ತಾಪದಿಂದ ತಲೆಸುತ್ತಿ, ಕಣ್ಣು ಉರಿ ತಿಮಿರ ವ ಕಿ ವು ಸೋರುವ ಹಲ್ಲುಗಳಿಂದ ರಕ್ತ ಬರುವದ, ಹಲ್ಲುನೋವು ಕಿವಿ ಸೋರುವದ, ಕಣ್ಣು ಸೋತು ಅಪಸ್ಮಾರ ಪ್ರಾಪ್ತವಾಗಿರುವದು, ನೆನಪು ಶಕ್ತಿ ಕುಂದಿ ಹೋಗುವದ, ಇವುಗಳನ್ನು ನಿಶ್ಚಿತವಾಗಿಯೂ ಗುಣಮಾಡುತ್ತದೆ ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲದಲ್ಲಿ ಹಣ್ಣಾಗುವ ಕೂದಲನ್ನು ತಡೆದು ಕೂದಲ ಇಲ್ಲದ ಸ್ಥಳದಲ್ಲಿ ಹೊಸಕೂದಲವನ್ನು ಹುಟ್ಟಿಸುತ್ತದೆ ಎಂದು ಈ ತೈಲವನ್ನು ಉಪಯೋಗಿಸಿದವರೆಲ್ಲರು ಹೊಗಳುತ್ತಾರೆ

ಐದು ಔನ್ಸಿನ ಸೀಸೆ 1 ಕ್ಕೆ 0 12 0 ಟ ಖ 0 4 0
„ „ 3 ಕ್ಕೆ 2-0-0 0-8-0
೬ ಔನ್ಸಿನ ಸೀಸೆಗೆ 1-6-0 „ 0 6 0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರ ದ್ವಾರದಿಂದ ಕೀವು ಬಿಳುವದು, ಸ್ವಪ್ನಾವಸ್ಥೆ, ಮುಂತಾದವು ಮೇಹ ರೋಗವನ್ನು ಗುಣ ಮಾಡುತ್ತದೆ
ಬಾಟ್ಲಿ 1 ರ ಕ್ರಯ 1-8-0 ಟ ಖ 0-6-0
ಬಾಟ್ಲಿ 3 ರ ಕ್ರಯ 4-0-0 „ 1-0-0

ನಾರೀಸಖ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋದರ್ಶನದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು ! ಸೊಂಟನೋವು, ಹೃದ್ರೋಗ, ಬಿಳಿಪ್ರದರ (ಬಿಳಿ ಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ
ಬಾಟ್ಲಿ 1 ರ ಕ್ರಯ 2-0-0 ಟ ಖ 0-4-0

ಚಿನ್ ಚಿನ್ ಬಾಮು.

ಸ್ವಲ್ಪ ಮಲಾಮನ್ನು ನೋಪಿದ್ದ ಭಾಗಕ್ಕೆ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲಾ ತರದ ನೋವು, ತಲೆನೋವು ಜಕಂ, ಘಾಯ, ಚೇಳು ಕಚಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ಕ್ಕೆ ಬೆಲೆ ೦-೧-೬, ೧೨ ಡಬ್ಬಿಗಳಿಗೆ ಬೆಲೆ ೦-೧೦-೦
ದೊಡ್ಡ ಡಬ್ಬಿ ೧ಕ್ಕೆ ೬ ಆಣೆ ೧೨ಕ್ಕೆ ರೂ ೪
೧ ಡಜನ ಡಬ್ಬಿಗಳಿಗೆ ೭-೪-೦ ಟ ಖ ಅಲಾಯಿದ
ಇನ್ನು ಅನೇಕ ಔಷಧಿಗಳಿಗೆ ಕೆಟಲಾಗಿಗೆ ಬರೆಯಿರಿ.
ವಿಳಾಸ —

ಮನೋಲ್ಲಾಸಿನಿ ಕಂಪನಿ,
(ನಂಬರ 7) ಕಂಕನಾಡಿ, ದಕ್ಷಿಣ ಕಾನಡಾ
Manollasini Co.,
(No. 7) Kankanady, South Canara.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಸುವಾಸಿಕ ಹುರುಕಿನ ಔಷಧ

ತಿಣಹ ದುಕು ಹಸಿಕಜ್ಜಿ ಗಜಕರ್ಣ ಇಸಬು ಈ ಬಗೆಯ ಚರ್ಮ ರೋಗಗಳು ಬಲುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವದು.
೧ ಚೀಟಿಗೆ ೧ ಆಣೆ ೧೦ಂಕ್ಕೆ ೪ ರೂ

ಜಿಗ್ಗಿ ಕಣ್ಣುಬೇನೆಗೆ ಔಷಧ [೧ ದುಡ್ಡು

ಕಣ್ಣು ಕೆಂಪಗಾಗೋಣ, ಓಚ್ಚುಬಿರೋಣ, ಬಾವು ಇಂಥ ಈ ಕಣ್ಣು ರೋಗಗಳು ಮೂರೇ ದಿವಸದಲ್ಲಿ ಪೂರ್ಣ ಗುಣವಾಗುವವು ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ತೋರುವದು ೧ ಚೀಟಿಗೆ ಮೂರುಕಾಸು ೧೦೦ಕ್ಕೆ ೧ ರೂ

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೇಟು ಕಳುಹಿಸಿದಲ್ಲಿ ಆಯುರ್ವೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು

ಸೂಚನಾ— ಒಂದು ರೂಪಾಯಿಯೊಳಗಿನ ಆರ್ಡರ ಸ್ವೀಕರಿಸಲಾಗದು ಕಿಮ್ಮತ್ತಿನ ಹೊರ್ತು ಪ್ಯಾಕಿಂಗ ಅಂಚೆ ವೆಚ್ಚ ಬೇರೆ ವ್ಯಾಪಾರಸ್ಥರಿಗೆ ಭರಪೂರ ಕಮೀಶನು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂವ ಡಿಸ್ಟ್ರಿಕ್ಟ

[illegible]

ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಏಕೈಕಂಥ ಔಷಧಿಯಾಗಿದೆ ಮೂತ್ರಗುಡ್ಡು, ಮೂತ್ರಕೋಶ ಅನ್ನಕೋಶ, ಕಲಿಜೆ, ಮೊದಲಾದ ಇಂದ್ರಿಯುಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನ ಔಷಧ ಬೇರೊಂದಿಲ್ಲ ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು ಹೊಟ್ಟೆದೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಸೂತಕದ ಆಕ್ರಮಗಳು ಈ ಔಷದಿಯಿಂದ ಬೇಗನೇ ಉಪಶಮನವಾಗುವವು.

ಕ್ರಯ ಶೀಸೆ 1 ಕ್ಕೆ 0-6-0. ವಿ ಪಿ ಬೇರೆ.
ಡಜನ್ ಶೀಸೆಗಳಿಗೆ ರೂ 4-0-0 ವಿ. ಪಿ. ಸಹಿತ.
ವಿಳಾಸ ವಿ ಅ [illegible] ಕಂಕನಾಡಿ, ಮಂ[illegible]

☞ ಟಿ ಜಿ ಮುಕಾಸರೇ ಎಂಡ ಸನ್ಸ ಇವರ

ಸಂಜೀವನಾರ್ಕ.

ಇದರ ಒಂದೇ ಮಾತ್ರೆಯಿಂದ ತಲೆಶೂಲೆ, ಸಂಧಿವಾತ ಸ್ನಾಯುಗಳ ಸೆಳೆತ, ನರಗಳ ಸೆಳೆತ, ಕೆಮ್ಮು, ಜ್ವರ, ಕೋಲರಾ, ಬೇಗು, ಬಾಣಂತಿರೋಗ, ಪ್ಲೇಗ, ಹೊಟ್ಟೆಶೂಲ ಮುಂತಾದ ಅನೇಕ ರೋಗಗಳಿಂದ ಮರಣೋನ್ಮುಖರಾದ ನೂರಾರು ಜನರಿಗೆ ನಿಮಿಷಮಾತ್ರದಲ್ಲಿ ನವಜೀವನ ಪ್ರಾಪ್ತವಾಗಿದೆ ಈ ಅರ್ಕವು ಕುಟುಂಬದಲ್ಲಿ, ಪ್ರವಾಸದಲ್ಲಿ, ಯಾತ್ರೆಯಲ್ಲಿ ಪ್ರಾಣರಕ್ಷಕ ರಾಮಬಾಣ ಉಪಾಯವದ ಬಾಟ್ಲಿ ೧ ಕ್ಕೆ ೧೪ ರೂ ಟಪಾಲ ಹಾಸಲು ೪ ಆಣೆ ಬೇರೆ ಒಂದೇಸರ್ತಿ ೧೨ ಬಾಟ್ಲಿಗಳನ್ನು ತರಿಸಿಕೊಳ್ಳುವರಿಗೆ ೩ ರೂ ಕಮಿಶನ್ ಹೊರತು ಅಂಚೆವೆಚ್ಚ ಬೇರೆ.

ದದ್ರುಘ್ನ ಜಾಲೀಮಬಾಮ — ಇದರಿಂದ ಶರೀರದೊಳಗೆ ಮನೆ ಮಾಡಿಕೊಂಡ ಮೊಸ, ಹಳೇ ಗಜಕರ್ಣ ಮತ್ತು ಇಸುಬು ರೋಗಗಳ ತುರಿಕೆ, ಉರಿ, ಬಿಂಕಿ ಮುಂತಾದವುಗಳ ವ್ಯಥೆಯಿಲ್ಲದ ನಿರ್ಮೂಲವಾಗುವವು.
ಬಾ ೬ ೧೨ ಆಣೆ. ಅಂಚೆವೆಚ್ಚ ೩ ಬಾಟ್ಲಿ ವರೆಗೆ ೪ ಆಣೆ ಬೇರೆ ಇಂಗ್ಲಿಷ ಯಾ ಮರಾಠಿಯಿಂದ ಪತ್ರವ್ಯವಹಾರ ಮಾಡಿರಿ ಪತ್ತೆ —
ಸಂಜೀವನಾರ್ಕ ಆಫಿಸ, ಕುರ್ಲಾ ಮುಂಬಯಿ

ಪ್ರಸಿದ್ಧ ಜ್ಯೋತಿಷಿ.

ಜನಾರ್ದನ ದತ್ತಾತ್ರಯ ಸಾನೆ,

ಬುಧವಾರ, ನಂ. ೫೩೪, ಪುಣೆ. ಜ್ಯೋತಿಷ್ಯದ ಕೆಲಸಗಳು ಉತ್ತಮ ತರದಿಂದ ಮಾಡಲ್ಪಡುವವು
ವಿಶೇಷ ಮಾಹಿತಿ ಖುದ ಅಥವಾ ಪತ್ರಮುಖಾಂತರ.

